ಶನಿವಾರ, ಮಾರ್ಚ್ 30, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಬದುಕಿನ ಬಂಡಿಯ ಸಾಹೇಬರಾಗುತ್ತ...

TRENDS MAN
TRENDS WOMAN
TRENDS junior
TRENDS FOOTWEAR

ಯುಗಾದಿಯ ಶುಭಾಶಯಗಳು

ಹಬ್ಬದ ಉಡುಪಿನ ವಿಶಿಷ್ಟ ರೇಂಜ್ ಶಾಪಿಂಗ್ ಮಾಡಿ,
ಆಕರ್ಷಕ ಕೊಡುಗೆಗಳನ್ನು ಪಡೆಯಿರಿ

*T&C Apply

ಜಯನಗರ 2ನೇ ಬ್ಲಾಕ್ | ಜಯನಗರ 4ನೇ ಬ್ಲಾಕ್ | ಕಮರ್ಷಿಯಲ್ ಸ್ಟ್ರೀಟ್ | HSR ಲೇಔಟ್ |
ನಾಗರಭಾವಿ | ಗ್ಯಾಲೇರಿಯಾ ಮಾಲ್ | ಫೀನಿಕ್ಸ್ ಮಾರ್ಕೆಟ್‌ಸಿಟಿ |
ವೇಗಾ ಸಿಟಿ ಮಾಲ್ | ಫಾಲ್ಕನ್ ಮಾಲ್ | ಲುಲು ಮಾಲ್

ಸೀರೆಗಳು | ಲೆಹೆಂಗಾಗಳು | ಕುರ್ತಾಗಳು | ಬ್ಲೌಸ್‌ಗಳು | ಟೈಲರಿಂಗ್ ಸೇವೆಗಳು

ಶನಿವಾರ, ಮಾರ್ಚ್ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 90 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ತಮಿಳುನಾಡು ಲೆಕ್ಕಾಚಾರ ಬದಲು
ವೇಷ ಮರೆಸಿಕೊಂಡು ಶಂಕಿತರ ಓಡಾಟ 8
ಮತನಿರ್ಣಯ ಪ್ರಭಾವಿಸುವ ನಿರುದ್ಯೋಗ 11

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹70,100 (ಬೆಂಗಳೂರು) ▲	₹76,700 (ಬೆಂಗಳೂರು) ▲

ಪ್ರಥಮ ಪಿಯು ಇಂದು ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ಪಿಯು ಬೋರ್ಡ್ ಪರೀಕ್ಷೆಯ ಫಲಿತಾಂಶ ಶನಿವಾರ (ಮಾರ್ಚ್ 30) ಪ್ರಕಟವಾಗಲಿದ್ದು, ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮೇ 20ರಿಂದ 30ರವರೆಗೆ ಪೂರಕ ಪರೀಕ್ಷೆ ನಡೆಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿದೆ.

ಪೂರಕ ಪರೀಕ್ಷೆ ನಡೆಸಲು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಮಂಡಳಿ ಸೂಚಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

'ತೆರಿಗೆ ಭಯೋತ್ಪಾದನೆ'

ಬಿಜೆಪಿ ವಿರುದ್ಧ ಕಾಂಗ್ರೆಸ್ ಆರೋಪ

ನವದೆಹಲಿ (ಪಿಟಿಐ): ಆದಾಯ ತೆರಿಗೆ (ಐ.ಟಿ) ಇಲಾಖೆಯು ₹1,823.08 ಕೋಟಿ ಪಾವತಿಸುವಂತೆ ತನಗೆ ಮತ್ತೆ ನೋಟಿಸ್ ನೀಡಿದೆ ಎಂದು ಶುಕ್ರವಾರ ಹೇಳಿರುವ ಕಾಂಗ್ರೆಸ್, ಚುನಾವಣೆ ಸಮಯದಲ್ಲಿ ವಿರೋಧ ಪಕ್ಷವನ್ನು ಆರ್ಥಿಕವಾಗಿ ದುರ್ಬಲಗೊಳಿಸಲು ಬಿಜೆಪಿ 'ತೆರಿಗೆ ಭಯೋತ್ಪಾದನೆ'ಯಲ್ಲಿ ತೊಡಗಿದೆ ಎಂದು ಆರೋಪಿಸಿದೆ.

ಐ.ಟಿ ಕಾನೂನುಗಳನ್ನು ಬಿಜೆಪಿ ಗಂಭೀರವಾಗಿ ಉಲ್ಲಂಘಿಸುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಐ.ಟಿ ಅಧಿಕಾರಿಗಳು ಕೇಸರಿ ಪಕ್ಷದಿಂದಲೇ ₹4,617.58 ಕೋಟಿ ಸಂಗ್ರಹಿಸಲು ಡಿಮಾಂಡ್ ನೋಟಿಸ್ ನೀಡಬೇಕು ಎಂದೂ ಆಗ್ರಹಿಸಿದೆ.

ಎಐಸಿಸಿ ಪ್ರಧಾನ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹಾಗೂ ಖಜಾಂಚಿ ಅಜಯ್ ಮಾಕನ್ ಅವರು, ಬಿಜೆಪಿ ಮತ್ತು ಐ.ಟಿ ಇಲಾಖೆ ವಿರುದ್ಧ ವಾಗ್ದಾಳಿ ನಡೆಸಿದರು.

'ಚುನಾವಣಾ ಆಯೋಗಕ್ಕೆ ಬಿಜೆಪಿ ಸಲ್ಲಿಸಿರುವ ಎಲ್ಲ ದಾಖಲೆಗಳನ್ನು ನಾವು ವಿಶ್ಲೇಷಿಸಿದ್ದೇವೆ. ಅದು ಪ್ರತಿವರ್ಷವೂ ಎಡವಿರುವುದನ್ನು ಗಮನಿಸಿದ್ದೇವೆ' ಎಂದರು.

8ನೇ ಪುಟ ನೋಡಿ

ಜೈರಾಮ್ ರಮೇಶ್, ಅಜಯ್ ಮಾಕನ್ –ಪಿಟಿಐ ಚಿತ್ರ

> ಬಿಜೆಪಿಯು 'ಚುನಾವಣಾ ಬಾಂಡ್ ಹಗರಣ'ದ ಮೂಲಕ ₹8,200 ಕೋಟಿ ಸಂಗ್ರಹಿಸಿದೆ. ಅದಕ್ಕಾಗಿ ಪ್ರೀ ಪೇಯ್ಡ್ (ಪೂರ್ವ ಪಾವತಿ), ಪೋಸ್ಟ್ ಪೇಯ್ಡ್ (ನಂತರ ಪಾವತಿ), ಪೋಸ್ಟ್ ರೇಡ್ ಪೇಯ್ಡ್ (ದಾಳಿ ನಂತರ ಪಾವತಿ) ಹಾಗೂ ನಕಲಿ ಕಂಪನಿ ಪಾವತಿ ಮಾರ್ಗಗಳನ್ನು ಅನುಸರಿಸಿದೆ
>
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

₹11 ಕೋಟಿ ಪಾವತಿ: ಸಿಪಿಐಗೆ ನೋಟಿಸ್

ನವದೆಹಲಿ (ಪಿಟಿಐ): ಕೆಲವು ವರ್ಷಗಳಿಂದ ತೆರಿಗೆ ವಿವರ ಸಲ್ಲಿಸುವಾಗ ಹಳೆಯ ಪ್ಯಾನ್‌ಕಾರ್ಡ್ ಬಳಸಿದ್ದಕ್ಕಾಗಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾಗೆ (ಸಿಪಿಐ) ₹11 ಕೋಟಿ ಬಾಕಿ ಮೊತ್ತ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

'ಈ ಸಂಬಂಧ ನಾವು ಕಾನೂನು ನೆರವು ಪಡೆಯಲು ವಕೀಲರನ್ನು ಸಂಪರ್ಕಿಸುತ್ತಿದ್ದೇವೆ' ಎಂದು ಸಿಪಿಐನ ಹಿರಿಯ ನಾಯಕರೊಬ್ಬರು ಪ್ರತಿಕ್ರಿಯಿಸಿದ್ದಾರೆ.

ರದ್ದಾದರೂ ಬಾಂಡ್ ಪೂರೈಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಇಂಡಿಯಾ ಸೆಕ್ಯುರಿಟಿ ಪ್ರೆಸ್, ಫೆಬ್ರುವರಿ 21ರಂದು ತಲಾ ಒಂದು ಕೋಟಿ ರೂಪಾಯಿ ಮೌಲ್ಯದ 8,350 ಚುನಾವಣಾ ಬಾಂಡ್‌ಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಗೆ ಪೂರೈಕೆ ಮಾಡಿದೆ.

ಚುನಾವಣಾ ಬಾಂಡ್‌ಗಳು ಅಸಾಂವಿಧಾನಿಕ ಎಂಬುದಾಗಿ ಸುಪ್ರೀಂ ಕೋರ್ಟ್ ಘೋಷಣೆ ಮಾಡಿದ ಆರು ದಿನಗಳ ನಂತರ ಇವುಗಳನ್ನು ಪೂರೈಕೆ ಮಾಡಲಾಗಿರುವುದು ಗಮನಾರ್ಹ.

SBI
भारतीय स्टेट बैंक STATE BANK OF INDIA
इलेक्टोरल बॉण्ड / ELECTORAL BOND
(IN THE FORM OF PROMISSORY NOTE)
DATE OF ISSUE: 10 APR 2018
VALID UPTO 15 DAYS FROM THE DATE OF ISSUE
VALUE OF THE INSTRUMENT: ₹ 1,000/- (Rupees One Thousand only)
For value received, the Bank hereby promises to pay on demand to the eligible Payee which is holding this instrument, upon surrender of the original instrument in the Designated Account of the eligible Political Party with the Bank, the sum representing the value of this instrument of ₹ 1,000/- (Rupees One Thousand only) in accordance with the Scheme called 'The Electoral Bond Scheme, 2018', notified by the Central Government vide Gazette Notification No. 20 dated the 2nd January, 2018.
On payment of the said amount, the liability of the Bank hereunder shall stand fully extinguished.

ಮಾಹಿತಿ ಹಕ್ಕು ಕಾರ್ಯಕರ್ತ, ನಿವೃತ್ತ ಕಮೋಡೋರ್ ಲೋಕೇಶ್ ಬಾತ್ರಾ ಅವರು ಆರ್‌ಟಿಐ ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಗೆ, ಇಂಡಿಯಾ ಸೆಕ್ಯುರಿಟಿ ಪ್ರೆಸ್ ಗುರುವಾರ ಈ ಮಾಹಿತಿ ಒದಗಿಸಿದೆ.

2018ರ ಮಾರ್ಚ್1ರಿಂದ ಈ ವರ್ಷದ ಫೆಬ್ರುವರಿ 21ರ ವರೆಗೆ ತಾನು ಮುದ್ರಿಸಿರುವ ಬಾಂಡ್‌ಗಳ ಕುರಿತ ವಿವರಗಳನ್ನು ಸಂಸ್ಥೆ ನೀಡಿದೆ. 2022ರ ಆಗಸ್ಟ್ 18ರಂದು ತಲಾ ಒಂದು ಕೋಟಿ ರೂಪಾಯಿ ಮೌಲ್ಯದ 10 ಸಾವಿರ ಬಾಂಡ್‌ಗಳನ್ನು ಮುದ್ರಿಸಿ, ಪೂರೈಕೆ ಮಾಡಲಾಗಿತ್ತು ಎಂದೂ ತಿಳಿಸಿದೆ.

12ನೇ ಪುಟ ನೋಡಿ

ಮತ್ತೆ ಮೂರು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಪ್ರಕಟಿಸಿದ ಕಾಂಗ್ರೆಸ್

'ಕೈ'ಗೆ ಕೋಲಾರವೇ ಕಗ್ಗಂಟು

ಪ್ರಜಾವಾಣಿ ವಾರ್ತೆ

ಇ.ತುಕಾರಾಂ (ಸಂಡೂರು ಶಾಸಕ) ಬಳ್ಳಾರಿ | ಸುನಿಲ್ ಬೋಸ್ (ಸಚಿವ ಮಹದೇವಪ್ಪ ಮಗ) ಚಾಮರಾಜನಗರ | ರಕ್ಷಾ ರಾಮಯ್ಯ (ಎಂ.ಆರ್. ಸೀತಾರಾಂ ಮಗ) ಚಿಕ್ಕಬಳ್ಳಾಪುರ

ಬೆಂಗಳೂರು: ಲೋಕಸಭೆಯ ಬಾಕಿ ಇದ್ದ ನಾಲ್ಕು ಕ್ಷೇತ್ರಗಳ ಪೈಕಿ ಮೂರರ ಅಭ್ಯರ್ಥಿಗಳ ಹೆಸರುಗಳನ್ನು ಕಾಂಗ್ರೆಸ್ ಪ್ರಕಟಿಸಿದೆ. ಕೋಲಾರ ಕ್ಷೇತ್ರದ ಬಣ ಜಗಳ ಕಾಂಗ್ರೆಸ್ ಹೈಕಮಾಂಡ್ ಪಾಲಿಗೆ ಕಗ್ಗಂಟಾಗಿದೆ ಪರಿಣಮಿಸಿದೆ.

ಕೋಲಾರ ಕ್ಷೇತ್ರದಲ್ಲಿ ಸಚಿವ ಕೆ.ಎಚ್. ಮುನಿಯಪ್ಪ ಮತ್ತು ಮಾಜಿ ಸಚಿವ ಕೆ.ಆರ್. ರಮೇಶ್ ಕುಮಾರ್ ಬಣಗಳ ಮಧ್ಯದ ಹಗ್ಗ ಜಗ್ಗಾಟಕ್ಕೆ ತೆರೆ ಬಿದ್ದಿಲ್ಲ. ಎರಡೂ ಬಣಗಳು ಹಟಕ್ಕೆ ಬಿದ್ದಿರುವುದರಿಂದ ಎಡಗೈ ಸಮುದಾಯದವರಾದ ಕೆ.ವಿ. ಗೌತಮ್ ಅಥವಾ ಎಲ್. ಹನುಮಂತಯ್ಯ ಅವರಲ್ಲಿ ಒಬ್ಬರಿಗೆ ಟಿಕೆಟ್ ನೀಡುವ ಸೂತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮುಂದಿಟ್ಟಿದ್ದಾರೆ. ಅದಕ್ಕೂ ಮುನಿಯಪ್ಪ ತಕರಾರು ಎತ್ತಿರುವುದರಿಂದ ಕಾಂಗ್ರೆಸ್ ನಾಯಕರು ಇಕ್ಕಟ್ಟಿಗೆ ಸಿಲುಕಿದ್ದಾರೆ.

ಎರಡೂ ಬಣಗಳ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸದಿದ್ದರೆ ಕಾಂಗ್ರೆಸ್ ಕೋಲಾರದಲ್ಲಿ ಸೋಲಲಿದೆ ಎಂಬ ಅರ್ಥದಲ್ಲಿ ಮುನಿಯಪ್ಪ ಶುಕ್ರವಾರ ಬಹಿರಂಗವಾಗಿಯೇ ಹೇಳಿದ್ದಾರೆ. ಸಂಧಾನ ಸೂತ್ರಕ್ಕಾಗಿ ಹುಡುಕಾಡುತ್ತಿರುವ 'ಕೈ' ನಾಯಕರು, ಕೋಲಾರ ಕ್ಷೇತ್ರದ ಅಭ್ಯರ್ಥಿ ಘೋಷಣೆಯನ್ನು ತಡೆ ಹಿಡಿದಿದ್ದಾರೆ.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ತಮಗೇ ಟಿಕೆಟ್ ನೀಡಬೇಕೆಂದು ವಿಧಾನಸಭೆಯ ಮಾಜಿ ಉಪ ಸಭಾಧ್ಯಕ್ಷ ಎನ್.ಎಚ್. ಶಿವಶಂಕರ ರೆಡ್ಡಿ ಮತ್ತು ಬಾಗೇಪಲ್ಲಿ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಪಟ್ಟು ಹಿಡಿದಿದ್ದರು. ಅವರ ಮನವೊಲಿಕೆಯ ಕಸರತ್ತಿನ ಮಧ್ಯದಲ್ಲೇ ರಕ್ಷಾ ರಾಮಯ್ಯ ಅವರಿಗೆ ಟಿಕೆಟ್ ಘೋಷಿಸಲಾಗಿದೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರ ಮಗ ಸುನೀಲ್ ಬೋಸ್ ಅವರಿಗೆ ಟಿಕೆಟ್ ನೀಡಲಾಗಿದೆ. ಬೋಸ್ ಕಣಕ್ಕಿಳಿಸುವುದನ್ನು ಕ್ಷೇತ್ರದ ಹಲವು ಶಾಸಕರು ವಿರೋಧಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಭೆಯಲ್ಲಿ ಸಂಧಾನ ಯಶಸ್ವಿಯಾದ ಬಳಿಕ, ಸುನಿಲ್ ಬೋಸ್ ಪ್ರಚಾರವನ್ನು ಆರಂಭಿಸಿದ್ದರು.

ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಸಂಡೂರು ಶಾಸಕ ಇ. ತುಕಾರಾಂ ಅವರನ್ನು ಕಣಕ್ಕಿಳಿಸುವ ನಿರ್ಧಾರವನ್ನು ಎಐಸಿಸಿ ಅಧಿಕೃತವಾಗಿ ಪ್ರಕಟಿಸಿದೆ.

ಬಾಗಲಕೋಟೆಯಲ್ಲಿ ಆಕಾಂಕ್ಷಿಯಾಗಿದ್ದ ವೀಣಾ ಕಾಶಪ್ಪನವರ ಅವರಿಗೆ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸ್ಥಾನ ಪಟ್ಟ ನೀಡುವುದಾಗಿ ಭರವಸೆ ನೀಡಲಾಗಿದೆ. ಆದರೂ, ಅವರಿನ್ನೂ ಸಮಾಧಾನಗೊಂಡಿಲ್ಲ ಎನ್ನಲಾಗಿದೆ.

ಮತ್ತೆ ಮೂರು ಕಡೆ ಬಿಜೆಪಿಗೆ 'ಉರಿ'

ಬೆಂಗಳೂರು/ಚಿತ್ರದುರ್ಗ/ರಾಯಚೂರು: ಬಿಜೆಪಿಯಲ್ಲಿ ಟಿಕೆಟ್ ಕೈತಪ್ಪಿದವರ ಆಕ್ರೋಶ ಮತ್ತಷ್ಟು ಪ್ರಖರಗೊಳ್ಳುತ್ತಿದ್ದು, ಮೂರು ಕ್ಷೇತ್ರಗಳ ಘೋಷಿತ ಅಭ್ಯರ್ಥಿಗಳಿಗೆ ಬಂಡಾಯದ ಬಿಸಿ ತಟ್ಟಿದೆ.

ಚಿತ್ರದುರ್ಗ, ರಾಯಚೂರು ಹಾಗೂ ಬೆಳಗಾವಿಯಲ್ಲಿ ಬಿಜೆಪಿಯ ಅಧಿಕೃತ ಅಭ್ಯರ್ಥಿಗಳಿಗೆ ಈ ಅಸಮಾಧಾನ ತಲೆನೋವಾಗಿ ಪರಿಣಮಿಸಿದೆ.

ಚಿತ್ರದುರ್ಗದಲ್ಲಿ ಗೋವಿಂದ ಕಾರಜೋಳ ಅವರಿಗೆ ಪಕ್ಷ ಟಿಕೆಟ್ ನೀಡಿದ್ದರಿಂದ ಅಸಮಾಧಾನ ಗೊಂಡಿರುವ ಹೊಳಲ್ಕೆರೆಯ ಬಿಜೆಪಿ ಶಾಸಕ ಎಂ.ಚಂದ್ರಪ್ಪ ಅವರ ಪುತ್ರ ಎಂ.ಸಿ.ರಘುಚಂದನ್, ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವ ಸುಳಿವು ನೀಡಿದ್ದಾರೆ.

ದುರ್ಗದಲ್ಲಿ ಶುಕ್ರವಾರ ಆಯೋಜಿಸಿದ್ದ ಬಿಜೆಪಿ ಸ್ವಾಭಿಮಾನಿ ಕಾರ್ಯಕರ್ತರ ಸಭೆಯ ಬಳಿಕ ರಘುಚಂದನ್ ಅವರು ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಮಾಹಿತಿ ನೀಡಿದರು. ಅಭ್ಯರ್ಥಿ ಬದಲಾವಣೆಗೆ ಐದು ದಿನ ಗಡುವು ನೀಡಲಾಗಿದೆ. ಮುಂದಿನ ನಡೆಯನ್ನು ನಂತರ ತೀರ್ಮಾನಿಸುವುದಾಗಿ ಹೇಳಿದ ಅವರು, ಒಂದೊಮ್ಮೆ ಅಭ್ಯರ್ಥಿ ಬದಲಿಸದಿದ್ದರೆ ಏಪ್ರಿಲ್ 3ರಂದು ನಾಮಪತ್ರ ಸಲ್ಲಿಸುವುದಾಗಿ ಘೋಷಿಸಿದರು.

8ನೇ ಪುಟ ನೋಡಿ

ಮಲ್ಲೇಶ್ ಬಾಬುಗೆ ಟಿಕೆಟ್ ಪಕ್ಕಾ

ಕೋಲಾರ ಲೋಕಸಭಾ ಕ್ಷೇತ್ರದಿಂದ ಎಂ. ಮಲ್ಲೇಶ್ ಬಾಬು ಅವರನ್ನು ಕಣಕ್ಕಿಳಿಸುವ ನಿರ್ಧಾರವನ್ನು ಜೆಡಿಎಸ್ ಅಧಿಕೃತವಾಗಿ ಶುಕ್ರವಾರ ಪ್ರಕಟಿಸಿದೆ.

ಹಾಸನದಲ್ಲಿ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಮತ್ತು ಮಂಡ್ಯದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪಕ್ಷದ ಅಭ್ಯರ್ಥಿಗಳಾಗಿ ಸ್ಪರ್ಧಿಸಲಿದ್ದಾರೆ.

ಮಲ್ಲೇಶ್ ಬಾಬು, ಮುಳಬಾಗಲು ಶಾಸಕ ಸಮೃದ್ಧಿ ಮಂಜುನಾಥ್ ಮತ್ತು ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಅವರ ಹೆಸರುಗಳು ಕೋಲಾರ ಕ್ಷೇತ್ರದ ಅಭ್ಯರ್ಥಿ ಆಯ್ಕೆಯಲ್ಲಿ ಪರಿಶೀಲನೆಯಲ್ಲಿದ್ದವು. ಅಂತಿಮವಾಗಿ ಮಲ್ಲೇಶ್ ಬಾಬು ಅವರನ್ನೇ ಕಣಕ್ಕಿಳಿಸುವ ನಿರ್ಧಾರ ಕೈಗೊಳ್ಳಲಾಗಿದೆ.

DH DECCAN HERALD | ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ | ಪ್ರಜಾವಾಣಿ

ಸಿಇಟಿ ಮತ್ತು ನೀಟ್ ಮಾದರಿ ಪರೀಕ್ಷೆಗಳಿಗೆ ಈಗಲೇ ನೋಂದಣಿ ಮಾಡಿಕೊಳ್ಳಿ ಮತ್ತು ಟಾಪರ್‌ಗಳು ಬಹುಮಾನ ಗೆಲ್ಲಿರಿ!

ಟೆಲಿವಿಷನ್ ಪಾಲುದಾರರು NEWS 1st | ಕೋಡ್ ಸ್ಕ್ಯಾನ್ ಮಾಡಿ | ಪ್ರಾಯೋಜಕರು AD6 advertising

ಬೆಂಗಳೂರು: 06-07 ಏಪ್ರಿಲ್, 2024 | ತ್ರಿಪುರವಾಸಿನಿ, ಅರಮನೆ ಮೈದಾನ

ಸುಧಾ ಮಯೂರ ಓದಿರಿ

JOCKEY FACTORY SECONDS UPTO 50% OFF* *T & C apply

• 10 am to 8 pm • Open All Days • Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS

Venues In Bangalore

Infantry Road:	Safina Plaza, No.84/85 - 560001
Kundalahalli Gate:	S K R Convention hall, Thubarahalli, Varthur Main Road, - 66
Jayanagar:	Prem Chandra Kalyan Mahal, T.Mariappa Road, 2nd block, (Near Ashoka Pillar), – 11.
Banshankari:	Sri Hari Kalyana Mantap, 30th Main, B.S.K. 3rd Stage, Near K.I.M.S. Hospital, - 85
J .P. Nagar 3rd Phase:	Shilpa KalaMantapa, No.12, 9th Cross, Bannerghatta Road, -76
Bannerghatta Road:	Billava Bhavana, No. 63, Opp. Meenakshi Temple - 560076
Rajarajeswari Nagar:	Vasavi Mahal Kalyana Mantapa, Next To Reliance Digital, Ideal Homes I Phase - 98
Vijay Nagar:	Five O Gallery, 17th Cross, M.C. Road, Near Vijay Nagar Bus Stop - 40
Mahalaxmipuram:	Sri Vidyaranya Prarthana Mandira, (Sri Avani Sringeri Shankar Mutt), West Of Chord Road, Next to Anupama English School, - 86
Malleswaram:	The Canara Union, No. 42, 8th Main, Canara Union Road - 03
Koramangala:	Apoorva International, #35A, Raheja Arcade, Opp Star Box - 95
Basavanagudi:	Amolak Apparels, #104, Bull Temple Road, Near Ramakrishna Ashram - 19

Org. by: Surya Agency Pvt. Ltd.

ಕೇಜ್ರಿವಾಲ್ ಬಂಧನ ಖಂಡಿಸಿ ನಾಳೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನದ ಕ್ರಮ ಖಂಡಿಸಿ ಮಾರ್ಚ್ 31ರಂದು ನಗರದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ. 'ಅಂದು ಬೆಳಿಗ್ಗೆ 10ಕ್ಕೆ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಪ್ರತಿಭಟನೆಯಲ್ಲಿ 'ಇಂಡಿಯಾ' ಒಕ್ಕೂಟದ ಮುಖಂಡರು ಪಾಲ್ಗೊ-ಳ್ಳಲಿದ್ದಾರೆ' ಎಂದು ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಅವರು ತಿಳಿಸಿದ್ದಾರೆ.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. ECN-TRD-02-2024
ದಿನಾಂಕ: 25.03.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಬಾಗಲಕೋಟ–ವಂದಾಲ ವಿಭಾಗದ 2 ನೇ ಸಾಲಿನ ಓಎಚ್‌ಇ & ಟಿಎಸ್‌ಎಸ್ ಸೇರಿದಂತೆ ಬಾಗಲಕೋಟ – ವಂದಾಲ ವಿಭಾಗದ ಕಾರ್ಯಾರಂಭಕ್ಕೆ ಅಗತ್ಯವಿರುವ ಉಳಿದ ಕಾಮಗಾರಿಗಳ ಜೊತೆಗೆ 25 ಕೆವಿ, 50 ಹರ್ಟ್ಜ್, ಏಕ ಹಂತ, ಎಸಿ ವಿದ್ಯುದೀಕರಣದ ವಿನ್ಯಾಸ, ಸರಬರಾಜು, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾರಂಭ	ರೂ. 20,30,47,231.90/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19–04–2024, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ / ಟಿಆರ್‌ಡಿ ನಿರ್ಮಾಣ / ಬೆಂಗಳೂರು ಕಂಟೋನ್ಮೆಂಟ್
PUB/779/AAV/PRB/SWR/2023-24
South Western Railway-SWR | SWRRLY | SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. B/TRD.2023-24/20
ದಿನಾಂಕ: 25.03.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
[i] ಕೆಎಸ್‌ಆರ್ ಬೆಂಗಳೂರು – ಯಶವಂತಪುರ – ಯಲಹಂಕ ವಿಭಾಗದ ನಡುವೆ ಸ್ವಯಂಚಾಲಿತ ಸಿಗ್ನಲಿಂಗ್ ಒದಗಿಸುವಿಕೆ [ii] ಬೆಂಗಳೂರು ವಿಭಾಗದ ಮೇಲೆ ಎಲ್‌ಸಿ ಗಳನ್ನು ಇಂಟರ್ಲಾಕ್ ಮಾಡಲು ಸಹಾಯಕ ಪರಿವರ್ತಕವನ್ನು ಒದಗಿಸುವುದು [iii] ಎಲ್‌ಸಿ ಗೇಟ್‌ಗಳು ಎಲ್‌ಸಿ ನಂ. 119 (ಬಂಗಾರಪೇಟೆ – ತ್ಯಾಕಲ್) ಮತ್ತು 7 (ಊರಿಗಾಂ – ಚಾಂಪಿಯನ್) ನಲ್ಲಿ ಎಟಿ ಗಳನ್ನು ಒದಗಿಸುವುದು [iv] ಮೈಸೂರು ತುದಿಯ ಕಡೆಗೆ ನಾಯಂಡಹಳ್ಳಿ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ ವಿಸ್ತರಣೆಯಿಂದಾಗಿ ಓಎಚ್‌ಇ ಮಾರ್ಪಾಡು ಕೆಲಸ.	ರೂ. 1,15,36,696.65/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15–04–2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ ಬೆಂಗಳೂರು
PUB/778/AAV/PRB/SWR/2023-24
South Western Railway-SWR | SWRRLY | SWRRLY

ನಗರದಲ್ಲಿ ವಾರ್ಷಿಕ ಸಾವಿರದ ಗಡಿ ದಾಟಿದ್ದ ಪ್ರಕರಣ ಇಳಿಮುಖ

4 ವರ್ಷದಲ್ಲಿ 2,557 ಶಿಶುಗಳ ಸಾವು

• ವರುಣ ಹೆಗಡೆ

ಬೆಂಗಳೂರು: ಅವಧಿ ಪೂರ್ವ ಜನನ, ಉಸಿರಾಟದ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ನಗರದಲ್ಲಿ ನಾಲ್ಕು ವರ್ಷಗಳಲ್ಲಿ 2,557 ನವಜಾತ ಶಿಶುಗಳು ಮೃತಪಟ್ಟಿವೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಕಳೆದ ಮೂರು ವರ್ಷಗಳಿಂದ ಶಿಶು ಮರಣ ಪ್ರಕರಣಗಳು ನಗರದಲ್ಲಿ ಏರುಗತಿ ಪಡೆದಿತ್ತು. 2022–23ನೇ ಸಾಲಿನಲ್ಲಿ ಪ್ರಕರಣಗಳ ಸಂಖ್ಯೆ ಸಾವಿರದ ಗಡಿ ದಾಟಿತ್ತು. ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಇಷ್ಟು ಪ್ರಕರಣಗಳು ವರದಿಯಾಗಿರಲಿಲ್ಲ. 2023–24ನೇ ಸಾಲಿನಲ್ಲಿ ಮರಣ ಪ್ರಕರಣಗಳು ಗಣನೀಯವಾಗಿ ಇಳಿಕೆಯಾಗಿವೆ.

ನವಜಾತ ಶಿಶು ಮತ್ತು ಐದು ವರ್ಷದೊಳಗಿನ ಮಕ್ಕಳ ಮರಣ ದರವನ್ನು ಕಡಿತಗೊಳಿಸಲು ಹಾಗೂ ಮಕ್ಕಳ ಆರೋಗ್ಯ ಸುಧಾರಿಸಲು ಆರೋಗ್ಯ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ವಿಶೇಷ ನವಜಾತ ಶಿಶು ಆರೈಕೆ ಘಟಕ, ಕಾಂಗರೂ ಮದರ್ ಕೇರ್, ತಾಯಿ ಎದೆ ಹಾಲುಣಿಸುವ ಕೇಂದ್ರಗಳ ಸ್ಥಾಪನೆ, ನವಜಾತ ಶಿಶುಗಳ ಆಂಬುಲೆನ್ಸ್ ಸೇವೆ ಸೇರಿ ವಿವಿಧ ಯೋಜನೆಗಳ ಮೂಲಕ ನವಜಾತ ಶಿಶುಗಳ ಆರೈಕೆ ಹಾಗೂ ಚಿಕಿತ್ಸೆಗೆ ಕ್ರಮವಹಿಸಲಾಗಿದೆ. ಸ್ತನ್ಯಪಾನ ಸಪ್ತಾಹದಂತಹ ಸಮುದಾಯ ಜಾಗೃತಿ ಕಾರ್ಯಕ್ರಮಗಳ ಮೂಲಕವೂ ಶಿಶುಗಳ ಆರೋಗ್ಯ ಸುಧಾರಣೆಗೆ



ಆದ್ಯತೆ ನೀಡಲಾಗಿದೆ. ಇಷ್ಟಾಗಿಯೂ ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗುತ್ತಿವೆ.

ತಾಯಿ-ಮಗುವಿನ ಚಿಕಿತ್ಸೆಗಾಗಿಯೇ ಸರ್ಕಾರಿ ಹಾಗೂ ಖಾಸಗಿ ವ್ಯವಸ್ಥೆಯಡಿ ನಗರದಲ್ಲಿ ವಿವಿಧ ಆಸ್ಪತ್ರೆಗಳು ಕಾರ್ಯ-ನಿರ್ವಹಿಸುತ್ತಿವೆ. ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ವಾಣಿವಿಲಾಸ ಆಸ್ಪತ್ರೆ, ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ ಸರ್ಕಾರಿ ವ್ಯವಸ್ಥೆಯಡಿ ತಾಯಿ-ಮಗುವಿನ ಚಿಕಿತ್ಸೆಗೆ ಮೀಸಲಿವೆ. ಜಯನಗರ ಸಾರ್ವಜನಿಕ ಆಸ್ಪತ್ರೆ,

ಶಿಶುಗಳಲ್ಲಿ ಸಮಸ್ಯೆ ಕಾಣಿಸಿಕೊಂಡಾಗ ಚಿಕಿತ್ಸೆಗೆ ನಮ್ಮ ಸಂಸ್ಥೆಗೆ ಶಿಫಾರಸು ಮಾಡಲಾಗುತ್ತಿದೆ. ಆ ಶಿಶುಗಳನ್ನೂ ಉಳಿಸಲು ಪ್ರಯತ್ನಿಸುತ್ತಿದ್ದೇವೆ

ಡಾ. ಸಂಜಯ್ ಕೆ.ಎಸ್., ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

ಕೆ.ಸಿ. ಜನರಲ್ ಸೇರಿ ವಿವಿಧ ಆಸ್ಪತ್ರೆಗಳಲ್ಲಿಯೂ ತಾಯಿ-ಮಗುವಿನ ವಿಭಾಗ ಗಳಿವೆ. ಖಾಸಗಿ ವ್ಯವಸ್ಥೆಯಡಿಯೂ ತಾಯಿ-ಮಗುವಿನ ಆರೈಕೆಗೆ ಸಂಬಂಧಿಸಿದಂತೆ ಹಲವು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ ನಗರದ ಜತೆಗೆ ಸುತ್ತಮುತ್ತಲಿನ ಜಿಲ್ಲೆಗಳಿಂದಲೂ ಅಪೌಷ್ಟಿಕತೆ, ನ್ಯುಮೋನಿಯಾ, ಉಸಿರಾಟದ ಸಮಸ್ಯೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳು ಶಿಶುಗಳಿಗೆ ಕಾಣಿಸಿಕೊಂಡಾಗ ಇಲ್ಲಿನ ಆಸ್ಪತ್ರೆಗಳಿಗೆ ಕರೆತರಲಾಗುತ್ತಿದೆ.

ತುರ್ತು ಚಿಕಿತ್ಸೆಗೆ ಶಿಫಾರಸು: ನಗರದಲ್ಲಿ ವರದಿಯಾಗುತ್ತಿರುವ ಶಿಶು ಮರಣ ಪ್ರಕರಣಗಳಲ್ಲಿ ಹೆಚ್ಚಿನವು ಶಿಫಾರಸು ಆಧಾರದಲ್ಲಿ ಇಲ್ಲಿನ ಆಸ್ಪತ್ರೆಗಳಲ್ಲಿ ದಾಖಲಾದ ಪ್ರಕರಣಗಳಾಗಿವೆ. ಹೆಚ್ಚಿನ ಚಿಕಿತ್ಸೆಗಾಗಿ ಇಲ್ಲಿನ ಆಸ್ಪತ್ರೆಗಳಿಗೆ ಕರೆತರಲಾಗುತ್ತಿದೆ. ಕಡಿಮೆ ತೂಕ ಇರುವ ಮಕ್ಕಳಿಗೆ ಕಾಂಗರೂ ಮದರ್ ಕೇರ್ ಆರೈಕೆಯನ್ನು ನಗರದ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತಿದೆ. ಉಸಿರಾಟ ಸೇರಿ ವಿವಿಧ ಸಮಸ್ಯೆಗಳು ಇರುವ ಮಕ್ಕಳನ್ನು ನವಜಾತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ ಇರಿಸಬೇಕಾಗುತ್ತದೆ. ಈ ವ್ಯವಸ್ಥೆ ಹಾಗೂ ಅದನ್ನು ನಿರ್ವಹಿಸುವ ತಜ್ಞ ವೈದ್ಯರ ಕೊರತೆಯಿಂದ ಇಲ್ಲಿಗೆ ಶಿಫಾರಸು ಮಾಡಲಾಗುತ್ತಿದೆ.

'ಉಸಿರಾಟದ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ನವಜಾತ ಶಿಶುಗಳು ಮರಣಹೊಂದುತ್ತವೆ. ಸಂಕೀರ್ಣ ಹೆರಿಗೆ ವೇಳೆಯೂ ಶಿಶುವಿಗೆ ಅಪಾಯ ಇರುತ್ತದೆ. ತಾಯಿಯ ಆರೋಗ್ಯವೂ ಮಗುವಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ತಾಯಿಯ ಬಲಹೀನತೆ, ರಕ್ತಹೀನತೆಯೂ ಮಗುವಿನ ಮೇಲೆ ಪರಿಣಾಮ ಬೀರುತ್ತದೆ' ಎಂದು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.

ನವಜಾತ ಶಿಶುಗಳ ಮರಣಕ್ಕೆ ಕಾರಣಗಳು

- ಅವಧಿ ಪೂರ್ವ ಜನನ, ಕಡಿಮೆ ತೂಕ
- ಆರೋಗ್ಯ ಕೇಂದ್ರಗಳಲ್ಲಿ ಮೂಲಸೌಕರ್ಯ ಕೊರತೆ
- ಪೌಷ್ಟಿಕಾಂಶದ ಕೊರತೆ
- ಶಿಶುವಿನ ಆರೈಕೆ ಕೊರತೆ
- ಜನನ ಸಮಯದಲ್ಲಿ ಉಸಿರಾಟದ ಸಮಸ್ಯೆ, ನ್ಯುಮೋನಿಯಾ
- ಜನ್ಮಜಾತ ಅಂಗವೈಕಲ್ಯ, ಹೃದಯ ಕಾಯಿಲೆ, ನರ ಸಂಬಂಧಿ ಸಮಸ್ಯೆ

'ನವಜಾತ ಶಿಶುಗಳಿಗೆ ಆಂಬುಲೆನ್ಸ್'

'ನವಜಾತ ಶಿಶುಗಳ ಮರಣ ಪ್ರಮಾಣ ದರವು ರಾಜ್ಯದಲ್ಲಿ ಪ್ರತಿ ಸಾವಿರ ಜನನಕ್ಕೆ 14ರಷ್ಟಿದೆ. ಇದನ್ನು ಒಂದಂಕಿಗೆ ಇಳಿಸುವ ಗುರಿ ಹಾಕಿಕೊಳ್ಳಲಾಗಿದೆ. ಅವಧಿಪೂರ್ವ ಜನಿಸಿದ ಶಿಶುಗಳು ಮತ್ತು ಗಂಭೀರ ಅನಾರೋಗ್ಯ ಸಮಸ್ಯೆಗಳಿಗೆ ಒಳಗಾಗಿರುವ ಶಿಶುಗಳಿಗೆ ಹೆಚ್ಚಿನ ಚಿಕಿತ್ಸೆ ಅಗತ್ಯ. ಅಂತಹವರನ್ನು ಆಸ್ಪತ್ರೆಗಳಿಗೆ ಕರೆದೊಯ್ಯಲು ಸುಧಾರಿತ ಜೀವ ರಕ್ಷಕ ಸೌಲಭ್ಯಗಳನ್ನು ಒಳಗೊಂಡ ಆಂಬುಲೆನ್ಸ್‌ಗಳ ಸೇವೆ ಪ್ರಾರಂಭಿಸಲಾಗಿದೆ.

ವೆಂಟಿಲೇಟರ್ ಸೇರಿ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳು ಇರಲಿವೆ. ಬೆಂಗಳೂರಿನಲ್ಲಿ ವಾಣಿವಿಲಾಸ ಆಸ್ಪತ್ರೆಗೆ ಈ ಆಂಬುಲೆನ್ಸ್ ಒದಗಿಸಲಾಗಿದೆ. ಜನನಿ ಶಿಶು ಸುರಕ್ಷಾದಂತಹ ಯೋಜನೆಗಳ ಜತೆಗೆ ಮರಣ ಪ್ರಮಾಣ ಕಡಿಮೆ ಮಾಡಲು ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುತ್ತಿದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಹಳಿ ಮೇಲೆ ಬಿದ್ದ ವಿದ್ಯುತ್ ತಂತಿ

ಕುಣಿಗಲ್: ತಾಲ್ಲೂಕಿನ ಬೇಗೂರು ಬಳಿಯ ರೈಲ್ವೆ ಹಳಿಗಳ ಮೇಲೆ ಶುಕ್ರವಾರ ವಿದ್ಯುತ್ ತಂತಿ ತುಂಡಾಗಿ ಬಿದ್ದ ಪರಿಣಾಮ ಬೆಂಗಳೂರಿನಿಂದ ಹಾಸನಕ್ಕೆ ಹೋಗುವ ರೈಲು, ಮಾರ್ಗ ಮಧ್ಯೆ ಎರಡು ತಾಸು ನಿಂತಿತ್ತು.

ಬೆಳಿಗ್ಗೆ 11.30ಕ್ಕೆ ರೈಲು ತೆರಳುತ್ತಿತ್ತು. ತಾಂತ್ರಿಕ ಸಿಬ್ಬಂದಿ ವ್ಯವಸ್ಥೆ ಸರಿಪಡಿಸಿದ ನಂತರ ರೈಲು ಕುಣಿಗಲ್ ಮಾರ್ಗವಾಗಿ ಹಾಸನಕ್ಕೆ ತೆರಳಿತು.

ಎಕ್ಸ್‌ಪ್ರೆಸ್ ವೇ: 60 ಸ್ಥಳಗಳಲ್ಲಿ ಕ್ಯಾಮೆರಾ

ರಸ್ತೆ ಸುರಕ್ಷತೆ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜೊತೆಗೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಏಪ್ರಿಲ್ ಅಂತ್ಯಕ್ಕೆ ವಾಹನಗಳ ನೋಂದಣಿ ಫಲಕಗಳನ್ನು ಪತ್ತೆಹಚ್ಚಲು 60 ಸ್ವಯಂ ಚಾಲಿತ ಕ್ಯಾಮೆರಾಗಳು (ಎಎನ್‌ಪಿಆರ್) ಕಾರ್ಯ ನಿರ್ವಹಿಸಲಿವೆ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಸಭೆಯ ಬಳಿಕ ಮಾತನಾಡಿದ ಅವರು, ಹೆದ್ದಾರಿಗಳಲ್ಲಿ ಅಪಘಾತ ಪ್ರಕರಣ ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಅಲ್ಲದೇ ಮಿತಿಮೀರಿ ವೇಗವಾಗಿ ಚಲಿಸುವ ವಾಹನಗಳ ಮೇಲೆ ನಿಗಾ ಇಡಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ

'ಸದ್ಯ ಕೆಲವೇ ಸ್ವಯಂ ಚಾಲಿತ ಕ್ಯಾಮೆರಾಗಳಿದ್ದು, ಅವುಗಳ ಸಂಖ್ಯೆ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

'ಹೆದ್ದಾರಿ ಪ್ರಾಧಿಕಾರದಿಂದಲೂ ಆರು ಸ್ಥಳಗಳಲ್ಲಿ ಎಎನ್‌ಪಿಆರ್ ಕ್ಯಾಮೆರಾ ಅಳವಡಿಕೆ ಮಾಡಲಾಗುವುದು' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಬೆಂಗಳೂರು ವಿಭಾಗದ ಅಧಿಕಾರಿ ವಿಲಾಸ್ ಪಿ. ಬ್ರಹ್ಮಣಕರ್ ತಿಳಿಸಿದರು.

'ಮಂಡ್ಯ ಜಿಲ್ಲೆಯ ಮದ್ದೂರು ಹಾಗೂ ರಾಮನಗರ ಜಿಲ್ಲೆಯ ಚನ್ನಪಟ್ಟಣದ ನಡುವೆ ಸೂಚನಾ ಫಲಕ ಅಳವಡಿಕೆ ಹಾಗೂ ಹಾಳಾದ ತಡೆಗೋಡೆ ದುರಸ್ತಿ ಕಾಮಗಾರಿಯನ್ನು ಪ್ರಾಧಿಕಾರದಿಂದ ಕೈಗೆತ್ತಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

'ಎಕ್ಸ್‌ಪ್ರೆಸ್-ವೇ ಹಾದು ಹೋಗಿರುವ ಮಾರ್ಗದಲ್ಲಿನ ಪಟ್ಟಣ ಪ್ರದೇಶಗಳಲ್ಲಿ ಜನರ ಓಡಾಟಕ್ಕೆ ಅನುಕೂಲವಾಗಲೆಂದು ಕೆಳಸೇತುವೆ ಹಾಗೂ ಮೇಲ್ಸೇತುವೆ ನಿರ್ಮಿಸಲಾಗುತ್ತಿದೆ. ₹ 688 ಕೋಟಿಗೆ ಟೆಂಡರ್ ಆಗಿದ್ದು ಬೇಗ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ' ಎಂದು ಅಲೋಕ್ ಕುಮಾರ್ ಮಾಹಿತಿ ನೀಡಿದರು. 'ಎಕ್ಸ್‌ಪ್ರೆಸ್ ವೇನ ಮೂರು ಸ್ಥಳಗಳಲ್ಲಿ ಹೆಚ್ಚು ಅಪಘಾತಗಳು ನಡೆಯುತ್ತಿವೆ. ಅಲ್ಲಿ ಸೂಚನಾ ಫಲಕ ಹಾಕುವಂತೆ ಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ನಗರದಲ್ಲಿ ತಾಪಮಾನ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ತಾಪಮಾನ ಏರಿಕೆಯಾಗುತ್ತಿದ್ದು, ಹವಾಮಾನ ಇಲಾಖೆ ಮಾಹಿತಿ ಪ್ರಕಾರ ಶುಕ್ರವಾರ ಗರಿಷ್ಠ ಉಷ್ಣಾಂಶ 36.4 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಇದು ಕಳೆದ 5 ವರ್ಷದಲ್ಲಿ ಮಾರ್ಚ್ 29ರಂದು ವರದಿಯಾದ ಗರಿಷ್ಠ ಉಷ್ಣಾಂಶವಾಗಿದೆ. ಕಳೆದ10 ವರ್ಷಗಳಲ್ಲಿ 3ನೇ ಹಾಗೂ 15 ವರ್ಷಗಳಲ್ಲಿ 4ನೇ ಗರಿಷ್ಠ ಉಷ್ಣಾಂಶವೂ ಇದಾಗಿದೆ ಎಂದು ಇಲಾಖೆ ತಿಳಿಸಿದೆ.

ಕನಿಷ್ಠ ಉಷ್ಣಾಂಶವೂ ಹೆಚ್ಚಳ-ವಾಗಿದ್ದು, 23.6 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಮುಂದಿನ ಎರಡು ದಿನಗಳು ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ವಾಟ್ಸ್‌ಆ್ಯಪ್‌ನಲ್ಲಿ ಬೆದರಿಕೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ರಾಮೇಶ್ವರಂ ಕೆಫೆ' ಬಾಂಬ್ ಸ್ಫೋಟ ಪ್ರಕರಣ ಕುರಿತು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರಿಂದ ನನಗೆ ಹಾಗೂ ನನ್ನ ಕುಟುಂಬಸ್ಥರಿಗೆ ಅಂತರರಾಷ್ಟ್ರೀಯ ಫೋನ್ ಕರೆಗಳಿಂದ ಬೆದರಿಕೆ ಸಂದೇಶ ಬಂದಿದೆ' ಎಂದು ಆರೋಪಿಸಿ, ಬನಶಂಕರಿ 3ನೇ ಹಂತದ ನಿವಾಸಿ ಪ್ರಶಾಂತ್ ಎಸ್.ಸಂಬರಗಿ ಅವರು ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಮಾರ್ಚ್ 10ರ ರಾತ್ರಿ ನನ್ನ ಮೊಬೈಲ್‌ಗೆ ವಾಟ್ಸ್‌ಆ್ಯಪ್, ಇ-ಮೇಲ್‌ನಿಂದ ಜೀವ ಬೆದರಿಕೆ ಸಂದೇಶ ಬಂದಿವೆ' ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರ ಕಳೆದಿವೆ ಎಂದು ಹಕ್ಕುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.10)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರು ಪ್ರಮಾಣಪತ್ರ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
M000911	50	16729	2016176-2016225	ಮನ್ನಾಲಾಲ್ ನೆವಾಟಿಯಾ (ಮೃತ)
	25	16730	2016226-2016250	
	50	41972	2948082-2948131	
	20	41973	2948132-2948151	
	5	41974	2948152-2948156	

ಈ ಸೂಚನೆಯನ್ನು ಪ್ರಕಟಿಸಿದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯನ್ನು ಸ್ವೀಕರಿಸಿದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರಂತೆ ಹಕ್ಕುದಾರರಿಗೆ ದೃಢೀಕರಣಪತ್ರಗಳನ್ನು ನೀಡಲು ಮುಂದುವರಿಯುತ್ತದೆ; ಮತ್ತು 10 ರೂ. ಮುಖಬೆಲೆಯ ಹಳೆಯ ಷೇರು ಪ್ರಮಾಣ ಪತ್ರಗಳನ್ನು ಹಿಂದಿರುಗಿಸಬೇಕಾದ ನಿಬಂಧನೆ ಇರುವುದಿಲ್ಲ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸ್ಥಳ: ಬೆಂಗಳೂರು
ದಿನಾಂಕ: 29/03/2024
ಮಾನಸ. ಆರ್
ಕಂಪನಿ ಸೆಕ್ರಟರಿ

ಸಿಂಗಪುರ ಝೂಲಾಜಿಕಲ್ ಗಾರ್ಡನ್‌ನಿಂದ ಪ್ರಾಣಿ ವಿನಿಮಯ ಯೋಜನೆಯಡಿ ತರಲಾದ ಕೆಂಪುಮೂತಿಯ ಕೋತಿಗಳು

ಬನ್ನೇರುಘಟ್ಟಕ್ಕೆ ಸಿಂಗಪುರದ ಕೆಂಪುಮೂತಿಯ ಕೋತಿಗಳು

ಪ್ರಜಾವಾಣಿ ವಾರ್ತೆ

ಆನೇಕಲ್ : ಪ್ರಾಣಿ ವಿನಿಮಯ ಯೋಜನೆಯಡಿಯಲ್ಲಿ ಸಿಂಗಪುರದ ಪ್ರಾಣಿ ಸಂಗ್ರಹಾಲಯದಿಂದ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಎರಡು ಗಂಡು ಮತ್ತು ನಾಲ್ಕು ಹೆಣ್ಣು ಹಮಾದ್ರಿಯಾಸ್ ಬಬೂನ್ (ಕೆಂಪುಮೂತಿಯ ಮಂಗ) ತರಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.

ಹೊರ ದೇಶದಿಂದ ತಂದ ಪ್ರಾಣಿಗಳನ್ನು ಸ್ಥಳಾಂತರಿಸುವ ಮೊದಲು ಒಂದು ತಿಂಗಳ ಕಾಲ ಕ್ವಾರೆಂಟೈನ್ ಮಾಡಬೇಕೆಂಬ ಮಾರ್ಗಸೂಚಿಯಿದ್ದು ಅದರಂತೆ ಕ್ರಮ ಕೈಗೊಳ್ಳಲಾಗಿದೆ. ಪ್ರಾಣಿಗಳನ್ನು ಕ್ವಾರೆಂಟೈನ್ ಪ್ರದೇಶದಲ್ಲಿ ಬಿಡಲಾಗಿದೆ ಎಂದು ತಿಳಿಸಿದರು.

ದೇವರಹೊಸಹಳ್ಳಿಯ ಭದ್ರಕಾಳಮ್ಮ ಸಮೇತ ವೀರಭದ್ರಸ್ವಾಮಿ ಬ್ರಹ್ಮರಥೋತ್ಸವ

ವೀರಭದ್ರಸ್ವಾಮಿ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿ ದೇವರಹೊ-ಸಹಳ್ಳಿಯ ಭದ್ರಕಾಳಮ್ಮ ಸಮೇತ ವೀರಭದ್ರಸ್ವಾಮಿ ಬ್ರಹ್ಮರಥೋತ್ಸವ ಬಿರುಬಿಸಿಲಿನ ನಡುವೆಯೂ ಗುರುವಾರ ಸಂಭ್ರಮದಿಂದ ನೆರವೇರಿತು.

ಭಾರಿ ಸಂಖ್ಯೆಯಲ್ಲಿ ಭಕ್ತರು ಜಾತ್ರೆಯಲ್ಲಿ ಭಾಗವಹಿಸಿದ್ದರು. ಬೆಳಿಗ್ಗೆ ಮೂಲ ದೇವರಿಗೆ ಶತರುದ್ರಾಭಿಷೇಕ ಹೋಮ ಹವನಗಳು ನಡೆದವು. ಮಧ್ಯಾಹ್ನ 1 ರಿಂದ 1.30ರವರೆಗೆ ರಥ ಎಳೆಯಲಾಯಿತು. ಬಣ್ಣ ಬಣ್ಣದ ಬಟ್ಟೆ ಹಾಗೂ ಹೂವುಗಳಿಂದ ಅಲಂಕರಿಸಿದ್ದ ತೇರಿನಲ್ಲಿ ಉತ್ಸವ ಮೂರ್ತಿಯನ್ನು ಕೂರಿಸಿ ಎಳೆಯುತ್ತಿದ್ದಂತೆ, ಭಕ್ತರು ಜಯಘೋಷ ಕೂಗಿದರು. ಬಾಳೆಹಣ್ಣು ಎಸೆದು ಹರಕೆ ತೀರಿಸಿದರು.

ಜನಪದ ಕಲಾತಂಡಗಳಿಂದ ಡೊಳ್ಳು ಕುಣಿತ, ವೀರಗಾಸೆ ಪ್ರದರ್ಶನ ನಡೆಯಿತು. ಭಕ್ತರು ಅರವಟ್ಟಿಗೆಗಳನ್ನು ತೆರೆದು ಜಾತ್ರೆಗೆ ಬಂದವರಿಗೆ ನೀರು, ಮಜ್ಜಿಗೆ, ಪಾನಕ, ಹೆಸರುಬೇಳೆ ಹಂಚಿದರು. ಹಲವು ಅರವಟ್ಟಿಗೆಗಳಲ್ಲಿ ಅನ್ನದಾಸೋಹ ಏರ್ಪಡಿಸಲಾಗಿತ್ತು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED BDA SITES ANY MEASUREMENT, Anjanapura, Banashankari 6th Stage JP Nagar 8th & 9th Phase, Narayan Nagar, BCC & BCMC Layout, Vishweshwaraiah Layout. CONTACT: 9845298419

WANTED 20X30 or 30x40 Site Anjanapura BDA Layout any Block & any Facing Contact: 9980978986

General

REQUIRE LAND For Purchase in NORTH BANGALORE 1+ Acres, Sellers Contact: 8867580471 / 8050897262

Banashankari

"WANTED BANASHANKARI 6th Stage BDA Sites 50x80, 40x60, 30x40, 20x30, Genuine Owners Contact: 9845146725/ 9741466369"

Kanakapura Road

WANTED SITE: 40x60, 30x40 NarayanaNagar, BCMC Layout, Anjanapura BDA, Banashankari 6th.Stage, Gubblala, Agents Excuse. 6363726250.

Vishweshwariah Layout

WANTED BDA SITE VISWESHWARAIAH LAYOUT ANY MEASUREMENT ANY BLOCK, FACE IMMEDIATE REGISTRATION BROKER'S EXCUSE: 6360050356

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

DH DECCAN HERALD Classifieds More value, more impact | ಪ್ರಜಾವಾಣಿ
NAME CHANGE
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

Multiple Locations

URGENT REQUIREMENT 30x40,40x60, 50x80 BDA Commercial & Residential for genuine buyers in BSK 6th Stage, Anjanapura, J.P.Nagar, Jayanagar, Kanakapura Road and other areas also, Contact Krishna: 9845059328

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

JOB OPPORTUNITIES

General

WANTED Good Experienced Computer/ Xerox Operator For Established Business Center At No. 621, 10th 'A' Main, Next 4th Block Jayanagar Sub-Registrar Office, Bangalore- 560011 Good Salary Walk InInterview Call 9448094680 / 9743700909

A REPUTED property development company requires BUSINESS DEVELOPMENT MANAGERS & SENIOR MANAGERS, Age above 30 years. Retired persons also can apply. Freshers/ Experienced. Earning Rs. 50,000/- per month. Contact:- 8884456860.

Marketing & Sales

MALE/ FEMALE SALES MANAGERS & LEADERS, (Realestate in Bangalore) Doddaballapur & Bangalore people any one apply, Salary:30,000 to 70,000/-.Contact: 9000118811, 6364880216.

BUSINESS

Business Offers

General

DRYFRUITS, FLAVOURED Cashews, Gift Boxes. Free Home Delivery Throughout Bengaluru. Irresistible Prices Impeccable Quality and Immaculate Taste Contact 'Farms India' 8095059460/ 6360940295

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE

PUBLIC NOTICE
My Clients intend to purchase the property more particularly described in the Schedule hereunder from its present co-owners **Mr. Hari K Marar** and **Mrs.Yashodhara Marar,** who have represented that they have a clear and marketable title to the same. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents within fifteen (15) days hereof, failing which it will be presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.

SCHEDULE PROPERTY
All that piece and parcel of the four bedroom apartment bearing No.B-3024 located on the Second Floor in the apartment building known as "SOBHA PETUNIA" measuring a super built up area of 3110.58 sq. ft., together with 527.65 sq. ft., of proportionate share in the club house and common areas with two car parking spaces in the Ground Floor along with exclusive garden area of 318.39 sq. ft., along with 0.82% (i.e., 1557.30 sq. ft.,) undivided share, right, title and interest in the residentially converted land wherein the aforesaid apartment is constructed bearing BBMP Municipal No.152/151, totally measuring an extent of about 1,91,631.81 sq. ft., carved out of Sy. Nos.49/1, 49/2, 49/6 (old Sy. No.49/3) and 49/5 of Nagavara Village, Kasaba Hobli, Bangalore North Taluk, Bangalore and bounded on the: **East by :** Property of Vyalikaval Housing Society Property **West by:** Nala and Private Property **North by:** Road **South by:** Private layout formed by Vyalikaval Housing Society property.

FOR ARVIND RAGHAVAN LAW PARTNERS,
ARVIND RAGHAVAN,
ADVOCATE, # 48, "Ishita" 2nd Floor, 2nd MAIN ROAD, VYALIKAVAL, BANGALORE- 03
E-mail:arvind_ncsr@yahoo.com
Bangalore Date:30/03/2024

MORE Classifieds Ads on Subsequent Pages

Reliance
Growth is Life
ಕಡಿಮೆ ಬೆಲೆಗೆ ಒಂದು ತಿಂಗಳ ದಿನಸಿ ಬೇಕಾ?
ಸ್ಮಾರ್ಟ್ ಬಜಾರ್‌ಗೆ ಬನ್ನಿರಿ
SMART BAZAAR
5% ಕಡಿಮೆ ಎಂಆರ್‌ಪಿ ಪ್ರತಿದಿನ
ಸಕ್ಕರೆ 1 kg ₹9 ಪ್ರತಿದಿನ
*₹1999 ಮತ್ತು ಅದಕ್ಕಿಂತ ಹೆಚ್ಚಿನ ಶಾಪಿಂಗ್‌ನಲ್ಲಿ
SMART BAZAAR ALSO ON JioMart
ಸಫೋಲಾ ಗೋಲ್ಡ್ ಆಯಿಲ್ 3 L + ಇಂಡಿಯಾ ಗೇಟ್ ರೆಗ್ಯುಲರ್ ಚಾಯ್ಸ್ ಬಾಸ್ಮತಿ ಅಕ್ಕಿ 5 kg
ಸ್ಮಾರ್ಟ್ ಬೆಲೆ ₹725
ಎಮ್ ಆರ್‌ಪಿ ₹1000 ಉಳಿಸಿರಿ ₹275
ಗುಡ್ ಲೈಫ್ ಸಕ್ಕರೆ S 5 kg
ಸ್ಮಾರ್ಟ್ ಬೆಲೆ ₹213 (₹42.60 /kg)
ಎಮ್ ಆರ್‌ಪಿ ₹300 ಉಳಿಸಿರಿ ₹87
ಗುಡ್ ಲೈಫ್ ಡೈಲಿ ರೈಸ್ 26 kg
ಸ್ಮಾರ್ಟ್ ಬೆಲೆ ₹1349 (₹51.88 /kg)
ಎಮ್ ಆರ್‌ಪಿ ₹1800 ಉಳಿಸಿರಿ ₹451
ಗುಡ್ ಲೈಫ್ ಸೋನಾ ಮಸೂರಿ ರೈಸ್ ಪ್ರೀಮಿಯಂ 26 kg
ಸ್ಮಾರ್ಟ್ ಬೆಲೆ ₹1449 (₹55.73 /kg)
ಎಮ್ ಆರ್‌ಪಿ ₹2100 ಉಳಿಸಿರಿ ₹651
ಚಕ್ಕಿ ಆಟಾ 5 kg
ಸ್ಮಾರ್ಟ್ ಬೆಲೆ ₹189
ಎಮ್ ಆರ್‌ಪಿ ₹270 ಉಳಿಸಿರಿ ₹81
ಈಸ್ಟರ್ನ್ ಮಸಾಲೆಗಳ ಶ್ರೇಣಿ
BUY ANY 2 GET ANY 1 FREE*
*ಎಮ್‌ಆರ್‌ಪಿ ಮೇಲೆ
₹60
ಭಾರತ್ ಚನಾ ದಾಲ್ 1 kg
ಈಗ ಲಭ್ಯವಿದೆ
ಗುಡ್ ಲೈಫ್ ಬಾದಾಮ್ / ಕ್ಯಾಶ್ಯೂ (W320) 500 g
ಸ್ಮಾರ್ಟ್ ಬೆಲೆ ₹359/ ₹369
ಎಮ್ ಆರ್‌ಪಿ ₹549/ ₹499 ಉಳಿಸಿರಿ ₹190/ ₹130
ಸಫೋಲಾ ಆಕ್ಟಿವ್ / ಸನ್ ಪ್ಯೂರ್ ಸೂರ್ಯಕಾಂತಿ ಎಣ್ಣೆ 1 L
ಸ್ಮಾರ್ಟ್ ಬೆಲೆ ₹109/ ₹111
ಎಮ್ ಆರ್‌ಪಿ ₹160 / ₹139 ಉಳಿಸಿರಿ ₹51 / ₹28
ನಂದಿನಿ ಶುದ್ಧ ತುಪ್ಪ 1 L
ಸ್ಮಾರ್ಟ್ ಬೆಲೆ ₹599
ಎಮ್ ಆರ್‌ಪಿ ₹630 ಉಳಿಸಿರಿ ₹31
ಕ್ವಾಲಿಟಿ ವಾಲ್ಸ್ ಪಾರ್ಟಿ ಪ್ಯಾಕ್ಸ್ / ಟಬ್ಸ್ 700 ml (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹125 ರಿಂದ ಸ್ಮಾರ್ಟ್ ಬೆಲೆ ₹84 ರಿಂದ
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 300 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹120 ರಿಂದ / ಯೂನಿಟ್
ಟಾಟಾ ಗೋಲ್ಡ್ ಲೀಫ್ ಚಹಾ 500 g
ಉಳಿಸಿರಿ ₹60
ಎಮ್‌ಆರ್‌ಪಿ ₹315 ರಿಂದ ಸ್ಮಾರ್ಟ್ ಬೆಲೆ ₹255 ರಿಂದ
ಸನ್ ಫೀಸ್ಟ್ ಯಿಪ್ಪಿ ನೂಡಲ್ ಮ್ಯಾಜಿಕ್ ಮಸಾಲ 560 g
BUY 2 GET 1 FREE
ಎಮ್‌ಆರ್‌ಪಿ ₹112 ರಿಂದ / ಯೂನಿಟ್
7 ಅಪ್ / ಮಿರಿಂಡಾ / ಪೆಪ್ಸಿ 2.25 L / ಕ್ಯಾಂಪ 2 L (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹80 ರಿಂದ / ಯೂನಿಟ್
ಕೋಲ್ಗೇಟ್ ಡೆಂಟಲ್ ಕ್ರೀಮ್ 500 g / ಕೋಲ್ಗೇಟ್ ಮ್ಯಾಕ್ಸ್ ಫ್ರೆಶ್ ಟೂತ್‌ಪೇಸ್ಟ್ 300 g (ಆಯ್ದ ಪ್ರಕಾರಗಳು)
ಉಳಿಸಿರಿ ₹80
ಎಮ್‌ಆರ್‌ಪಿ ₹230 ರಿಂದ ಸ್ಮಾರ್ಟ್ ಬೆಲೆ ₹150 ರಿಂದ
ಸಿಂಥೋಲ್ / ಲಕ್ಸ್ / ಪೀಯರ್ಸ್ ಸೋಪ್ 125 g ರಿಂದ (ಮಲ್ಟಿ ಪ್ಯಾಕ್) (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹179 ರಿಂದ ಸ್ಮಾರ್ಟ್ ಬೆಲೆ ₹120 ರಿಂದ
ಹೆಡ್ ಆ್ಯಂಡ್ ಶೋಲ್ಡರ್ಸ್ / ಲೋರಿಯಲ್ / ಪ್ಯಾಂಟೀನ್ 580 ml ರಿಂದ / ಮೀರಾ ಶ್ಯಾಂಪೂ 340 ml (ಆಯ್ದ ಪ್ರಕಾರಗಳು)
ಫ್ಲ್ಯಾಟ್ 50% ಕಡಿತ
ಎಮ್‌ಆರ್‌ಪಿ ₹345 ರಿಂದ ಸ್ಮಾರ್ಟ್ ಬೆಲೆ ₹173 ರಿಂದ
ಪುರುಷರ ಮತ್ತು / ಸ್ತ್ರೀಯರ ಡಿಯೊ 135 ml ರಿಂದ (ಆಯ್ದ ಪ್ರಕಾರಗಳು)
BUY 1 GET 1 FREE
ಎಮ್‌ಆರ್‌ಪಿ ₹259 ರಿಂದ
DINEWELL cello
ಓಪಲ್‌ವೇರ್ / ಮೆಲಮೈನ್ ಡಿನ್ನರ್‌ವೇರ್ (ರೇಂಜ್ ಆಯ್ಕೆಮಾಡಿ)
BUY 1 GET 1 FREE
ಎಮ್‌ಆರ್‌ಪಿ ₹70 ರಿಂದ
HOME ONE HAPPY LIVING
3 Pcs ಸ್ಟೇನ್ಲೆಸ್ ಸ್ಟೀಲ್ ಶಾಖರೋಧಕ ಪಾತ್ರೆ
ಸ್ಮಾರ್ಟ್ ಬೆಲೆ ₹899
ಎಮ್‌ಆರ್‌ಪಿ ₹1995
LIVESMART
SMART ಸಮ್ಮರ್ ಫ್ಯಾಷನ್ ₹149 ರಿಂದ ಪ್ರಾರಂಭ
ಉಡುಗೆ ₹499 ರಿಂದ ಪ್ರಾರಂಭ
ಶರ್ಟ್ ₹299 ರಿಂದ ಪ್ರಾರಂಭ
ಟಿ-ಶರ್ಟ್ ₹149 ರಿಂದ ಪ್ರಾರಂಭ
ಶರ್ಟ್ ₹249 ರಿಂದ ಪ್ರಾರಂಭ
ಶಾರ್ಟ್ಸ್ ₹399 ರಿಂದ ಪ್ರಾರಂಭ
ಶಾರ್ಟ್ಸ್ ₹199 ರಿಂದ ಪ್ರಾರಂಭ
Raymond TRIDENT HAPPY LIVING Ulhaas
ದಿಂಬಿನ ಹೊದಿಕೆಯೊಂದಿಗೆ ಡಬಲ್ ಬೆಡ್‌ಶೀಟ್
ಸ್ಮಾರ್ಟ್ ಬೆಲೆ ₹399 ರಿಂದ
ಎಮ್‌ಆರ್‌ಪಿ ₹1199 ರಿಂದ
Ulhaas Raymond HAPPY LIVING WELSPUN
ಬಾತ್ ಟವೆಲ್
ಸ್ಮಾರ್ಟ್ ಬೆಲೆ ₹99 ರಿಂದ
ಎಮ್‌ಆರ್‌ಪಿ ₹199 ರಿಂದ
LYF
3 ಜಾರ್ ಮಿಕ್ಸರ್ ಗ್ರೈಂಡರ್ (500W)
ಸ್ಮಾರ್ಟ್ ಬೆಲೆ ₹1399
ಎಮ್‌ಆರ್‌ಪಿ ₹2799
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
SMART SUPERSTORE
CRED
scan and pay with CRED
flat ₹25 cashback.
on purchases worth ₹500 and more.
offer valid from 1st March to 31st March 2024.
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ

ಭುವನೇಶ್ವರಿ

ಸೈಕಲ್ ಓಡಿಸಲು ಬರದಿದ್ದರೂ ಆಟೊ ಕಲಿತೆ

ಹೆಣ್ಣು ಮನ್ಯಾಗೆ ಇರ್ಬೇಕು, ಹೊರಗಡೆ ಬರಬಾರ್ದು, ನೆಟ್ಟಗೆ ಅಡುಗೆ ಮಾಡೋಕೇ ಬರೋಲ್ಲ ನಿನಗೆ. ಗಂಡನ ಈ ಮಾತು ಕೇಳಿ ಕೇಳಿ ದಿನನಿತ್ಯವೂ ಸಾಕಾಯಿತು. ಜೊತೆಗೆ ಮಕ್ಕಳೂ ಇದನ್ನೇ ನಿಜವೆಂದು ಭ್ರಮಿಸಿ, ಅವರೂ ಹಾಗೇ ಹೇಳಲಾರಂಭಿಸಿದರು. ಸಹನೆಯ ಕಟ್ಟೆ ಒಡೆಯಿತು.

ನನಗೆ ಏನಾದರೂ ಜೀವನದಲ್ಲಿ ಸಾಧಿಸಬೇಕು, ನನ್ನ ಕಾಲ ಮೇಲೆ ನಾನು ನಿಂತುಕೊಳ್ಳಲೇಬೇಕೆಂಬ ಹಟದಿಂದ ಸೈಕಲ್ ಕೂಡ ಓಡಿಸದೇ ಇದ್ದ ನಾನು, ಆಟೊ ಓಡಿಸುವುದು ಕಲಿತೆ. ಕಲಿಯುವ ವೇಳೆ ನನ್ನ ಗಂಡ, ಆಟೊ ಓಡಿಸುವಾಗ ಆ್ಯಕ್ಸಿಡೆಂಟ್ ಆದರೆ ನನಗೆ ಪೋನ್ ಮಾಡಲೇಬೇಡ ಎಂದು ಹೇಳಿದ್ದರು. ಆಗ ನನ್ನ ತವರು ನನಗೆ ಧೈರ್ಯ ನೀಡಿತು ಎನ್ನುತ್ತಾರೆ ಭುವನೇಶ್ವರಿ.

ಈಗ ನಾನು ಆಟೊ ಓಡಿಸುತ್ತಿದ್ದೇನೆ. ನನ್ನಿಬ್ಬರು ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಕುಟುಂಬವು ಈಗ ನನಗೂ, ನನ್ನ ಕೆಲಸಕ್ಕೂ ಬೆಂಬಲ ನೀಡುತ್ತಿದೆ. ಛಲವಿದ್ದರೆ ಮಾತ್ರ ಏನಾದರೂ ಸಾಧಿಸಲು ಸಾಧ್ಯ ಎನ್ನುತ್ತಾರೆ ಭುವನೇಶ್ವರಿ.

ಬದುಕಿನ ಬಂಡಿಯ ಸಾಹೇಬರಾಗುತ್ತ...

ಕಷ್ಟಗಳ ಮಳೆಸುರಿದಾಗ ವಿಚಲಿತರಾಗದೆ ಮುನ್ನಡೆದರಿವರು...

ಜೀವನದ ನೊಗ ಹೊರಲು, ಜೊತೆಗಿರುವ ಜೀವಗಳ ಜವಾಬ್ದಾರಿ ಹೊರಲು ಬೆಂಗಳೂರಿನಲ್ಲಿರುವ ಈ ಹೆಂಗಳೆಯರು ಆಟೊ ಚಾಲಕಿಯರಾದರು. ತಮ್ಮ ಬದುಕಿನ ಬಂಡಿಯೀಗ ಸುಗಮವಾಗಿ ಸಾಗುತ್ತದೆ ಎನ್ನುತ್ತಲೇ ಮೊದಲ ದಿನಗಳ ಸಂಘರ್ಷವನ್ನು **ಗಂಜಿ ಆದಿಶೇಷ** ಅವರೊಂದಿಗೆ ಹಂಚಿಕೊಂಡಿದ್ದಾರೆ.

ಮಹಿಳೆಯರಿಗೆ ಇ–ಆಟೊ ಡ್ರೈವಿಂಗ್ ತರಬೇತಿ

ಬೆಂಗಳೂರಿನಲ್ಲಿರುವ ಮೆಟ್ರೋರೈಡ್ ಸಂಸ್ಥೆ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸುತ್ತಿದೆ. ಇದುವರೆಗೆ 25 ಮಹಿಳೆಯರಿಗೆ ಇ–ಆಟೊ ಡ್ರೈವಿಂಗ್ ತರಬೇತಿ ನೀಡಿದೆ. ಈ ಆಟೊ ಚಾಲಕಿಯರು ಪ್ರಸ್ತುತ ಯಲಚೇನಹಳ್ಳಿ, ಜೆ.ಪಿ.ನಗರ, ಇಂದಿರಾನಗರ, ಕೋಣನಕುಂಟೆ ಮೆಟ್ರೋ ನಿಲ್ದಾಣದ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಯೋಜನೆಯನ್ನು ಮತ್ತಷ್ಟು ವಿಸ್ತರಿಸಲು ಆಲ್ ಸ್ಟ್ರಂ ಕಂಪನಿ ಜೊತೆ ಕೈ ಜೋಡಿಸಿದೆ. ಕಂಪನಿಯು, ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಬಿಲಿಟಿ ಅಡಿಯಲ್ಲಿ ಡಬ್ಲ್ಯುಆರ್‌ಐ ಸಹಯೋಗದೊಂದಿಗೆ ಲೀಪ್ (ಲೋ ಎಮಿಷನ್ ಆಕ್ಸೆಸ್ ಟು ಪಬ್ಲಿಕ್ ಟ್ರಾನ್ಸ್‌ಪೋರ್ಟ್–ಎಲ್‌ಇಎಪಿ) ಕಾರ್ಯಕ್ರಮದಡಿ ಮುಂದಿನ ವರ್ಷದೊಳಗೆ 200 ಮಹಿಳೆಯರಿಗೆ ಆಟೊ ತರಬೇತಿ ನೀಡುವ ಗುರಿ ಇದೆ.

ಜೀವನಪಥದ ಸಂಗಾತಿ

ನಮ್ಮದು ಚಿಕ್ಕ ಸಂಸಾರ. ನಾನು, ನನ್ನ ಪತಿ, ಇಬ್ಬರು ಮುದ್ದಾದ ಹೆಣ್ಣುಮಕ್ಕಳು. ಅತ್ತೆ ಕೂಡ ನಮ್ಮ ಜೊತೆಗೆ ಇದ್ದರು. ಕೋವಿಡ್ ನನ್ನ ಗಂಡನನ್ನು ಬಲಿ ತೆಗೆದುಕೊಂಡಿತು. ಆಕಾಶವೇ ತಲೆ ಮೇಲೆ ಬಿದ್ದಂತೆ, ಜೀವನವೇ ಸಾಕು ಎನ್ನುವಂತಾಯಿತು.

ಆದರೆ, ಇಬ್ಬರು ಹೆಣ್ಣುಮಕ್ಕಳು ಹಾಗೂ ವಯಸ್ಸಾದ ಅತ್ತೆಯ ಜವಾಬ್ದಾರಿ ನನ್ನ ಮೇಲೆ ಇತ್ತು. ಅಸಹಾಯಕತನ ಕಾಡತೊಡಗಿತು. ನನ್ನ ನೋವನ್ನೆಲ್ಲಾ ಅದುಮಿಟ್ಟು ಅವರ ಭವಿಷ್ಯತ್ತಿಗಾಗಿ ಬದುಕಿನ ಜೊತೆ ಹೋರಾಡಲು ಆರಂಭಿಸಿದೆ ಎನ್ನುತ್ತಾರೆ ಬೆಂಗಳೂರಿನ ಸರಸ್ವತಿ.

ಸರಸ್ವತಿ

ಪದವೀಧರೆಯಾಗಿದ್ದೆ. ಖಾಸಗಿ ಕಂಪನಿಯೊಂದರಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದೆ. ಕೋವಿಡ್‌ನಿಂದಾಗಿ ಕಂಪನಿ ಬಾಗಿಲು ಮುಚ್ಚಿತು. ಈ ಸಂದರ್ಭದಲ್ಲಿ, ನನ್ನ ಪಾಲಿಗೆ ದೇವರಂತೆ ಕಂಡಿದ್ದು ಆಟೊ ಓಡಿಸೋದು. ಮೆಟ್ರೋರೈಡ್ ಸಂಸ್ಥೆ ಮಹಿಳೆಯರಿಗೆ ಉಚಿತವಾಗಿ ಆಟೊ ಡ್ರೈವಿಂಗ್ ಕಲಿಸಿ, ಡ್ರೈವಿಂಗ್ ಲೈಸೆನ್ಸ್ ನೀಡಿ, ಚಲಾಯಿಸಲು ಆಟೊವನ್ನು ಕೂಡ ನೀಡುತ್ತದೆ ಎಂದು ತಿಳಿದುಕೊಂಡೆ. ಕೂಡಲೇ ಹೋಗಿ ಅವರನ್ನು ಸಂಪರ್ಕಿಸಿ, ನನ್ನ ಜೀವನ ವೃತ್ತಾಂತವನ್ನು ಹೇಳಿದೆ. ಅವರು ನನಗೆ ಸಹಾಯ ಮಾಡಲು ಮುಂದಾದರು.

ಒಂದೇ ತಿಂಗಳಲ್ಲಿ ಆಟೊ ಓಡಿಸುವುದು ಕಲಿತೆ. ಅಲ್ಲಿಂದ ಆಟೊ ಚಲಾಯಿಸಲು ಆರಂಭಿಸಿದೆ. ಬೆಳಿಗ್ಗೆ 8ರಿಂದ ಸಂಜೆ 4ರವರೆಗೆ ಆಟೊ ಓಡಿಸುತ್ತಿದ್ದೇನೆ. ದಿನಕ್ಕೆ ₹800 ವರೆಗೆ ದುಡಿಯುತ್ತಿದ್ದು, ಆರ್ಥಿಕವಾಗಿ ಸ್ವಾವಲಂಬಿಯಾದೆ. ದೊಡ್ಡವಳು ಬಿಎಸ್ಸಿ ಓದುತ್ತಿದ್ದರೆ, ಚಿಕ್ಕವಳು ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾಳೆ.

ಮೆಟ್ರೋರೈಡ್ ಆಟೊ ಚಾಲಕಿಯರು

ವೀರಕುಮಾರಿ

ಗಂಡನೂ ಮಗುವಾದ

ನಾನು ಬ್ಯೂಟಿಷಿಯನ್, ನನ್ನ ಗಂಡ ಸಿನಿಮಾದಲ್ಲಿ ಮೇಕಪ್ ಆರ್ಟಿಸ್ಟ್. ಆರತಿ–ಕೀರ್ತಿಗೆ ಎನ್ನುವಂತೆ ಇಬ್ಬರು ಮಕ್ಕಳು. ಸಂಸಾರ ಸರಾಗವಾಗಿ ನಡೆಯುತ್ತಿತ್ತು. ನನ್ನ ಗಂಡನಿಗೆ ಬ್ರೈನ್ ಸ್ಟ್ರೋಕ್ ಆಯಿತು. ಚಿಕಿತ್ಸೆಗಾಗಿ ದುಡ್ಡೆಲ್ಲಾ ಖರ್ಚಾಯಿತು. ಬ್ರೈನ್ ಸ್ಟ್ರೋಕ್‌ನಿಂದಾಗಿ ನನ್ನ ಗಂಡನೂ ಮಗುವಿನಂತಾದ. ಒಟ್ಟು ನನಗೆ ಮೂವರು ಮಕ್ಕಳಾದರು. ಕುಟುಂಬದ ಜವಬ್ದಾರಿ ನನ್ನ ಹೆಗಲಿಗೆ ಬಿತ್ತು ಎನ್ನುತ್ತಾರೆ ವೀರಕುಮಾರಿ. ಧೈರ್ಯಗುಂದಿದ್ದರೆ ಬದುಕಿಗೆ ಒಂದು ಹಾದಿ ಆಗುತ್ತಿರಲಿಲ್ಲ. ಕೇವಲ ಒಂದೇ ಕೆಲಸದಿಂದ ತುತ್ತಿನ ಚೀಲ ತುಂಬಿಸುವುದು ಅಸಾಧ್ಯವಾಗಿತ್ತು.

ಮಕ್ಕಳ ಓದು, ಮನೆ ಖರ್ಚು, ಔಷಧಿ ವೆಚ್ಚ ಇವುಗಳನ್ನು ನೀಗಿಸುವುದು ಕಷ್ಟವಾಗಿತ್ತು. ಬೇರೆ ಯಾವ ಕೆಲಸ ಮಾಡುವುದು ಎಂದು ಯೋಚಿಸುತ್ತಿದ್ದೆ. ಎಸ್ಸೆಸ್ಸೆಲ್ಸಿ ಓದಿದ್ದ ನಾನು ಆಗ ಆಟೊ ವೃತ್ತಿಯನ್ನು ಆರಂಭಿಸಿದೆ. ಬೆಳಿಗ್ಗೆ 8 ರಿಂದ ಸಂಜೆ 4ರವರೆಗೆ ಆಟೊ ಓಡಿಸುವೆ, ನಂತರ ಬ್ಯೂಟಿಷಿಯನ್ ಕೆಲಸ ಮಾಡುವೆ. ಮಗ ಡಿಪ್ಲೊಮಾ, ಮಗಳು ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾರೆ.

ಹೊಗಳಿಕೆ–ತೆಗಳಿಕೆಗಳ ನಡುವೆಯೇ ನಮ್ಮ ನಡೆ

ಐದು ವರ್ಷ ನಾನು ಶಿಕ್ಷಕಿಯಾಗಿ ಕೆಲಸ ಮಾಡಿದೆ. ಕೋವಿಡ್‌ನಿಂದಾಗಿ ಕೆಲಸ ಕಳೆದುಕೊಂಡೆ. ಶಿಕ್ಷಕ ವೃತ್ತಿ ಬಿಟ್ಟರೆ ನನಗೆ ಗೊತ್ತಿದ್ದು ಆಟೊ ಓಡಿಸೋದು. ಗಂಡನಿಗೆ ಆಟೊ ಓಡಿಸುವೆ ಎಂದು ಕೇಳಿದೆ. ಅವರು ಅದು ನಿನ್ನಿಂದ ಆಗದು ಎಂದರು. 'ಆಗಲ್ಲ' ಎನ್ನುವ ಮೂರಕ್ಷರದ ಪದವನ್ನು 'ಆಗುತ್ತೆ' ಎನ್ನುವ ಮೂರಕ್ಷರದ ಪದವನ್ನಾಗಿ ಮಾಡಲೇಬೇಕೆಂದು ದೃಢನಿಶ್ಚಯದಿಂದ ಆಟೊ ಓಡಿಸಲು ಆರಂಭಿಸಿದೆ. ಇಂದಿಗೆ ಸತತ ನಾಲ್ಕೂವರೆ ವರ್ಷಗಳಿಂದ ಆಟೊ ಓಡಿಸುತ್ತಿದ್ದೇನೆ. ಹತ್ತಾರು ಹೆಣ್ಣುಮಕ್ಕಳಿಗೆ ಆಟೊ ತರಬೇತಿ ನೀಡುತ್ತಿದ್ದೇನೆ ಎನ್ನುತ್ತಾರೆ ಬೆಂಗಳೂರಿನ ಸಗಾಯಿ ರಾಣಿ.

ಸಗಾಯಿ ರಾಣಿ

ತಮಿಳುನಾಡಿನವಳಾದ ನಾನು ಬಿಬಿಎಂ ಓದಿದ್ದೇನೆ. ಇದೀಗ ಆಟೊ ವೃತ್ತಿಯ ಜೊತೆಗೆ ಕುಟುಂಬವನ್ನೂ ನೋಡಿಕೊಳ್ಳುತ್ತಿದ್ದೇನೆ. ಆಟೊ ಓಡಿಸುವಾಗ ಕೆಲ ಪ್ರಯಾಣಿಕರು ಕಿರಿಕಿರಿ ನೀಡುತ್ತಾರೆ, ಕೆಲವರು ತೆಗಳುತ್ತಾರೆ, ಹಲವರು ಹೊಗಳುತ್ತಾರೆ. 'ಶಹಭಾಷ್ ಮೇಡಂ ಒಳ್ಳೆ ಕೆಲಸ ಮಾಡುತ್ತಿದ್ದೀರಿ. ಆಟೊ ಓಡಿಸುವಂತಹ ನಿಮ್ಮನ್ನು ಕಂಡರೆ ನಮಗೆ ಖುಷಿಯಾಗುತ್ತೆ' ಎನ್ನುತ್ತಾರೆ. ಇಂಥ ಮಾತುಗಳು ನಮಗೆ ಸ್ಫೂರ್ತಿ ನೀಡುತ್ತವೆ.

ಇದೀಗ ನನ್ನ ಕುಟುಂಬವು ನನಗೆ ಹಾಗೂ ನನ್ನ ಕೆಲಸಕ್ಕೆ ಬೆಂಬಲ ನೀಡುತ್ತಿದೆ. ಇದು ನನಗೆ ಇನ್ನಷ್ಟು ಮನೋಸ್ಥೈರ್ಯ ನೀಡಿದೆ. ಕುಟುಂಬ ಮತ್ತು ಸಮಾಜದ ಬೆಂಬಲ ಸಿಕ್ಕರೆ ಏನನ್ನಾದರೂ ಸಾಧಿಸಬಹುದು.

ರಂಜಾನ್‌ಗೆ ಹಲೀಂ, ಚಿಕನ್ ರೋಲ್

ಮೈಸೂರಿನ ರಾಜೀವ್‌ನಗರದ ಆಲಿಷಾನ್ ಕೇಟರಿಂಗ್‌ನ ಬಾಣಸಿಗ **ಮಹಮ್ಮದ್ ಮುಕ್ರಂ** ಅವರಿಂದ **ರಮೇಶ್ ಕೆ.** ರಂಜಾನ್ ಮಾಸದ ವಿಶೇಷ ಖಾದ್ಯಗಳ ರೆಸಿಪಿಯನ್ನು 'ಭೂಮಿಕಾ' ಓದುಗರಿಗಾಗಿ ನೀಡಿದ್ದಾರೆ

ಹಲೀಂ

ಬೇಕಾಗುವ ಸಾಮಗ್ರಿ: ಗೋಧಿ ಕಾಲು ಕೆ.ಜಿ, ಕಾಲು ಕೆಜಿ ಅಕ್ಕಿ, ಕಾಲು ಕೆ.ಜಿ ಕಡ್ಲೆಬೇಳೆ, ಕಾಲು ಕೆ.ಜಿ ಹೆಸರುಬೇಳೆ, ಕಾಲು ಕೆ.ಜಿ ತೊಗರಿ ಬೇಳೆ, ಕಾಲು ಕೆ.ಜಿ ಉದ್ದಿನಬೇಳೆ, 1 ಕೆ.ಜಿ. ಬೋನ್‌ಲೆಸ್ ಮಟನ್, ಕಾಲು ಕೆ.ಜಿ ಈರುಳ್ಳಿ. 50 ಗ್ರಾಂ ಶುಂಠಿ ಬೆಳ್ಳುಳ್ಳಿ ಪೇಸ್ಟ್. ಮೇಲೆ ತಿಳಿಸಿದ ಬೇಳೆಗಳನ್ನು ಎರಡು ಗಂಟೆ ನೀರಿನಲ್ಲಿ ನೆನಸಿಡಬೇಕು. ನೆನಸಿದ ಬೇಳೆಗಳನ್ನು ಮಿಕ್ಸಿಯಲ್ಲಿ ರುಬ್ಬಿಕೊಳ್ಳಬೇಕು (ನೆನೆಸಿದ ಬೇಳೆ, ಅಕ್ಕಿಯನ್ನು ಹಾಗೆಯೂ ಹಾಕಿ ಬೇಯಿಸಿಕೊಳ್ಳಬಹುದು).

ಮಾಡುವ ವಿಧಾನ: ಕುಕ್ಕರ್‌ಗೆ ಎಣ್ಣೆ ಹಾಕಿ ನಾಲ್ಕು ಹೆಚ್ಚಿದ ಈರುಳ್ಳಿ, ಶುಂಠಿ ಬೆಳ್ಳುಳ್ಳಿ ಪೇಸ್ಟ್, ಒಂದು ಚಮಚ ಅರಿಶಿಣ ಪುಡಿ, ಗರಂ ಮಸಲಾಪುಡಿ, ಅಚ್ಚ ಖಾರದಪುಡಿ, ಸಣ್ಣ ಕಟ್ಟು ಕೊತ್ತಂಬರಿ ಮೆಂತ್ಯೆ ಸೊಪ್ಪು, ಪುದೀನ, ನಾಲ್ಕು ಹಸಿರು ಮೆಣಸಿನ ಕಾಯಿಯನ್ನು ಹಾಕಬೇಕು. ಜೊತೆಗೆ ಮೂಳೆ ರಹಿತ ಮಾಂಸವನ್ನು ಹಾಕಬೇಕು. ರುಬ್ಬಿಕೊಂಡ ಬೇಳೆ ಪೇಸ್ಟ್ ಸೇರಿಸಿ. ಅಕ್ಕಿಗೆ ಹಾಕುವಂತೆ ಒಂದುವರೆಯಷ್ಟು ನೀರು ಸೇರಿಸಬೇಕು. ರುಚಿಗೆ ತಕ್ಕಷ್ಟು ಉಪ್ಪು ಹಾಕಬೇಕು. ಆರು ವಿಷಲ್ ಕೂಗಿಸಬೇಕು, ನಂತರ ಪೇಸ್ಟ್ ತರ ಆಗಿರುತ್ತದೆ. ಅದನ್ನು ಚೆನ್ನಾಗಿ ತಿರುವಿಕೊಂಡು ನಾಲ್ಕು ಚಮಚ ತುಪ್ಪ ಹಾಕಬೇಕು. ಈಗ ಹಲೀಂ ಸಿದ್ಧವಾಗುತ್ತದೆ.

ಹೆಚ್ಚಿದ ಈರುಳ್ಳಿಯನ್ನು ಕಂದು ಬಣ್ಣ ಬರುವಂತೆ ಫ್ರೈ ಮಾಡಿಕೊಳ್ಳಬೇಕು. ಗೋಡಂಬಿ, ಬಾದಾಮಿ ಪಿಸ್ತವನ್ನು ತಪ್ಪದಲ್ಲಿ ರೋಸ್ಟ್ ಮಾಡಿಕೊಳ್ಳಬೇಕು. ಎರಡನ್ನೂ ಸೇರಿಸಿ ಹಲೀಂ ಮೇಲೆ ಉದುರಿಸಿ ಸರ್ವ್ ಮಾಡಬೇಕು.



ರಸಸ್ವಾದ

ಚಿಕನ್ ರೋಲ್

ಬೇಕಾಗುವ ಸಾಮಗ್ರಿ: ಬೋನ್‌ಲೆಸ್ ಚಿಕನ್ ಅರ್ಧ ಕೆ.ಜಿ., ಗೋಧಿ ಹಿಟ್ಟು ಒಂದು ಕೆ.ಜಿ., ಅರ್ಧ ಚಮಚ ಗರಂ ಮಸಾಲ, ಅರ್ಧ ಚಮಚ ಧನಿಯಾ ಪುಡಿ, ಬೆಣ್ಣೆ, ರುಚಿಗೆ ತಕ್ಕಷ್ಟು ಉಪ್ಪು. ಕಾಲು ಕೆ.ಜಿ. ಈರುಳ್ಳಿ, ಕಾಲು ಕೆ.ಜಿ ಬಟಾಣಿ, ಅರ್ಧ ಚಮಚ ಅರಿಶಿಣ ಪುಡಿ.

ತಯಾರಿಸುವ ವಿಧಾನ: ಚಪಾತಿಗೆ ಹಿಟ್ಟು ಸಿದ್ಧಪಡಿಸಿಕೊಳ್ಳಿ, ಕೋಳಿಮಾಂಸವನ್ನು ಉಪ್ಪು, ಅರಿಶಿಣ ಹಾಕಿ ಬೇಯಿಸಿಕೊಳ್ಳಿ, ಬಣೆಲೆಗೆ ಈರುಳ್ಳಿ, ಅರಿಶಿಣ ಪುಡಿ, ಧನಿಯಾ, ಗರಂಮಸಾಲ, ಎರಡು ಮ್ಯಾಗಿ ಚಿಕನ್ ಕ್ಯೂಬ್, ಬಟಾಣಿ ಹಾಕಿ ಬಿಸಿ ಮಾಡಿ ಸ್ಟಫ್ ಸಿದ್ಧಪಡಿಸಿಕೊಳ್ಳಿ, ಜೊತೆಗೆ ಫ್ರೆಂಚ್ ಫ್ರೈಸ್, ಸಲಾಡ್ ಮಯೋನಿಸ್ ಸಾಸ್ ಸೇರಿಸಿಕೊಂಡು ರೋಲ್ ಮಾಡಿಕೊಳ್ಳಬಹುದು.

ಅಂದದ ಕಿವಿಗೆ ಚಂದದ ಓಲೆ

ರೂಪಾ ಕೆ.ಎಂ.

ಕಿವಿಯೋಲೆ ಎಂಬುದು ಹೆಂಗಳೆಯರ ಬದುಕಿನಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಯಾವುದೇ ಆಭರಣವಿಲ್ಲದೆ ಸರಳವಾಗಿರಬೇಕು ಎಂದುಕೊಳ್ಳುವವರಿಗೆ ಸಣ್ಣ ಕಲ್ಲಿನ ಸ್ಟಡ್‌ಗಳು ಹಿತವೆನಿಸಿದರೆ ಇನ್ನೂ ಆಭರಣಪ್ರಿಯರಿಗೆ ಚಾಂಡೇಲಿಯರ್ (ಗೊಂಚಲು) ಕಿವಿಯೋಲೆಗಳಿಂದ ಹಿಡಿದು, ಜೀಕುವ ಲೋಲಾಕುಗಳು, ಜುಮ್ಕಿಗಳು ಇಷ್ಟವೆನಿಸುತ್ತವೆ. ಧರಿಸುವ ಕಿವಿಯೋಲೆಗಳ ಗಾತ್ರ, ಬಣ್ಣ, ಕುಸುರಿ ಎಲ್ಲವೂ ಹೋಗುವ ಸಮಾರಂಭಕ್ಕೆ ತಕ್ಕಂತೆ ಆದ್ಯತೆಯನ್ನು ಪಡೆದಿರುತ್ತದೆ. ಈಗಂತೂ ಚಿನ್ನದ ಬದಲಿಗೆ ತರಹೇವಾರಿ ಕುಸುರಿ ಇರುವ ಬೆಳ್ಳಿಯೋಲೆಗಳು, ಮಣ್ಣಿನೋಲೆಗಳು, ಆಕ್ಸಿಡೈಸ್ಡ್ ಕಿವಿಯೋಲೆಗಳು ಮೆಚ್ಚುಗೆ ಗಳಿಸಿವೆ. ಅಂಥದ್ದೆ ಕೆಲವು ಕಿವಿಯೋಲೆಗಳ ಪರಿಚಯ ಇಲ್ಲಿದೆ.

ಸ್ಟಡ್: ಎಲ್ಲ ಕಾಲಕ್ಕೂ, ಎಲ್ಲ ಸಮಾರಂಭಗಳಿಗೂ ಒಪ್ಪುವ ಈ ಸ್ಟಡ್‌ಗಳು ಎಲ್ಲರ ಬಳಿಯೂ ಇರುವ ಕಿವಿಯೋಲೆ. ಸರಳತೆಗೆ ಮೆರಗು ನೀಡುವಲ್ಲಿ ಇದರ ಪಾತ್ರ ದೊಡ್ಡದು. ವಿವಿಧ ವಿನ್ಯಾಸ ಹಾಗೂ ಆಕಾರಗಳಲ್ಲಿಯೂ ಈ ಸ್ಟಡ್ ಲಭ್ಯವಿದ್ದು, ಉರುಟು ಆಕಾರದಲ್ಲಿರುವ ಸ್ಟಡ್‌ಗಳಿಗೆ ಬಹುಬೇಡಿಕೆ ಇದೆ. ಅದರಲ್ಲಿಯೂ ವಜ್ರ, ಮುತ್ತು, ಪಚ್ಚೆ, ಹವಳ ಹೀಗೆ ನವರತ್ನಗಳ ಹರಳಿರುವ ಸ್ಟಡ್‌ಗಳನ್ನು ಖರೀದಿಸಲು ಇಚ್ಛಿಸುತ್ತಾರೆ. ಉರುಟು, ಆಯಾತಾಕಾರ, ಚೌಕಾಕಾರ, ಅಂಡಾಕಾರ ಹೀಗೆ ಬೇರೆ ಬೇರೆ ಆಕಾರಗಳಲ್ಲಿರುವ ಸ್ಟಡ್ ಲಭ್ಯವಿದೆ.

ಹೂಪ್ ಕಿವಿಯೋಲೆ: ಅಗಲವಾದ ರಿಂಗ್‌ನಂತೆ ಕಾಣುವ ಹೂಪ್ ಕಿವಿಯೋಲೆಗಳು ಲೋಹದಿಂದ ಮಾಡಲಾಗುತ್ತದೆ. ಸಾಮಾನ್ಯವಾಗಿ ರೌಂಡ್ ಆಕಾರದಲ್ಲಿರುವ ಹೂಪ್‌ಗಳು ಈಗ ಚೌಕ, ಡೈಮಂಡ್, ಅಂಡಾಕಾರದಲ್ಲಿಯೂ ಸಿಗುತ್ತದೆ. ತೆಳು ಲೋಹದಲ್ಲಿ ತಯಾರಾದ ಹೂಪ್‌ಗಳು, ದಪ್ಪ ಟ್ಯೂಬ್‌ನಂತಿರುವ ಹೂಪ್‌ಗಳು ಮುಖದ ಆಕಾರಕ್ಕೆ ಹೊಂದಿಕೆಯಾಗುವಂತೆ ಧರಿಸಬಹುದು. ಈಗೀಗ ಈ ಹೂಪ್‌ಗಳ ಗಾತ್ರ ದೊಡ್ಡದಾಗಿದ್ದು, ಕೆಲವೊಮ್ಮೆ ಬಳೆಯಷ್ಟು ದೊಡ್ಡದಿದ್ದು, ಭುಜಕ್ಕೆ ತಗುಲುವಂತೆ ಕಾಣುತ್ತಿರುತ್ತದೆ.

ಕ್ಲಸ್ಟರ್ ಕಿವಿಯೋಲೆ: ರತ್ನಗಳ ಸಮೂಹವಿರುವ ಕಿವಿಯೋಲೆಗಳಿದು. ಹಲವು ಸ್ಟಡ್‌ಗಳು ಸೇರಿ ಒಂದು ಕ್ಲಸ್ಟರ್ ಆಗುತ್ತದೆ. ಹೂವಿನ ಸ್ಟಡ್‌ಗಳು, ಎಸಳಿನ ಸ್ಟಡ್‌ಗಳು ಹೀಗೆ ನವರತ್ನಗಳಲ್ಲಿಯೂ ಕ್ಲಸ್ಟರ್ ಕಿವಿಯೋಲೆಗಳು ಲಭ್ಯವಿದೆ. ಕೆಲವೊಮ್ಮೆ ಇವು ಲೋಲಾಕುಗಳಂತೆ ಜೀಕುತ್ತವೆ. ಮುತ್ತಿನ ಸ್ಟಡ್‌ಗಳ ಕ್ಲಸ್ಟರ್ ಕಿವಿಯೋಲೆಗಳು ಸದ್ಯಕ್ಕೆ ಬೇಡಿಕೆಯಲ್ಲಿದೆ.

ಚಾಂಡೇಲಿಯರ್ ಕಿವಿಯೋಲೆ: ನೋಡಲು ತೇರಿನಂತಿರುವ ಕಿವಿಯೋಲೆಗಳು. ಆದರೆ ಹಗುರವಾದ ಲೋಹಗಳಿಂದ ತಯಾರಿಸಿರುತ್ತಾರೆ. ಎಲಿಗೆಂಟ್ ಲುಕ್ ನೀಡುವ ಚಾಂಡೇಲಿಯರ್ ಕಿವಿಯೋಲೆಗಳನ್ನು ಬಗೆ ಬಗೆಯ ಬಣ್ಣದ ನವರತ್ನಗಳಲ್ಲಿ ತಯಾರಿಸಲಾಗುತ್ತದೆ. ತುಂಬಾ ಉದ್ದಕ್ಕಿದ್ದು ಕಾಲರ್‌ಬೋನ್‌ವರೆಗೆ ಬರುವುದರಿಂದ ಇವುಗಳನ್ನು 'ಶೋಲ್ಡರ್ ಡಸ್ಟರ್' ಎಂದೂ ಕರೆಯಲಾಗುತ್ತದೆ.

ಟಿಯರ್‌ಡ್ರಾಪ್ ಕಿವಿಯೋಲೆ: ಇದು ಸ್ಟಡ್‌ನಂತೆ ಕಂಡರೂ ಖುಷಿಯ ಕಣ್ಣೀರಿನ ಹನಿಯಂತೆ ಕಾಣುವ ಕಿವಿಯೋಲೆ. ಇದು ಮಧ್ಯಮ ಹಾಗೂ ಅತಿ ಉದ್ದ ಶೈಲಿಯಲ್ಲಿ ಕಾಣಬಹುದು. ❖

ಮಿಸ್‌ಮ್ಯಾಚ್ಡ್ ಕಿವಿಯೋಲೆ: ಈ ಮಿಸ್‌ಮ್ಯಾಚ್ಡ್ ಕಿವಿಯೋಲೆಗಳು ಸದ್ಯಕ್ಕೆ ಟ್ರೆಂಡಿಂಗ್‌ನಲ್ಲಿದೆ. ಆಕಾರದಲ್ಲಿ ವಿಭಿನ್ನ ಎನಿಸುವ ಎರಡೂ ಕಿವಿಯೋಲೆಗಳನ್ನು ಬೇರೆ ಬೇರೆ ಕಿವಿಗಳಿಗೆ ಧರಿಸುವುದು. ಒಂದೇ ಥೀಮ್ ಇದ್ದರೂ ಎರಡೂ ಕಿವಿಯೋಲೆಗಳ ಆಕಾರ, ವಿನ್ಯಾಸ ವಿಭಿನ್ನವಾಗಿರುವುದು. ಉದಾಹರಣೆಗೆ ನಕ್ಷತ್ರ ಮತ್ತು ಚಂದ್ರನಾಕಾರದ ಕಿವಿಯೋಲೆಗಳು. ಎಕ್ಸ್ ಮತ್ತು ಓ ಆಕಾರದ ಓಲೆಗಳು. ಇವು ಸ್ಟಡ್‌ಗಳಲ್ಲಿಯೂ ಲಭ್ಯವಿರುತ್ತದೆ. ಕ್ಲಸ್ಟರ್‌ನಲ್ಲಿಯೂ ನೋಡಬಹುದು.

ಫ್ಯಾಷನ್

ನಿಮ್ಮ ಮನೆಯು ನಿಮ್ಮ ನಿಜರೂಪವನ್ನು ಪ್ರತಿಬಿಂಬಿಸುತ್ತದೆ. Kühl ಸ್ಟೈಲಿಶ್ ಮತ್ತು ಸ್ಮಾರ್ಟ್‌ಫ್ಯಾನ್‌ಗಳೊಂದಿಗೆ ಅದನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಿರಿ.

ತಮ್ಮ ಅತ್ಯಾಕರ್ಷಕ ಬಣ್ಣಗಳು, ಸಾಟಿಯಿಲ್ಲದ ಹರಿವು, ಸೂಕ್ಷ್ಮತೆ ಮತ್ತು ಸರಿದು ನಿಲ್ಲುವಂತಹ ವಿಭಿನ್ನ ವಿವರಗಳು ಬೆರಗುಗೊಳಿಸುವಂತೆ ಮಾಡುತ್ತದೆ. ಮತ್ತೆಲ್ಲೂ ಸಿಗದಂತಹ ಸೊಗಸಾಗಿರುವ ಫ್ಯಾನ್‌ಗಳ ಆಕರ್ಷಕ ಸಂಗ್ರಹ. ಅಪ್ರತಿಮ ಪರಿಪೂರ್ಣತೆಗಾಗಿ ಕಲಾತ್ಮಕವಾಗಿ ನಿರ್ಮಿಸಲಾಗಿದೆ. ಕಟಿಂಗ್ ಎಡ್ಜ್ ತಂತ್ರಜ್ಞಾನದಿಂದ ಅತ್ಯಾಧುನಿಕತೆಯನ್ನು ಹೊಂದಿದೆ.

ಸ್ಮಾರ್ಟ್ ವೈಶಿಷ್ಟ್ಯತೆಗಳು

- 65% ವರೆಗೆ ವಿದ್ಯುತ್ ಉಳಿಸುತ್ತದೆ
- ಅಧಿಕ ಗಾಳಿಯ ಹರಿವು
- ಕಡಿಮೆ ಶಬ್ದ
- ರಿವರ್ಸ್ ಮೋಡ್

ಸ್ಟೈಲಿಶ್ ವಿನ್ಯಾಸ

- ವ್ಯಾಪಕ ವಿನ್ಯಾಸ ಶ್ರೇಣಿ
- ಕೆಳಗಿನ ಮತ್ತು ರಾತ್ರಿಯ ಬೆಳಕು
- ಏರೋಡೈನಾಮಿಕ್ ಬ್ಲೇಡ್‌ಗಳು
- ಆಕರ್ಷಕ ಬಣ್ಣಗಳು

ಕಾರ್ಯನಿರ್ವಹಿಸುತ್ತದೆ

ರಿಮೋಟ್ | ಸ್ಮಾರ್ಟ್ ಫೋನ್ | ವಾಯಿಸ್ ಕಮಾಂಡ್

MORE STARS MORE SAVINGS
POWER SAVINGS GUIDE

IS 374:2019
CM/L- 8800112515

ಧ್ವನಿ ನಿಯಂತ್ರಿಸಲಾಗಿದೆ

Warranty* 5 YEARS ON BLDC MOTOR 2 YEARS Comprehensive

Kühl®
Stylish Fans
Above all.

ಬೆಲೆ ₹2900 ರಿಂದ ₹22000 ವರೆಗೆ

*T&C Apply

For Free Demo: 9582 123 456 | www.kuhl.in | For Details, Scan the QR Code

Central Bangalore: **RM Trading Corp–9590222262;** Manish Electricals – 9986419127; Paramjyothi Electricals – 8310334850; Bharat Radio & Electric Co. – 9740314200 • **North Bangalore: Abirami B2b Trading Co. – 9972873609;** Lighting Palace – 9845355005; Varalakshmi Electricals – 9880186113; Sri Manjunatha Electricals – 9845932212; IK Enterprises – 9513263111; Kaveri Electronics – 7975761611; Chamundeshwari Electricals – 9008058407; Kavery Electricals – 9571174009; Light Source – 9845083494; Krishna Electricals – 8073550861; Mutha Electricals and Appliances – 8553331030 • **West Bangalore**: Maharudra Lights – 7411100074; Shiva Sai Marketing – 8747886925; Rajesh Electricals – 9448974401; Bright Lights – 9945195911; SLV Electricals and Hardware – 9986052498; Sri Venkateshwara Electricals – 9845462695; Shri Shyam Electricals and Electronics – 9844787819; Prem Light House – 9945409031 • **East Bangalore**: **S D N Electricals – 9972215422;** Jagadamba Electricals – 9663268685; S Prakash Electricals – 9902640020; Essay Lamps and Engineering Co. – 8431923019; Hindustan Electric Bazar – 9590910003; Seema Electrical - 9448851078 • **South Bangalore**: **Bangalore Electrical Distributors – 9886422916;** Minchu – 8105733339; Saini World – 7795581106; Arambh Studio – 9986365669; Priority Concepts – 9900044811; Dhurga Build Pro– 9591447861; JV Electricals – 9886846157; Rajkamal Electricals and Lightings – 9886428307; Jayshree Enterprises – 9845047048; Sunlight – 9886033866; Lighting Emporio – 9900035618; New SK Light House – 9880132398; Mathaji Electricals – 8197889656; Suresh Electric Co - 9845108940 • **Mysore: Sandhya Enterprises – 9740029224;** Arihant Electricals – 8197077706; Mangaldeep – 9900630007; Kaveri Appliances and Lightings – 9448978346; Shree Mahaveer Distributors – 9845353626; Manipal Electronics – 9448274300; Sri Mookambika Enterprises – 8660599454; Rajadhani Home Appliances – 7899124261; Rajans Appliances – 9886222020; Manoj Electricals – 9448273368; GR Electricals – 7829987717; Mysore Electrical and Appliances – 6366504602; Prithvi Sales Corporation – 9663365799 • **Belgaum - Enerzi Innotek Solutions Pvt ltd - 9606487817 • Gulbarga**: **Solar City Enterprises – 7829867765 • Dharwad: Mark Marketing Corporation – 9845213354 • Bijapur: Raj Electronics – 7795183163 • Shimoga: G R Enterprises – 6364437861; • Kumta - Jayashree Inc – 9449955955**; **Rajankunte -** Eco Shades - 9008302595.

Scan to know more

WEEKEND CORNER
ಕ್ಲಾಸಿಫೈಡ್ಸ್

Nisarga Sarovara, Near E City
READY TO MOVE IN
₹ 30* Lacs
2 BHK FLAT
Swimming Pool, Childrens Play Area, Generator, STP OTIS 3 Lifts
* All inclusive except Registration Loan upto 90%
Surya city 100 feet Road, Chandapura, Near Narayana Hrudayalaya & Metro Station
NISARGA BUILDERS Call for site visit 6366 864 500

AVAILABLE FOR RENT
at YELAHANKA
SUITABLE FOR SCHOOL & OFFICES
North West Corner,
Total Area of The Site 6318.415.
First Floor Area 3122 Sft, Second Floor Area 3122 Sft, Total Builtup Area 6583 Sft,
Each Floor Five Class Rooms,
Basement Area 3122 Sft.
Address: # 11, 5th Cross, 707, 5th Phase, Yelahanka New Town, Bangalore.
Rent Expected: Rs 250000/ Per Month.
Contact: 9844005550 / 9060543179

LAND REQUIRED
3 to 4 Acres Residential Converted Land required for joint development in outskirt of Bangalore with good approach.
Contact:
9844023523, 9341228681

GODOWN SPACE AVAILABLE
AVAILABLE FOR RENT
7500 Sqft, Rs.65/- per Sqft
24 hours Electricity & Parking
Centre of City, 80 Ft Road, Closed by to BTM Layout & Koramangala
108/1, 6th Cross, Sri Ramappa Layout Thavarekere, Bengaluru -560029
9886153036, 9538030520

ಸೈಟು ಖರೀದಿಸಲು ಸುವರ್ಣಾವಕಾಶ
ಎಪಿಎಂಸಿ ಮಾರ್ಕೆಟ್ ಸಮೀಪ ನಿವೇಶನಗಳು
ನೆಲಮಂಗಲ ಹತ್ತಿರ, ತುಮಕೂರು ರಸ್ತೆ
ಬೆಂಗಳೂರು ಸಿಟಿಗೆ ಹತ್ತಿರದ ವಸತಿ ಬಡಾವಣೆ
ವಿನಾಯಕ ರೆಸಿಡೆನ್ಸಿ ಸೈಟಿನ ಮೇಲೆ ಇನ್‌ವೆಸ್ಟ್ ಮಾಡಿ ಈಗಲೇ ಮನೆ ಕಟ್ಟಿಕೊಳ್ಳಿ
Jalahalli Circle > 8th Mile > Nice Rd > Makali > Blr Intl Exhibition Center > Himalaya Drug House Opp Road > Golden Palm Resort > Karnataka State Cricket Stadium > TATA Value Homes Apartment >
> NEW APMC MARKET > Next to
Vinayaka Residency

Rs. 7.2 Lakhs 20x30 Site — SPECIAL OFFER Price
SPECIAL OFFER Price — Rs. 14.4 Lakhs 30x40 Site
ಕೆಲವೇ ಕೆಲವೇ ಸೈಟುಗಳು ಮಾತ್ರ ಮೊದಲು ಬಂದವರಿಗೆ ಆದ್ಯತೆ
•ಹೊಸ ಎಪಿಎಂಸಿ ಹತ್ತಿರ •ಟಾಟಾ ವ್ಯಾಲ್ಯೂ ಹೋಮ್ಸ್ ಪಕ್ಕ
•ರಾಷ್ಟ್ರೀಯ ಹೆದ್ದಾರಿಯ ಸಮೀಪದಲ್ಲಿದೆ •ಅಂತರರಾಷ್ಟ್ರೀಯ ಕ್ರೀಡಾಂಗಣಕ್ಕೆ ಸಮೀಪ
•ಗೋಲ್ಡನ್ ಫಾರ್ಮ್ ರೆಸಾರ್ಟ್ ಹತ್ತಿರ •ಬಿಎಂಟಿಸಿ ಬಸ್ ವ್ಯವಸ್ಥೆಯಿದೆ
ನೋಂದಣಿಗೆ ಮತ್ತು ಮನೆ ಕಟ್ಟಲು ಸಿದ್ಧವಿದೆ, ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
ಸೌಲಭ್ಯಗಳು : ವಿದ್ಯುತ್, ನೀರು, ರಸ್ತೆ, ಬೀದಿ ದೀಪ, ಇನ್ನಿತರ ಮೂಲಭೂತ ಸೌಕರ್ಯಗಳು
ಸೈಟು ಭೇಟಿಗಾಗಿ ಸಂಪರ್ಕಿಸಿ : 9606442860

ಶೋ ಆಫ್

SHOWOFF NEW COLLECTIONS
JAYANAGAR
COMMERCIAL Street
MANTRI SQUARE Mall
GOPALAN ARCADE Mall
Ph: 080 41145340
UPTO 50% OFF
Bangalore: Commercial Street • DVG • Gopalan Arcade • Gopalan Signature Mall Jayanagar Mantri Square Mall • Malleshwaram • Phoenix Market City • Royal Meenakshi Mall • Yelahanka New Town
Belagavi Bellary • Bidar • Bijapur • Chikmagalur • Gulburga • Hassan • Hubli Mangalore Mysore • Tumkur • Ahmednagar (Maharasthra)

DASTKARI HAAT 2024
SINCE 2011
1ST TIME IN BENGALURU
PRESENTS
EXHIBITION CUM SALE
SUMMER & UGADI CARNIVAL
29TH MAR - 07TH APR
11:00 AM - 9:00 PM
SHUBH (ELAAN) CONVENTION CENTER
OPP. CASSIA BLOCK, PUTTENAHALLI, JP NAGAR, 7TH PHASE, BENGALURU, KARNATAKA 560078

Silks • Lenins • Cottons
Wedding Exclusive
Festival Special
Natural Fibre • Handlooms
Kurtis & Crafts
PARKING & ENTRY FREE
M: 95419-75990 dastkarihaathandloombazar@gmail.com

REAL ESTATE SELLING

Sites

Anjanapura
ANJANAPURA BDA, 11TH Block, 40x60, Residential Site 40 Feet Road 9750/- Near Bannerghatta Road :9845600007

Banashankari
BANASHANKARI 6TH STAGE- Surrounding BDA- AVAILABLE/ WANTED 20x30 30x40 40x60, 50x80 SITES. BRINDAVAN ASSOCIATES- 9980863245

BANASHANKARI 6TH Stage, 4th H- Block Near 100 feet Road 20x30 North, to Metro Junction 4th Block, 30x40, North Facing: 9916809188, 9606226222

Intl Airport Road
30x40 Converted Plots @ 2,00,000/-
166/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

Devanahalli
30X40 30X50 DC Converted CUDA Approved Plots Sale Chikkaballapur, 30 Minutes From Airport: 9945569909 7676900174

Hosur Road
KHB, SURYANAGAR, PHASE-III, HIG-1, BLOCK-8, 40*60 SOUTH FACING PLOT, NEAR ADIGONDANAHALLISA LECONTACT: 9845027986

Horamavu
SALE 60X47-2820SFT, B KHATA, SITE HURAMAV, behind NPS school, 2.1Cr Nego. North Facing. 9845291967 9900743700

Jayanagar
AVAILABLE PRIME Property Near Madhavan Park, 2400sqft South Facing. Immediate Possession. Brokers Excuse. Contact: 7022705656

JAYANAGAR 2ND-BLOCK 40x60 West Facing Plot For Sale, Near Lalbagh Garden & Metro Station. 73382 19033

Kavalbyrasandra
***NADAPRABHU* KEMPEGOWDA** LAYOUT 1st Block 'K Sector, 30x40 North facing, ₹.6800/- sqft. Contact: 9686469799

Kempegowda Layout
KEMPEGOWDA LAYOUT Block 7 Sector A: 30x40 West Facing site for sale. Contact: 6362207844

FLATS FOR SALE
Varaahi LAKE VIEW Brighter side of Luxury Living
Brighter side of Luxury Living

Behind Talaghattapura Police Station, Just 100 Meters from Metro, Near BDA Lake, Kanakapura Road, Bangalore.
READY TO MOVE IN
Contact: 98808 90219, 99005 42218, 97430 08811, 73384 91811

Vishweshwariah Layout
AVAILABLE BDA Site Vishweshwariah Layout 30×40 8th Block South Facing Good Location Genuine Buyers: 7338688111

"40X60 ALLOTTEE Site near 100ft Road, Park and BDA Complex, 6th Block Vishveshwaraiah Layout. 9379776189"

AVAILABLE 20X30 Vishveshwariah Layout 6th Block BDA Site For Sale Rate. 47 Lakhs Contact: 9844603127

BDA SITES SMV 1st Block 30x40, 3rd Block 40x60, 6th Block 80Ft ROAD 50x80: 9964971895

"VISVESHWARAIAH LAYOUT 9th Block 40x60 West Facing near Ambedkar College Site for Sale 13500/- P.Sft. Final.Contact: 9164089633/ 9663226688"

Vidyaranyapura
VIDYARANYAPURA HMT Layout 40X60 North Facing Excellent location BDA Approved Clear Titles For Sale. 9341260828

SITES FOR sale-Vaderhalli, Vidyaranayapura post;DC converted sites with all amenities.Further details call-8296106706 / 9845879279

Whitefield
BDA APPROVED sites for Sale off Whitefield/ Old Madras Road. Ready for registration. Hurry! Call: 9035083224

Mandya
PRIME PROPERTY FOR SALE ON BANGALORE-MYSORE EXPRESSWAY
TWO Acres and 1 Gunta (88400 Square Feet) CONVERTED Land for Commercial and/or Residential use - Build as per your preference! Land between MANDYA and SRIRANGAPATNA (near to EXIT). Water Table GOOD. Asking 12 Crore Rupees - open to discount on sales price based on payment terms. If Interested contact either whatsapp/sms (91)9845033641 Or send email to jansrinit@yahoo.com (JANSRINIT@YAHOO.COM) Be sure to include your Name, Phone Number, Country/City Code in Mobile chat/email message. Your message will be answered in the order it was received.

Varthur
NEAR ITPL VARTHUR SITE SALE, 30x50, Good Location, Near Hopefarm Junction, Call Owner: 7022334447 7022334448

Chamarajpet
SALE SITE 43x88 West facing Clear Titles behind TR Mills, Chamrajpet 16000/- Sqft Negotiable, 9880167521

Bannerghatta Road
AKSHAYA NAGAR (AKSHAYA GARDEN) PRIME LOCATION RESIDENTIAL 40x60 EAST FACING SITE SALE, 9500/- 9845069739, 9740183922

Commercial Land

Mysore
DC CONVERTED LAND SALE, 1.25 Acres, Near Mysuru T.Narasipura Highway & Varuna Lake. 7022334447 7022334448

Commerical

Kengeri
COMMERCIAL PROPERTY For Sale 16500/- Sqf, Ajasent Kengeri Metro Station For Hotel, Theater Kumar 9945119449

Flat

Jayanagar
2BHK APT. SALE Jayanagar, Floor 1, behind Lalbagh, lift, Balcony, car park, security, brokers excuse, Buyers only, 65 lakhs, Whatsapp: +91-9284538248

SALE 40X80 West Facing old House 40feet Road Near 4th Block Jayanagar Shopping Complex Call:9900136895

SALE JAYANAGAR 7th Block West 40x60 North Facing old House. 30k Contact Sunil: 9845201710

J P Nagar
SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR- PARKING JPNAGAR 5TH PHASE: 9986763007

J.P.NAGAR 6TH PHASE 22x30 NORTH 4 BEDROOM TRIPLEX HOUSE SALE 1,40,00,000/- NEGOTIABLE 9845069739, 9740183922, 9380613718

Malleshwaram
MALLESHWARAM 3 BHK 2120, 1968, 1835, 1400 sft. AND 2 BHK FLATS AVAILABLE. 9483512887 9845216887

Kumaraswamy Layout
NEW DUPLEX building, BDA property, 900 Land 3200 sqft build-up, 4 BHK nearby 15F Bus Stop for Sale. 9343307910.

House

HRBR Layout
SALE: HRBR- Near JVVihar, 8-BHK, A-Khata, 24 Hour's Cauvery Water. Contact- 8971767744

Nagarabhavi
"BRAND-NEW 4BHK Triplex House GF 1.shop, 2car parking, fully furnished,all amenities,Sale, RHCS Layout Annapoorneshwari- Nagar, N/E.Corner, Both'Side 40'Feet- Road. 9845463951"

RENTAL PROPERTIES

Accommodation Available

Commercial
"TOTALLY INDEPENDENT 2BHK Very Spacious House- on 50x70 Busy Main Road @ Banashankari 2nd stage near.BDA Complex Suitable'for Play-Home, Office, Commercial Rent Rs.80,000/-. "AVM Real Estate" 9513666788"

Flats
MYSORE ROAD AVAILABLE LEASE 1800 Sqft FLAT 3BHK INTERIOR DONE RS. THIRTYONE LAKHS NEGOTIABLE: 9738223432

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
9901641752 : 9886213331
080 - 45557163 / 164

MORE Classifieds Ads on Subsequent Pages

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

ಮೂವರ ಮೇಲೆ ಎಫ್ಐಆರ್ ದಾಖಲು

ಆಸ್ತಿಗಾಗಿ ಆ್ಯಸಿಡ್ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಸ್ತಿ ವಿಚಾರವಾಗಿ ತಂದೆ, ಸೋದರ ಹಾಗೂ ಸೋದರಿ ಸೇರಿಕೊಂಡು ನನ್ನ ಮೇಲೆ ಹಲ್ಲೆ ನಡೆಸಿ, ಆ್ಯಸಿಡ್ ದಾಳಿ ನಡೆಸಿದ್ದಾರೆ' ಎಂದು ಆರೋಪಿಸಿ, ಶೆಟ್ಟಿಹಳ್ಳಿಯ ನಿವಾಸಿ ಕಿರಣ್ ಎಂಬುವರು ಬಾಗಲಗುಂಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ದೂರು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಬಾಗಲಗುಂಟೆ ನಿವಾಸಿ, ದೂರುದಾರರ ತಂದೆ ರಾಮಕೃಷ್ಣಯ್ಯ, ಸೋದರಿ ಕಲಾವತಿ, ಸೋದರ ಉಪೇಂದ್ರ ಕುಮಾರ್ ಎಂಬುವವರ ವಿರುದ್ಧ ಎಫ್ಐಆರ್ ದಾಖಲಾಗಿದೆ.

'ಕಿರಣ್ ಅವರ ಎಡಭಾಗದ ಕಣ್ಣು ಹಾಗೂ ಎದೆಯ ಭಾಗಕ್ಕೆ ಗಾಯವಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ದೂರಿನಲ್ಲಿ ಏನಿದೆ?: 'ಬಾಗಲಗುಂಟೆಯ ಅರುಣೋದಯ ಆಸ್ಪತ್ರೆಯ ಎದುರಿನ 5ನೇ ಕ್ರಾಸ್‌ನಲ್ಲಿ ರಾಮಕೃಷ್ಣಯ್ಯ ಅವರಿಗೆ ಸೇರಿದ ಮನೆಯಿದೆ. ಅದು ರಾಮಕೃಷ್ಣಯ್ಯ ಅವರ ಸ್ವಯಾರ್ಜಿತ ಆಸ್ತಿ. ಈ ಮನೆಯನ್ನು ತಮ್ಮ ಹೆಸರಿಗೆ ಬರೆಸಿಕೊಳ್ಳುವ ಉದ್ದೇಶದಿಂದ ನಮ್ಮ ತಂದೆಗೆ ಅಕ್ಕ ಚಾಡಿ ಮಾತು ಹೇಳಿದ್ದರು. ಇತ್ತೀಚೆಗೆ ತಾಯಿಯ ತಿಥಿ ಕಾರ್ಯದ ವಿಚಾರವಾಗಿ ಮಾತನಾಡಲು ಅವರ ಮನೆಯ ಬಳಿಗೆ ಹೋಗಿದ್ದ ವೇಳೆ ನನ್ನ ಮೇಲೆ ಹಲ್ಲೆ ನಡೆಸಿದರು. ಅಲ್ಲದೇ ಆ್ಯಸಿಡ್ ದಾಳಿ ನಡೆಸಿದರು' ಎಂದು ಕಿರಣ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ವಿಶ್ವ ರಂಗಭೂಮಿ ದಿನಾಚರಣೆ ಪ್ರಯುಕ್ತ ನಗರದ ನಯನ ಸಭಾಂಗಣದಲ್ಲಿ ಪರಂಪರಾ ಕಲ್ಚರಲ್ ಫೌಂಡೇಶನ್ ಆಯೋಜಿಸಿದ್ದ 'ಇರು ದಾಸಯ್ಯ ಬರ್ಲಿ' ನಾಟಕದಲ್ಲಿ ಕಲಾವಿದರು ಅಭಿನಯಿಸಿದರು ಪ್ರಜಾವಾಣಿ ಚಿತ್ರ

ಬಿಎಂಟಿಸಿ ಬಸ್‌ನಲ್ಲಿ ವ್ಯಕ್ತಿಗೆ ಹೃದಯಾಘಾತ: ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್‌ನಲ್ಲಿ ಗುರುವಾರ ರಾತ್ರಿ ಪ್ರಯಾಣಿಸುತ್ತಿದ್ದ ಕೃಷ್ಣಪ್ಪ (60) ಎಂಬುವವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

'ಗುರುವಾರ ರಾತ್ರಿ 11ರ ಸುಮಾರಿಗೆ ಮೆಜೆಸ್ಟಿಕ್‌ನಲ್ಲಿ ಕೃಷ್ಣಪ್ಪ ಅವರು ಬಸ್ ಹತ್ತಿದ್ದರು. ನವರಂಗ್ ಸಮೀಪ ಬಸ್ ಚಲಿಸುತ್ತಿದ್ದ ವೇಳೆ ಏಕಾಏಕಿ ಕುಸಿದು ಬಿದ್ದು ಸಾವಿಗೀಡಾಗಿದ್ದಾರೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ಬಸ್‌ನಲ್ಲಿ ನಿಂತೇ ಪ್ರಯಾಣಿಸುತ್ತಿದ್ದರು. ಅವರು ಕುಸಿದು ಬಿದ್ದಾಗ ಮೇಲಕ್ಕೆತ್ತಿದ್ದೆವು. ಆಯತಪ್ಪಿ ಬಿದ್ದಿರಬಹುದು ಎಂದು ಆರಂಭದಲ್ಲಿ ಭಾವಿಸಿದ್ದೆವು. ಮತ್ತಷ್ಟು ಬಳಲಿದಂತೆ ಕಂಡ ಅವರನ್ನು ಉಪಚರಿಸಿದರೂ ಆರೋಗ್ಯದಲ್ಲಿ ಸುಧಾರಣೆ ಕಾಣದೇ ಮೃತಪಟ್ಟರು' ಎಂದು ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದ್ದಾರೆ.

'ತಕ್ಷಣವೇ ಘಟನೆ ಕುರಿತು ಚಾಲಕ ಹಾಗೂ ನಿರ್ವಾಹಕ ಪೊಲೀಸರಿಗೆ ಮಾಹಿತಿ ನೀಡಿದರು. ಉಳಿದ ಪ್ರಯಾಣಿಕರನ್ನು ಬೇರೊಂದು ಬಸ್‌ಗೆ ಹತ್ತಿಸಿ, ಬಸವೇಶ್ವರ ನಗರ ಠಾಣೆ ಬಳಿಗೆ ಬಸ್ ತೆಗೆದುಕೊಂಡು ಹೋಗಲಾಯಿತು. ಮೃತ ವ್ಯಕ್ತಿಯ ಕುಟುಂಬಸ್ಥರಿಗೆ ಮಾಹಿತಿ ನೀಡಿ ಮೃತದೇಹ ಹಸ್ತಾಂತರ ಮಾಡಲಾಯಿತು' ಎಂದು ಮೂಲಗಳು ತಿಳಿಸಿವೆ.

ಚರ್ಚ್ ಸ್ಟ್ರೀಟ್ ಗೋಡೆ ಮೇಲೆ ನಿಂದನಾತ್ಮಕ ಬರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚರ್ಚ್ ಸ್ಟ್ರೀಟ್‌ನ ಗೋಡೆಯ ಮೇಲೆ ನಿಂದನಾತ್ಮಕ ಬರಹಗಳನ್ನು ಬರೆಯಲಾಗಿದ್ದು, ಪೊಲೀಸರು ಕಿಡಿಗೇಡಿಗಳ ಪತ್ತೆಗೆ ಮುಂದಾಗಿದ್ದಾರೆ.

ಮಹಾತ್ಮ ಗಾಂಧಿ ಮೆಟ್ರೊ ನಿಲ್ದಾಣ ಸಮೀಪದ ಗೋಡೆಯ ಮೇಲೆ ಪೊಲೀಸರನ್ನೂ ನಿಂದಿಸಿ ಬರೆಯಲಾಗಿದೆ. ಗುರುವಾರ ಮಧ್ಯರಾತ್ರಿ ಕಿಡಿಗೇಡಿಗಳು ಈ ಕೃತ್ಯ ಎಸಗಿರುವ ಸಾಧ್ಯತೆಯಿದ್ದು ರಸ್ತೆಯಲ್ಲಿರುವ ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಚರ್ಚ್ ಸ್ಟ್ರೀಟ್‌ನ ಗೋಡೆಯಲ್ಲಿನ ಬರಹ

ಮನೆಯಲ್ಲಿ ಚಿನ್ನಾಭರಣ ಕಳವು: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮಾಲೀಕರೊಬ್ಬರು ಶೂ ರ್‍ಯಾಕ್ ಕೆಳಗೆ ಕೀ ಇರಿಸಿ ಹೋಗಿದ್ದನ್ನು ಗಮನಿಸಿ, ಅದರಿಂದ ಬೀಗ ತೆಗೆದು ಚಿನ್ನಾಭರಣ ಕಳವು ಮಾಡಿದ್ದ ಸರಕು ಸಾಗಣೆ ವಾಹನದ ಚಾಲಕನನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಹದೇವಪುರದ ಪ್ರದೀಪ್ (35) ಬಂಧಿತ ಆರೋಪಿ. ಬಂಧಿತ ಆರೋಪಿಯಿಂದ ₹ 6 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಕಳವು ಪ್ರಕರಣಗಳಲ್ಲಿ ಈ ಹಿಂದೆ ಈತನನ್ನು ಹಲವು ಬಾರಿ ಬಂಧಿಸಲಾಗಿತ್ತು. ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ. ನಂತರ, ಸರಕು ಸಾಗಣೆ ವಾಹನದ ಚಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದ. ಮಾರ್ಚ್ 19ರಂದು ಮಹದೇವಪುರದ ಮನೆಯೊಂದಕ್ಕೆ ಸರಕು ಸಾಗಣೆ ಮಾಡುತ್ತಿದ್ದ ವೇಳೆ ಮನೆ ಮಾಲೀಕರೊಬ್ಬರು, ಶೂ ರ್‍ಯಾಕ್ ಕೆಳಗೆ ಕೀ ಇಟ್ಟು ಹೋಗಿರುವುದನ್ನು ಗಮನಿಸಿದ್ದ. ಅವರು ಹೋದ ಬಳಿಕ ಕೀತೆಗೆದುಕೊಂಡು ಮನೆಯ ಬೀಗ ತೆಗೆದು ಮನೆಯೊಳಗೆ ನುಗ್ಗಿ ಬೀರು ಒಡೆದು ₹6 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದಿದ್ದ. ಇತ್ತ ಕೆಲಸ ಮುಗಿಸಿಕೊಂಡು ಮನೆ ಮಾಲೀಕರು ಹಿಂತಿರುಗಿದಾಗ ಕಳವು ನಡೆದಿರುವುದು ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

ಅಪಘಾತ: ಸ್ಕೂಟರ್ ಸವಾರ ಸಾವು

ಬೆಂಗಳೂರು: ಹೆಬ್ಬಾಳ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಿಗ್ಗೆ ಸ್ಕೂಟರ್ ಹಾಗೂ ಟ್ರ್ಯಾಕ್ಟರ್ ನಡುವೆ ಅಪಘಾತ ಸಂಭವಿಸಿದ್ದು, ಸ್ಕೂಟರ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಯಶವಂತಪುರದ ನಿವಾಸಿ ಮಹೇಶ್ (21) ಮೃತಪಟ್ಟವರು.

'ಶುಕ್ರವಾರ ಬೆಳಿಗ್ಗೆ ಮಹೇಶ್ ಕೆಲಸಕ್ಕೆ ತೆರಳುವಾಗ ಸ್ಕೂಟರ್‌ನಲ್ಲಿ ಮತ್ತೊಬ್ಬರನ್ನು ಕರೆದೊಯ್ಯುತ್ತಿದ್ದರು. ಮಾರ್ಗಮಧ್ಯೆ ವೀರಣ್ಣನಪಾಳ್ಯದ ಸಮೀಪದಲ್ಲಿ ಟ್ರ್ಯಾಕ್ಟರ್ ಮುಂದೆ ಸಾಗುತ್ತಿತ್ತು. ಆಗ ಅಪಘಾತ ಸಂಭವಿಸಿದೆ. ಡಿಕ್ಕಿ ಹೊಡೆದ ರಭಸಕ್ಕೆ ಸ್ಕೂಟರ್ ಸವಾರ ರಸ್ತೆಗೆ ಬಿದ್ದಿದ್ದರು. ಅವರ ಮೇಲೆಯೇ ಟ್ರ್ಯಾಕ್ಟರ್ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರು ತಿಳಿಸಿದರು.

ವೇಶ್ಯಾವಾಟಿಕೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಬ್‌ಸೈಟ್ ಬಳಸಿಕೊಂಡು ಹೈಟೆಕ್ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಮೂವರು ಆರೋಪಿಗಳನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೂವರು ಮಹಿಳೆಯನ್ನು ರಕ್ಷಣೆ ಮಾಡಿದ್ದಾರೆ.

ಪ್ರಕರಣದ ಸೂತ್ರಧಾರ ಕೃಷ್ಣ ಪ್ರಸಾದ್, ರಾಹುಲ್ ಹಾಗೂ ಆಶೀಶ್ ಬಂಧಿತರು. ಅವರಿಂದ 13 ಮೊಬೈಲ್‌ಗಳು, ಒಂದು ಸ್ಕೂಟರ್, ಒಂದು ಕಾರು ಹಾಗೂ ₹ 30 ಸಾವಿರ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಮಾರ್ಚ್ 21ರಂದು ಈಶಾನ್ಯ ವಿಭಾಗದ ಮಹಿಳಾ ಪೊಲೀಸ್ ಠಾಣೆ ಪಿಎಸ್ಐ, ಅಮೃತಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಗಸ್ತಿನಲ್ಲಿರುವಾಗ ಪೊಲೀಸ್ ಬಾತ್ಮೀದಾರರೊಬ್ಬರು ನೀಡಿದ್ದ ಮಾಹಿತಿ ಆಧರಿಸಿ ದಾಳಿ ನಡೆಸಲಾಯಿತು. ಇದೇ ಮಾಹಿತಿ ಆಧರಿಸಿ ಕೋರಮಂಗಲ, ಮಡಿವಾಳ ಸೇರಿ ನಗರದ ಇತರೆಡೆ ದಾಳಿ ನಡೆಸಲಾಗಿದೆ. ನಗರದ ಕೆಲವು ಹೋಟೆಲ್‌ಗಳಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿರುವುದು ಪತ್ತೆಯಾಗಿದೆ' ಎಂದು ಪೊಲೀಸರು ಹೇಳಿದರು.

AVR SWARNA MAHAL JEWELLERS — Purity is our Tradition

AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್

CIN: U36911TZ2009PLC015427
ನೋಂದಾಯಿತ ಕಚೇರಿ : 251-A, ಓಮಲೂರು ರಸ್ತೆ, ಸ್ವರ್ಣಪುರಿ, ಸೇಲಂ, ತಮಿಳುನಾಡು – 636 004.
ಫೋನ್: 0427-2333307 ಇ-ಮೇಲ್-accountsavrswarnamahal.com
ವೆಬ್ ಸೈಟ್: www.avrswarnamahal.com

ಸ್ಥಿರ ಠೇವಣಿಗಾಗಿ ಆಹ್ವಾನ

ಸ್ಥಿರ ಠೇವಣಿ ಯೋಜನೆಗಳು

ಸ್ಕೀಮ್ 'ಎ' (ಅಸಂಚಿತ)		ಸ್ಕೀಮ್ 'ಬಿ' (ಸಂಚಿತ)				
ಅವಧಿ	ವಾರ್ಷಿಕ ಬಡ್ಡಿದರ (%) 3 ಪಾವತಿ ತಿಂಗಳಿಗೊಮ್ಮೆ	ಅವಧಿ	ವಾರ್ಷಿಕ ಬಡ್ಡಿದರ (%) 3 ಪಾವತಿ ತಿಂಗಳಿಗೊಮ್ಮೆ	ಕನಿಷ್ಠ ಠೇವಣಿ (ರೂ.)	ಅವಧಿಯ ಕೊನೆಯಲ್ಲಿಸಿಗುವ ದುಡ್ಡು (ರೂ.)	ವಾರ್ಷಿಕ ಆದಾಯ (%)
1 ವರ್ಷ	8.00	1 ವರ್ಷ	8.00	10,000	10824	8.24%
2 ವರ್ಷ	8.50	2 ವರ್ಷ	8.50	10,000	11832	9.16%
3 ವರ್ಷ	9.00	3 ವರ್ಷ	9.00	10,000	13060	10.20%

ರೂ.10,000/- ಹಾಗೂ ರೂ.1,000/- ಮೊತ್ತದಲ್ಲಿ ಸ್ಕೀಮ್ 'ಎ' ಮತ್ತು ಸ್ಕೀಮ್ 'ಬಿ' ಠೇವಣಿಯನ್ನು ಸ್ವೀಕರಿಸಲಾಗುವುದು.

ನಮೂನೆ ಡಿಪಿಟಿ-1

ಸ್ಥಿರ ಠೇವಣಿ ಆಹ್ವಾನಿಸಿರುವ ಸುತ್ತೋಲೆ ಜಾಹಿರಾತು
ಕಂಪನಿ ಅಇದನಿಯಮ ಕಾಲಂ 73 (2) (ಎ) ಮತ್ತು ಕಾಲಂ 76 ಮತ್ತು ನಿಯಮ 1(1) ಮತ್ತು 4(2) ಮತ್ತು 4(2) ನಿಯಮ 2014 ರಂತೆ ಸ್ಥಿರ ಠೇವಣಿ ಆಹ್ವಾನಿಸಿರುವ ಸುತ್ತೋಲೆ ಜಾಹೀರಾತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ.

1. **ಸಾಮಾನ್ಯ ಮಾಹಿತಿಗಳು:**

a. **ಕಂಪನಿಯ ಹೆಸರು, ವಿಳಾಸ ಮತ್ತು ಅಂತರ್ಜಾಲ ಮತ್ತು ಇತರೆ ಸಂಪರ್ಕ ವಿವರಗಳು:**

ಹೆಸರು : ಎವಿಆರ್ ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್
CIN : U36911TZ2009PLC015427
ವಿಳಾಸ : 251-ಎ, ಓಮಲೂರು ರಸ್ತೆ, ಸ್ವರ್ಣಪುರಿ, ಸೇಲಂ-636004, ತಮಿಳುನಾಡು
ಅಂತರ್ಜಾಲ : www.avrswarnamahal.com
ದೂರವಾಣಿ ಸಂ. : +91 427 2333307
ಇ-ಮೇಲ್ : cs@avrswarnamahal.com

b. **ಕಂಪನಿ ನೊಂದಣಿಯಾದ ದಿನಾಂಕ:** 24 ನೇ ಆಗಸ್ಟ್ 2009

c. **(i) ಕಂಪನಿಯು ನಡೆಸುತ್ತಿರುವ ವ್ಯವಹಾರಗಳು:**

ಕಂಪನಿಯು ಚಿನ್ನದ ಆಭರಣಗಳು, ರತ್ನದ ಆಭರಣ ಹಾಗೂ ಬೆಳ್ಳಿ ಆಭರಣಗಳ ತಯಾರಿಕೆ, ಅಮೂಲ್ಯ ಲೋಹಗಳು, ಸದ್ಗುಣ ವಸ್ತುಗಳು, ಚಿನ್ನ ಹಾಗೂ ಬೆಳ್ಳಿಯ ಗಟ್ಟಿಗಳು, ರತ್ನದ ಕಲ್ಲು, ಮಿಶ್ರ ಲೋಹ, ವಜ್ರ ಹಾಗೂ ಎಲ್ಲಾ ರೀತಿಯ ಆಭರಣಗಳು, ನಾಣ್ಯಗಳು, ವಾಚುಗಳು ಹಾಗೂ ಹೊಸ ಬಗೆಯ ಆಭರಣಗಳು, ಪ್ಲಾಟಿನಂ ನಿಂದ ತಯಾರಿಸಿದ ಆಭರಣಗಳು (ಬೆಳ್ಳಿ ಅಥವಾ ಇನ್ನ್ಯಾವುದೇ ಲೋಹದ ಸಂಯೋಜನೆಯೊಂದಿಗೆ)

(ii) ಕಂಪನಿಯ ಅದೀನ ಸಂಸ್ಥೆಗಳು / ಶಾಖೆಗಳು :

1. ಅದೀನ ಸಂಸ್ಥೆಗಳು : ಇರುವುದಿಲ್ಲ.

2. **ಶಾಖೆಗಳು:**

1	251- ಎ, ಓಮಲೂರು ಮುಖ್ಯ ರಸ್ತೆ, ಸ್ವರ್ಣಪುರಿ, ಸೇಲಂ - 636004
2	24/18, ಎಸ್ ಎನ್ ಕೆ ಕಾಂಪ್ಲೆಕ್ಸ್, ಸ್ಕ್ವೆಯರ್ ಮಾರ್ಕೆಟ್, ಮೆಟ್ಟೂರ್ ಡ್ಯಾಮ್ - 636401
3	17,18,19, ಸೇಲಂ ಮುಖ್ಯ ರಸ್ತೆ, ಕಲ್ಲಕುರಿಚಿ - 606202
4	351, ಬೆಂಗಳೂರು ಮುಖ್ಯ ರಸ್ತೆ, ಕೃಷ್ಣಗಿರಿ-635001
5	744/1 - ಬಿ, ಸೇಲಂ ಬೆಂಗಳೂರು ಬೈಪಾಸ್ ರೋಡ್, ಹೊಸೂರು - 635109
6	128, ಕಾರ್ ಸ್ಟ್ರೀಟ್, ತಿರುವಣ್ಣಾಮಲೈ- 606601
7	194, ಬಜಾರ್ ಸ್ಟ್ರೀಟ್, ಸೇಲಂ - 636001
8	ಹಳೇ ನಂ. 110, ಹೊಸ ನಂ. 156, ಅಣ್ಣಾಸಲೈ, ಪಾಂಡಿಚೆರಿ - 605001
9	1-ಡಿ ನಾಲ್ಕು ರಸ್ತೆ ಹತ್ತಿರ, ಧರ್ಮಪುರಿ - 636701
10	ನಂ. 102, ಆರ್.ಕೆ.ವಿ. ರಸ್ತೆ, ಈರೋಡ್ - 638001
11	31, ಚೈತನ್ಯ ಪ್ಲಾಟಿನಂ, 33 ನೇ ಬಿ ಕ್ರಾಸ್, 4 ನೇ ಟಿ ಬ್ಲಾಕ್, ಜಯ ನಗರ, ಬೆಂಗಳೂರು - 560041
12	ನಂ. 41 . ಡಿಕನ್ಸನ್ ರಸ್ತೆ, ಬೆಂಗಳೂರು - 560 042.
13	ನಂ.17/6/157, ನಾಗನಹಳ್ಳಿ ಮುಖ್ಯರಸ್ತೆ, ತಾರಾಮಂಗಲಂ - 636 502.
14	ನಂ. 1092 1096/1, ಕಡಲೂರು ಮುಖ್ಯ ರಸ್ತೆ, ಅತ್ತೂರು-636102.
15	123-ಬಿ, ಪಳನಿಸ್ವಾಮಿ ರಸ್ತೆ, ತಿರುಪ್ಪತ್ತೂರು - 635 601
16	1-ಎ/40, ಕಛೇರಿ ರಸ್ತೆ, ರಾಜಾಜಿ ರಸ್ತೆ, ರಾಶಿಪುರಂ - 637408.
17	ಡಿ.ನಂ.11/135,11/135-1, ಕಡೈವೀದಿ, ತಿರುಪತ್ತೂರು ಮೈನ್ ರಸ್ತೆ, ಹರೂರು-636903
18	ಪ್ಲಾಟ್ ನಂ. 2054 - ಎ, ಡೋರ್ ನಂ.45, ಎಲ್-ಬ್ಲಾಕ್, II ಅವೆನ್ಯೂ, ಅಣ್ಣಾ ನಗರ ಪಶ್ಚಿಮ, ಚೆನ್ನೈ - 600 040
19	1 ನೇ ಮಹಡಿ, ಪ್ಲಾಟ್ ನಂ. 299/301 / ಫ್ಲಾಟ್ ನಂ. 7, ಜೋಹರ್ ಪ್ಯಾಲೇಸ್, ಕಲ್ಬಾದೇವಿ ರಸ್ತೆ, ವಿಠ್ಠಲ್ ವಾಡಿ, ಭೂಲೇಶ್ವರ, ಮುಂಬೈ, ಮಹಾರಾಷ್ಟ್ರ - 400002
20	76, ವೆಂಕಟಸಪುರಂ, ಶಂಕರ್ ನಗರ, ಸೇಲಂ-636007
21	AVR ಸ್ವರ್ಣಮಹಲ್ ಜ್ಯುವೆಲ್ಲರಿ ಹತ್ತಿರ, 244, ಬಜಾರ್ ರಸ್ತೆ, ಸೇಲಂ, ತಮಿಳುನಾಡು - 636001.
22	ಸಿಟಿ ಬ್ಯಾಂಕ್, 148, 8 ನೇ ಮಹಡಿ, ಆಕ್ರೋಪೊಲೀಸ್, ಡಾಕ್ಟರ್ ರಾಧಾಕೃಷ್ಣನ್ ಸಾಲೈ, ಮೈಲಾಪುರ, ಚೆನ್ನೈ, ತಮಿಳುನಾಡು - 600004.
23	533, 2 ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ಪೂರ್ವ, ಬೆಂಗಳೂರು, ಬೆಂಗಳೂರು ಅರ್ಬನ್, ಕರ್ನಾಟಕ- 560003.
24	507, 2 ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ಪೂರ್ವ, ಬೆಂಗಳೂರು, ಬೆಂಗಳೂರು ಅರ್ಬನ್, ಕರ್ನಾಟಕ- 560003.

d. ಕಂಪನಿಯ ಆಡಳಿತ ಮಂಡಳಿಯ ವಿವರಗಳು:
ಕಂಪನಿಯ ಆಡಳಿತವನ್ನು ಛೇರ್ಮನ್, ಆಡಳಿತ ನಿರ್ದೇಶಕರು, ಜಂಟಿ ಆಡಳಿತ ನಿರ್ದೇಶಕರು, ವೃತ್ತಿಪರ ವ್ಯವಸ್ಥಾಪಕರು ನೋಡಿಕೊಳ್ಳುತ್ತಾರೆ ಹಾಗೂ ನಿರ್ದೇಶಕರು ಹಾಗೂ ಆಡಳಿತ ಮಂಡಳಿ ಅದರ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊತ್ತಿರುತ್ತದೆ.

e. **ನಿರ್ದೇಶಕರ ಹೆಸರುಗಳು, ವಿಳಾಸಗಳು, DIN ಮತ್ತು ನಿರ್ದೇಶಕರ ವೃತ್ತಿಯ ವಿವರ.**

ಕ್ರ. ಸಂ.	ಹೆಸರು ಮತ್ತು ವಿಳಾಸ	DIN	ವೃತ್ತಿ
1	ಶ್ರೀ . ಎಂ.ಬಿ. ಸುದರ್ಶನಂ, ನಂ-2, ಗಾಂಧಿ ನಗರ, ಎಲ್.ಐ.ಸಿ. ಕಛೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ, ಸೇಲಂ - 636007	02739946	ಛೇರ್ಮನ್ ಮತ್ತು ಆಡಳಿತ ನಿರ್ದೇಶಕರು
2	ಶ್ರೀ . ಎ.ಬಿ.ಎಸ್. ಸಂಜಯ್, ನಂ.2, ಗಾಂಧಿ ನಗರ, ಎಲ್.ಐ.ಸಿ. ಕಛೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ, ಸೇಲಂ - 636007	02736931	ಆಡಳಿತ ನಿರ್ದೇಶಕರು
3	ಶ್ರೀಮತಿ ಚಂದ್ರಲೇಖ, ನಂ.2, ಗಾಂಧಿ ನಗರ, ಎಲ್.ಐ.ಸಿ. ಕಛೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ, ಸೇಲಂ - 636007	02739936	ಪೂರ್ಣಾವಧಿ ನಿರ್ದೇಶಕರು
4	ಶ್ರೀಮತಿ ಸೌಮ್ಯ ಸಂಜಯ್, ನಂ.2, ಗಾಂಧಿ ನಗರ, ಎಲ್.ಐ.ಸಿ. ಕಛೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ, ಸೇಲಂ - 636007	02729683	ಪೂರ್ಣಾವಧಿ ನಿರ್ದೇಶಕರು
5	ಶ್ರೀ ಎ.ವಿ.ಆರ್ ಸಿದ್ಧಾಂತ್ ನಂ.2, ಗಾಂಧಿ ನಗರ, ಎಲ್.ಐ.ಸಿ. ಕಛೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ, ಸೇಲಂ - 636007	10364592	ಪೂರ್ಣಾವಧಿ ನಿರ್ದೇಶಕರು
6	ಶ್ರೀ ನಟರಾಜ್ ದಿನೇಶ್ ಮನೆ ನಂ. 102-ಇ, ತೀರ್ಥಗಿರಿ ರಸ್ತೆ, ವಿಜಯರಾಘವಪುರಂ, ಸೇಲಂ - 636001	10013116	ಕಂಪನಿ ಕಾರ್ಯದರ್ಶಿ
7	ಶ್ರೀ ಆದಿತ್ಯ ರವಿಶಂಕರ್, ನಂ. 05, 2ನೇ ಬೀದಿ, ಮರವನೇರಿ, ಸೇಲಂ - 636 007.	10061503	ಲೆಕ್ಕ ಪರಿಶೋಧಕರು
8	ಶ್ರೀಮತಿ ಕೆ .ಎಂ. ಕೋಕಿಲಾರಾಣಿ 171/53, ಪಳನಿಯಪ್ಪ ಕಾಲೊನಿ, ಆನಂದನಪಟ್ಟಿ,	10364593	ಕಂಪನಿಯ ಕಾರ್ಯದರ್ಶಿ

f. **ಆಡಳಿತ ಮಂಡಳಿಯ ನಿರ್ವಹಣ ಗ್ರಹಿಕೆ ಮತ್ತು ಅಪಾಯಕಾರಿ ಅಂಶಗಳು :**
- ಸಂಸ್ಥೆಯು ಸ್ಪರ್ಧಾತ್ಮಕ ವಿಭಾಗದಲ್ಲಿ ವ್ಯವಹಾರ ಮಾಡುತ್ತಿದ್ದು, ಸಂಘಟಿತ ಮತ್ತು ಅಸಂಘಟಿತ ವಿಭಾಗದಿಂದ ಸ್ಪರ್ಧೆಯನ್ನು ಎದುರಿಸುತ್ತಿದೆ.
- ಚಿನ್ನದ ದರದಲ್ಲಿ ಆಗುತ್ತಿರುವ ಏರಿಳಿಕೆ, ಕಂಪನಿಯ ಲಾಭಾಂಶದ ಮೇಲೆ ಪರಿಣಾಮ ಬೀರಬಹುದು.
- ಆಭರಣ ಬಳಕೆದಾರರ ಅಭಿರುಚಿಯಲ್ಲಿ ಆಗುವ ಬದಲಾವಣೆಯ ಅಂತರ್ಗತ ಮಿತಿಗಳು.

g. **ಕಂಪನಿಯ ವ್ಯವಹಾರದಲ್ಲಿ ಎಸಗಿರುವ ತಪ್ಪುಗಳು ಹಾಗೂ ವಸ್ತುಸ್ಥಿತಿ ಹಾಗೂ ಮರುಪಾವತಿಯಲ್ಲಿ ಆದ ಲೋಪದೋಷಗಳು:**

I)	ಶಾಸನಬದ್ಧ ಬಾಕಿಗಳು	ಇರುವುದಿಲ್ಲ.
II)	ಸಾಲಪತ್ರಗಳು	ಇರುವುದಿಲ್ಲ.
III)	ಬ್ಯಾಂಕ್ ಹಾಗೂ ಆರ್ಥಿಕ ಸಂಸ್ಥೆಗಳಿಂದ ಪಡೆದಿರುವ ಸಾಲ ಹಾಗೂ ಅದರ ಮೇಲಿನ ಬಡ್ಡಿಗಳು	ಇರುವುದಿಲ್ಲ.

h. **ಸ್ಥಿರ ಠೇವಣಿಯ ವಿವರಗಳು:**
a. ಕಂಪನಿಯ ಆಡಳಿತ ಮಂಡಳಿಯ ತೀರ್ಮಾನದ ದಿನಾಂಕ : 07.09.2023
b. ಸ್ಥಿರ ಠೇವಣಿ ಪಡೆಯಲು, ಆಹ್ವಾನಿಸಲು ಕಂಪನಿಗೆ ಒಪ್ಪಿಗೆ ಸೂಚಿಸುವ ನಿರ್ಣಯ ಕೈಗೊಂಡ ದಿನಾಂಕ : 30.09.2023
c. ಭದ್ರತೆ ಹಾಗೂ ಭದ್ರತೆ ಇಲ್ಲದ ಠೇವಣಿ : ಭದ್ರತೆ ಇಲ್ಲ
d.

ಕ್ರ. ಸಂ.	ವಿವರಗಳು	ಮೊತ್ತ (ಲಕ್ಷಗಳಲ್ಲಿ)
1	ಕಂಪನಿ ಆಡಳಿತ ಮಂಡಳಿಯ ಮಾಡಿರುವ ಕಾನೂನು ಹಾಗೂ ನಿಯಮಗಳ ಪ್ರಕಾರ ಠೇವಣಿ ಸ್ವೀಕರಿಸುವ ಮಿತಿ ಪಾವತಿಸಿದ ಬಂಡವಾಳದ ಶೇ. 10% ಮತ್ತು ಕಂಪನಿಯ ಭದ್ರತೆಗಳು ಹಾಗೂ ಸದಸ್ಯರ ಪ್ರೀಮಿಯಂ ಖಾತೆ. ಪಾವತಿಸಿದ ಬಂಡವಾಳದ ಶೇ. 25% ಮತ್ತು ಕಂಪನಿಯ ಭದ್ರತೆಗಳು ಹಾಗೂ ಸದಸ್ಯರ ಪ್ರೀಮಿಯಂ ಖಾತೆ	3,266.73 8,166.82
2	ಕಳೆದ ಆರ್ಥಿಕ ವರ್ಷದಲ್ಲಿ ಕಂಪನಿಯು ಸ್ವೀಕರಿಸಿದ ಠೇವಣಿಯ ಮೊತ್ತ	139.65
3	ಸುತ್ತೋಲೆ / ಜಾಹೀರಾತು ಪ್ರಕಟಿಸಿದ ದಿನಾಂಕದಂದು ಕಂಪನಿ ಹೊಂದಿರುವ ಠೇವಣಿಗಳು	4979.65
4	ಕಂಪನಿಯು ಠೇವಣಿ ಸಂಗ್ರಹಿಸಲು ಉದ್ದೇಶಿಸಿರುವ ಮೊತ್ತ	5,000.00
5	ಮುಂದಿನ 12 ತಿಂಗಳ ಅವಧಿಯಲ್ಲಿ ಹಿಂತಿರುಗಿಸಬೇಕಾಗಿರುವ ಠೇವಣಿ ಮೊತ್ತ	3.70

e. **ಠೇವಣಿ ಸ್ವೀಕರಿಸಲು ನಿಬಂಧನೆಗಳು :**
1. ಅವಧಿ: 1, 2 & 3 ವರ್ಷಗಳ ಅವಧಿಗೆ ಠೇವಣಿಯನ್ನು ಸ್ವೀಕರಿಸುವುದು
2. ಬಡ್ಡಿ ದರ:

	ಸ್ಕೀಮ್ 'ಎ'	
1 ವರ್ಷ	2 ವರ್ಷ	3 ವರ್ಷ
8.00%	8.50%	9.00%

3 ತಿಂಗಳಿಗೊಮ್ಮೆ ಪಾವತಿಸುವ ಸಾಮಾನ್ಯ ಬಡ್ಡಿದರ

	ಸ್ಕೀಮ್ 'ಬಿ'	
1 ವರ್ಷ	2 ವರ್ಷ	3 ವರ್ಷ
8.00%	8.50%	9.00%

ಬಡ್ಡಿಯ ಮೊತ್ತವನ್ನು 3 ತಿಂಗಳಿಗೊಮ್ಮೆ ಲೆಕ್ಕಮಾಡಿ ಠೇವಣಿಯ ಪೂರ್ಣಾವಧಿಯ ಸಮಯದಲ್ಲಿ ಪಾವತಿಸಲಾಗುವುದು.

3. **ಪಾವತಿ ಮತ್ತು ಮರುಪಾವತಿ ವಿಧಾನ:**

1	ಪಾವತಿ ವಿಧಾನ	ಚೆಕ್ / ಡಿಡಿ / ನೆಫ್ಟ್ / ಆರ್.ಟಿ.ಜಿ.ಎಸ್. / ಯುಪಿಐ
2	ಮರುಪಾವತಿ ವಿಧಾನ	ಚೆಕ್ / ಡಿಡಿ / ನೆಫ್ಟ್ / ಆರ್.ಟಿ.ಜಿ.ಎಸ್. / ಯುಪಿಐ

f. ಯಾವ ಅವಧಿಗೆ ಸ್ಕೀಂ 'ಎ' ಮತ್ತು ಸ್ಕೀಂ 'ಬಿ' ಯನ್ನು ಆರಂಭಿಸಲಾಗಿದೆ ಹಾಗೂ ಈ ಪ್ರಚಾರ ಸರಕು ಹಾಗೂ ಸುತ್ತೋಲೆ ಯಾವ ಅವಧಿಗೆ ಸೀಮಿತವಾಗಿದೆ. — ಕಂಪನಿ ರಿಜಿಸ್ಟರ್‌ನಲ್ಲಿ ನೊಂದಾಯಿಸಿದ 30 ದಿನಗಳ ಒಳಗಾಗಿ ಸ್ಕೀಂ 'ಎ' ಮತ್ತು ಸ್ಕೀಂ 'ಬಿ' ಅನ್ನು ಆರಂಭಿಸಲಾಗುವುದು. ಈ ಸುತ್ತೋಲೆ ಪ್ರಕಾರ ಆರ್ಥಿಕ ವರ್ಷ 2023-24ರ ಉಳಿಕೆ ಅವಧಿಯಲ್ಲಿ ಕಂತುಗಳನ್ನು ಸ್ವೀಕರಿಸುವುದು ಹಾಗೂ ದಿನಾಂಕ 30-09-2024ರ ವರೆಗೆ, ಅಥವಾ ಆಡಳಿತ ಮಂಡಳಿಯ ಮುಂದಿನ ಸಭೆಯ ವರೆಗೆ ಈ ಸುತ್ತೋಲೆ ಊರ್ಜಿತವಾಗಿರುತ್ತದೆ.

g. ಠೇವಣಿಯ ಕಾರಣ ಹಾಗೂ ಉದ್ದೇಶ — ಕಂಪನಿಯ ಕಾರ್ಯವಾಹಿ ಬಂಡವಾಳದ ಅವಶ್ಯಕತೆಗೆ

h. ಅರ್ಹತೆಯ ಪ್ರಮಾಣೀಕೃತ ಮೌಲ್ಯಮಾಪನ :
I. ಅರ್ಹತೆಯ ಪ್ರಮಾಣ ಪರ್ತ್ರ ಕೊಡುವ ಸಂಸ್ಥೆ : ಐಸಿಆರ್ಎ ಲಿಮಿಟೆಡ್
II. ಪಡೆದಿರುವ ಅರ್ಹತೆಯ ಪ್ರಮಾಣ ಪತ್ರ : ಎ-
III. ಪಡೆದಿರುವ ಅರ್ಹತೆಯ ಅರ್ಥ : ಧನಾತ್ಮಕ
IV. ಅರ್ಹತೆಯ ಪ್ರಮಾಣ ಪತ್ರ ಪಡೆದಿರುವ ದಿನಾಂಕ : 31.10.2023

i. ಠೇವಣಿಗಳ ಭದ್ರತೆಗಾಗಿ ಕೈಗೊಂಡಿರುವ ಕ್ರಮಗಳ ವಿವರ : ಅನ್ವಯಿಸುವುದಿಲ್ಲ

j. ನಿರ್ದೇಶಕರು, ಪ್ರಾಯೋಜಕರು, ವ್ಯವಸ್ಥಾಪಕ ಸಿಬ್ಬಂದಿ ಹಾಗೂ ಕಾರ್ಯನಿರ್ವಾಹಕ ಸಿಬ್ಬಂದಿಯವರಿಗೆ, ಠೇವಣಿಗಳಲ್ಲಿ ಸ್ವಹಿತಾಸಕ್ತಿ ಇರುವ ವಿವರ — ಕಂಪನಿಯು ಬಡ್ಡಿ ಪಾವತಿಯ ವಿಚಾರದಲ್ಲಿ ನಿರ್ದೇಶಕರು, ಪ್ರಾಯೋಜಕರು, ವ್ಯವಸ್ಥಾಪ ಸಿಬ್ಬಂದಿ ಹಾಗೂ ಕಾರ್ಯನಿರ್ವಾಹಕ ಸಿಬ್ಬಂದಿಯವರಿಗೆ ಹಾಗೂ ಇತರರು ಎಂದು ತಾರತಮ್ಯ ಮಾಡುವುದಿಲ್ಲ

3. **ಬಾಕಿ ಇರುವ ಯಾವುದೇ ಠೇವಣಿಗಳ ವಿವರಗಳು:** (ಲಕ್ಷ ರೂ.ಗಳಲ್ಲಿ)

	31.03.2022 ರಂತೆ ಬಾಕಿ ಇರುವ ಮೊತ್ತ	139.65
		20.02.2023
	ಸ್ವೀಕರಿಸಲಾದ ಒಟ್ಟು ಮೊತ್ತ	139.65
	ಬಡ್ಡಿ ದರ	ಒಂದು ವರ್ಷಕ್ಕೆ- 8%, 2 ವರ್ಷಗಳಿಗೆ - 8.5%, ಮೂರು ವರ್ಷಗಳಿಗೆ -9%
	31.03.2023 ರಂತೆ ಠೇವಣಿದಾರರ ಒಟ್ಟು ಸಂಖ್ಯೆ	33
	ಠೇವಣಿಗಳ ಮರುಪಾವತಿ ಮತ್ತು ಅದರ ಮೇಲಿನ ಬಡ್ಡಿಯನ್ನು ಪಾವತಿಸುವಲ್ಲಿ, ಠೇವಣಿದಾರರ ಸಂಖ್ಯೆ, ಮೊತ್ತ ಮತ್ತು ಡೀಫಾಲ್ಟ್ ಅವಧಿ ಸೇರಿದಂತೆ ಯಾವುದೇ ಡೀಫಾಲ್ಟ್ ಇದ್ದರೆ.	ಇಲ್ಲ
	ಠೇವಣಿದಾರರಿಂದ ಯಾವುದೇ ಮನ್ನಾ, ಠೇವಣಿಗಳ ಮೇಲೆ ಗಳಿಸಿದ ಬಡ್ಡಿ	ಇಲ್ಲ

4. **ಕಂಪನಿಯ ಆರ್ಥಿಕ ಸ್ಥಿತಿ:**

a. ಕಂಪನಿಯ ಲಾಭಗಳು, ತೆರಿಗೆಗೆ ನಿಬಂಧನೆಯನ್ನು ಮಾಡುವ ಮೊದಲು ಮತ್ತು ನಂತರ, ಸುತ್ತೋಲೆ ಅಥವಾ ಜಾಹೀರಾತಿನ ಬಿಡುಗಡೆಯ ದಿನಾಂಕದ ಮೊದಲು ಮೂರು ಹಣಕಾಸು ವರ್ಷಗಳು:

ವರ್ಷ	ತೆರಿಗೆಗೆ ಮುನ್ನ ಲಾಭ (ರೂ. ಲಕ್ಷಗಳಲ್ಲಿ)	ತೆರಿಗೆಯ ನಂತರದ ಲಾಭ (ರೂ. ಲಕ್ಷಗಳಲ್ಲಿ)
2020-21	5021.70	3711.35
2020-22	5454.60	4011.99
2020-23	7399.81	5378.37

b. ಸದರಿ ಮೂರು ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯು ಘೋಷಿಸಿದ ಲಾಭಾಂಶಗಳು; ಕಳೆದ ಮೂರು ವರ್ಷಗಳ ಬಡ್ಡಿ ವ್ಯಾಪ್ತಿಯ ಅನುಪಾತ (ತೆರಿಗೆಯ ನಂತರದ ನಗದು ಲಾಭ ಮತ್ತು ಪಾವತಿಸಿದ ಬಡ್ಡಿ / ಪಾವತಿಸಿದ ಬಡ್ಡಿ);

ವರ್ಷ	2020-21	2020-21	2020-23
ಘೋಷಿಸಿದ ಲಾಭಾಂಶ (%)	0.00%	0.00%	0.00%
ಬಡ್ಡಿ ವ್ಯಾಪ್ತಿಯ ಅನುಪಾತ	5.29	4.35	4.00

c. ಸುತ್ತೋಲೆ ಅಥವಾ ಜಾಹೀರಾತು ಬಿಡುಗಡೆಯ ದಿನಾಂಕದಿಂದ 3 ವರ್ಷಗಳ ಅವಧಿಯ ಆರ್ಥಿಕ ಸ್ಥಿತಿಯ ಬಗ್ಗೆ ಕಂಪನಿಯ ಆಯವ್ಯಯ ಪಟ್ಟಿಯ ವಿವರ: (ರೂ. ಲಕ್ಷಗಳಲ್ಲಿ)

ಬಾಧ್ಯತೆಗಳು	31-03-2023 ರಂತೆ	31-03-2022 ರಂತೆ	31-03-2021 ರಂತೆ	ಆಸ್ತಿ	31-03-2023 ರಂತೆ	31-03-2022 ರಂತೆ	31-03-2021 ರಂತೆ
ಈಕ್ವಿಟಿ ಷೇರು ಬಂಡವಾಳ	748.24	748.24	748.24	ಚಾಲ್ತಿಯಲ್ಲಿಲ್ಲದ ಆಸ್ತಿಗಳು	20874.08	13995.10	10136.89
ಮೀಸಲು ಮತ್ತು ಹೆಚ್ಚುವರಿಗಳು	31919.06	26829.99	22818.00	ಚಾಲ್ತಿಯಲ್ಲಿರುವ ಆಸ್ತಿಗಳು	72634.50	60371.87	51187.27
ಪ್ರಸ್ತುತವಲ್ಲದ ಹೊಣೆಗಾರಿಕೆಗಳು	10746.25	4943.96	1656.28				
ಪ್ರಸ್ತುತ ಹೊಣೆಗಾರಿಕೆಗಳು	50095.04	4943.96	36101.65				
ಒಟ್ಟು	93508.58	74366.97	61324.16	ಒಟ್ಟು	93508.58	74366.97	61324.16

d. ಸುತ್ತೋಲೆ ಅಥವಾ ಜಾಹೀರಾತು ಬಿಡುಗಡೆಯ ದಿನಾಂಕಕ್ಕೆ ಹಿಂದಿನ 3 ವರ್ಷಗಳ ಆಯವ್ಯಯ ಪಟ್ಟಿಯ ವಿವರ. (ರೂ. ಲಕ್ಷಗಳಲ್ಲಿ)

ವಿವರಗಳು	31.03.2023	31.03.2022	31.03.2021
ನಿರ್ವಹಣಾ ಚಟುವಟಿಕೆಯಿಂದ ಬಂದಿರುವ ಆದಾಯ	5362.49	71.72	1395.39
ಹೂಡಿಕೆಯಿಂದ ಬಂದಿರುವ ಆದಾಯ	-2034.91	-4029.78	-299.43
ಆರ್ಥಿಕ ಚಟುವಟಿಕೆಯಿಂದ ಬಂದಿರುವ ಆದಾಯ	-2609.97	1231.52	1133.98
ನಿವ್ವಳ (ಕಡಿಮೆ) ಹೆಚ್ಚಳ ನಗದು ಮತ್ತು ನಗದು ಸಮಾನ	717.60	-2726.55	2229.95

e. ಕಳೆದ 3 ವರ್ಷಗಳಲ್ಲಿ ಲೆಕ್ಕ ಪತ್ರ ನೀತಿಗಳಲ್ಲಿನ ಯಾವುದೇ ಬದಲಾವಣೆ ಮತ್ತು ಕಂಪನಿಯ ಲಾಭ ಮತ್ತು ಮೀಸಲುಗಳ ಮೇಲೆ ಅದು ಬೀರಿದ ಪರಿಣಾಮ:
ಈ ಹೇಳಿಕೆಗಳು (ಭಾರತೀಯ ಲೆಕ್ಕಪತ್ರ ಮಾನದಂಡಗಳು) ಕಂಪನಿಯ ಹಣಕಾಸು ನಿಯಮಗಳು 2015 ರ ಅಡಿಯಲ್ಲಿ ಸೂಚಿಸಲಾದ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ (Ind AS) ಪೂರ್ವಭಾವಿಯಾಗಿದೆ ಹಾಗೂ ಕಂಪನಿ ಕಾಯ್ದೆ 2013ರ ವಿಭಾಗ 133ರ ಹೋಲಿಕೆಯೊಂದಿಗೆ ಓದಲಾಗುತ್ತದೆ.

5. **ನಿರ್ದೇಶಕರ ಘೋಷಣೆ:**

a) ಕಾಯ್ದೆ ಪ್ರಾರಂಭವಾಗುವ ಮೊದಲು ಅಥವಾ ನಂತರ ಸ್ವೀಕರಿಸಿದ ಠೇವಣಿಗಳ ಮರುಪಾವತಿ ಅಥವಾ ಅಂತಹ ಠೇವಣಿಗಳ ಮೇಲಿನ ಬಡ್ಡಿಯನ್ನು ಪಾವತಿಸುವಲ್ಲಿ ಕಂಪನಿಯು ಯಾವುದೇ ತಪ್ಪು ಮಾಡಿಲ್ಲ ಮತ್ತು ತಪ್ಪು ಸಂಭವಿಸಿದಲ್ಲಿ ಅಂತಹ ತಪ್ಪುಗಳನ್ನು ಕಂಪನಿಯು ತಿದ್ದಿಕೊಂಡು ಉತ್ತಮಗೊಳಿಸಿದೆ ಹಾಗೂ ಆ ರೀತಿ ಉತ್ತಮಗೊಳಿಸಿ 5 ವರ್ಷ ಅವಧಿಗಳು ಮುಗಿದಿದೆ.

b) ಕಂಪನಿಯ ವ್ಯವಹಾರಗಳು ಮತ್ತು ಭವಿಷ್ಯಕ್ಕೆ ಸಂಬಂಧಿಸಿದಂತೆ ನಿರ್ದೇಶಕರ ಮಂಡಳಿಯು ಸಂಪೂರ್ಣವಾಗಿ ತೃಪ್ತಿ ವ್ಯಕ್ತಪಡಿಸಿದೆ ಮತ್ತು ಕಂಪನಿಯ ಅಂದಾಜು ಭವಿಷ್ಯದ ಆರ್ಥಿಕ ನೀತಿಯನ್ನು ಪರಿಗಣಿಸಿ, ಕಂಪನಿಯು ಯಾವಾಗ ಅದರ ಹೊಣೆಗಾರಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿದೆ ಹಾಗೂ ಸುತ್ತೋಲೆ ನೀಡಿದ ದಿನಾಂಕದಿಂದ ವರ್ಷದ ಅವಧಿಯಲ್ಲಿ ಕಂಪನಿಯು ದಿವಾಳಿಯಾಗುವುದಿಲ್ಲ ಎಂದು ಖಾತರಿ ಪಡಿಸಿದೆ.

c) ಕಂಪನಿಯು ಕಾಯ್ದೆ ನಿಬಂಧನೆಗಳನ್ನು ಹಾಗೂ ನಿಯಮಗಳನ್ನು ಅನುಸರಿಸಿದೆ.

d) ಕಾಯ್ದೆ ಮತ್ತು ನಿಯಮಗಳ ಅನುಸರಣೆಯು, ಠೇವಣಿ ಮರುಪಾವತಿಯನ್ನು ಕೇಂದ್ರ ಸರ್ಕಾರವು ಖಾತರಿಪಡಿಸುತ್ತದೆ ಎಂದು ಸೂಚಿಸುವುದಿಲ್ಲ. ಹಾಗೂ ಆ ರೀತಿ ತಿಳಿಯಬಾರದು.

e) ಕಾಯ್ದೆಯ ಪ್ರಾರಂಭದ ಮೊದಲು ಕಂಪನಿ ಸ್ವೀಕರಿಸಿದ ಠೇವಣಿಗಳನ್ನು ಮರುಪಾವತಿ ಮಾಡಲಾಗಿದೆ ಅಥವಾ ಠೇವಣಿಗಳ ಸ್ವೀಕಾರ ನಿಯಮಗಳು (19) 2014 ರಂತೆ ನಿಗದಿತ ದಿನಾಂಕದ ಒಳಗೆ ಬಡ್ಡಿಯೊಂದಿಗೆ ಪಾವತಿಸಲಾಗುವುದು.

f) ಕ್ರೆಡಿಟ್ ರೇಟಿಂಗ್‌ನಲ್ಲಿ ಆಗುವ ಯಾವುದೇ ಪ್ರತಿಕೂಲ ಬದಲಾವಣೆಯ ಸಂದರ್ಭದಲ್ಲಿ ಠೇವಣಿದಾರರಿಗೆ ಯಾವುದೇ ದಂಡವಿಲ್ಲದೆ ಠೇವಣಿಗಳನ್ನು ಹಿಂಪಡೆಯಲು ಅವಕಾಶ ನೀಡಲಾಗುತ್ತದೆ.

g) ಠೇವಣಿಗಳನ್ನು ಜಾಹೀರಾತಿನ ರೂಪದಲ್ಲಿ ಸುತ್ತೋಲೆ ಅಥವಾ ಸುತ್ತೋಲೆಯಲ್ಲಿ ಸೂಚಿಸಲಾದ ಉದ್ದೇಶಗಳಿಗೆ ಮಾತ್ರ ಬಳಸುವುದು.

h) ಕಂಪನಿಯು ಸ್ವೀಕರಿಸಿದ ಠೇವಣಿಗಳು (ಭದ್ರ ಪಡಿಸಿದ ಠೇವಣಿಗಳನ್ನು ಹೊರತುಪಡಿಸಿ), ಯಾವುದಾದರೂ ಇದ್ದರೆ ಸೂಚಿಸಬೇಕಾದ ಒಟ್ಟು ಮೊತ್ತ ಹಾಗೂ ಆ ಮೊತ್ತ ಕಂಪನಿಯ ಇತರ ಸುರಕ್ಷಿತ ಮತ್ತು ಅಸುರಕ್ಷಿತ ಹೊಣೆಗಾರಿಕೆಗಳೊಂದಿಗೆ ಸರಿಸಮಾನವಾಗಿರುತ್ತದೆ.

ಸ್ಥಳ: ಸೇಲಂ
ದಿನಾಂಕ: 01.12.2023

ಆಡಳಿತ ಮಂಡಳಿಯ ಸೀಲು ಮತ್ತು ಸಹಿ
ಎ.ವಿ.ಆರ್ ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್
ಸಿ ಎಸ್ ಎಲ್ ಕಾರ್ತಿಕೇಯನ್
ಕಂಪನಿ ಕಾರ್ಯದರ್ಶಿ

DPT-1 ಲೆಕ್ಕಪರಿಶೋದಕರ ಪ್ರಮಾಣಪತ್ರ

ನಾವು ಮೆ: ಶ್ರೀನಿವಾಸ್ ಮತ್ತು ಪದ್ಮನಾಭನ್, ಮೆ॥ ಎ.ವಿ.ಆರ್ ಸುವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್‌ನ ಕಂಪನಿ ಅದರ ನೊಂದಾಯಿತ ಕಛೇರಿಯನ್ನು 251-ಎ ಓಮಲೂರು ರಸ್ತೆ, ಸ್ವರ್ಣಪುರಿ, ಸೇಲಂ- 636004, ತಮಿಳುನಾಡುನಲ್ಲಿ ಹೊಂದಿರುತ್ತದೆ. ಈ ಕಂಪನಿಯು ಠೇವಣಿಗಳ ಮರುಪಾವತಿಯಲ್ಲಿ ಅಥವಾ ಪಾವತಿಸುವ ಮೊದಲು ಅಥವಾ ಸ್ವೀಕರಿಸಿದ ನಂತರ ಠೇವಣಿಗಳ ಮೇಲಿನ ಬಡ್ಡಿ ಪಾವತಿಯಲ್ಲಿ ಯಾವುದೇ ಡೀಫಾಲ್ಟ್ ಮಾಡಿಲ್ಲ ಅಥವಾ ಕಂಪನಿಕಾಯ್ದೆ 2013 ರಂತೆ ಪ್ರಾರಂಭವಾಗುವ ಮೊದಲು ಅಥವಾ ನಂತರ ಸ್ವೀಕರಿಸಿದ ಠೇವಣಿಗಳ ಬಡ್ಡಿಯನ್ನು ಪಾವತಿಸಿರುತ್ತದೆ. ಹಾಗೂ ನಮ್ಮ ಖಾತೆಗಳ ಪುಸ್ತಕಗಳ ಪರೀಕ್ಷೆ ಮತ್ತು ಈ ನಿಟ್ಟಿನಲ್ಲಿ ನಮಗೆ ನೀಡಿದ ಇತರ ಮಾಹಿತಿ ಮತ್ತು ವಿವರಣೆ ಆಧಾರದ ಮೇಲೆ, ಹೇಳಿದ ಪ್ರಮಾಣೀಕರಣವನ್ನು ಮಾಡಲಾಗಿದೆ.

ಸ್ಥಳ: ಚೆನ್ನೈ
ದಿನಾಂಕ: 01.12.2023

M/S, ಶ್ರೀನಿವಾಸ್ ಪದ್ಮನಾಭನ್
ಶಾಸನಬದ್ಧ ಲೆಕ್ಕ ಪರಿಶೋಧಕರು - ಸಂಸ್ಥೆಗಳ ನೋಂದಣಿ ಸಂಖ್ಯೆ:004021S

ಕೆ.ಎಂ. ಪದ್ಮನಾಭನ್
ಪಾಲುದಾರ ಸದಸ್ಯತ್ವ ಸಂಖ್ಯೆ : 026594

ಏ.5ಕ್ಕೆ 'ಥೆರೇಸಮ್ಮ' ಏಕವ್ಯಕ್ತಿ ರಂಗ ಪ್ರಯೋಗ

ಹೆಲನ್ ಮೈಸೂರು

ಬೆಂಗಳೂರು: ರಂಗ ಬದುಕು ಟ್ರಸ್ಟ್ ಏ.5ರಂದು ಸಂಜೆ 4 ಗಂಟೆಗೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಹೆಲನ್ ಮೈಸೂರು ಅಭಿನಯದ 'ಥೆರೇಸಮ್ಮ' ಏಕವ್ಯಕ್ತಿ ರಂಗ ಪ್ರಯೋಗ ಹಮ್ಮಿಕೊಂಡಿದೆ.

ಈ ನಾಟಕವನ್ನು ಬೇಲೂರು ರಘುನಂದನ್ ರಚಿಸಿ, ನಿರ್ದೇಶಿಸಿದ್ದಾರೆ. ಹೆಲನ್ ಮೈಸೂರು ಅವರು 'ವಾಲ್ಮೀಕಿ ರಾಮಾಯಣ' ರಂಗ ಪ್ರಯೋಗದಲ್ಲಿ ಮೂರು ಗಂಟೆಗಳ ಅವಧಿಯಲ್ಲಿ 111 ಪಾತ್ರಗಳನ್ನು ನಿರ್ವಹಿಸಿ, ಮೂರು ವಿಶ್ವ ದಾಖಲೆಗಳನ್ನು ನಿರ್ಮಿಸಿದ್ದರು.

'ಮದರ್ ಥೆರೇಸಾ ಅವರ ಬಗೆಗಿನ ನಾಟಕವನ್ನು ಕನ್ನಡದಲ್ಲಿ ಪ್ರಯೋಗ ಮಾಡಲಾಗುತ್ತಿದೆ' ಎಂದು ಹೆಲನ್ ಮೈಸೂರು ತಿಳಿಸಿದ್ದಾರೆ. ಪಾಸ್‌ಗಳಿಗೆ ಸಂಪರ್ಕ ಸಂಖ್ಯೆ: 8197137309 ಅಥವಾ 8088057919

ಕೆಎಸ್‌ಆರ್‌ಟಿಸಿ ಚಾಲಕರಿಗೆ ಮದ್ಯಪಾನ ಪರೀಕ್ಷೆ ನಡೆಸಲು ನಿಗಮ ನಿರ್ಧಾರ

ಅಪಘಾತ ತಪ್ಪಿಸಲು 'ಉಸಿರು' ತಪಾಸಣೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕುಡಿತದಿಂದ ಯಾವುದೇ ಅಪಘಾತ ಉಂಟಾಗಬಾರದು ಎಂಬ ಕಾರಣಕ್ಕೆ ಕೆಎಸ್‌ಆರ್‌ಟಿಸಿ ಬಸ್ ಚಾಲಕರಿಗೆ ಕರ್ತವ್ಯದ ಮಧ್ಯೆ 'ಉಸಿರು ತಪಾಸಣೆ' ನಡೆಸಲು ನಿಗಮ ನಿರ್ಧರಿಸಿದೆ. ಅಮಲು ಪದಾರ್ಥ ಸೇವಿಸಿ ಬಸ್ ಚಲಾಯಿಸುತ್ತಿದ್ದಾರೆಯೇ ಎಂಬುದನ್ನು ಪತ್ತೆ ಮಾಡಲು ಈ ಕ್ರಮ ಕೈಗೊಳ್ಳಲಾಗುತ್ತಿದೆ.

ರಾತ್ರಿ ಸಂಚರಿಸುವ ಬಸ್‌ಗಳ ಚಾಲಕರಿಗೆ ಮಾರ್ಗ ಮಧ್ಯೆ ನಿಗದಿಪಡಿಸಿದ ಸ್ಥಳಗಳಲ್ಲಿ ಪ್ರತಿದಿನ ತಪ್ಪದೇ 'ಉಸಿರು ತಪಾಸಣಾ ಯಂತ್ರಗಳ' ಮೂಲಕ 'ಮದ್ಯಪಾನ ತಪಾಸಣೆ' ಮಾಡಬೇಕು. ಚಾಲಕರ ಸಂಖ್ಯೆ ಮತ್ತು ತಪಾಸಣೆಯ ಫಲಿತಾಂಶವನ್ನು ಕೇಂದ್ರ ಕಚೇರಿಯ ಕಂಟ್ರೋಲ್ ರೂಂಗೆ ರವಾನಿಸಬೇಕು ಎಂದು ನಿಗಮದ ಎಲ್ಲ ತನಿಖಾ ಸಂಯೋಜಕರಿಗೆ ಸೂಚನೆ ನೀಡಲಾಗಿದೆ.

ವಿಶ್ರಾಂತಿ ಅಗತ್ಯ: ಚಾಲನಾ ಸಿಬ್ಬಂದಿಗೆ ಕರ್ತವ್ಯಗಳ ನಡುವೆ ಸರಿಯಾದ ವಿಶ್ರಾಂತಿ ನೀಡಬೇಕು. ಇಲ್ಲದೇ ಇದ್ದರೆ ಬಸ್ ಚಲಾಯಿಸುವ ಸಂದರ್ಭದಲ್ಲಿ ತೂಕಡಿಕೆ ಉಂಟಾಗಿ ಅಪಘಾತಕ್ಕೆ ಕಾರಣವಾಗಬಹುದು. ಕರ್ತವ್ಯಕ್ಕೆ ನಿಯೋಜಿಸುವಾಗಲೇ ವಿಶ್ರಾಂತಿಯ ಪೂರ್ಣ ಮಾಹಿತಿಯನ್ನು ಹೊಂದಿರಬೇಕು ಎಂದು ಘಟಕದ ಅಧಿಕಾರಿಗಳಿಗೆ ಕೆಎಸ್‌ಆರ್‌ಟಿಸಿ ನಿರ್ದೇಶಕರು ಸೂಚನೆ ನೀಡಿದ್ದಾರೆ.

ಚಾಲನೆಯ ವೇಳೆ ಮುಂಜಾನೆ ಅಪಘಾತ ಹೆಚ್ಚು ಉಂಟಾಗುತ್ತದೆ ಎಂಬುದು ಅಧ್ಯಯನದಿಂದ ತಿಳಿದು ಬಂದ ಮೇಲೆ ರಾತ್ರಿ ಕರ್ತವ್ಯ ನಿರ್ವಹಿಸುವವರಿಗೆ ಅರ್ಧ ಲೀಟರ್‌ನ ಥರ್ಮೋ ಫ್ಲಾಸ್ಕ್ ವಿತರಣೆ ಮಾಡಲಾಗಿದೆ. ಹೋಟೆಲ್‌ಗಳಿಂದ ಕಾಫಿ, ಟೀಯನ್ನು ಫ್ಲಾಸ್ಕ್‌ನಲ್ಲಿ ತುಂಬಿಸಿಕೊಂಡು ಬೆಳಿಗ್ಗಿನ ಜಾವ ಸೇವಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳ ಅಪಘಾತ ಬಹಳ ಕಡಿಮೆ, ಕಾಲಕ್ರಮೇಣ ಅಪಘಾತ ರಹಿತವಾಗಿ ಮಾಡಬೇಕು ಎಂಬ ಕಾರಣಕ್ಕೆ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಜೊತೆಗೆ ಚಾಲಕರಿಗೆ, ಸಿಬ್ಬಂದಿಗೆ ಜಾಗೃತಿಯನ್ನೂ ಮೂಡಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸ್ಪರ್ಧೆಗಾಗಿ ವೇಗ ಬೇಡ: ದ್ವಿಚಕ್ರ ವಾಹನಗಳಿಂದಲೇ ಹೆಚ್ಚು ಅಪಘಾತಗಳು ಉಂಟಾಗುತ್ತಿವೆ. ಹಾಗಾಗಿ ದ್ವಿಚಕ್ರವಾಹನಗಳು ಬಂದಾಗ ಬಸ್ ಚಾಲಕರು ಹೆಚ್ಚು ಎಚ್ಚರಿಕೆ ವಹಿಸಬೇಕು. ಅಪಘಾತವಾದರೆ ಬೈಕ್ ಸವಾರರ ಕುಟುಂಬಕ್ಕೂ ನಷ್ಟ, ಕೆಎಸ್‌ಆರ್‌ಟಿಸಿ ಸಂಸ್ಥೆಗೂ ನಷ್ಟ. ಬೇರೆ ವಾಹನಗಳೊಂದಿಗೆ ಸ್ಪರ್ಧೆ ಮಾಡಬಾರದು ಎಂಬ ಅರಿವು ಮೂಡಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಡಿಪೊದಲ್ಲಿಯೂ ಕೌನ್ಸೆಲಿಂಗ್: ಬೇಸಿಗೆ ಸಮಯದಲ್ಲಿ ಶಾಲಾ, ಕಾಲೇಜುಗಳಿಗೆ ರಜೆ ಇರುವುದರಿಂದ ಪ್ರವಾಸ ಹೋಗುವವರ ಸಂಖ್ಯೆ ಅಧಿಕವಾಗಿರುತ್ತದೆ. ಜಾತ್ರೆ, ಹಬ್ಬಗಳೂ ಇದೇ ಸಮಯದಲ್ಲಿ ಇರುತ್ತವೆ. ಇಂಥ ಸಂದರ್ಭದಲ್ಲಿ ಸಂಚಾರ ದಟ್ಟಣೆಯೂ ಹೆಚ್ಚಳವಾಗುತ್ತದೆ. ಇದೆಲ್ಲ ಚಾಲಕರ ಮೇಲೆ ಒತ್ತಡವನ್ನು ಉಂಟು ಮಾಡುತ್ತದೆ. ಬೆಳಿಗ್ಗೆ 6ಕ್ಕೆ ಡಿಪೊ ಮ್ಯಾನೇಜರ್‌ಗಳು ಹಾಜರಿದ್ದು, ಚಾಲಕರೊಂದಿಗೆ ಮಾತನಾಡಬೇಕು. ಒತ್ತಡಕ್ಕೆ ಒಳಗಾಗಿ ವೇಗದ ಚಾಲನೆ ಮಾಡದಂತೆ ಕೌನ್ಸೆಲಿಂಗ್ ಮಾಡಬೇಕು ಎಂದು ಘಟಕದ ಮ್ಯಾನೇಜರ್‌ಗಳಿಗೂ ಸೂಚನೆ ನೀಡಲಾಗಿದೆ.

ಮುನ್ನೆಚ್ಚರಿಕೆ ಕ್ರಮ!

'ಕೆಎಸ್‌ಆರ್‌ಟಿಸಿ ಚಾಲಕರು ಮದ್ಯಪಾನ ಮಾಡಿ, ಅಪಘಾತ ನಡೆಸಿದ ಒಂದೇ ಒಂದು ಪ್ರಕರಣ ದಾಖಲಾಗಿಲ್ಲ. ಆದರೂ ಮುನ್ನೆಚ್ಚರಿಕೆಯಾಗಿ ಉಸಿರು ತಪಾಸಣೆ ನಡೆಸಲು ನಿರ್ಧರಿಸಲಾಗಿದೆ. ಮಾರ್ಚ್ ತಿಂಗಳ ಅಪಘಾತ ಪ್ರಕರಣಗಳ ವಿಶ್ಲೇಷಣಾ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಅನ್ಬುಕುಮಾರ್

ಸುದ್ದಿ 2 ನಿಮಿಷ

ಜಲಮಂಡಳಿ: ಇಂದು ಫೋನ್ ಇನ್ ಕಾರ್ಯಕ್ರಮ

ಬೆಂಗಳೂರು: ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ವಿವಿಧ ವಿಚಾರಗಳ ಬಗ್ಗೆ ಸಾರ್ವಜನಿಕರು ಮಾಹಿತಿ ಪಡೆಯಲು, ಗೊಂದಲ ಪರಿಹರಿಸಿಕೊಳ್ಳಲು ಬೆಂಗಳೂರು ಒಳಚರಂಡಿ ಮಂಡಳಿ ಮಾರ್ಚ್ 30ರಂದು ಬೆಳಿಗ್ಗೆ 9ರಿಂದ 10.30ರವರೆಗೆ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸಾರ್ವಜನಿಕರು ನೀರಿನ ಸಮಸ್ಯೆ, ಒಳಚರಂಡಿ ಸಮಸ್ಯೆ, ಮ್ಯಾನ್‌ಹೋಲ್‌ನಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಸಮಸ್ಯೆ, ಜಲಮಾಪನ, ನೀರಿನ ಬಿಲ್ಲಿನ ಸಮಸ್ಯೆಗಳ ಬಗ್ಗೆ ನೇರವಾಗಿ ಮಾತನಾಡಬಹುದು. ಸಾರ್ವಜನಿಕರು ದೂರವಾಣಿ 080-22945119 ಸಂಪರ್ಕಿಸುವಂತೆ ಅಧಿಕಾರಿಗಳು ಕೋರಿದ್ದಾರೆ.

ವಿಬ್‌ಗಯರ್ ರಸ್ತೆ ಬಂದ್: ಆಗ್ನೇಯ ಬೆಂಗಳೂರಿನಲ್ಲಿ ಕಾವೇರಿ 5ನೇ ಹಂತದ ಯೋಜನೆಗೆ ಸಂಬಂಧಿಸಿದ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಾಗಿ ವಿಬ್‌ಗಯರ್ ರಸ್ತೆಯನ್ನು ಏ.1ರವರೆಗೆ ಸಂಚಾರ ಪೊಲೀಸರು ಮುಚ್ಚಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಗುರುವಾರ ಕೆಲಸ ಆರಂಭಿಸಿದ್ದು, ವಾರಾಂತ್ಯದಲ್ಲಿ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

ಎಚ್‌ಎಎಲ್ ಹಳೆ ವಿಮಾನ ನಿಲ್ದಾಣ ರಸ್ತೆ ಮತ್ತು ಕುಂದಲಹಳ್ಳಿ ಕಡೆಯಿಂದ ಬಳಗೆರೆ ಟಿ ಜಂಕ್ಷನ್ ಕಡೆಗೆ ಹೋಗುವ ವಾಹನಗಳು ವರ್ತೂರು ಕೋಡಿ ಮತ್ತು ತೂಬರಹಳ್ಳಿ ವಿಸ್ತರಣೆ ಮೂಲಕ ಜಂಕ್ಷನ್‌ಗೆ ತಲುಪಬಹುದು. ವಿರುದ್ಧ ದಿಕ್ಕಿನಲ್ಲಿ ಹೋಗುವ ವಾಹನಗಳು ಪಣತ್ತೂರು, ವರ್ತೂರು ರಸ್ತೆ ಅಥವಾ ಮುನ್ನೇಕೊಳಾಲ ರಸ್ತೆ ಮೂಲಕ ಸಂಚರಿಸಬಹುದು. ಎಚ್‌ಎಎಲ್ ಹಳೆ ವಿಮಾನ ನಿಲ್ದಾಣ ರಸ್ತೆ ಮೂಲಕ ಬರುವ ಭಾರಿ ವಾಹನಗಳು ವರ್ತೂರು ಕೋಡಿ ಕಡೆಗೆ ಹೋಗಬಹುದು ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದ್ದಾರೆ.

ವಸತಿ ಶಾಲೆ ಪ್ರವೇಶಕ್ಕೆ ಅರ್ಜಿ

ಬೆಂಗಳೂರು: ನಗರದ ಮಾರತ್‌ಹಳ್ಳಿಯ ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದ 'ಶ್ರೀ ವೀರಭದ್ರಸ್ವಾಮಿ ಉಚಿತ ವಿದ್ಯಾರ್ಥಿ ವಸತಿ ಶಾಲೆ'ಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

6, 7 ಮತ್ತು 8ನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಆಸಕ್ತಿಯಿರುವ ಗ್ರಾಮೀಣ ಪ್ರದೇಶದ ಎಲ್ಲ ವರ್ಗದ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳು (ಬಾಲಕರು) ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದು. ಆಸಕ್ತರು ಏಪ್ರಿಲ್ 7ರಂದು ಬೆಳಿಗ್ಗೆ 9ಕ್ಕೆ ಬೆಂಗಳೂರಿನ ಮಾರತ್‌ಹಳ್ಳಿಯಲ್ಲಿರುವ ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದಲ್ಲಿ ನಡೆಯಲಿರುವ ಪ್ರವೇಶ ಪರೀಕ್ಷೆಯಲ್ಲಿ ಪಾಲ್ಗೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ: 97382 45665, 94486 70372ಗೆ ಸಂಪರ್ಕಿಸಬಹುದು.

ಕಿರುಕುಳ ಪ್ರಕರಣ: ಆರೋಪಿಗಳಿಗೆ ನಿರೀಕ್ಷಣಾ ಜಾಮೀನು

ಅಪಾರ್ಟ್‌ಮೆಂಟ್‌ನಲ್ಲಿ ಬ್ರಾಹ್ಮಣರ ಗುಂಪು ಕಟ್ಟಿಕೊಂಡು ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ: ದೂರುದಾರ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಾರ್ಟ್‌ಮೆಂಟ್‌ನಲ್ಲಿ ನೆರೆಹೊರೆಯ ಫ್ಲ್ಯಾಟ್ ಮಾಲೀಕರು ಬ್ರಾಹ್ಮಣರ ಗುಂಪು ಕಟ್ಟಿಕೊಂಡು ಸಾಮಾಜಿಕ ಬಹಿಷ್ಕಾರ ಹಾಕಿ, ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ದಲಿತ ಸಮುದಾಯದ (ಆದಿ ಕರ್ನಾಟಕ) ವ್ಯಕ್ತಿಯೊಬ್ಬರು ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ಎಸ್ಸಿ-ಎಸ್ಟಿ) ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ವಲಗೇರಹಳ್ಳಿ ಕೈಲಾಶ್ ಹೌಸಿಂಗ್ ಅಪಾರ್ಟ್‌ಮೆಂಟ್‌ನ ಜ್ಞಾನಭಾರತಿ ಎನ್‌ಕ್ಲೇವ್ ನಿವಾಸಿಗಳಾದ ನಿವೃತ್ತ ವಿಜ್ಞಾನಿ ರಾಮಾಂಜನೇಯಲು (67) ಮತ್ತು ಕೆಎಸ್‌ಎಫ್‌ಸಿ ವ್ಯವಸ್ಥಾಪಕ ಭಾಸ್ಕರ್ ನರಸಿಂಹಯ್ಯ (58) ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಕೋರಿಕೆಯ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಮೊಹಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ದೂರುದಾರ ಪರಿಶಿಷ್ಟ ಜಾತಿಗೆ ಸೇರಿದ್ದಾರೆ ಎಂಬ ಏಕಮಾತ್ರ ಕಾರಣಕ್ಕಾಗಿ ಮೇಲ್ಮನವಿದಾರರು ಅವರ ಮೇಲೆ ದೌರ್ಜನ್ಯ ಎಸಗಿದ್ದಾರೆ ಎಂಬುದನ್ನು ಮೇಲ್ನೋಟಕ್ಕೇ ಪರಿಗಣಿಸಲು ಆಗುವುದಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿದ್ದ ನಗರದ 70ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶವನ್ನು ವಜಾಗೊಳಿಸಿದೆ.

'ಮೇಲ್ಮನವಿದಾರರು 15 ದಿನಗಳ ಒಳಗೆ ಸಂಬಂಧಿಸಿದ ನ್ಯಾಯಾಲಯಕ್ಕೆ ಹಾಜರಾಗಿ ತಲಾ ಒಂದು ₹1 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್ ಮತ್ತು ಇಬ್ಬರ ಭದ್ರತೆ ಒದಗಿಸಬೇಕು' ಎಂಬುದೂ ಸೇರಿದಂತೆ ಇನ್ನಿತರೆ ಸಾಂಪ್ರದಾಯಿಕ ಷರತ್ತುಗಳನ್ನು ವಿಧಿಸಿ ನಿರೀಕ್ಷಣಾ ಜಾಮೀನು ನೀಡಿದೆ. ಮೇಲ್ಮನವಿದಾರರ ಪರ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್ ವಾದ ಮಂಡಿಸಿದ್ದರು. ಮಠದ ಚಿದಾನಂದ ಸ್ವಾಮಿ ವಕಾಲತ್ತು ವಹಿಸಿದ್ದರು.

ಪ್ರಕರಣವೇನು?: ಮೈಸೂರು ರಸ್ತೆಯಲ್ಲಿನ ವಲಗೇರಹಳ್ಳಿ ಕೈಲಾಶ್ ಹೌಸಿಂಗ್ ಅಪಾರ್ಟ್‌ಮೆಂಟ್‌ನ ಜ್ಞಾನಭಾರತಿ ಎನ್‌ಕ್ಲೇವ್ ನಿವಾಸಿಯಾದ ಕೆ.ಎಸ್. ರವಿಕುಮಾರ್ (52) ಅವರು ದೂರು ದಾಖಲಿಸಿದ್ದರು.

'ರಾಮಾಂಜನೇಯಲು ಮತ್ತು ಭಾಸ್ಕರ್ ನರಸಿಂಹಯ್ಯ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅಪಾರ್ಟ್‌ಮೆಂಟ್‌ನಲ್ಲಿ ನನ್ನ ಮೋಟರ್ ಸೈಕಲ್ ನಿಲ್ಲಿಸಿದಾಗ ಗಾಲಿ ಪಂಕ್ಚರ್ ಮಾಡಿ, ಸ್ಪಾರ್ಕ್ ಪ್ಲಗ್ ಕಿತ್ತು, ನನ್ನ ಫ್ಲ್ಯಾಟ್ ಮುಂದೆ ಕಸ ಚೆಲ್ಲಿ, ಟ್ಯೂಬ್‌ಲೈಟ್ ಆಫ್ ಮಾಡಿ ಕಿರುಕುಳ ನೀಡಿದ್ದಾರೆ. ಕ್ರಿಮಿನಲ್ ಪಿತೂರಿ ನಡೆಸಿ ಅನಗತ್ಯವಾಗಿ ಜಗಳ ಸೃಷ್ಟಿಸಲು ಬಯಸುತ್ತಿದ್ದಾರೆ. ಬ್ರಾಹ್ಮಣರ ಗುಂಪು ಕಟ್ಟಿಕೊಂಡು ನನಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ನಾನು ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿ ಎಂದು ತಿಳಿದೂ ಎಲ್ಲರೆದುರಲ್ಲಿ ಬೈ-ಲಾ ಹೆಸರಿನಲ್ಲಿ ನನ್ನನ್ನು ಅವಮಾನಿಸಿದ್ದಾರೆ' ಎಂದು ಆರೋಪಿಸಿ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಇದನ್ನು ಆಕ್ಷೇಪಿಸಿ ರವಿಕುಮಾರ್ ಪ್ರತಿಭಟನಾ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಪರಿಗಣಿಸಿದ್ದ ನ್ಯಾಯಾಲಯ ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿತ್ತು.

ಹಣಕ್ಕಾಗಿ ಚಿಕ್ಕಮ್ಮನ ಕೊಲೆಗೆ ಯತ್ನ

ಬೆಂಗಳೂರು: ಹಣ ಹಾಗೂ ಆಸ್ತಿಗೋಸ್ಕರ ಚಿಕ್ಕಮ್ಮನ ಕೊಲೆಗೆ ಯತ್ನಿಸಿದ ಸಾಕು ಮಗಳು ಹಾಗೂ ಅಳಿಯನನ್ನು ಆರ್.ಎಂ.ಸಿ ಯಾರ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಣ್ಣಮ್ಮ (56) ಹಲ್ಲೆಗೆ ಒಳಗಾದ ಮಹಿಳೆ. ಸುಮಿತ್ರಾ (37) ಹಾಗೂ ಮುನಿರಾಜ್ (38) ಬಂಧಿತ ಆರೋಪಿಗಳು. ಬಂಧಿತರಿಂದ ₹8.7 ಲಕ್ಷ ಮೌಲ್ಯದ 78 ಗ್ರಾಂ ಚಿನ್ನಾಭರಣ ಹಾಗೂ 130 ಗ್ರಾಂ ಬೆಳ್ಳಿ ಸಾಮಗ್ರಿ, ₹4.12 ಲಕ್ಷ ನಗದು ಹಾಗೂ ಒಂದು ವಾಚ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಅಣ್ಣಮ್ಮ ಅವರು ತನ್ನ ಅಕ್ಕನ ಮಗಳಾದ ಸುಮಿತ್ರಾ ಎಂಬಾಕೆಯನ್ನು ಚಿಕ್ಕಂದಿನಿಂದಲೂ ತಾವೇ ಪೋಷಣೆ ಮಾಡಿದ್ದರು. ಆಕೆಯನ್ನು ಮುನಿರಾಜ್ ಎಂಬಾತನಿಗೆ ಮದುವೆ ಮಾಡಿಕೊಡಲಾಗಿತ್ತು. ಆರ್‌ಎಂಸಿ ಯಾರ್ಡ್‌ನಲ್ಲಿ ಮುನಿರಾಜ್ ಕೆಲಸ ಮಾಡಿಕೊಂಡಿದ್ದ. ಮಾಲೀಕರು ಸಂಬಳ ನೀಡುತ್ತಿಲ್ಲವೆಂದು ಅಣ್ಣಮ್ಮನ ಬಳಿ ಹೇಳಿಕೊಂಡಿದ್ದ. ಮಾಲೀಕರಿಂದ ಸಂಬಳ ಕೊಡಿಸುವಂತೆಯೂ ಮನವಿ ಮಾಡಿದ್ದ. ಅಣ್ಣಮ್ಮ ಅವರನ್ನು ಆರ್‌ಎಂಸಿ ಯಾರ್ಡ್‌ಗೆ ರಾತ್ರಿ ವೇಳೆ ಕರೆದೊಯ್ದಿದ್ದ ಸಾಕು ಮಗಳು, ಅಲ್ಲೇ ಬಿಟ್ಟು ಹೋಗಿದ್ದಳು. ಅಲ್ಲಿ ಆಕೆಗೆ ಮುನಿರಾಜ್ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದ' ಎಂದು ಪೊಲೀಸರು ತಿಳಿಸಿದರು.

'ಅಣ್ಣಮ್ಮ ಅಲ್ಲಿಂದ ತಪ್ಪಿಸಿಕೊಂಡು ಬಂದಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಬಂದು ನೋಡುವಷ್ಟರಲ್ಲಿ ಚಿನ್ನ ಹಾಗೂ ನಗದು ಕಳವು ನಡೆದಿತ್ತು. ಹಣ ಕಳೆದುಕೊಂಡ ಮಹಿಳೆ ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಪ್ರಕರಣ ಭೇದಿಸಲಾಯಿತು' ಎಂದು ಹೇಳಿದರು.

'ಅಣ್ಣಮ್ಮ ಅವರಿಗೆ ಯಶವಂತಪುರದಲ್ಲಿ ಸ್ವಂತ ಮನೆಯಿದ್ದು ಅದರಿಂದ ಬಾಡಿಗೆ ಹಣ ಬರುತ್ತಿತ್ತು. ಸಾಕು ಮಗಳು ಹಾಗೂ ಅಳಿಯ ಕೆಲವು ದಿನಗಳ ಹಿಂದೆ ಅಣ್ಣಮ್ಮನ ಮನೆಗೆ ಬಂದು ವಾಸವಿದ್ದರು. ಮನೆಯಲ್ಲಿ ಹಣ ಹಾಗೂ ಚಿನ್ನಾಭರಣ ಇರುವುದನ್ನು ಆರೋಪಿಗಳು ಗಮನಿಸಿ ಈ ಕೃತ್ಯ ಎಸಗಿದ್ದರು' ಎಂದು ಪೊಲೀಸರು ಹೇಳಿದರು.

ಬುಕ್ ಬ್ರಹ್ಮ: ಕಥಾ ಸ್ಪರ್ಧೆ, ಕಾದಂಬರಿ ಪುರಸ್ಕಾರಕ್ಕೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕ್ ಬ್ರಹ್ಮ ಸಂಸ್ಥೆಯು 2024ನೇ ಸಾಲಿನ 'ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ'ಗೆ ಕಥೆಗಳನ್ನು ಹಾಗೂ 'ಕಾದಂಬರಿ ಪುರಸ್ಕಾರ'ಕ್ಕೆ ಕಾದಂಬರಿಗಳನ್ನು ಆಹ್ವಾನಿಸಿದೆ.

2023ರಲ್ಲಿ ಪ್ರಕಟಗೊಂಡ ಕಾದಂಬರಿಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುತ್ತದೆ. ಕಾದಂಬರಿ ಪುರಸ್ಕಾರವು ₹ 1 ಲಕ್ಷ ನಗದು ಒಳಗೊಂಡಿದೆ. ಈ ಮೊತ್ತದಲ್ಲಿ ಆಯ್ಕೆಯಾದ ಕೃತಿಯ ಲೇಖಕರಿಗೆ ₹ 75 ಸಾವಿರ ಹಾಗೂ ಪ್ರಕಾಶಕರಿಗೆ ₹ 25 ಸಾವಿರ ನೀಡಲಾಗುತ್ತದೆ. ಮೆಚ್ಚುಗೆ ಪಡೆಯುವ ನಾಲ್ಕು ಕಾದಂಬರಿಗಳಿಗೆ ತಲಾ ₹ 5 ಸಾವಿರ ನೀಡಲಾಗುವುದು ಎಂದು ಸಂಸ್ಥೆ ತಿಳಿಸಿದೆ.

ಕಥಾ ಸ್ಪರ್ಧೆಗೆ ಅಪ್ರಕಟಿತ ಕಥೆಗಳನ್ನು ಪರಿಗಣಿಸಲಾಗುತ್ತದೆ. ಪ್ರಥಮ ಸ್ಥಾನ ಪಡೆದ ಕಥೆಗೆ ₹ 50 ಸಾವಿರ ನಗದು ಇರಲಿದೆ. ದ್ವಿತೀಯ ಸ್ಥಾನ ಪಡೆದ ಕಥೆಗೆ ₹ 25 ಸಾವಿರ, ತೃತೀಯ ಸ್ಥಾನ ಪಡೆದ ಕಥೆಗೆ ₹ 15 ಸಾವಿರ ನಗದು ಇರಲಿದೆ. ಉಳಿದಂತೆ ಐದು ಕಥೆಗಳಿಗೆ ತಲಾ ₹ 5 ಸಾವಿರ ನಗದು ಒಳಗೊಂಡ ಸಮಾಧಾನಕರ ಬಹುಮಾನ ನೀಡಲಾಗುತ್ತದೆ. ಅಂತಿಮ ಸುತ್ತಿಗೆ ಆಯ್ಕೆಯಾಗುವ 17 ಕಥೆಗಳಿಗೆ ತಲಾ ₹ 2 ಸಾವಿರ ರೂಪಾಯಿ ನೀಡಲಾಗುತ್ತದೆ. ಆಯ್ಕೆಯಾದ 25 ಕಥೆಗಳನ್ನು ಒಳಗೊಂಡ ಪುಸ್ತಕ ಪ್ರಕಟಿಸಲಾಗುತ್ತದೆ ಎಂದು ಹೇಳಿದೆ.

ಕಾದಂಬರಿ ಪುರಸ್ಕಾರಕ್ಕೆ ಕಾದಂಬರಿಗಳ ನಾಲ್ಕು ಪ್ರತಿಗಳನ್ನು ಹಾಗೂ 'ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ'ಗೆ ಕಥೆಗಳನ್ನು ಕಳುಹಿಸಲು ಮೇ 1 ಕಡೆಯ ದಿನ. ಕಥೆಗಳನ್ನು ಇ ಮೇಲ್ bbks2024@bookbrahma.com ಮೂಲಕವೂ ಕಳಿಸಬಹುದು. ಜುಲೈ 1ರಂದು ಅಂತಿಮ ಸುತ್ತು ಪ್ರವೇಶಿಸಿದ ಐದು ಕಾದಂಬರಿಗಳು ಹಾಗೂ 25 ಕಥೆಗಳನ್ನು ಪ್ರಕಟಿಸಲಾಗುತ್ತದೆ. ಆ.9ರಿಂದ 12ರವರೆಗೆ ನಡೆಯುವ 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ'ದಲ್ಲಿ ವಿಜೇತರನ್ನು ಘೋಷಿಸಿ, ಪ್ರಶಸ್ತಿ ವಿತರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕಾದಂಬರಿ ಹಾಗೂ ಕಥೆಗಳನ್ನು ಕಳುಹಿಸಬೇಕಾದ ವಿಳಾಸ: ಪ್ರಧಾನ ಸಂಪಾದಕರು, ಬುಕ್ ಬ್ರಹ್ಮ ಕನ್ನಡ, ಮೂರನೇ ಮಹಡಿ, ಆರ್.ಕೆ. ಕಾಂಪ್ಲೆಕ್ಸ್, ಕೆಎಸ್‌ಎಸ್‌ಐಡಿಸಿ ಆವರಣ, ಎಲೆಕ್ಟ್ರಾನಿಕ್ಸ್ ಸಿಟಿ ಮೊದಲ ಹಂತ, ಬೆಂಗಳೂರು-560100. ಸಂಪರ್ಕ: 78926 08118.

ಎಫ್‌ಐಪಿ ಪ್ರಶಸ್ತಿ ಪ್ರದಾನ

ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಫೆಡರೇಷನ್ ಆಫ್ ಇಂಡಿಯನ್ ಫೋಟೊಗ್ರಫಿಯ (ಎಫ್‌ಐಪಿ) ರಾಷ್ಟ್ರೀಯ ಸಮಾವೇಶದಲ್ಲಿ ಛಾಯಾಗ್ರಹಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಛಾಯಾಗ್ರಾಹಕ ಕೆ.ಎಸ್. ರಾಜಾರಾಮ್ ಅವರಿಗೆ 2023ನೇ ಸಾಲಿನ 'ಆನರರಿ ಎಫ್‌ಐಪಿ ವಾರ್ಷಿಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು. ಎಫ್‌ಐಪಿ ಆನರರಿ ಸೆಕ್ರೆಟರಿ ಜನರಲ್ ವರುಣ್ ಕೆ. ಸಿನ್ಹಾ, ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಮತ್ತು ಎಫ್‌ಐಪಿ ಅಧ್ಯಕ್ಷ ಅದಿತ್ ಅಗರ್‌ವಾಲ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಮಹಿಳಾ ಸಮ್ಮೇಳನದಲ್ಲಿ ಲೇಖಕಿ ಕಮಲಾ ರಾಜೇಶ್ ಸಂತಸ

'ಮಹಿಳೆಯರಿಗೆ ಸಮಾನ ಸ್ಥಾನಮಾನ'

ಪ್ರಜಾವಾಣಿ ವಾರ್ತೆ

ರಾಜ್ಯ ಮಹಿಳಾ ಸಮ್ಮೇಳನಕ್ಕೆ ವಿಶ್ವ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷ ಇ. ರವೀಶ್, ಖಜಾಂಚಿ ಬಿ.ಟಿ. ಸವಿತಾ, ಪಾರ್ವತಮ್ಮ ರಾಜಕುಮಾರ್, ಸೂರಜ್ ಫೌಂಡೇಶನ್ ಅಧ್ಯಕ್ಷೆ ಸುಜಾತ ಮುನಿರಾಜು, ಶ್ವೇತಾ ಪ್ರಕಾಶ್, ಸಮ್ಮೇಳನದ ಅಧ್ಯಕ್ಷೆ ಕಮಲಾ ರಾಜೇಶ್, ಉಪನ್ಯಾಸಕಿಯರಾದ ಜಯಲಕ್ಷ್ಮಿ, ಸುಜಾತ, ಸಂಸ್ಥೆಯ ಗೌರವಾಧ್ಯಕ್ಷೆ ಶೈಲಜಾ ಬಾಬು ಚಾಲನೆ ನೀಡಿದರು.

ಪೀಣ್ಯ ದಾಸರಹಳ್ಳಿ: 'ಮಹಿಳೆಯರ ಸಾಧನೆಗಳನ್ನು ಗುರುತಿಸುವ ಮೂಲಕ ಸಮಾನ ಸ್ಥಾನಮಾನ ನೀಡುತ್ತಿರುವುದು ಶ್ಲಾಘನೀಯ' ಎಂದು ಲೇಖಕಿ ಕಮಲಾ ರಾಜೇಶ್ ಅಭಿಪ್ರಾಯಪಟ್ಟರು.

ಬಾಗಲಗುಂಟೆಯಲ್ಲಿ ವಿಶ್ವ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ, ವಿಶ್ವ ಕನ್ನಡ ಕಲಾ ಸಂಸ್ಥೆಗಳ ಆಶ್ರಯದಲ್ಲಿ ನಡೆದ ವಿಶ್ವ ಕನ್ನಡ ರಾಜ್ಯಮಟ್ಟದ ಪ್ರಥಮ ಮಹಿಳಾ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲ, ರಕ್ಷಣಾ ಕ್ಷೇತ್ರದಲ್ಲಿಯೂ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳಾಗಿದ್ದಾರೆ. ಸಿನಿಮಾ ನಿರ್ದೇಶಕಿಯರಾಗಿದ್ದಾರೆ. ಆರ್ಥಿಕ, ರಾಜಕೀಯ ಸಹಿತ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ' ಎಂದು ಶ್ಲಾಘಿಸಿದರು.

'18 ಮತ್ತು 19ನೆಯ ಶತಮಾನದಲ್ಲಿ ಲಿಂಗ ಸಮಾನತೆಗಾಗಿ ಹೋರಾಟ ನಡೆಯಿತು. ಮತದಾನದ ಹಕ್ಕಿಗಾಗಿ, ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ ಹೋರಾಟಗಳಾದವು. ಆನಂತರ ಸರ್ಕಾರಿ ವಲಯದಲ್ಲಿಯೂ 'ವೇತನದಲ್ಲಿ ಲಿಂಗ ತಾರತಮ್ಯ'ದ ವಿರುದ್ಧ ಧ್ವನಿ ಎತ್ತಲಾಯಿತು. ಹೀಗೆ ಸಮಾನತೆಗಾಗಿ ಹೋರಾಟ ನಿರಂತರವಾಗಿ ನಡೆದಿದೆ' ಎಂದು ನೆನಪಿಸಿದರು.

ಸೂರಜ್ ಫೌಂಡೇಶನ್ ಅಧ್ಯಕ್ಷೆ ಸುಜಾತಾ ಮುನಿರಾಜು ಮಾತನಾಡಿ, 'ಮಹಿಳೆಯರೂ ಶಿಕ್ಷಣ ಪಡೆದು ಸಮಾಜದಲ್ಲಿ ವಿವಿಧ ಸ್ತರಗಳಲ್ಲಿ ಕಾಲಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದಾರೆ. ಕಾಲಕ್ಕೆ ತಕ್ಕಂತೆ ಬದಲಾಗಿದ್ದಾರೆ' ಎಂದು ತಿಳಿಸಿದರು. ಸಾಹಿತಿ ವೈ.ಬಿ.ಎಚ್ ಜಯದೇವ್ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ವಿವಿಧ ಜಿಲ್ಲೆಗಳ ಕವಿಗಳು ಕವನ ವಾಚಿಸಿದರು. ವಿಚಾರಗೋಷ್ಠಿ, ಪ್ರಶಸ್ತಿ ಪ್ರದಾನ, ವಿವಿಧ ಲೇಖಕರ ಪುಸ್ತಕ ಬಿಡುಗಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಸಂಸ್ಥೆಯ ಅಧ್ಯಕ್ಷ ಈ. ರವೀಶ್, ಗೌರವಾಧ್ಯಕ್ಷೆ ಆರ್. ಶೈಲಜಾ ಬಾಬು, ಖಜಾಂಚಿ ಬಿ.ಟಿ. ಸವಿತಾ, ಉಪಾಧ್ಯಕ್ಷ ಬಿ.ಇ. ರಮೇಶ್, ಭೂಮಿಕಾ ಸೇವಾ ಫೌಂಡೇಶನ್ ಅಧ್ಯಕ್ಷೆ ಲತಾ ಕುಂದರಗಿ, ಸುಜಾತ ಭಾಗವಹಿಸಿದ್ದರು.

ನಗರದಲ್ಲಿ ಇಂದು

ನೃತ್ಯ ತರಂಗ್: ಮುಖ್ಯ ಅತಿಥಿ: ಎಸ್. ನಂಜುಂಡ ರಾವ್, ನೃತ್ಯ ರೂಪಕ: 'ಕರ್ಣಾಂತರಂಗ', ಆಯೋಜನೆ: ನೃತ್ಯ ಗಂಗೋತ್ರಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9.30

'ಅವ್ವರಸಿ', 'ರಂಗಭೀಷ್ಮ ಅಬ್ಬೂರು ಜಯತೀರ್ಥ' ಹಾಗೂ 'ನೆನೆ ನೆನೆ ಪ್ರಾತಃಸ್ಮರಣೀಯರ' ಕೃತಿಗಳು ಲೋಕಾರ್ಪಣೆ: ಸಮಾರಂಭ ಉದ್ಘಾಟನೆ: ಎಚ್.ಎಸ್. ವೆಂಕಟೇಶಮೂರ್ತಿ, ಕೃತಿಗಳ ಬಿಡುಗಡೆ: ಗಜಾನನ ಶರ್ಮ, ಬಿ.ವಿ. ರಾಜಾರಾಂ, ಆತ್ಮಾನಂದನಾಥ ಜೀ, ಅಧ್ಯಕ್ಷತೆ: ಎಸ್. ಪ್ರಕಾಶ್, ಆಯೋಜನೆ: ಸೆಂಟರ್ ಫಾರ್ ಡಿವೈನ್ ಆರ್ಟ್ಸ್, ಸ್ಥಳ: ಉದಯಭಾನು ಕಲಾ ಸಂಘ, ಗವಿಪುರ, ಬೆಳಿಗ್ಗೆ 10.30

'ಮಹಾಡ್ ಸತ್ಯಾಗ್ರಹ: ಇತಿಹಾಸ ಮತ್ತು ವರ್ತಮಾನದ ಭಾರತ' ವಿಚಾರ ಸಂಕಿರಣ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ವಿಷಯ ಮಂಡನೆ: ದು. ಸರಸ್ವತಿ, ವಿ.ಎಲ್. ನರಸಿಂಹಮೂರ್ತಿ, ಮುಖ್ಯ ಅತಿಥಿಗಳು: ಇಂದಿರಾ ಕೃಷ್ಣಪ್ಪ, ಗೊಲ್ಲಹಳ್ಳಿ ಶಿವಪ್ರಸಾದ್, ಶ್ರೀಪಾದ ಭಟ್, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಡೇವಿಡ್ ಹಾಗ್ ಅವರಿಂದ ಕೃಷಿ ಮಹತ್ವದ ಬಗ್ಗೆ ಉಪನ್ಯಾಸ: ಆಯೋಜನೆ: ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಆ್ಯಂಡ್ ಆ್ಯಕ್ಷನ್, ಸ್ಥಳ: ಕಸ್ತೂರ್‌ಬಾ ಹಾಲ್, ಗಾಂಧಿ ಭವನ, ಬೆಳಿಗ್ಗೆ 10.30

ನಿವೃತ್ತ ಸರ್ಕಾರಿ ನೌಕರರ ಹಾಗೂ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಬೆಂಗಳೂರು ಶಾಖಾ ಕಚೇರಿ ಉದ್ಘಾಟನೆ: ಅಧ್ಯಕ್ಷತೆ: ಸಿ.ಕೆ. ರಾಮಮೂರ್ತಿ, ಉದ್ಘಾಟನೆ: ವಿಜಯ ದೇಶಮುಖ, ಅತಿಥಿಗಳು: ಬಿ.ಎ. ಪಾಟೀಲ, ಆರ್. ಕೆ. ಮಠದ, ಎಂ.ಡಿ. ಪಾಟೀಲ, ಸ್ವಾಮಿ ಕಮಲ ಮನೋಹರ, ಜಿ.ಕೆ. ಕುಲಕರ್ಣಿ, ಪುರುಷೋತ್ತಮ ಬಂಗ, ಚಿಕ್ಕಹೊನ್ನಯ್ಯ, ಬಾಪುಗೌಡ ಪಾಟೀಲ, ಡಿ.ಟಿ. ಪಾಟೀಲ, ಆಯೋಜನೆ: ಹುಬ್ಬಳ್ಳಿ ನಿವೃತ್ತ ಸರ್ಕಾರಿ ನೌಕರರ ಹಾಗೂ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಜಯನಗರ ಸಾಂಸ್ಕೃತಿಕ ಮತ್ತು ನಾಗರಿಕರ ಸಂಸ್ಥೆ, 9ನೇ ಮುಖ್ಯರಸ್ತೆ, 4ನೇ ಬ್ಲಾಕ್ ಜಯನಗರ, ಬೆಳಿಗ್ಗೆ 11

34ನೇ ವಾರ್ಷಿಕೋತ್ಸವ: ಆಯೋಜನೆ ಹಾಗೂ ಸ್ಥಳ: ಮಿತ್ರ ಜ್ಯೋತಿ, ಎಚ್‌ಎಸ್‌ಆರ್ ಲೇಔಟ್, ಮಧ್ಯಾಹ್ನ 3

'ಕೃಷ್ಣಾರ್ಜುನರ ಕಾಳಗ' ತಾಳಮದ್ದಳೆ: ಹಿಮ್ಮೇಳ: ಬಾಲಕೃಷ್ಣ ಹಿಲ್ಲೋಡಿ, ನಂದನ್ ಹೆಗಡೆ ದಂಟಕಲ್, ಗಜಾನನ ಹೆಗಡೆ ಕಲ್ಲಬ್ಬೆ, ನಾರಾಯಣಮೂರ್ತಿ ಹೊಸಬಾಳೆ, ನಾರಾಯಣ ಭಟ್ ಯಲ್ಲಾಪುರ, ಆಗ್ನೇಯ ಭಟ್ ಕ್ಯಾನಸೂರ್, ಭಾವನಾ ಹೆಗಡೆ ಮಳಗೀಮನೆ, ಮುಮ್ಮೇಳ: ರವಿ ಐತುಮನೆ, ಕೃಷ್ಣ ಕುಮಾರ್ ನೆಗಳಗುಳಿ, ಚಂದನ್ ಕಲಾಹಂಸ, ಸಮರ್ಥ ಭಟ್, ಕಾರ್ತಿಕ್ ಹೆಗಡೆ ದಂಟಕಲ್, ಸಿರಿ ಹಳ್ಳದಾಚೆ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ನಂ.54, ನಮ್ಮನೆ, 4ನೇ ಮುಖ್ಯರಸ್ತೆ, ನಾರಾಯಣನಗರ 2ನೇ ಹಂತ, ದೊಡ್ಡಕಲ್ಲಸಂದ್ರ, ಸಂಜೆ 5

ನಿತ್ಯಾ ರಮೇಶ್ ರಂಗ ಪ್ರವೇಶ: ಅತಿಥಿಗಳು: ಮಂಜುಳಾ ಪರಮೇಶ್, ನಿರ್ಮಲಾನಂದನಾಥ ಸ್ವಾಮೀಜಿ, ಎನ್. ಚಲುವರಾಯಸ್ವಾಮಿ, ಬಲವಂತರಾವ್ ಪಾಟೀಲ, ಆಚಾರ್ಯ ಅಶೋಕ್ ಕುಮಾರ್. ಆಯೋಜನೆ: ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಶನ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, 16ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5.45

'ಪಾಂಡಪ್ಪ ಲಕ್ಷ್ಮಣ ಹೂಗಾರ ದತ್ತಿ ಪ್ರಶಸ್ತಿ', 'ಎಚ್.ವಿಶ್ವನಾಥ-ಎಂ.ಎಸ್. ಇಂದಿರಾ ದತ್ತಿ ಪ್ರಶಸ್ತಿ', 'ಜೆ.ಎಂ. ರಾಜಶೇಖರ ದತ್ತಿ ಪ್ರಶಸ್ತಿ' ಪ್ರದಾನ: ಕೆ.ಎಸ್. ರಾಜಣ್ಣ, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಮನು ಬಳಿಗಾರ್, ಶಿವಾನಂದ ಪಿ. ಹೂಗಾರ, ಎಚ್. ವಿಶ್ವನಾಥ್, ಪಿ. ಮಹೇಶ್, ಪ್ರಶಸ್ತಿ ಸ್ವೀಕರಿಸುವವರು: ಅನ್ನಪೂರ್ಣತಾಯಿ, ವಿನೋದ ಸುರೇಂದ್ರ ದೊಡ್ಡಣ್ಣವರ, ರಮಾ ಫಣಿ ಭಟ್ ಗೋಪಿ, ವೈ.ಜ. ಮುರಳೀಧರನ್, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 5

'ಭೀಮಾರ್ಜುನ ಗರ್ವಭಂಗ' ಯಕ್ಷಗಾನ ಪ್ರದರ್ಶನ: ನಿರ್ದೇಶನ: ಅಂಬರೀಷ್ ಭಟ್, ಮುಖ್ಯ ಅತಿಥಿಗಳು: ಜಿ.ಎಲ್. ಭಟ್, ಸುನೀತಾ, ಸಚ್ಚಿದಾನಂದ ಮೂರ್ತಿ, ರಾಧಾಕೃಷ್ಣ ಉರಾಳ, ಆಯೋಜನೆ: ಕಲಾ ಕದಂಬ ಆರ್ಟ್ ಸೆಂಟರ್, ಸ್ಥಳ: ಮನೋರಂಜನಿ ಸಭಾಂಗಣ, ಸಿದ್ಧಿಗಣಪತಿ ದೇವಾಲಯ, ಕೆಎಸ್‌ಆರ್‌ಟಿಸಿ ಲೇಔಟ್, ಚಿಕ್ಕಲ್ಲಸಂದ್ರ, ಸಂಜೆ 5.30

ಗೌರಿಸುಂದರ್ ವಾರ್ಷಿಕ ಪ್ರಶಸ್ತಿ ಪ್ರದಾನ: ಎಚ್.ಎಸ್. ವೆಂಕಟೇಶಮೂರ್ತಿ, ಮುಖ್ಯ ಅತಿಥಿ: ಎಂ.ಆರ್. ದತ್ತಾದ್ರಿ, ಪ್ರಶಸ್ತಿ ಪುರಸ್ಕೃತರು: ಬಿ.ಆರ್. ಲಕ್ಷ್ಮಣರಾವ್, 'ಕನ್ನಡ ಸಿನಿಮಾದಲ್ಲಿ ಕವಿಗೀತೆಗಳು' ಸಂವಾದ: ಪಿ. ಶೇಷಾದ್ರಿ, ಎನ್.ಎಸ್. ಶ್ರೀಧರಮೂರ್ತಿ, ನಾಗಚಂದ್ರಿಕಾ ಭಟ್, ಆಯೋಜನೆ: ಸುಂದರ ಪ್ರಕಾಶನ, ಸ್ಥಳ: ಸುಚಿತ್ರಾ ಫಿಲಂ ಸೊಸೈಟಿ, ಬನಶಂಕರಿ, ಸಂಜೆ 6

ಬಿ.ಆರ್.ಲಕ್ಷ್ಮಣ ರಾವ್

'ಅನ್ ಬಾಕ್ಸಿಂಗ್ ಬೆಂಗಳೂರು ಹಬ್ಬ'ದ ಭಾಗವಾಗಿ ವೈವಿಧ್ಯಮಯ ಪಾಶ್ಚಿಮಾತ್ಯ, ಅಂತರರಾಷ್ಟ್ರೀಯ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ: ಸಿಂಫೋನಿ ಆಫ್ ಆರ್ಕೆಸ್ಟ್ರಾ ಇಂಡಿಯಾ ತಂಡದಿಂದ ಪಾಶ್ಚಿಮಾತ್ಯ ಶಾಸ್ತ್ರೀಯ ಸಂಗೀತ, ಕವಿತೆ ವಾಚನ: ಸಿಮರ್ ಸಿಂಗ್, ಪ್ರಿಯಾಂಶಿ ಬನ್ಸಲ್, ವಾನಿಕಾ ಸಂಗ್ತಾನಿ, ಅಭಿನ್ ಜೋಶಿ, ಆಯೋಜನೆ: ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ (ಎನ್‌ಸಿಪಿಎ), ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಸ್ಥಳ: ಸ್ವಾತಂತ್ರ್ಯ ಉದ್ಯಾನ, ಸಂಜೆ 6

'36 ಅಲ್ಲ 63' ನಾಟಕ ಪ್ರದರ್ಶನ: **ನಿರ್ದೇಶನ:** ಶಾಂತಕುಮಾರ್, ಉಪಸ್ಥಿತಿ: ವಿ.ಆರ್.ರಾವ್, ಗಂಗರಾಜ್, ಆರ್. ಗಣಪತಿ, ರವಿಚಂದ್ರನ್, ಆಯೋಜನೆ: ಕಾವೇರಿ ಕಲಾ ಸಂಘ, ಸ್ಥಳ: ಲಾಸ್ಯರಂಜನಿ ಕಲಾಕ್ಷೇತ್ರ, ಸಂಜೆ 6

'ಬೆರಳ್ಗೆ ಕೊರಳ್' ನಾಟಕ ಪ್ರದರ್ಶನ: **ನಿರ್ದೇಶನ:** ರಾಘವೇಂದ್ರ ಎಸ್., ಮುಖ್ಯ ಅತಿಥಿಗಳು: ವಿ.ಎನ್. ಅಶ್ವತ್ಥ್, ಜಿಪಿಓ ಚಂದ್ರು, ಮಾಲತೇಶ್ ಬಡಿಗೇರ್, ಛಾಯಾಭಾರ್ಗವಿ, ವೆಂಕಟೇಶ್ ಜೋಶಿ, ರಾಜೇಶ್ವರಿ ಜೋಶಿ, ಆಯೋಜನೆ: ಕಲಾ ಕೃಷಿ, ಸ್ಥಳ: ಬಿಪಿ ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 6

ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ: ಹಿಂದೂಸ್ತಾನಿ ಸಂಗೀತ ಕಛೇರಿ: ಭುವನೇಶ್ ಕೊಮ್ಕಲಿ, ಕೇಶವ್ ಜೋಶಿ, ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಏಮ್ ಸಂಸ್ಥೆ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಸಂಜೆ 6.30

'ಬೆಂಗಳೂರು ನಾಗರತ್ನಮ್ಮ' ನಾಟಕ ಪ್ರದರ್ಶನ: ನಿರ್ದೇಶನ: ಟಿ.ಎಸ್. ನಾಗಾಭರಣ, ಆಯೋಜನೆ: ಬೆನಕ, ಸಂಗೀತ ಸಂಭ್ರಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಆತ್ಮತೃಷ-24'

ಪಿಇಎಸ್ ವಿದ್ಯಾಲಯದ 'ಆತ್ಮತೃಷ-24' ವಾರ್ಷಿಕ ತಾಂತ್ರಿಕ ಸಾಂಸ್ಕೃತಿಕ ಉತ್ಸವದಲ್ಲಿ ಕುಲಸಚಿವ ಕೆ.ಎಸ್. ಶ್ರೀಧರ್, ಚಿತ್ರನಟಿ ಸಪ್ತಮಿ ಗೌಡ, ಕುಲಪತಿ ಜೆ.ಸೂರ್ಯ ಪ್ರಸಾದ್ ಹಾಗೂ ಅಥ್ವಿ ಗ್ಲೋಬಲ್ ಸಂಸ್ಥಾಪಕ ಅವಿನಾಶ್ ವಾಸುದೇವ ನಾಯ್ಡು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ವಿವಾಹಿತ ಬಾಲಕಿ ಶಂಕಾಸ್ಪದ ಸಾವು: ಪತಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಕನಕಪುರ: ಹದಿನಾರು ವರ್ಷದ ವಿವಾಹಿತ ಬಾಲಕಿಯೊಬ್ಬಳು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಗ್ರಾಮವೊಂದರಲ್ಲಿ ನಡೆದಿದೆ. ಘಟನೆ ಕುರಿತು ಕನಕಪುರ ಗ್ರಾಮಾಂತರ ಠಾಣೆ ಪೊಲೀಸರು ಬಾಲಕಿ ಪತಿ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬಾಲಕಿ 13 ವರ್ಷವಿದ್ದಾಗ 20 ವರ್ಷದ ಯುವಕನನ್ನು ಪ್ರೀತಿಸಿ ಮದುವೆಯಾಗಿದ್ದಳು. ದಂಪತಿಗೆ ಹೆಣ್ಣು ಮಗು ಇದೆ.

ಬಾಲಕಿ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಕುರಿತು ಸ್ಥಳೀಯರು ಮಕ್ಕಳ ಸಹಾಯವಾಣಿಗೆ ದೂರು ಕೊಟ್ಟಿದ್ದಾರೆ. ಆ ಮೇರೆಗೆ ಸಹಾಯವಾಣಿ ಕೇಂದ್ರದ ಸಂಯೋಜಕ ಹಾಗೂ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರು ಬಾಲಕಿ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಮೂರು ವರ್ಷದ ಹಿಂದೆಯೇ ಬಾಲ್ಯ ವಿವಾಹವಾಗಿರುವ ಸಂಗತಿ ಗೊತ್ತಾಗಿದೆ.

'ಅನಾರೋಗ್ಯದಿಂದಾಗಿ ಪತ್ನಿಯನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿರುವುದಾಗಿ ಪತಿ ತನ್ನ ಸಾಕು ತಾಯಿಗೆ ಕರೆ ಮಾಡಿ ತಿಳಿಸಿದ್ದಾನೆ. ಮನೆಗೆ ಬಂದು ನೋಡಿದಾಗ ಪತ್ನಿ ಮೃತಪಟ್ಟಿದ್ದಳು ಎಂದು ಕುಟುಂಬದವರು ತಿಳಿಸಿದ್ದಾರೆ. ಆತ ಕೂಡ ಅನಾರೋಗ್ಯದಿಂದಾಗಿ ಕೊನೆಯುಸಿರೆಳೆದಿರುವುದಾಗಿ ಹೇಳುತ್ತಿದ್ದಾನೆ. ಪತಿಯನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮತ ವಿಭಜನೆ ಆಗಲಿದೆ, 'ಗ್ಯಾರಂಟಿ' ಪರಿಣಾಮ ಬೀರಲಿದೆ: ಕಾದಂಬರಿಕಾರ ಎಸ್‌.ಎಲ್‌. ಭೈರಪ್ಪ ಭವಿಷ್ಯ

'ರಾಜ್ಯದಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನ ಕಷ್ಟ'

ಪ್ರಜಾವಾಣಿ ವಾರ್ತೆ

ಮೈಸೂರು: 'ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗುವುದು ಖಚಿತ. ಆದರೆ, ಕರ್ನಾಟಕದಲ್ಲಿ ಕೊನೆ ಪಕ್ಷ ಅರ್ಧಕ್ಕಿಂತಲೂ ಜಾಸ್ತಿ ಸ್ಥಾನಗಳನ್ನು ಪಡೆಯಲಿದೆ ಎಂದು ತಿಳಿದುಕೊಂಡಿದ್ದೇನೆ' ಎಂದು ಕಾದಂಬರಿಕಾರ ಎಸ್‌.ಎಲ್‌. ಭೈರಪ್ಪ ಭವಿಷ್ಯ ನುಡಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಶುಕ್ರವಾರ ಭೈರಪ್ಪ ಅವರನ್ನು ಅವರ ನಿವಾಸದಲ್ಲಿ ಭೇಟಿಯಾದ ವೇಳೆ ಸುದ್ದಿಗಾರರ ಪ್ರಶ್ನೆಗಳಿಗೆ ಅವರು ಪ್ರತಿಕ್ರಿಯಿಸಿದರು.

'ರಾಜ್ಯದಲ್ಲಿ ನನ್ನ ಪ್ರಕಾರ ಈ ಬಾರಿ ಮತ ವಿಭಜನೆಯಾಗುತ್ತದೆ. ಆದರೆ, ಬಿಜೆಪಿಯು ತೀರಾ ಸೋತು ಹೋಗುವುದಿಲ್ಲ' ಎಂದು ಹೇಳಿದರು.

'ಕರ್ನಾಟಕದಲ್ಲಿ ಬಿಜೆಪಿಗೆ ಏಕೆ ಈ ಸ್ಥಿತಿ ಬಂದಿದೆ' ಎಂಬ ಪ್ರಶ್ನೆಗೆ, 'ರಾಜ್ಯದಲ್ಲಿ ಹಿಂದೆ ಇದ್ದ ಬಿಜೆಪಿ ಸರ್ಕಾರ ಪರಿಣಾಮಕಾರಿಯಾಗಿರಲಿಲ್ಲ. ಅಧಿಕಾರಿಗಳನ್ನು ನಿಯಂತ್ರಿಸುವುದು ಸಾಧ್ಯವಾಗಿರಲಿಲ್ಲ. ಅವರ ಕುರಿತು ಮೃದುವಾಗಿದ್ದರು. ಆದರೆ, ಈಗಿನ ಕಾಂಗ್ರೆಸ್‌ನವರು ಅಧಿಕಾರಿಗಳ ಮೇಲೆ ಬಹಳ ಜೋರಾಗಿದ್ದಾರೆ. ಆದರೆ, ಅವರು ಹೋಗುತ್ತಿರುವ ದಾರಿ ಸರಿ ಇಲ್ಲ. ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ, ಎಲ್ಲವನ್ನೂ ಉಚಿತವಾಗಿ ಕೊಡುವುದು ಸರಿಯಲ್ಲ. ಅದು ಜನಪ್ರಿಯತೆ ತಂದು ಕೊಟ್ಟಿರಬಹುದೇ ಹೊರತು ಅರ್ಥ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ' ಎಂದು ವಿಶ್ಲೇಷಿಸಿದರು.

'ಎಲ್ಲವನ್ನೂ ಉಚಿತವಾಗಿ ಕೊಡುತ್ತಿರುವುದರಿಂದ ರಾಜ್ಯ ಸರ್ಕಾರದಲ್ಲಿ ಹಣವೇ ಇಲ್ಲದಂತಾಗಿದೆ. ಹೀಗಾಗಿಯೇ ಕೇಂದ್ರದ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಕೇಂದ್ರದಿಂದ ಕೊಟ್ಟಿದ್ದನ್ನೆಲ್ಲಾ ಖರ್ಚು ಮಾಡಿಕೊಂಡಿರುತ್ತಾರೆ. ಈಗ, ವಿತ್ತ ಸಚಿವರನ್ನು ಬೈಯ್ಯುತ್ತಿದ್ದಾರೆ. ಭಾಷೆಯನ್ನು ಗೌರವಯುತವಾಗಿ ಬಳಸುತ್ತಿಲ್ಲ. ಟೀಕಿಸುತ್ತಿರುವ ಸಂಸ್ಕೃತಿ ಸರಿ ಇಲ್ಲ' ಎಂದು ಅಭಿಪ್ರಾಯಪಟ್ಟರು.

'ಉತ್ತರದ ರಾಜ್ಯಗಳಲ್ಲಿ ಬಿಜೆಪಿ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಗ್ಯಾರಂಟಿಯಾಗಿ ಹೇಳಬಹುದು. ಆದರೆ, ಕರ್ನಾಟಕದಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗೆಲ್ಲುವುದು ಕಷ್ಟ. ರಾಜ್ಯದಲ್ಲಿ ಕಾಂಗ್ರೆಸ್ ಸ್ಟ್ರಾಂಗ್ ಆಗಿದೆ. ಉತ್ತರ ಪ್ರದೇಶದ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಬಿಜೆಪಿ ಸರ್ಕಾರ ನಡೆದುಕೊಂಡಿದ್ದರೆ ಈ ಬಾರಿಯ ಚುನಾವಣೆಯಲ್ಲಿ ಹೆಚ್ಚಿನ ಸೀಟು ಗೆಲ್ಲಬಹುದಿತ್ತು. ಯೋಗಿ ಆದಿತ್ಯನಾಥ ಅವರಂತಹ ಮುಖ್ಯಮಂತ್ರಿಯನ್ನು ಕಂಡಿಲ್ಲ' ಎಂದರು.

'ಕರ್ನಾಟಕದಲ್ಲಿ ಸ್ವಲ್ಪ ಆ ಕಡೆಗೂ, ಈ ಕಡೆಗೂ ಎನ್ನುವಂತಹ ಸ್ಥಿತಿ ಇದೆ' ಎಂದ ಅವರು, 'ಕರ್ನಾಟಕದಲ್ಲಿ ಮೋದಿ ಅಲೆ ಕಡಿಮೆ ಆಗಿದೆಯಾ' ಎಂಬ ಪ್ರಶ್ನೆಗೆ 'ಗೊತ್ತಿಲ್ಲ' ಎಂದು ಪ್ರತಿಕ್ರಿಯಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕಾದಂಬರಿಕಾರ ಎಸ್‌.ಎಲ್‌. ಭೈರಪ್ಪ ಅವರನ್ನು ಶುಕ್ರವಾರ ಭೇಟಿಯಾಗಿ ಆಶೀರ್ವಾದ ಪಡೆದರು

ಮಂಡ್ಯದಲ್ಲೇ ನಿಲುವು ಪ್ರಕಟಿಸುವೆ: ಸುಮಲತಾ

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಬೆಂಬಲ ನೀಡುವಂತೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮನವಿ ಮಾಡಿದ್ದಾರೆ. ಮಂಡ್ಯದಲ್ಲೇ ನನ್ನ ನಿಲುವು ಪ್ರಕಟಿಸುತ್ತೇನೆ' ಎಂದು ಸಂಸದೆ ಸುಮಲತಾ ಅಂಬರೀಷ್ ತಿಳಿಸಿದರು.

ವಿಜಯೇಂದ್ರ ಅವರು ಸುಮಲತಾ ಅವರ ಮನೆಗೆ ಶುಕ್ರವಾರ ಭೇಟಿ ನೀಡಿ ಮಾತುಕತೆ ನಡೆಸಿದರು. ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿರುವ ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರ ಪರವಾಗಿ ಪ್ರಚಾರ ಕೈಗೊಳ್ಳುವಂತೆ ಮನವಿ ಮಾಡಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸುಮಲತಾ, 'ಚುನಾವಣೆಯಲ್ಲಿ ಬೆಂಬಲ ನೀಡುವಂತೆ ವಿಜಯೇಂದ್ರ ಕೇಳಿದ್ದಾರೆ. ಮಂಡ್ಯದಲ್ಲಿ ಶನಿವಾರ ಬೆಂಬಲಿಗರ ಸಭೆ ನಡೆಸುತ್ತೇನೆ. ಅವರೊಂದಿಗೆ ಚರ್ಚಿಸಿದ ಬಳಿಕ ಅಲ್ಲಿಯೇ ನನ್ನ ನಿರ್ಧಾರ ಪ್ರಕಟಿಸುತ್ತೇನೆ' ಎಂದರು.

'ಮಂಡ್ಯ ಕ್ಷೇತ್ರವನ್ನು ಬಿಟ್ಟು ಹೋಗುತ್ತೇನೆ ಎಂದು ನಾನು ಎಲ್ಲಿಯೂ ಹೇಳಿಲ್ಲ. ಮಂಡ್ಯ ಲೋಕಸಭಾ ಕ್ಷೇತ್ರವನ್ನು ಬಿಜೆಪಿಯೇ ಉಳಿಸಿಕೊಳ್ಳಬೇಕಿತ್ತು' ಎಂದು ಹೇಳಿದರು.

ಭೇಟಿ ಕುರಿತು ಪ್ರತಿಕ್ರಿಯಿಸಿದ ವಿಜಯೇಂದ್ರ, 'ಇದು ಮನವೊಲಿಕೆ ಯತ್ನ ಅಲ್ಲ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನಾಗಿ ಸುಮಲತಾ ಅವರನ್ನು ಭೇಟಿಮಾಡಿ ಸಹಕಾರ ಕೇಳಿದ್ದೇನೆ. ಬೆಂಬಲಿಗರ ಜತೆ ಸಭೆ ನಡೆಸಿ ನಿರ್ಧಾರ ತಿಳಿಸುವುದಾಗಿ ಅವರು ಹೇಳಿದ್ದಾರೆ. ಅವರ ನಿರ್ಧಾರವೂ ಸರಿಯಾಗಿಯೇ ಇದೆ' ಎಂದರು.

'ಸುಮಲತಾ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅವರು ಒಳ್ಳೆಯ ನಿರ್ಧಾರ ಕೈಗೊಳ್ಳುವ ವಿಶ್ವಾಸವಿದೆ. ಈಗ ಅವರಿಗೆ ತಾತ್ಕಾಲಿಕ ಹಿನ್ನಡೆ ಆಗಿರಬಹುದು. ಭವಿಷ್ಯದಲ್ಲಿ ಒಳ್ಳೆಯದಾಗಲಿದೆ' ಎಂದು ಹೇಳಿದರು.

ಅಶೋಕಗೆ ಗ್ರಾಮಾಂತರ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಉಸ್ತವಾರಿಯಾಗಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರನ್ನು ನೇಮಿಸಲಾಗಿದೆ.

ಆರ್‌. ಅಶೋಕ

ಉಸ್ತುವಾರಿ ಜವಾಬ್ದಾರಿ ವಹಿಸಿಕೊಂಡ ತಕ್ಷಣ ಅವರು ಜೆಡಿಎಸ್‌ನ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರ ಜತೆ ಚುನಾವಣಾ ಕಾರ್ಯತಂತ್ರಗಳ ಕುರಿತು ಚರ್ಚೆ ನಡೆಸಿದರು.

ಗ್ರಾಮಾಂತರ ಕ್ಷೇತ್ರದ ಮೈತ್ರಿ ಅಭ್ಯರ್ಥಿಯಾಗಿ ಎಚ್‌.ಡಿ. ದೇವೇಗೌಡರ ಅಳಿಯರಾದ ಜಯದೇವ ಆಸ್ಪತ್ರೆಯ ಮಾಜಿ ನಿರ್ದೇಶಕ ಡಾ.ಸಿ.ಎನ್ ಮಂಜುನಾಥ್ ಬಿಜೆಪಿ ಚಿಹ್ನೆಯಡಿ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್‌ನಿಂದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರ ಹಾಗೂ ಹಾಲಿ ಸಂಸದರಾದ ಡಿ.ಕೆ. ಸುರೇಶ್ ಮರು ಆಯ್ಕೆ ಬಯಸಿ ಕಣಕ್ಕೆ ಇಳಿದಿದ್ದಾರೆ.

'ಪ್ರಲ್ಹಾದ ಜೋಶಿಗೆ ವಿರೋಧಿಸಿಲ್ಲ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಧಾರವಾಡ ಸಂಸದ ಪ್ರಲ್ಹಾದ ಜೋಶಿ ಅವರಿಗೆ ಯಾವುದೇ ವಿರೋಧ ನಾವು ಮಾಡಿಲ್ಲ. ಯಾವುದೇ ಒಂದು ರಾಜಕೀಯ ಪಕ್ಷದಲ್ಲಿ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ಆ ಪಕ್ಷದ ಕಾರ್ಯಕರ್ತರು ಮತ್ತು ವರಿಷ್ಠರಿಗೆ ಸಂಬಂಧಪಟ್ಟಿದೆ' ಎಂದು ಹುಬ್ಬಳ್ಳಿಯ ಮೂರು ಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ತಿಳಿಸಿದ್ದಾರೆ.

ಪ್ರಲ್ಹಾದ ಜೋಶಿ ಅವರು ಲಿಂಗಾಯತ ನಾಯಕರನ್ನು ತುಳಿದು, ಅವಮಾನಿಸಿದ್ದಾರೆ. ಅವರ ಬದಲು ಬಿಜೆಪಿ ಬೇರೊಬ್ಬ ಅಭ್ಯರ್ಥಿಯನ್ನು ಧಾರವಾಡ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಬೇಕೆಂದು ಶಿರಹಟ್ಟಿ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಇತ್ತೀಚೆಗೆ ಒತ್ತಾಯಿಸಿದ್ದರು.

ಗುರುಸಿದ್ಧ ಸ್ವಾಮೀಜಿ

ಅದಕ್ಕೆ ಪ್ರತಿಕ್ರಿಯಿಸಿ ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಜೋಶಿ ಮತ್ತು ನಮ್ಮ ನಡುವೆ ಬಾಂಧವ್ಯ ಚೆನ್ನಾಗಿದೆ. ಜೋಶಿ ಅವರು ಕೂಡ ಮಠದ ಜೊತೆಗೆ ಸೌಹಾರ್ದಯುತವಾಗಿ ಸದಾ ಭಕ್ತಿ ಭಾವದಿಂದ ನಡೆದುಕೊಂಡಿದ್ದಾರೆ' ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಸ್ತ್ರೀ ವಿರೋಧಿ ಮನಸ್ಥಿತಿಯ ಕಾಂಗ್ರೆಸ್'

ಬೆಂಗಳೂರು: ಶಾಮನೂರು ಶಿವಶಂಕರಪ್ಪ, ಸುಪ್ರಿಯಾ ಶ್ರೀನಾತೆ ಅವರ ಹೇಳಿಕೆಗಳು ಕಾಂಗ್ರೆಸ್‌ನ ಸ್ತ್ರೀ ವಿರೋಧಿ ಮನಸ್ಥಿತಿಯ ಅಭಿವ್ಯಕ್ತಿ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ಹೇಳಿದರು.

'ಶಾಸಕ ಶಾಮನೂರು ಶಿವಶಂಕರಪ್ಪ ಅವರು 'ಮಹಿಳೆಯರು ಮನೆಯಲ್ಲಿರಲು ಮಾತ್ರ ಲಾಯಕ್ಕು' ಎಂಬ ರೀತಿಯಲ್ಲಿ ಮಾತನಾಡಿದ್ದಾರೆ. ಕಾಂಗ್ರೆಸ್‌ನ ಸುಪ್ರಿಯಾ ಶ್ರೀನಾತೆ ಕಂಗನಾ ರಣಾವತ್ ಕುರಿತು ಅತ್ಯಂತ ಕೀಳುಮಟ್ಟದ ಭಾಷೆಯಲ್ಲಿ ಪೋಸ್ಟ್ ಹಾಕಿದ್ದರು' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

ಅವರ ಪಕ್ಷದ ಅಧ್ಯಕ್ಷೆ ಸ್ವತಃ ಒಬ್ಬ ಮಹಿಳೆ. ಹಿಂದೆ ಅವರ ಪಕ್ಷದ ಮಹಿಳೆ ದೇಶದ ಪ್ರಧಾನಿಯಾಗಿದ್ದರು. ಈಗ ಪ್ರಿಯಾಂಕಾ ವಾದ್ರಾ ಗಾಂಧಿ, ಸೋನಿಯಾ ಗಾಂಧಿ ಕಾಂಗ್ರೆಸ್ ಪಕ್ಷಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಹೀಗಿರುವಾಗ ಮತ್ತೊಂದು ಪಕ್ಷದ ಅಭ್ಯರ್ಥಿ ಬಗ್ಗೆ ಅಗೌರವದ ಮಾತನಾಡುವುದು ಖಂಡನೀಯ ಎಂದರು.

ಎಚ್‌ಡಿಕೆ ಉತ್ತರಾಧಿಕಾರಿ ಯಾರು?

ಲೋಕಸಭಾ ಚುನಾವಣೆಗೆ ಸ್ಪರ್ಧೆ ಘೋಷಣೆ ಬೆನ್ನಲ್ಲೇ ಗರಿಗೆದರಿದ ಚರ್ಚೆ

• ಓದೇಶ ಸಕಲೇಶಪುರ

ರಾಮನಗರ: ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಿಂದ ಜೆಡಿಎಸ್ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಅವರು ಸ್ಪರ್ಧಿಸುವುದಾಗಿ ಘೋಷಿಸಿದ ಬೆನ್ನಲ್ಲೇ ಶಾಸಕರಾಗಿ ಅವರು ಪ್ರತಿನಿಧಿಸುತ್ತಿರುವ ಚನ್ನಪಟ್ಟಣ ಕ್ಷೇತ್ರ ತೊರೆಯುವರೇ? ಎಂಬುದರ ಚರ್ಚೆ ಜಿಲ್ಲೆಯಲ್ಲಿ ಗರಿಗೆದರಿದೆ.

ಕುಮಾರಸ್ವಾಮಿ ಜಯ ಗಳಿಸಿದರೆ ಅವರ ಮುಂದಿನ ನಡೆ ಏನು? ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಸಂಸತ್ ಸದಸ್ಯರಾಗಿ ಮುಂದುವರಿಯುತ್ತಾರೆಯೇ ಅಥವಾ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿ ಶಾಸಕರಾಗಿ ಉಳಿಯುತ್ತಾರೆಯೇ? ಒಂದು ವೇಳೆ ಸಂಸದರಾಗಿ ಮುಂದುವರಿದರೆ ಚನ್ನಪಟ್ಟಣಕ್ಕೆ ಅವರ ಉತ್ತರಾಧಿಕಾರಿ ಯಾರು? ಹೀಗೆ ಹಲವು ಪ್ರಶ್ನೆಗಳು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ರಾಮನಗರವನ್ನು ಪ್ರತಿನಿಧಿಸುತ್ತಿದ್ದ ಕುಮಾರಸ್ವಾಮಿ ಅವರು, ಮುಖಂಡರು ಹಾಗೂ ಕಾರ್ಯಕರ್ತರ ಒತ್ತಡಕ್ಕೆ ಮಣಿದು 2018ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ರಾಮನಗರದ ಜತೆಗೆ ಚನ್ನಪಟ್ಟಣದಲ್ಲೂ ಸ್ಪರ್ಧಿಸಿ ಗೆದ್ದರು. ರಾಮನಗರದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, 21,500 ಮತಗಳ ಅಂತರದಿಂದ ಗೆದ್ದಿದ್ದ ಚನ್ನಪಟ್ಟಣದ ಶಾಸಕರಾಗಿ ಉಳಿದರು.

ಅತಂತ್ರ ರಾಜಕೀಯ ಸ್ಥಿತಿಯಿಂದಾಗಿ ಕಾಂಗ್ರೆಸ್ ಮೈತ್ರಿಯೊಂದಿಗೆ ಮುಖ್ಯಮಂತ್ರಿಯೂ ಆಗಿದ್ದರು. 2023ರ ಚುನಾವಣೆಯಲ್ಲೂ ಸ್ಪರ್ಧಿಸಿ 16 ಸಾವಿರ ಮತಗಳ ಅಂತರದಿಂದ ಜಯ ಸಾಧಿಸಿದರು. ಎರಡೂ ಸಲವೂ ಅವರಿಗೆ ಪ್ರಬಲ ಎದುರಾಳಿಯಾಗಿದ್ದವರು ಸದ್ಯ ವಿಧಾನ ಪರಿಷತ್ ಸದಸ್ಯರಾಗಿರುವ ಬಿಜೆಪಿಯ ಸಿ.ಪಿ. ಯೋಗೇಶ್ವರ. ರಾಜಕೀಯ ವೈರಿಗಳಾಗಿದ್ದ ಇಬ್ಬರೂ ಬಿಜೆಪಿ–ಜೆಡಿಎಸ್ ಮೈತ್ರಿಯಿಂದಾಗಿ ಒಂದಾಗಿದ್ದಾರೆ.

ಸಿಪಿವೈ ಪಾಳಯದಲ್ಲಿ ಉತ್ಸಾಹ: ಕುಮಾರಸ್ವಾಮಿ ಮಂಡ್ಯದಲ್ಲಿ ಗೆಲುವು ಸಾಧಿಸಿದರೆ, ಕ್ಷೇತ್ರವು ಮತ್ತೊಂದು ಉಪ ಚುನಾವಣೆಗೆ ಅಣಿಯಾಗಬೇಕಾಗುತ್ತದೆ. ಆಗ ಅವರ ಸ್ಥಾನವನ್ನು ಯೋಗೇಶ್ವರ ಅಥವಾ ಎಚ್‌ಡಿಕೆ ಪುತ್ರ ನಿಖಿಲ್ ಕುಮಾರಸ್ವಾಮಿ ತುಂಬುತ್ತಾರೆಯೇ? ಸದ್ಯ ಕ್ಷೇತ್ರದಲ್ಲಿ ಯೋಗೇಶ್ವರ ಬೆಂಬಲಿಗರು ಉಪ ಚುನಾವಣೆಯಲ್ಲಿ ತಮ್ಮ ನಾಯಕನಿಗೆ ಟಿಕೆಟ್ ಖಚಿತ ಎಂಬ ಉತ್ಸಾಹದಲ್ಲಿದ್ದಾರೆ. ಜೆಡಿಎಸ್ ಕಾರ್ಯಕರ್ತರ ಬಾಯಲ್ಲಿ ನಿಖಿಲ್ ಹೆಸರು ಕೂಡ ಕೇಳಿ ಬರುತ್ತಿದೆ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿಯಾಗಿ ಬಿಜೆಪಿಯಿಂದ ಕಣಕ್ಕಿಳಿದಿರುವ ಎಚ್‌ಡಿಕೆ ಅವರ ಬಾವ ಡಾ.ಸಿ.ಎನ್.ಮಂಜುನಾಥ್ ಪರ ಯೋಗೇಶ್ವರ ಹುರುಪಿನಿಂದ ಕ್ಷೇತ್ರವಿಡೀ ಸುತ್ತಿ ಕೆಲಸ ಮಾಡುತ್ತಿದ್ದಾರೆ. ಚನ್ನಪಟ್ಟಣದಲ್ಲಿ ಮುಂದೆ ನಡೆಯಬಹುದಾದ ಉಪ ಚುನಾವಣೆ ಇದಕ್ಕೆ ಕಾರಣ ಎಂದು ಸ್ಥಳೀಯ ರಾಜಕಾರಣಿಗಳು ವಿಶ್ಲೇಷಿಸುತ್ತಿದ್ದಾರೆ. ವಿಧಾನ ಪರಿಷತ್ ಸದಸ್ಯರಾಗಿರುವ ಅವರ ಅವಧಿ ಮುಗಿಯುತ್ತಾ ಬರುತ್ತಿದೆ. ಹೀಗಾಗಿ ಮಂಡ್ಯ ಲೋಕಸಭಾ ಚುನಾವಣಾ ಫಲಿತಾಂಶದ ಮೇಲೆ ಯೋಗೇಶ್ವರ ರಾಜಕೀಯ ಭವಿಷ್ಯ ನಿಂತಿದೆ.

ಉಪ ಚುನಾವಣೆ ಹೊಸತಲ್ಲ: ಚನ್ನಪಟ್ಟಣಕ್ಕೆ ಉಪ ಚುನಾವಣೆ ಹೊಸತೇನಲ್ಲ. 1999ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯ ಸಾಧಿಸಿದ್ದ ಯೋಗೇಶ್ವರ್ 2018ರ ಚುನಾವಣೆವರೆಗೂ ಸುಮಾರು 19 ವರ್ಷ ಕ್ಷೇತ್ರದ ಶಾಸಕರಾಗಿದ್ದರು. ಇದರ ಮಧ್ಯೆ, 2008ರಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರು.

ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ 2009ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಎಂ.ಸಿ.ಅಶ್ವತ್ಥ್ ಜೆಡಿಎಸ್‌ನಿಂದ ಶಾಸಕರಾಗಿ ಆಯ್ಕೆಯಾದರು. 2010ರಲ್ಲಿ ಅಶ್ವತ್ಥ್ ರಾಜೀನಾಮೆ ನೀಡಿದ್ದರಿಂದ 2011ರಲ್ಲಿ ಮತ್ತೊಮ್ಮೆ ಉಪ ಚುನಾವಣೆ ಎದುರಾಯಿತು. ಇದರೊಂದಿಗೆ ಕ್ಷೇತ್ರ 5 ವರ್ಷದ ಅವಧಿಯಲ್ಲಿ 2 ಉಪ ಚುನಾವಣೆ ಸೇರಿದಂತೆ 3 ಚುನಾವಣೆಗಳಿಗೆ ಸಾಕ್ಷಿಯಾಗಿದೆ.

ಯೋಗೇಶ್ವರ ಅಥವಾ ನಿಖಿಲ್?

ಮಂಡ್ಯದಲ್ಲಿ ಕುಮಾರಸ್ವಾಮಿ ಗೆಲುವು ಸಾಧಿಸಿದರೆ ಚನ್ನಪಟ್ಟಣಕ್ಕೆ ನಡೆಯುವ ಉಪ ಚುನಾವಣೆಯಲ್ಲಿ ನಾನೇ ಮೈತ್ರಿ ಅಭ್ಯರ್ಥಿ ಎಂಬ ವಿಶ್ವಾಸದಲ್ಲಿ ಸಿ.ಪಿ. ಯೋಗೇಶ್ವರ ಇದ್ದಾರೆ. ಆದರೆ, ಜಿಲ್ಲೆಯಲ್ಲಿ ಜೆಡಿಎಸ್ ಗೆದ್ದಿರುವ ಏಕೈಕ ಕ್ಷೇತ್ರವನ್ನು ಎಚ್‌ಡಿಕೆ ಅಷ್ಟು ಸುಲಭವಾಗಿ ಬಿಟ್ಟು ಕೊಡುತ್ತಾರೆಯೇ? ಎಂಬ ಚರ್ಚೆಯೂ ಜೋರಾಗಿ ನಡೆಯುತ್ತಿದೆ.

ಈಗಾಗಲೇ ರಾಮನಗರದಲ್ಲಿ ಸೋಲುಂಡಿರುವ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಚನ್ನಪಟ್ಟಣದಲ್ಲಿ ಪ್ರತಿಷ್ಠಾಪಿಸಲು ಎಚ್‌ಡಿಕೆ ತಂತ್ರ ಹೆಣೆದಿದ್ದಾರೆ. ಯೋಗೇಶ್ವರ ಅವರಿಗೆ ಏನೂ ಸಿಗದು ಎಂಬ ಮಾತನ್ನು ಮಾಗಡಿ ಶಾಸಕ ಎಚ್‌.ಸಿ.ಬಾಲಕೃಷ್ಣ ರಾಜಕೀಯ ಭವಿಷ್ಯ ನುಡಿದಿದ್ದಾರೆ. ಈಗಾಗಲೇ ಎರಡು ಸಲ ಶಾಸಕಿಯಾಗಿರುವ ಅನಿತಾ ಕುಮಾರಸ್ವಾಮಿ ಅವರು ಪತಿ ಸ್ಥಾನ ತುಂಬಿದರೂ ಅಚ್ಚರಿ ಇಲ್ಲ ಎಂಬ ಮಾತುಗಳು ಕೇಳಿ ಬರುತ್ತಿವೆ.

ಒಂದು ವೇಳೆ ಹಾಗೇನಾದರೂ ಆದರೆ, ಯೋಗೇಶ್ವರ 'ಕೈ' ಹಿಡಿದು ಎಚ್‌ಡಿಕೆ ವಿರುದ್ಧ ತೊಡೆ ತಟ್ಟುವುದರಲ್ಲಿ ಎರಡು ಮಾತಿಲ್ಲ. ಜಿಲ್ಲೆಯಲ್ಲಿ ಅವರಷ್ಟು ಪಕ್ಷಾಂತರ ರಾಜಕಾರಣ ಮಾಡಿದವರು ಮತ್ತೊಬ್ಬರಿಲ್ಲ ಎನ್ನುತ್ತಾರೆ ಸ್ಥಳೀಯ ರಾಜಕಾರಣಿಗಳು.

ಕೋಲಾರ ಮೀಸಲು ಲೋಕಸಭಾ ಕ್ಷೇತ್ರ

ಯಾರೇ ಸ್ಪರ್ಧಿಸಿದರೂ ಒಳೇಟು?

• ಕೆ.ಓಂಕಾರ ಮೂರ್ತಿ

ಕೋಲಾರ: ಕೋಲಾರ ಮೀಸಲು ಲೋಕಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್‌ನಲ್ಲಿನ ಸದ್ಯದ ಒಳಬೇಗುದಿ ಗಮನಿಸಿದರೆ ಅಭ್ಯರ್ಥಿಯಾಗಿ ಸ್ಥಳೀಯರೋ, ಹೊರಗಿನವರೋ, ಮೂರನೇ ವ್ಯಕ್ತಿಯೋ, ಕುಟುಂಬದವರೂ ಯಾರೇ ಸ್ಪರ್ಧಿಸಿದರೂ ಒಳೇಟು ಗ್ಯಾರಂಟಿ ಎಂಬಂಥ ಪರಿಸ್ಥಿತಿ ನೆಲೆಸಿದೆ.

2019ರ ಲೋಕಸಭೆ ಚುನಾವಣೆಯಲ್ಲಿನ ವಾತಾವರಣ ಮರುಕಳಿಸುವ ಆತಂಕದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿದ್ದಾರೆ. ಕಾಂಗ್ರೆಸ್‌ನ ಸಾಂಪ್ರದಾಯಿಕ ಮತದಾರರನ್ನು ಮಾತನಾಡಿಸಿದರೂ ಅದೇ ಕಳವಳ ವ್ಯಕ್ತಪಡಿಸುತ್ತಿದ್ದಾರೆ.

ಜಿಲ್ಲಾ ಕಾಂಗ್ರೆಸ್‌ನಲ್ಲಿ ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಹಾಗೂ ಸಚಿವ ಕೆ.ಎಚ್‌.ಮುನಿಯಪ್ಪ ಬಣಗಳ ಕಿತ್ತಾಟ, ಎಡ–ಬಲ ಸಮುದಾಯದ ಗೊಂದಲ, ಮುಖಂಡರ ನಡುವಿನ ಅಸಹನೆ, ವೈಮನಸ್ಯ ಪಕ್ಷದ ವಿಶ್ವಾಸವನ್ನೇ ಕಿತ್ತುಕೊಂಡಿರುವಂತಿದೆ. ಅದಕ್ಕೆ ಕ್ಷೇತ್ರದ ಕೆಲ ಶಾಸಕರ ರಾಜೀನಾಮೆ ಪ್ರಹಸನ ಹಾಗೂ ಪರಸ್ಪರ ಮಾತಿನ ವಾಗ್ದಾಳಿ ಹೊಸದಾಗಿ ಸೇರ್ಪಡೆಯಾಗಿದೆ.

1991ರಿಂದ ಸತತ ಏಳು ಬಾರಿ ಗೆದ್ದಿದ್ದ ಕೆ.ಎಚ್‌.ಮುನಿಯಪ್ಪ, ಕಳೆದ ಚುನಾವಣೆಯಲ್ಲಿ 2 ಲಕ್ಷ ಮತಗಳಿಂದ ಬಿಜೆಪಿಯ ಎಸ್‌.ಮುನಿಸ್ವಾಮಿ ಎದುರು ಪರಾಭವಗೊಳ್ಳಲು ಪಕ್ಷದೊಳಗಿನ ಒಳೇಟು ಕಾರಣ ಎಂಬುದು ಜಗಜ್ಜಾಹೀರಾಗಿತ್ತು.

ಮತ್ತೆ ಖರ್ಗೆ ಅಂಗಳಕ್ಕೆ ಚೆಂಡು!

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಮೇಶ್ ಕುಮಾರ್ ಬಣದವರನ್ನು ಈಗಾಗಲೇ ಸಮಾಧಾನಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೆ.ಎಚ್‌.ಮುನಿಯಪ್ಪ ಕುಟುಂಬ ಹೊರತುಪಡಿಸಿ ಯಾರಿಗೇ ಟಿಕೆಟ್ ನೀಡಿದರೂ ಗೆಲ್ಲಿಸಿಕೊಂಡು ಬರುವ ಭರವಸೆಯನ್ನೂ ಈ ಬಣದ ಶಾಸಕರು ನೀಡಿದ್ದಾರೆ. ಆದರೆ, ಅಳಿಯ ಚಿಕ್ಕಪೆದ್ದಣ್ಣ ಅವರಿಗೆ ಟಿಕೆಟ್ ಬೇಕೆಂದು ಪಟ್ಟು ಹಿಡಿದಿರುವ ಕೆ.ಎಚ್‌.ಮುನಿಯಪ್ಪ ಅವರನ್ನು ಸಮಾಧಾನಪಡಿಸಲು ಸಿಎಂ, ಡಿಸಿಎಂಗೆ ಸಾಧ್ಯವಾಗಿಲ್ಲ. ಆ ಕೆಲಸವನ್ನು ಅವರು ಎಐಸಿಸಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬಿಟ್ಟಿದ್ದಾರೆ ಎಂಬುದು ಗೊತ್ತಾಗಿದೆ.

ರಮೇಶ್‌ಕುಮಾರ್

ಮುನಿಯಪ್ಪ

ಆ ಚುನಾವಣೆಯಲ್ಲಿ ಡಾ.ಎಂ.ಸಿ.ಸುಧಾಕರ್, ಕೊತ್ತೂರು ಮಂಜುನಾಥ್ ಸೇರಿದಂತೆ ರಮೇಶ್ ಕುಮಾರ್ ಬಣದಲ್ಲಿ ಗುರುತಿಸಿಕೊಂಡಿದ್ದ ಹಲವರು ಬಹಿರಂಗವಾಗಿ ಮುನಿಯಪ್ಪ ವಿರುದ್ಧ ಕೆಲಸ ಮಾಡಿದ್ದರು. 'ಮುನಿಸ್ವಾಮಿ ಗೆಲ್ಲಿಸಲು ನಾನು ಕೆಲಸ ಮಾಡಿದೆ' ಎಂದು ಶಾಸಕ ಕೊತ್ತೂರು ಮಂಜುನಾಥ್ ಈಗಲೂ ಹೇಳುತ್ತಿರುತ್ತಾರೆ.

ಟಿಕೆಟ್ ವಿಚಾರದಲ್ಲಿನ ಪ್ರಹಸನ ಮತ್ತೊಂದು ಸೋಲಿಗೆ ಮುನ್ನುಡಿ ಬರೆಯುವ ಲಕ್ಷಣಗಳನ್ನು ತೋರಿಸುತ್ತಿದೆ. ಜೆಡಿಎಸ್–ಬಿಜೆಪಿ ಮೈತ್ರಿಕೂಟದವರು 'ಈ ಬಾರಿಯೂ ಗೆಲುವು ನಮ್ಮದೇ' ಎಂದು ಬೀಗುವ ಹಂತಕ್ಕೆ ತಲುಪಿದ್ದಾರೆ.

ಇತ್ತ ಕ್ಷೇತ್ರದಲ್ಲಿ ರಮೇಶ್ ಕುಮಾರ್ ಬಣದ ವಿರೋಧ ಇದ್ದರೂ ಟಿಕೆಟ್ ಕೊಟ್ಟರೆ ತಮ್ಮ ಅಳಿಯ ಕೆ.ಜಿ.ಚಿಕ್ಕಪೆದ್ದಣ್ಣ ಅವರನ್ನು ಗೆಲ್ಲಿಸಿಕೊಂಡು ಬರುವ ಮಾತನ್ನು ಆಪ್ತರ ಬಳಿ ಕೆ.ಎಚ್‌.ಮುನಿಯಪ್ಪ ಹೇಳುತ್ತಲೇ ಇದ್ದಾರೆ.

ಮುನಿಯಪ್ಪ ಆಪ್ತರು ಹೇಳುವಂತೆ, ಕ್ಷೇತ್ರದಲ್ಲಿ ರಮೇಶ್ ಕುಮಾರ್ ಬಣದವರ ಬೆಂಬಲವೇ ಬೇಕಿಲ್ಲ. ಆದರೆ, ಅವರು ಮೌನವಾಗಿದ್ದರೆ ಸಾಕು. ಅಳಿಯನನ್ನು ಗೆಲ್ಲಿಸಿಕೊಂಡು ಬರಲು ಮುನಿಯಪ್ಪ ಸಿದ್ಧರಿದ್ದರಿದ್ದರಂತೆ.

ಇಷ್ಟಾದರೂ ಬಣಗಳನ್ನು ಒಂದಾಗಿಸಲು ಪ್ರಯತ್ನಗಳು ನಡೆಯುತ್ತಿಲ್ಲ. ಏಕೆಂದರೆ ಬಣಗಳ ಜಗಳ ನಿನ್ನೆ ಮೊನ್ನೆಯದಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೋಲಾರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಲು ಮುಂದಾಗಿದ್ದ ಸಿದ್ದರಾಮಯ್ಯ, ಇಲ್ಲಿನ ಬಣ ರಾಜಕೀಯ ಕಂಡು ಜಾಗ ಖಾಲಿ ಮಾಡಿದ್ದರು.

ಬೆಂ.ದಕ್ಷಿಣ ಪಕ್ಷೇತರಾಗಿ ಇಬ್ಬರು ಸ್ಪರ್ಧೆ

ಬೆಂಗಳೂರು: ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘಟನೆ ಅಧ್ಯಕ್ಷ ಕಾಂತಕುಮಾರ್ ಹಾಗೂ ಲ್ಯಾಪರೊಸ್ಕೋಪಿಕ್ (ಉದರ ದರ್ಶಕ) ಶಸ್ತ್ರಚಿಕಿತ್ಸಕ ಡಾ. ಹರೀಶ್ ಗೌಡ ಸ್ವತಂತ್ರವಾಗಿ ಸ್ಪರ್ಧಿಸಿದ್ದಾರೆ.

ಕಾಂತಕುಮಾರ್ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ, ಚುನಾವಣೆ ಪ್ರಣಾಳಿಕೆ ಬಿಡುಗಡೆ ಮಾಡಿದರು. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಅವರು, ಟಿಕೆಟ್ ಕೈತಪ್ಪಿದ್ದರಿಂದ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ತಿಳಿಸಿದರು.

ಡಾ. ಹರೀಶ್ ಗೌಡ ಬಸವನಗುಡಿಯಲ್ಲಿನ ಎಚ್‌ಐಎಂಎಎಸ್ (ಹಿಮಾಸ್) ಆಸ್ಪತ್ರೆಯ ಸ್ಥಾಪಕರಾಗಿದ್ದು, ಅಲ್ಲಿ ಮುಖ್ಯ ಶಸ್ತ್ರಚಿಕಿತ್ಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಸ್ವತಂತ್ರ ಅಭ್ಯರ್ಥಿಯಾಗಿ ಗುರುವಾರ ತಮ್ಮ ನಾಮಪತ್ರ ಸಲ್ಲಿಸಿದ್ದಾರೆ.

ಬದುಕು ಸೈಕಲ್ ಗಾಡಿ...

ಜನರ ಸವಿ ನಿದ್ದೆಗೆ ಕಾರಣವಾಗುವ ಹಾಸಿಗೆಗಳನ್ನು ಮಾರಾಟಗಾರರೊಬ್ಬರು ಉರಿಬಿಸಿಲಿನಲ್ಲಿ ಸೈಕಲ್ ಮೇಲೆ ಕೊಂಡೊಯ್ಯುತ್ತಿದ್ದ ದೃಶ್ಯ ನಗರದ ಬಿಟಿಎಂ ಲೇಔಟ್‌ನ 6ನೇ ಹಂತದ ಎಂ.ವಿಶ್ವೇಶ್ವರಯ್ಯ ರಸ್ತೆಯಲ್ಲಿ ಕ್ಯಾಮೆರಾ ಕಣ್ಣಲ್ಲಿ ಸೆರೆಯಾಯಿತು

–ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

'ಒತ್ತಡದ ನಡುವೆ ಆರೋಗ್ಯ ಕಾಪಾಡಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಮಹಿಳೆಯರು ಕುಟುಂಬದ ಆರ್ಥಿಕ ಹೊರೆ ಕಡಿಮೆ ಮಾಡಲು ಹೊರಗಡೆ ದುಡಿಯುತ್ತಾರೆ. ಆದರೆ ಒತ್ತಡಗಳ ಮಧ್ಯೆ ಆರೋಗ್ಯವನ್ನು ಸಹ ಕಾಪಾಡಿಕೊಳ್ಳಬೇಕು' ಎಂದು ವೈದ್ಯೆ ಸುಜಾತಾ ತಿಳಿಸಿದರು.

ಭುವನೇಶ್ವರಿ ನಗರದ ಕಾಯಕಯೋಗಿ ಸಹಕಾರ ಸಂಘದ ಕಚೇರಿ ಹತ್ತಿರ ಅಕ್ಕಮಹಾದೇವಿ ಮಹಿಳಾ ಸಂಘ ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಆದರ್ಶ ಮಹಿಳಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಸೂರಜ್ ಫೌಂಡೇಶನ್ ಅಧ್ಯಕ್ಷೆ ಸುಜಾತಾ ಮುನಿರಾಜು ಮಾತನಾಡಿ, ಮಹಿಳೆಯರು ಸಹ ಧೈರ್ಯವಂತರಾಗಿ ಸಮಾಜದಲ್ಲಿ ಪುರುಷರಂತೆ ದುಡಿದು ಕುಟುಂಬ ನಿರ್ವಹಣೆ ಮಾಡುತ್ತಾಳೆ. ಅಂತಹ ಮಹಿಳೆಯನ್ನು ಗೌರವದಿಂದ ಕಾಣಬೇಕು ಎಂದರು.

ಅಕ್ಕಮಹಾದೇವಿ ಮಹಿಳಾ ಸಂಘದ ಅಧ್ಯಕ್ಷೆ ಎಚ್‌.ಸುಜಾತ ಮೇಲೇಗೌಡ ಮಾತನಾಡಿ, ಪ್ರತಿ ವರ್ಷ ಸಾಧನೆ ಮಾಡಿದ ಮಹಿಳೆಯರನ್ನು ಗುರುತಿಸಿ ಅವರನ್ನು ಅಭಿನಂದಿಸುತಿದ್ದೇವೆ. ಇನ್ನು ಹೆಚ್ಚು ಸಾಧನೆ ಮಾಡಲು ಇತರರಿಗೆ ಮಾದರಿಯಾಗಬೇಕು ಎಂದರು.

ಕದಳಿ ಮಹಿಳಾ ವೇದಿಕೆ ರಾಜ್ಯ ಸಂಚಾಲಕಿ ಪ್ರೇಮಾ ಸೋಮಸುಂದರ್ ಮಾತನಾಡಿದರು. ಶಾರದಾ ಬಸವರಾಜಣ್ಣ, ನಿರ್ಮಲಾ ಶಿವಕುಮಾರ್, ಕುಸುಮಾ ಬಸವರಾಜು, ಶಿಲ್ಪಾ ಮೇಡೆಗಾರ್, ಲತಾ ಕುಂದರಗಿ, ರಾಧಿಕಾ ಮಹೇಶ್, ಸವಿತಾ ಸುರೇಶ್, ಬಸವರಾಜಣ್ಣ, ಮೇಲೇಗೌಡ ಮುಂತಾದವರಿದ್ದರು.

ಸಮಾರಂಭದಲ್ಲಿ ಕದಳಿ ಮಹಿಳಾ ವೇದಿಕೆ ರಾಜ್ಯ ಸಂಚಾಲಕಿ ಪ್ರೇಮಾ ಸೋಮಸುಂದರ್ ಅವರಿಗೆ ಆದರ್ಶ ಮಹಿಳಾ ಪ್ರಶಸ್ತಿ ಪ್ರದಾನ ಮಾಡಲಾಯಿತು

ಜ್ಯೋತಿಷಿ ಹೆಸರಿನಲ್ಲಿ ಬ್ಲ್ಯಾಕ್ ಮೇಲ್: ಆತ್ಮಹತ್ಯೆ

ಕನಕಪುರ: ತಾಲ್ಲೂಕಿನ ಟಿ.ಬೇಕುಪ್ಪೆ ಅರ್ಕಾವತಿ ಸೇತುವೆಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ ಮುತ್ತುರಾಜು ಪ್ರಕರಣದಲ್ಲಿ ಬ್ಲ್ಯಾಕ್ ಮೇಲ್ ಮಾಡಿದ್ದ ಆರೋಪಿಯನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ತನ್ನ ಫೇಸ್‌ಬುಕ್ ಅಕೌಂಟ್‌ನಲ್ಲಿ ತಾನು ಜ್ಯೋತಿಷಿ ಎಂಬುದಾಗಿ ನಂಬಿಸಿದ್ದ ವಿಷ್ಣು (22) ಬಂಧಿತ ಆರೋಪಿ. ಈತ ಬಾಗಲಕೋಟೆಯವನಾಗಿದ್ದು, ಬೆಂಗಳೂರಿನ ಬಸವೇಶ್ವರ ಕಾಲೇಜಿನ ವಿದ್ಯಾರ್ಥಿ. ಈತನನ್ನು ಪತ್ತೆ ಹಚ್ಚಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿಯೊಬ್ಬರ ಬ್ಲ್ಯಾಕ್‌ಮೇಲ್‌ನಿಂದಾಗಿ ತನ್ನ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮುತ್ತುರಾಜು ಅವರ ಪತ್ನಿ ಶಿಲ್ಪಾ ಪೊಲೀಸರಿಗೆ ದೂರು ನೀಡಿದ್ದರು.

ಜನಪದ ಕಲಾವಿದರಾದ, ವೆಂಕಟಮ್ಮ, ಪಿಳ್ಳ ಮುನಿಯಮ್ಮ, ಗೌರಮ್ಮ, ಶಿವಣ್ಣ ಅವರನ್ನು ಡಾ.ಎಸ್‌.ಬಾಲಾಜಿ ಸನ್ಮಾನಿಸಿದರು

'ನೆಲದ ಸಂಸ್ಕೃತಿ ಉಳಿಸಿ–ಬೆಳೆಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ನಾಡಿನ ನೆಲದ ಸಂಸ್ಕೃತಿ ಹಾಗೂ ಜನಪದ ಕಲೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಬೇಕು' ಎಂದು ಕನ್ನಡ ಜಾನಪದ ಪರಿಷತ್ ರಾಜ್ಯ ಅಧ್ಯಕ್ಷ ಡಾ.ಎಸ್.ಬಾಲಾಜಿ ಹೇಳಿದರು.

ಜಾನಪದ ಪರಿಷತ್‌ನ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದರು.

'ಪಾಶ್ಚಿಮಾತ್ಯ ಸಾಂಸ್ಕೃತಿಕ ಪ್ರಭಾವದಿಂದ ಹಿರಿಯರು ಉಳಿಸಿಕೊಂಡು ಬಂದಿರುವ ಜನಪದ ಕಲೆ ನಶಿಸಿ ಹೋಗುತ್ತಿದೆ. ಇದು ಆಗಬಾರದು. ಇದನ್ನು ಉಳಿಸಿಕೊಂಡು ಹೋಗಬೇಕು. ಗ್ರಾಮೀಣ ಸೊಗಡು ಜನಪದ ಕಲೆ ಹಳ್ಳಿಗಳಲ್ಲಿ ಜೀವಂತವಾಗಿದೆ. ನಗರದಲ್ಲಿ ಕಣ್ಮರೆಯಾಗುತ್ತಿದೆ. ಜನಪದ ಕಲೆಯನ್ನು ಉಳಿಸುವ ಅಭಿಯಾನ ಮತ್ತು ಅರಿವು ಜಾಗೃತಿ ಕಾರ್ಯಕ್ರಮಗಳು ಹೆಚ್ಚಾಗಿ ಹಮ್ಮಿಕೊಳ್ಳಬೇಕು' ಎಂದು ಹೇಳಿದರು.

ಸಮಾರಂಭದಲ್ಲಿ ಹಿರಿಯ ಜಾನಪದ ಕಲಾವಿದರಾದ ವೆಂಕಟಮ್ಮ, ಪಿಳ್ಳ ಮುನಿಯಮ್ಮ, ಗೌರಮ್ಮ, ಶಿವಣ್ಣ ಅವರನ್ನು ಸನ್ಮಾನಿಸಲಾಯಿತು.

ಮೆಟ್ರೊ ಕಾಮಗಾರಿಗಾಗಿ ಐದು ವರ್ಷಗಳಿಂದ ಮುಚ್ಚಲಾಗಿರುವ ರಸ್ತೆ

ಕಾಮರಾಜ ರಸ್ತೆ: ಶೀಘ್ರ ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದ ಕಾಮಗಾರಿ ಸಂಬಂಧ ಐದು ವರ್ಷಗಳ ಹಿಂದೆ ಮುಚ್ಚಲಾಗಿದ್ದ ಕಾಮರಾಜ ರಸ್ತೆ ಏಪ್ರಿಲ್ ಅಂತ್ಯದ ಒಳಗೆ ವಾಹನ ಸಂಚಾರಕ್ಕೆ ಮುಕ್ತಗೊಳ್ಳಲಿದೆ.

ನಾಗವಾರ–ಕಾಳೇನ ಅಗ್ರಹಾರ ಮೆಟ್ರೊ ಮಾರ್ಗದಲ್ಲಿ ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ ಅಂತರ್‌ಬದಲಾವಣೆಯ (ಇಂಟರ್‌ಚೇಂಜ್) ಎಂ.ಜಿ. ರಸ್ತೆ ಮೆಟ್ರೊ ಭೂಗತ ನಿಲ್ದಾಣ ನಿರ್ಮಿಸಲು ಕಾಮರಾಜ ರಸ್ತೆಯನ್ನು 2019ರಲ್ಲಿ ಬಿಎಂಆರ್‌ಸಿಎಲ್ ಮುಚ್ಚಿತ್ತು. ಆದರೆ, ಭೂಮಿ ಹಸ್ತಾಂತರ, ಮರಗಳ ತೆರವು ಪ್ರಕ್ರಿಯೆ ವಿಳಂಬವಾಗಿದ್ದರಿಂದ ಕಾಮಗಾರಿ ತುಂಬಾ ನಿಧಾನವಾಗಿ ಸಾಗಿತ್ತು. ಮಧ್ಯೆ ಕೋವಿಡ್ ಬಿಕ್ಕಟ್ಟು ಕೂಡಾ ವಿಳಂಬಕ್ಕೆ ಕಾರಣವಾಯಿತು.

ಕಾಮರಾಜ ರಸ್ತೆ ಮುಚ್ಚಿದ್ದರಿಂದ, ಈ ರಸ್ತೆ ಮೂಲಕ ಬ್ರಿಗೇಡ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಮತ್ತು ಇತರ ಸ್ಥಳಗಳನ್ನು ತಲುಪಲು ವಾಹನ ಸವಾರರು ಸುತ್ತು ಹಾಕಿಕೊಂಡು ಬರುವಂತಾಯಿತು. ಕಾಮರಾಜ ರಸ್ತೆ ಸಂಚಾರ ಮುಕ್ತಗೊಳ್ಳಬೇಕೆಂದು ಹಲವು ಮಂದಿ ಕಾಯುತ್ತಿದ್ದರು.

ಈಗ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಕಾಮರಾಜ ರಸ್ತೆಯ ಒಂದು ಬದಿಯಿಂದ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಯಾವುದೇ ಸಮಸ್ಯೆ ಇಲ್ಲ. ಏಪ್ರಿಲ್ ಅಂತ್ಯದ ಒಳಗೆ ರಸ್ತೆಯ ಒಂದು ಬದಿಯಿಂದ ವಾಹನ ಸಂಚಾರ ಆರಂಭವಾಗಲಿದೆ. ಯಂತ್ರೋಪಕರಣಗಳ ಸಾಗಾಟಕ್ಕಾಗಿ ಇನ್ನೊಂದು ಬದಿಯ ರಸ್ತೆ ಬಳಕೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ಅತಿ ಉದ್ದದ ಭೂಗತ ಹಳಿಯನ್ನು ಹೊಂದಿರುವ ಮೆಟ್ರೊ ಗುಲಾಬಿ ಮಾರ್ಗದ ಸುರಂಗ ಮಾರ್ಗದಲ್ಲಿ ರೈಲು ಸಂಚರಿಸುವಾಗ ಉಂಟಾಗುವ ಕಂಪನವನ್ನು ತಗ್ಗಿಸಲು ಮಾಸ್ ಸ್ಪ್ರಿಂಗ್ ಸಿಸ್ಟಂ (ಎಂಎಸ್‌ಎಸ್) ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ. ಕಾಮರಾಜ ರಸ್ತೆ ಮೆಟ್ರೊ ನಿಲ್ದಾಣವು ನಾಲ್ಕು ಪ್ರವೇಶ–ನಿರ್ಗಮನ ದ್ವಾರಗಳನ್ನು ಹೊಂದಿರುತ್ತದೆ. ಈಗಾಗಲೇ ನೇರಳೆ ಮಾರ್ಗದಲ್ಲಿ ಇರುವ ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣಕ್ಕೆ ಹೊಸ ನಿಲ್ದಾಣದ ಒಂದು ದ್ವಾರ ಸಂಪರ್ಕಿಸಲಿದೆ ಎಂದು ಮೆಟ್ರೊ ಸಾರ್ವಜನಿಕ ಸಂಪರ್ಕಾಧಿಕಾರಿ ವಿವರಿಸಿದ್ದಾರೆ.

ಮೆಟ್ರೊ ಕಾಮಗಾರಿಗಾಗಿ ಮುಚ್ಚಲಾಗಿರುವ ಕಾಮರಾಜ ರಸ್ತೆ

ಕೊನೆ ಸುರಂಗ ಕೊರೆಯಲು ಬಾಕಿ

ಗುಲಾಬಿ ಮಾರ್ಗದಲ್ಲಿ ಕೊರೆಯಬೇಕಿರುವ ಕೊನೆಯ ಸುರಂಗಕ್ಕೆ ಏಪ್ರಿಲ್ ಮೊದಲ ವಾರದಲ್ಲಿ ಚಾಲನೆ ದೊರೆಯಲಿದೆ. ಜುಲೈ ಅಥವಾ ಆಗಸ್ಟ್‌ಗೆ ಈ ಯಂತ್ರಗಳು ಸುರಂಗ ಕೊರೆದು ಹೊರಬರಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೊರೆಯುವ ಕೆಲಸ ಮುಗಿದಿರುವ ಸುರಂಗಗಳಲ್ಲಿ ಟ್ರ್ಯಾಕ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿಗಳು ನಡೆಯುತ್ತಿವೆ. 2025ರ ಡಿಸೆಂಬರ್ ಅಂತ್ಯದ ಒಳಗೆ ಗುಲಾಬಿ ಮಾರ್ಗದಲ್ಲಿ ರೈಲು ಕಾರ್ಯಾಚರಣೆ ಪ್ರಾರಂಭವಾಗುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಮನಸ್ಸೇ ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸದ ವಿನಾ ಇನ್ನಾವುದೂ ಸರಿಯಾಗಲಾರದು.

–ಡಿ.ವಿ.ಜಿ.

ಭಾರತದಲ್ಲಿ ತೀವ್ರ ನಿರುದ್ಯೋಗ ಸರ್ಕಾರ ಎಚ್ಚರಗೊಳ್ಳಲು ಸಕಾಲ

ಭಾರತದಲ್ಲಿ ನಿರುದ್ಯೋಗ ಸಮಸ್ಯೆಯು ಗಂಭೀರವಾಗಿಯೇ ಇದೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯು (ಐಎಲ್‌ಒ) ಇತ್ತೀಚೆಗೆ ಬಿಡುಗಡೆ ಮಾಡಿದ 'ಭಾರತದ ಉದ್ಯೋಗ ಸ್ಥಿತಿಯ ವರದಿ' ಹೇಳಿದೆ. ನಿರುದ್ಯೋಗಿಗಳ ಪೈಕಿ ಶೇಕಡ 83ರಷ್ಟು ಯುವಜನರೇ ಇದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ. ಪ್ರೌಢಶಿಕ್ಷಣ ಪಡೆದ ನಿರುದ್ಯೋಗಿ ಯುವಜನರ ಪ್ರಮಾಣವು 2000ನೇ ಇಸವಿಯಲ್ಲಿ ಶೇ 35.2ರಷ್ಟು ಇತ್ತು; ಈ ಪ್ರಮಾಣವು 2022ರಲ್ಲಿ ಶೇ 65.7ರಷ್ಟಕ್ಕೆ ಏರಿಕೆಯಾಗಿದೆ. ಕಾರ್ಮಿಕ ವರ್ಗದ ಭಾಗವಹಿಸುವಿಕೆ ದರ (ಎಲ್‌ಎಫ್‌ಪಿಆರ್), ಕಾರ್ಮಿಕ–ಜನಸಂಖ್ಯೆ ಅನುಪಾತವು 2000ನೇ ಇಸವಿಯಿಂದ 2018ರವರೆಗಿನ ದೀರ್ಘಾವಧಿಯಲ್ಲಿ ಕುಸಿಯುತ್ತಲೇ ಸಾಗಿತ್ತು. 2019ರ ಬಳಿಕ ಈ ಅಂಶಗಳಲ್ಲಿ ಅಲ್ಪ ಸುಧಾರಣೆ ಕಂಡಿದೆ. ಈ ಸುಧಾರಣೆಯನ್ನು ಕೂಡ ಹೆಚ್ಚು ಜಾಗರೂಕತೆಯಿಂದ ವ್ಯಾಖ್ಯಾನಿಸಬೇಕಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಏಕೆಂದರೆ, ಆರ್ಥಿಕತೆಯ ಬೆಳವಣಿಗೆ ದರವು ಅತ್ಯಂತ ಕಡಿಮೆ ಇದ್ದ ಅವಧಿಯಲ್ಲಿ ಈ ಸುಧಾರಣೆ ಕಂಡುಬಂದಿರುವುದು ಪ್ರಶ್ನೆ ಹುಟ್ಟುಹಾಕಿದೆ. ಕಾರ್ಮಿಕ ವರ್ಗದಲ್ಲಿ ಶೇ 90ರಷ್ಟು ಮಂದಿ ಅನೌಪಚಾರಿಕ ಕೆಲಸಗಳಲ್ಲಿ ಇದ್ದಾರೆ. ಕಾರ್ಮಿಕ ವರ್ಗದ ಭಾಗವಹಿಸುವಿಕೆ ದರವು ಇಂಡೊನೇಷ್ಯಾ ಮತ್ತು ವಿಯೆಟ್ನಾಂನಂತಹ ಅಭಿವೃದ್ಧಿಶೀಲ ದೇಶಗಳಿಗಿಂತಲೂ ಭಾರತದಲ್ಲಿ ಕಡಿಮೆ ಇದೆ. ಈ ದೇಶಗಳಲ್ಲಿ ಈ ದರವು ಶೇ 60ಕ್ಕಿಂತ ಹೆಚ್ಚು ಇದೆ. ಮಹಿಳೆಯರ ಭಾಗವಹಿಸುವಿಕೆ ದರವು 2022ರಲ್ಲಿ ಶೇ 32.8ರಷ್ಟು ಮಾತ್ರ ಇತ್ತು. ಇದು ಅತ್ಯಂತ ಕಳವಳಕಾರಿ. ಪುರುಷರ ಭಾಗವಹಿಸುವಿಕೆ ದರವು ಶೇ 77.2ರಷ್ಟಿದೆ. ಮಹಿಳೆಯರ ದರಕ್ಕೆ ಹೋಲಿಸಿದರೆ ಇದು 2.3 ಪಟ್ಟು ಹೆಚ್ಚು.

ದೇಶವು ಸಂಕಷ್ಟದ ಸ್ಥಿತಿಯಿಂದ ಹೊರಬರಲು ಉದ್ಯೋಗ ಸೃಷ್ಟಿ ಆಧಾರಿತ ಆರ್ಥಿಕ ಪ್ರಗತಿ ಕಾರ್ಯತಂತ್ರ, ಅದಕ್ಕೆ ಪೂರಕವಾದ ಶಿಕ್ಷಣ ವ್ಯವಸ್ಥೆ, ಸಾಮರಸ್ಯದ ಸಾಮಾಜಿಕ ಮತ್ತು ಆರ್ಥಿಕ ನೀತಿ ಅತ್ಯಗತ್ಯ

ವರದಿಯಲ್ಲಿ ಎಚ್ಚರಿಕೆಯ ಅಂಶಗಳು ಹಲವು ಇವೆ. 2010ರಿಂದ 2019ರ ನಡುವೆ ಉದ್ಯೋಗ, ಶಿಕ್ಷಣ ಅಥವಾ ತರಬೇತಿಯಲ್ಲಿ ತೊಡಗಿಕೊಂಡಿಲ್ಲದ ಯುವಜನರ ಪಾಲು ಸರಾಸರಿ ಶೇ 29.2ರಷ್ಟಿತ್ತು. ಇದು ದಕ್ಷಿಣ ಏಷ್ಯಾದಲ್ಲಿಯೇ ಅತಿ ಹೆಚ್ಚು. ಕುಶಲ ಕೆಲಸಗಳಿಗೆ ಉದ್ಯೋಗಿಗಳೇ ಸಿಗುತ್ತಿಲ್ಲ ಎಂಬ ದೂರು ಉದ್ಯಮ ವಲಯದಲ್ಲಿ ಸದಾ ಇದೆ. ಹಾಗಿದ್ದರೂ ನಿರುದ್ಯೋಗಿಗಳಲ್ಲಿ ಹೆಚ್ಚಿನವರು ವಿದ್ಯಾವಂತರೇ ಎಂಬುದು ವಿರೋಧಾಭಾಸಕರ. ನಮ್ಮ ಶಿಕ್ಷಣ ವ್ಯವಸ್ಥೆಯು ಉದ್ಯೋಗಗಳಿಗೆ ಬೇಕಾದ ಸಮರ್ಪಕ ತರಬೇತಿಯನ್ನು ನೀಡುತ್ತಿಲ್ಲ ಎಂಬುದು ಒಂದೆಡೆಯಾದರೆ, ಅರ್ಥವ್ಯವಸ್ಥೆಯು ಅಗತ್ಯ ಇರುವಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತಿಲ್ಲ ಎಂಬುದು ಇನ್ನೊಂದು ವಾಸ್ತವ. ಕೋವಿಡ್ ಸಾಂಕ್ರಾಮಿಕದ ಬಳಿಕ ಅರ್ಥವ್ಯವಸ್ಥೆಯು ಚೇತರಿಸಿಕೊಂಡಿದ್ದರೂ ಸೃಷ್ಟಿಯಾಗುತ್ತಿರುವ ಉದ್ಯೋಗದ ಸ್ವರೂಪವೇ ಬದಲಾಗಿದೆ. ಹಲವು ಮಂದಿ ಬೇಸಾಯ ಮಾಡಲು ಹಿಂದಿರುಗಿದ್ದಾರೆ. ಆದರೆ ಬೇಸಾಯವನ್ನು ಲಾಭದಾಯಕ ಎಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ. ಬಹಳ ಮಂದಿ, ಅದರಲ್ಲೂ ಮುಖ್ಯವಾಗಿ ಮಹಿಳೆಯರು ಸ್ವಉದ್ಯೋಗ ಕಂಡುಕೊಂಡಿದ್ದಾರೆ. ಆದರೆ ಅವು ಸುಸ್ಥಿರವಲ್ಲ ಮತ್ತು ವೈಫಲ್ಯದ ಭಯ ಸದಾ ಇರುತ್ತದೆ. ಬೇಸಾಯೇತರ ಉದ್ಯೋಗಗಳಲ್ಲಿ ಕುಸಿತ ಉಂಟಾಗಿದೆ. ಬಹಳ ಜನರಿಗೆ ಪೂರ್ಣಾವಧಿ ಕೆಲಸ ಇಲ್ಲದಿರುವುದು ಗಂಭೀರವಾದ ಸಮಸ್ಯೆಯಾಗಿದೆ.

ಜನಸಂಖ್ಯೆಯಲ್ಲಿ ಯುವಜನರ ಪಾಲು ಗಣನೀಯ ಎಂಬ ವಿಚಾರದಲ್ಲಿ ಭಾರತಕ್ಕೆ ಬಹುದೊಡ್ಡ ಹೆಮ್ಮೆ ಇದೆ. ದೊಡ್ಡ ಪ್ರಮಾಣದಲ್ಲಿ ಇರುವ ಯುವ ಸಮೂಹದ ಅನುಕೂಲವನ್ನು ಪಡೆದುಕೊಳ್ಳಬೇಕು ಎಂಬ ಬಯಕೆಯನ್ನೂ ದೇಶವು ಹೊಂದಿದೆ. ಆದರೆ ಜನಸಂಖ್ಯೆಯಲ್ಲಿ ಇರುವ ಯುವಜನರ ಪಾಲು ಕ್ರಮೇಣ ಕುಸಿಯಲಿದೆ. ಹಾಗಾಗಿ, ದೇಶದ ಪ್ರಗತಿಯಲ್ಲಿ ಈ ಯುವ ವರ್ಗದ ಅನುಕೂಲ ಪಡೆಯಬಹುದು ಎಂಬ ಅಂಶವೂ ಮರೆಯಾಗುತ್ತದೆ. ದೊಡ್ಡ ಮಟ್ಟದ ನಿರುದ್ಯೋಗವು ಸೃಷ್ಟಿಸುವ ಸಂಕಟ ಮತ್ತು ಅತೃಪ್ತಿಯು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಗಂಭೀರ ಪರಿಣಾಮಗಳನ್ನು ಉಂಟು ಮಾಡಬಲ್ಲದು. ಆರ್ಥಿಕ ಪ್ರಗತಿಯೊಂದೇ ಸಾಲದು. ಅಸಮಾನ ಪ್ರಗತಿ, ನಿರುದ್ಯೋಗ ಮತ್ತು ಹಣದುಬ್ಬರ ಒಟ್ಟಾಗಿ ಬಿಕ್ಕಟ್ಟು ಸೃಷ್ಟಿಸಬಲ್ಲವು. ಈಗ ಇರುವ ಸಂಕಷ್ಟದ ಸ್ಥಿತಿಯಿಂದ ದೇಶವು ಹೊರಗೆ ಬರಲು ಉದ್ಯೋಗ ಸೃಷ್ಟಿ ಆಧಾರಿತ ಆರ್ಥಿಕ ಪ್ರಗತಿ ಕಾರ್ಯತಂತ್ರ, ಅದಕ್ಕೆ ಪೂರಕವಾದ ಶಿಕ್ಷಣ ವ್ಯವಸ್ಥೆ, ಸಾಮರಸ್ಯದ ಸಾಮಾಜಿಕ ಮತ್ತು ಆರ್ಥಿಕ ನೀತಿಯು ಅತ್ಯಗತ್ಯ.

ದಿನದ ಟ್ವೀಟ್

ನಿರ್ಲಕ್ಷ್ಯದ ಫಲ

ನಾಡಪ್ರಭು ಕೆಂಪೇಗೌಡರಿಂದ ನಿರ್ಮಾಣಗೊಂಡ ಕೆರೆಗಳ ನಗರ ಬೆಂಗಳೂರು ಇಂದು ನೀರಿನ ಬಿಕ್ಕಟ್ಟನ್ನು ಎದುರಿಸುತ್ತಿದೆ. ವರ್ಷಗಳ ನಿರ್ಲಕ್ಷ್ಯ, ನಗರ ಯೋಜನೆಯಲ್ಲಿನ ಕೊರತೆಗಳು ಮತ್ತು ಅಧಿಕಾರಿಗಳ ಅದಕ್ಷತೆ ನಮ್ಮನ್ನು ಇಲ್ಲಿಗೆ ತಂದು ನಿಲ್ಲಿಸಿವೆ. ಆದರೆ ಬೆಂಗಳೂರು ನಮಗೆ ಸೇರಿದ್ದು. ಉತ್ತಮ ನಾಯಕತ್ವವನ್ನು ಪ್ರತಿಪಾದಿಸೋಣ ಮತ್ತು ನಮ್ಮ ಊರಿನ ಸುಸ್ಥಿರ ಭವಿಷ್ಯದ ದೃಷ್ಟಿಯಿಂದ ಕೆಲಸ ಮಾಡೋಣ...

ತೇಜಸ್ವಿ ಸೂರ್ಯ, ಬಿಜೆಪಿ ಸಂಸದ

ಕಿಡಿನುಡಿ

ಅಡುಗೆ ಮಾಡಿ ಕೈತುತ್ತು ಕೊಡುವ ಪ್ರೀತಿ ಅವರಿಗೆ ಗೊತ್ತಿಲ್ಲ. ಮಹಿಳೆ ಅಡುಗೆಯನ್ನೂ ಮಾಡುತ್ತಾಳೆ, ಆಕಾಶದಲ್ಲೂ ಹಾರಾಡುತ್ತಾಳೆ, ಸಮರ್ಥವಾಗಿ ಅಧಿಕಾರವನ್ನೂ ನಡೆಸುತ್ತಾಳೆ.

('ದಾವಣಗೆರೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯು ಬರೀ ಅಡುಗೆ ಮಾಡಲು ಲಾಯಕ್ಕು' ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಅವರು ಇತ್ತೀಚೆಗೆ ನೀಡಿದ್ದ ಹೇಳಿಕೆಗೆ ತಿರುಗೇಟು)

ಗಾಯತ್ರಿ ಸಿದ್ಧೇಶ್ವರ, ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

25 ವರ್ಷಗಳ ಹಿಂದೆ

ಮಂಗಳವಾರ, 30-3-1999

● **ಜಾರ್ಜ್ ಖಾತೆ ಬದಲಾವಣೆಗೆ ಜಯಲಲಿತಾ ಪಟ್ಟು**

ನವದೆಹಲಿ, ಮಾರ್ಚ್ 29 (ಯುಎನ್‌ಐ, ಪಿಟಿಐ)– ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರನ್ನು ಸಂಪುಟದಿಂದ ಕೈಬಿಡುವುದಿಲ್ಲ ಎಂದು ಪ್ರಧಾನಿ ಎ.ಬಿ. ವಾಜಪೇಯಿ ಅವರು ನಿನ್ನೆ ಖಡಾಖಂಡಿತವಾಗಿ ಘೋಷಿಸಿದ್ದರೂ, ರಾಷ್ಟ್ರದ ಭದ್ರತೆ ಹಾಗೂ ಸರ್ಕಾರದ ಹಿತದೃಷ್ಟಿಯಿಂದ ಜಾರ್ಜ್ ಅವರ ಖಾತೆ ಬದಲಾಯಿಸಬೇಕು ಎಂದು ಎಐಎಡಿಎಂಕೆ ನಾಯಕಿ ಜಯಲಲಿತಾ ಅವರು ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಮೇಲಿನ ತಮ್ಮ ಒತ್ತಡವನ್ನು ತೀವ್ರಗೊಳಿಸಿದ್ದಾರೆ.

ಇಂದು ಬೆಳಿಗ್ಗೆ ವಾಜಪೇಯಿ ಅವರೊಡನೆ ಜಯಲಲಿತಾ ಅವರು ಒಂದು ಗಂಟೆ ಕಾಲ ಮಾತುಕತೆ ನಡೆಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಈ ಬಹಿರಂಗ ಹೇಳಿಕೆ ನೀಡಿದ್ದು, ಜಾರ್ಜ್ ಫರ್ನಾಂಡಿಸ್ ಅವರಿಗೆ ಕಡಿಮೆ ಮಹತ್ವದ ಖಾತೆ ನೀಡುವಂತೆ ಆಗ್ರಹಿಸಿದ್ದಾರೆ.

● **ರೈತರಿಗೆ ಶಾಪವಾಗಿರುವ ಮಲಿನ ವೃಷಭಾವತಿ**

ಬೆಂಗಳೂರು, ಮಾರ್ಚ್ 29– ಒಂದು ಕಾಲಕ್ಕೆ ಜೀವವಾಹಿನಿಯಾಗಿ ರೈತರಿಗೆ ವರವಾಗಿದ್ದ ವೃಷಭಾವತಿ ನದಿ ಈಗ ಮಾಲಿನ್ಯದಿಂದ ಬಗ್ಗಡಗೊಂಡು ಅವರ ಪಾಲಿಗೆ ಶಾಪವಾಗಿ ಸಾವಿರಾರು ಎಕರೆ ಫಲವತ್ತಾದ ಜಮೀನು ಬಂಜರು ಭೂಮಿಯಾಗಿದೆ.

ಕನಕಪುರ, ರಾಮನಗರ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕುಗಳ ಅನೇಕ ಹಳ್ಳಿಗಳಿಗೆ 'ಪ್ರಜಾವಾಣಿ' ಇಂದು ಭೇಟಿ ನೀಡಿದಾಗ, ವೃಷಭಾವತಿ ನದಿ ನೀರನ್ನು ಬಳಸಿ ಭೂಮಿ ಮತ್ತು ಬೆಳೆಯನ್ನು ಹಾಳು ಮಾಡಿಕೊಂಡ ರೈತರು ತಮ್ಮ ಗೋಳನ್ನು ತೋಡಿಕೊಂಡು ಕಣ್ಣೀರಿಟ್ಟರು.

50 ವರ್ಷಗಳ ಹಿಂದೆ

ಶನಿವಾರ, 30-3-1974

● **ಅನಾಥಾಲಯದ ಹೆಸರಲ್ಲಿ ಲಕ್ಷಾಂತರ ರೂ. 'ಲೂಟಿ' ನಿಲ್ಲಿಸಲು ಉಗ್ರ ಕ್ರಮ**

ಬೆಂಗಳೂರು, ಮಾರ್ಚ್ 29– ರಾಜ್ಯದಲ್ಲಿರುವ ಸುಮಾರು 232 ಅನಾಥಾಲಯಗಳ ಹೆಸರಿನಲ್ಲಿ ಪ್ರತಿವರ್ಷ ಸರ್ಕಾರದ ಲಕ್ಷಾಂತರ ರೂಪಾಯಿ ಹಣ 'ಲೂಟಿ'ಯಾಗುತ್ತಿರುವ ಅನಾಥ ಪರಿಸ್ಥಿತಿಯನ್ನು ಕಳವಳದಿಂದ ಗಮನಿಸಿರುವ ಸರ್ಕಾರ, ಈ ಅಪವ್ಯಯ ತಪ್ಪಿಸಲು ಉಗ್ರ ಕ್ರಮಗಳನ್ನು ಕೈಗೊಳ್ಳಲಾರಂಭಿಸಿದೆ.

ಅನಾಥಾಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ, ಹೆಚ್ಚಿನ ಸುಳ್ಳು ಸಂಖ್ಯೆ ನೀಡಿ ಸರ್ಕಾರದಿಂದ ಹಣ ಪಡೆಯುವುದು, ಅನುಕೂಲಸ್ಥ ಹುಡುಗರಾಗಿದ್ದರೂ ಅವರು ನಿರ್ಗತಿಕರೆಂದು ಸರ್ಟಿಫಿಕೇಟ್ ಪಡೆಯುವುದು, ಜೊತೆಗೆ ವಿದ್ಯಾರ್ಥಿಗಳಿಂದಲೂ ಹಣ ವಸೂಲಿ ಮಾಡುವುದು, ಅನಾಥಾಲಯಗಳ ವ್ಯವಸ್ಥೆಯಲ್ಲಿ ಸರ್ಕಾರದ ಗಮನಕ್ಕೆ ಬಂದಿರುವ ಅವ್ಯವಹಾರಗಳಾಗಿವೆ.

● **ಅಡಿಗರ 'ವರ್ಧಮಾನ' ಅತ್ಯುತ್ತಮ ಗ್ರಂಥ: 3 ಸಾವಿರ ರೂ. ಬಹುಮಾನ**

ಬೆಂಗಳೂರು, ಮಾರ್ಚ್ 29– ಗೋಪಾಲಕೃಷ್ಣ ಅಡಿಗರು ಬರೆದ 'ವರ್ಧಮಾನ' ಎಂಬ ಕವನ ಸಂಗ್ರಹವನ್ನು 1972ನೇ ಸಾಲಿನ ಅತ್ಯುತ್ತಮ ಕನ್ನಡ ಗ್ರಂಥ ಎಂದು ತೀರ್ಮಾನಿಸಿ ರಾಜ್ಯದ ಸಾಹಿತ್ಯ ಅಕಾಡೆಮಿ ಮೂರು ಸಹಸ್ರ ರೂಪಾಯಿ ಬಹುಮಾನ ನೀಡಿದೆ.

ಎಲ್.ಎಸ್.ಶೇಷಗಿರಿರಾಯರ 'ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ'ಯು ವಿಮರ್ಶಾ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದಿದೆ.

ಮಾತಾಡದವ ಮೌನಿ, ಮಾತಾಡಲೇಬೇಕಾದಾಗ ಮಾತಾಡದವ ಮಹಾಮೌನಿ

ಮೌನಂ ಮೋದಿ ಲಕ್ಷಣಂ...



ಅನುಸಂಧಾನ

ರವೀಂದ್ರ ಭಟ್ಟ

ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಹಾವಾಚಾಳಿ. ಆಕರ್ಷಕ ಮಾತಿನ ಮೋಡಿಗಾರರೂ ಹೌದು. ವೇದಿಕೆಯ ಮೇಲೆ ಅವರು ಮಾತನಾಡುತ್ತಿದ್ದರೆ ತಲೆದೂಗುವ ಕೋಟ್ಯಂತರ ಜನರಿದ್ದಾರೆ. ಅವರು ದೂರದರ್ಶನದ ಮೂಲಕ ದೇಶವನ್ನು ಉದ್ದೇಶಿಸಿ ಮಾತನಾಡಿದಾಗ ಅದನ್ನು ಶ್ರದ್ಧೆಯಿಂದ ಆಲಿಸುವ ಮತ್ತು ಪಾಲಿಸುವ ಬಹಳಷ್ಟು ಮಂದಿ ಇದ್ದಾರೆ. ಅವರು 'ಕೈಮುಗಿಯಿರಿ' ಎಂದರೆ ಕೈಮುಗಿಯುತ್ತಾರೆ, 'ದೀಪ ಹಚ್ಚಿ' ಎಂದರೆ ದೀಪ ಹಚ್ಚುತ್ತಾರೆ, 'ಜಾಗಟೆ ಬಾರಿಸಿ' ಎಂದರೆ ಬಾರಿಸುತ್ತಾರೆ, 'ಕಸಬರಿಕೆ ಹಿಡಿಯಿರಿ' ಎಂದರೆ ಹಿಡಿದು ಕಸ ಗುಡಿಸುತ್ತಾರೆ.

ಆ ಮಟ್ಟಿಗೆ ಸದ್ಯಕ್ಕೆ ಭಾರತದಲ್ಲಿ ಅವರಷ್ಟು ಪ್ರಭಾವಿ ವಾಕ್ ಚತುರರು ಯಾರೂ ಇಲ್ಲ. ಅವರು 'ಮನ್ ಕಿ ಬಾತ್'ನಲ್ಲಿ ಮಾತನಾಡುತ್ತಾರೆ. ಸಾರ್ವಜನಿಕ ಸಮಾರಂಭಗಳಲ್ಲಿ ಗಂಟೆಗಟ್ಟಲೆ ಮಾತನಾಡುತ್ತಾರೆ. ಪರೀಕ್ಷೆ ಹತ್ತಿರ ಬಂದರೆ ಮಕ್ಕಳಿಗೆ ಟಿಪ್ಸ್ ನೀಡುತ್ತಾರೆ. ದೇಶದ ಯಾವುದೋ ಮೂಲೆಯಲ್ಲಿ ತಮ್ಮಷ್ಟಕ್ಕೆ ತಾವು ಕೆಲಸ ಮಾಡಿಕೊಂಡಿರುವ ವ್ಯಕ್ತಿಗಳನ್ನು ಗುರುತಿಸಿ ಅವರ ಸಾಧನೆಗಳ ಬಗ್ಗೆ ತಮ್ಮ ಭಾಷಣದಲ್ಲಿ ಉಲ್ಲೇಖಿಸುತ್ತಾರೆ. ಇಂತಿರ್ಪ ನರೇಂದ್ರ ಮೋದಿ ಅವರಿಗೆ ಒಂದು ಐಬೂ ಇದೆ. ಅವರು ಬಾಕಿ ಎಲ್ಲ ಸಂದರ್ಭಗಳಲ್ಲಿಯೂ ಹೆಚ್ಚೇ ಎನ್ನುವಷ್ಟು ಮಾತನಾಡುತ್ತಾರೆ. ಆದರೆ ಈ ದೇಶದ ಪ್ರಧಾನಿಯಾಗಿ ಮಾತನಾಡಲೇಬೇಕಾದ ಸಂದರ್ಭದಲ್ಲಿ ಮಾತ್ರ ಮೌನದ ಮೊರೆ ಹೋಗುತ್ತಾರೆ.

ಏಕಕಾಲಕ್ಕೆ ಮಹಾವಾಚಾಳಿಯೂ ಮಹಾಮೌನಿಯೂ ಆಗಿರುವ ವಿಚಿತ್ರ ವ್ಯಕ್ತಿತ್ವ ಅವರದ್ದು. 2014ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ನರೇಂದ್ರ ಮೋದಿ ಅವರು 'ಮೌನಮೋಹನ್ ಸಿಂಗ್' ಎಂದು ಲೇವಡಿ ಮಾಡಿದ್ದರು. ಮನಮೋಹನ್ ಸಿಂಗ್ ವಾಚಾಳಿ ಆಗಿರಲಿಲ್ಲ. ಆದರೆ ಮಾತನಾಡಬೇಕಾದ ಸಂದರ್ಭದಲ್ಲಿ ಮಾತನಾಡದೇ ಇರುತ್ತಿರಲಿಲ್ಲ. ಮನಮೋಹನ್ ಸಿಂಗ್ ಅವರೂ 10 ವರ್ಷ ಪ್ರಧಾನಿಯಾಗಿದ್ದರು. ನರೇಂದ್ರ ಮೋದಿ ಅವರೂ 10 ವರ್ಷ ಪ್ರಧಾನಿಯಾಗಿದ್ದಾರೆ. ಆದರೆ ಈ ಅವಧಿಯಲ್ಲಿ ಮೋದಿ ಒಮ್ಮೆಯೂ ಪತ್ರಿಕಾಗೋಷ್ಠಿ ನಡೆಸಲಿಲ್ಲ. ಅವರು ಸಂಸತ್ತಿನಲ್ಲಿ ಮಾತನಾಡಿದ್ದೂ ಕಡಿಮೆ. ಪ್ರಶ್ನೆಗೆ ಉತ್ತರಿಸಿದ್ದೂ ಅಷ್ಟಕ್ಕಷ್ಟೆ. ಅವರ ಮಾತು ಕೇಳಬೇಕು ಎಂದರೆ ಸಾರ್ವಜನಿಕ ಸಮಾರಂಭಕ್ಕೇ ಕಾಯಬೇಕು.

ಮಣಿಪುರದ ವಿಷಯವನ್ನೇ ತೆಗೆದುಕೊಳ್ಳಿ. ಅಲ್ಲಿ ಒಂದೂವರೆ ವರ್ಷದಿಂದ ಜನಾಂಗೀಯ ಗಲಭೆ ನಡೆಯುತ್ತಲೇ ಇದೆ. 60 ಸಾವಿರಕ್ಕೂ ಹೆಚ್ಚು ಜನ ನಿರಾಶ್ರಿತರಾಗಿದ್ದಾರೆ. 12 ಸಾವಿರಕ್ಕೂ ಹೆಚ್ಚು ಜನ ರಾಜ್ಯ ಬಿಟ್ಟು ಓಡಿಹೋಗಿದ್ದಾರೆ. 200ಕ್ಕೂ ಹೆಚ್ಚು ಮಂದಿಯ ಹತ್ಯೆಯಾಗಿದೆ. ದೇಶದ ಅತ್ಯಂತ ಪುಟ್ಟ ರಾಜ್ಯದಲ್ಲಿ ಇಷ್ಟೆಲ್ಲಾ ಹಿಂಸೆ ನಡೆಯುತ್ತಿದ್ದರೂ ಪ್ರಧಾನಿ ಮೋದಿ ಅವರದ್ದು ಮಾತಿಲ್ಲ, ಕತೆಯಿಲ್ಲ. 2001ರಲ್ಲಿ ಇಂತಹದೇ ಸ್ಥಿತಿ ಉಂಟಾದಾಗ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸರ್ವ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಿದ್ದರು. ಆದರೆ ಈಗ ಸಾಂತ್ವನದ ಮಾತಿಗೂ ಬರ. ಮಣಿಪುರ ಈಗಲೂ ಅವರ ಮಾತಿಗಾಗಿ ಕಾಯುತ್ತಲೇ ಇದೆ. ಸಾಂತ್ವನದ ನುಡಿಗಾಗಿ ಇಡೀ ಮಣಿಪುರದ ಜನ 'ಶಬರಿ'ಯರಾಗಿದ್ದಾರೆ.

ನರೇಂದ್ರ ಮೋದಿ ಅವರ ಮಹಾಮೌನಕ್ಕೆ ಮತ್ತೊಂದು ಉದಾಹರಣೆ ಎಂದರೆ ಕುಸ್ತಿಪಟುಗಳ ಪ್ರತಿಭಟನೆ. ಕುಸ್ತಿ ಫೆಡರೇಷನ್ ಅಧ್ಯಕ್ಷರಾಗಿದ್ದ, ಸಂಸದರೂ ಆದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ಕುಸ್ತಿಪಟುಗಳು ವರ್ಷಾನುಗಟ್ಟಲೆ ನಡೆಸಿದ ಪ್ರತಿಭಟನೆಗೂ ಅವರು ತುಟಿಪಿಟಿಕ್ಕೆನ್ನಲಿಲ್ಲ. ಒಲಿಂಪಿಕ್ಸ್ ಪದಕಗಳನ್ನು ವಾಪಸು ಮಾಡಿದಾಗಲೂ, ಪದಕ ವಿಜೇತರೆಲ್ಲ ಹಾದಿಬೀದಿಯಲ್ಲಿ ಮುಷ್ಕರಕ್ಕೆ ಇಳಿದಾಗಲೂ ಅವರಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಈಗಲೂ ಆ ಕಿಚ್ಚು ಕಡಿಮೆಯಾಗಿಲ್ಲ.

2017ರಿಂದ ರೈತರು ಈವರೆಗೆ 6 ಬಾರಿ ಭಾರಿ ಪ್ರತಿಭಟನೆ ನಡೆಸಿದ್ದಾರೆ. ಕನಿಷ್ಠ ಬೆಂಬಲ ಬೆಲೆ ಜಾರಿ, ಸ್ವಾಮಿನಾಥನ್ ಆಯೋಗದ ವರದಿ ಜಾರಿಗೆ ಅವರು ಒತ್ತಾಯಿಸುತ್ತಿದ್ದಾರೆ. ಈ ನಡುವೆ ಕೇಂದ್ರ ಸರ್ಕಾರ ಜಾರಿಗೆ ತಂದ ಮೂರು ಕೃಷಿ ಸುಧಾರಣಾ ಕಾಯ್ದೆಗಳನ್ನು ವಿರೋಧಿಸಿ ವರ್ಷಗಟ್ಟಲೆ ಪ್ರತಿಭಟನೆ ನಡೆಸಿದರು. ರೈತರ ಪ್ರತಿಭಟನೆಗೆ ಮಣಿದು ಕೇಂದ್ರ ಸರ್ಕಾರ ಕಾಯ್ದೆಗಳನ್ನು ವಾಪಸು ಪಡೆದುಕೊಂಡರೂ ನಮ್ಮ ಪ್ರಧಾನಿಯಿಂದ ಸಾಂತ್ವನದ ಮಾತು ಬರಲೇಇಲ್ಲ. ಕನಿಷ್ಠ ಬೆಂಬಲ ಬೆಲೆ ಗ್ಯಾರಂಟಿಗೆ ಒತ್ತಾಯಿಸಿ ಮತ್ತೆ ಪ್ರತಿಭಟನೆಗೆ ಇಳಿದಾಗಲೂ ಅವರಿಂದ ಪ್ರತಿಕ್ರಿಯೆ ಬರಲಿಲ್ಲ. ಚುನಾವಣೆ ಬಂದಿದ್ದರಿಂದ ರೈತರ ಪ್ರತಿಭಟನೆ ತಾತ್ಕಾಲಿಕವಾಗಿ ಸ್ಥಗಿತವಾಗಿದ್ದರೂ ಬೇಗುದಿ ಹಾಗೆಯೇ ಇದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅತ್ಯಂತ ಪ್ರಸಿದ್ಧ ಘೋಷಣೆ ಎಂದರೆ 'ನಾ ಖಾವೂಂಗಾ, ನಾ ಖಾನೆ ದೂಂಗಾ (ನಾನೂ ತಿನ್ನುವುದಿಲ್ಲ, ತಿನ್ನುವುದಕ್ಕೂ ಬಿಡುವುದಿಲ್ಲ)' ಎಂಬುದು. ದೇಶದ ಬೇರೆ ಬೇರೆ ಭಾಗಗಳಲ್ಲಿ ಭ್ರಷ್ಟರು ಎಂದು ಗುರುತಿಸಿಕೊಂಡವರು, ಇ.ಡಿ, ಸಿಬಿಐ, ಐ.ಟಿ ದಾಳಿಗೆ ಒಳಗಾದವರು ಒಬ್ಬರ ಹಿಂದೆ ಒಬ್ಬರಂತೆ ಬಿಜೆಪಿಯನ್ನು ಸೇರಿ ಪಕ್ಷವನ್ನು ಶ್ರೀಮಂತಗೊಳಿಸಿದಾಗಲೂ ಅವರದ್ದು ಮೌನ ಸಮ್ಮತಿ. 'ಬಿಜೆಪಿ ಈಗ ವಾಷಿಂಗ್ ಮಷೀನ್ ಆಗಿದೆ' ಎಂದು ಮಹಾರಾಷ್ಟ್ರದ ಮುಖಂಡ ಶರದ್ ಪವಾರ್ ಅವರು ಹೇಳಿದಾಗಲೂ ಉತ್ತರವೇನೂ ಬರಲಿಲ್ಲ.

ಕೇರಳ, ತಮಿಳುನಾಡು, ತೆಲಂಗಾಣ, ಪಂಜಾಬ್, ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ ರಾಜ್ಯಪಾಲರು ಅಲ್ಲಿನ ಸರ್ಕಾರಗಳಿಗೆ ದೈನಂದಿನ ಕೆಲಸ ಮಾಡುವುದಕ್ಕೂ ಬಿಡದೆ ಕಿರುಕುಳ ನೀಡುತ್ತಿದ್ದರೂ ಯಾವುದೇ ಕ್ರಮವಿಲ್ಲ. ಮಸೂದೆಗಳಿಗೆ ಸಹಿ ಹಾಕದೇ ಇರುವುದು, ವಿಧಾನಮಂಡಲ ಅಧಿವೇಶನದಲ್ಲಿ ಭಾಷಣ ಮಾಡದಿರುವುದು, ಸಚಿವರಿಗೆ ಪ್ರಮಾಣವಚನ ಬೋಧಿಸಲೂ ಹಿಂದೇಟು ಹಾಕುವ ರಾಜ್ಯಪಾಲರ ಕ್ರಮ ಕಣ್ಣಿಗೆ ಕಾಣುವುದೇ ಇಲ್ಲ. ಇವೆಲ್ಲ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಮಾತ್ರ ನಡೆಯುತ್ತವೆ. ರಾಜ್ಯಪಾಲರ ನಡೆ ಬಗ್ಗೆ ಸುಪ್ರೀಂ ಕೋರ್ಟ್ ಕಿಡಿಕಾರುತ್ತಾ ಬುದ್ಧಿ ಕಲಿಸುತ್ತಿದ್ದರೂ ಪ್ರಧಾನ ಮಂತ್ರಿಗಳಿಂದ ಪ್ರತಿಕ್ರಿಯೆ ಇಲ್ಲ. ದೆಹಲಿಯಲ್ಲಿಯೂ ಲೆಫ್ಟಿನೆಂಟ್ ಗವರ್ನರ್ ಅಲ್ಲಿನ ಚುನಾಯಿತ ಸರ್ಕಾರಕ್ಕೆ ಬಹಳಷ್ಟು ಅಡ್ಡಗಾಲು ಹಾಕಿದಾಗಲೂ ಅದನ್ನು ನಸುನಗುತ್ತಾ ವೀಕ್ಷಿಸಿದ್ದು ಬಿಟ್ಟರೆ ಹೆಚ್ಚಿನ ಪ್ರತಿಕ್ರಿಯೆ ಇಲ್ಲ.

ಉತ್ತರ ಕನ್ನಡ ಜಿಲ್ಲೆಯ ಲೋಕಸಭಾ ಸದಸ್ಯ ಅನಂತಕುಮಾರ ಹೆಗಡೆ ಅವರು 'ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನವನ್ನು ಬದಲಾಯಿಸಲು' ಎಂದು ಹೇಳಿಕೆ ನೀಡಿದರು. ಬಿಜೆಪಿಯ ಇನ್ನೂ ಕೆಲವರು ನಾಯಕರು ಇಂತಹ ಹೇಳಿಕೆಯನ್ನು ನೀಡಿದಾಗಲೂ ಅವರದ್ದು ಮಹಾಮೌನ. 'ಮೌನಂ ಸಮ್ಮತಿ ಲಕ್ಷಣಂ' ಎಂದು ಒಪ್ಪಿಕೊಳ್ಳಬೇಕೇ ಬೇಡವೇ ಎಂದು ಗೊತ್ತಾಗದ ಸ್ಥಿತಿ ಪ್ರಜೆಗಳದ್ದು.

2020ರಲ್ಲಿ ಕೊರೊನಾ ಓಡಿಸುವುದಕ್ಕಾಗಿ ದಿಢೀರ್ ಲಾಕ್‌ಡೌನ್ ಪ್ರಕಟಿಸಿದಾಗ ವಲಸೆ ಕಾರ್ಮಿಕರು ಚಿತ್ರಹಿಂಸೆ ಅನುಭವಿಸಿದರು. ನೂರಾರು ಕಿ.ಮೀ. ದೂರ ಕಾಲ್ನಡಿಗೆಯಲ್ಲಿಯೇ ತೆರಳಿದರು. ಹಲವಾರು ಮಂದಿ ನಡೆಯುತ್ತಾ ನಡೆಯುತ್ತಾ ಅಸುನೀಗಿದರು. ಗರ್ಭಿಣಿಯರು, ಬಾಣಂತಿಯರು, ವೃದ್ಧರು, ಮಕ್ಕಳು ಎಂಬ ಭೇದಭಾವ ಇಲ್ಲದೆ ಎಲ್ಲರೂ ದಿಕ್ಕಾಪಾಲಾದರು. ಅನ್ನ, ನೀರು ಸಿಗದೆ ಪರಿತಪಿಸಿದರು. ಆಗಲೂ ನಮ್ಮವರದ್ದು ಜಾಣ ಕುರುಡು, ಜಾಣ ಕಿವುಡು.

ಅರುಣಾಚಲ ಪ್ರದೇಶ ಕುರಿತಂತೆ ದೇಶದ ಗಡಿಯಲ್ಲಿ ಚೀನಾ ತಂಟೆ ನಡೆಸುತ್ತಲೇ ಇದೆ. ಸರ್ಜಿಕಲ್ ಸ್ಟ್ರೈಕ್ ಎಂಬುದು ಪಾಕಿಸ್ತಾನಿ ಉಗ್ರರಿಗಷ್ಟೇ ಸೀಮಿತವಾಗಿದೆ. ಚೀನಾ ತಂಟೆ ಬಗ್ಗೆ ನಮ್ಮವರದ್ದು ಮೌನವ್ರತ.

'ಮನಮೋಹನ್ ಸಿಂಗ್ ಅವರು ಹಣದುಬ್ಬರ, ಬೆಲೆ ಏರಿಕೆ, ನಿರುದ್ಯೋಗದ ಬಗ್ಗೆ ಮಾತೇ ಆಡುತ್ತಿಲ್ಲ' ಎಂದು ನರೇಂದ್ರ ಮೋದಿ ಅವರು 2014ರಲ್ಲಿ ಟೀಕಿಸಿದ್ದರು. ಈ ವಿಷಯಗಳ ಬಗ್ಗೆ ಈಗ ಮಾತನಾಡದಂತೆ ಮೋದಿ ಅವರನ್ನು ತಡೆದವರು ಯಾರು? ಮಾತನಾಡದೇ ಇರುವುದು ಮೌನವಲ್ಲ. ಮಾತನಾಡಲೇಬೇಕಾದ ಸಂದರ್ಭದಲ್ಲಿ ಮಾತನಾಡದಿರುವುದು ಮಹಾಮೌನ. ಈಗ ಬಂದಿದೆ ಮತದಾರರು ಮಾತನಾಡುವ ಸಮಯ.

ಚುರುಮುರಿ

ಬಿಲಿಯನೇರ್ ಬ್ರ್ಯಾಂಡ್!

● ತುರುವೇಕೆರೆ ಪ್ರಸಾದ್

'ಲೇಯ್, ಮುಂಬೈ ಈಗ ಪ್ರಪಂಚದಲ್ಲಿ ಹೆಚ್ಚು ಬಿಲಿಯನೇರ್‌ಗಳಿರುವ ನಗರಗಳಲ್ಲಿ ಒಂದಂತೆ. ಬೀಜಿಂಗ್‌ಗೂ ಸೈಡ್ ಹೊಡ್ದಿದೆಯಂತೆ! ನೆಕ್ಸ್ಟ್ ನಮ್ ಬೆಂಗಳೂರೇ!' ಎಂದ ಗುದ್ಲಿಂಗ.

'ಅದೆಂಗಾಯ್ತದೆ? ಆರ್ಡಿನರಿ ಬೀರುಬಿಲ್ಲು ಎತ್ತಕ್ಕೂ ಸಾಯೋ ನಮ್ಮಂತೋರು ಇನ್ನೂ ಇಲ್ಲಿಲ್ವಾ?' ಎಂದ ಮಾಲಿಂಗ.

'ಅಂತ ಗುರಿ, ಕನಸು ಮಡಿಕ್ಕಂಡಿದ್ರೆ ಮಾತ್ರ ಆಯ್ತದೆ. ಅಂದ್ವಾಗೆ ಬಿಲಿಯನೇರ್ ಆಗಕ್ಕೆ ಏನ್ ಮಾಡ್ಬೇಕು?' ಕೇಳಿದ ಕಲ್ಲೇಶಿ.

'ಕಂಪನಿ ಕಟ್ಟೋದು, ಷೇರ್ ಮಾರ್ಕೆಟ್ಟಲ್ಲಿ ದುಡ್ಡು ಹಾಕೋದು, ಇಂಗೆ ಏನಾರಾ ದೊಡ್ ದೊಡ್ ಯವಾರ ಮಾಡ್ಬೇಕು'.

'ಊ, ಕಂಪನಿ ಕಟ್ಟಿ ಷೇರು ಆಡೋದ್ರ ಜೊತೆಗೆ ಆನ್‌ಲೈನ್ ರಮ್ಮಿ, ಲಾಟರಿ, ಬಾಜಿ ಕಟ್ಟೋದು ಎಲ್ಲಾ ಮಾಡ್ಬೇಕಾಯ್ತದೆ'.

'ಹೌದೌದು, ಇಂಗಾದ್ರೇ ದೊಡ್ ಹೆಸರು ಬರೋದು. ಅಂಗೆ ದೊಡ್ ಹೆಸರು ಬಂದ್ರೆ ಒಂದು ನಾಕು ಬ್ಯಾಂಕಿಂದ ಕೋಟಿ ಕೋಟಿ ಸಾಲ ಎತ್ತಿ ಫಾರಿನ್‌ಗೆ ಓಡ್ರೆ ಬಿಲಿಯನೇರ್ ಆಗ್ಬಹುದು'.

'ಅದು ಪರದೇಶದ ಲೆಕ್ಕಕ್ಕೆ ಸೇರ್ಕತದೆ. ರಾಜಕೀಯಕ್ಕಿಳಿದು ನಾಡು, ದೇಶ ಕಟ್ಟೋ ಕಂಟ್ರಾಕ್ಟ್ ತಗೊಂಡ್ರೆ ಇಲ್ಲೇ ಬಿಲಿಯನೇರ್ ಆಗ್ಬಹುದು'.

'ಆದ್ರೆ ಅದ್ನೆಲ್ಲಾ ಲೆಕ್ಕ ತೋರ್ಸಕ್ಕಾಗಕಿಲ್ಲ, ಎಷ್ಟೋ ಜನ ಮಿಲಿಯನೇರ್ ಆದ್ರೂ ಬಿಪಿಎಲ್ ಒಳಗೇ ಇದೀವಿ ಅಂತ ಹೇಳ್ಕಳಲ್ವಾ? ಇದೂ ಅಂಗೇಯ'.

'ಅಂಗಾರೆ ಬಿಲಿಯನೇರ್ ಆಗಾದು ಎಂಗೆ? ಕಾಮನ್‌ಮ್ಯಾನು ಬಿಲಿಯನೇರ್ ಆಗಕ್ಕೇ ಆಗಲ್ವ?'

'ಹದಿನಾರಾಣೆ ಆನೆಸ್ಟಿ ಅಂದ್ರೆ ಟ್ಯಾಕ್ಸ್ ಕಟ್ಕಂಡು ಸರ್ಕಾರದ ಪೆನ್ಷನ್ನಲ್ಲೇ ಇರ್ಬೇಕಾಯ್ತದೆ. ಆದ್ರೂ ಒಂದು ದಾರಿ ಐತೆ! 'ಹೌ ಟು ಬಿಕಮ್ ಎ ಬಿಲಿಯನೇರ್?' ಅಂತ ಇಂಗ್ಲಿಷಲ್ಲಿ ಒಂದು ಪುಸ್ತಕ ಬರುದ್ರೆ ಲಕ್ ಒದ್ಕಂಡು ಬಂದ್ರೂ ಬರ್ಬಹುದು'.

'ಅಂಗೆ ಇಂಗ್ಲೀಷಲ್ಲಿ ಬರೀಬೇಕು ಅಂದ್ರ ನಾವೂ ಶೇಕ್ಸ್‌ಪಿಯರ್ ಆಗ್ಬೇಕಲ್ಲಾ! ಅದಕ್ಕೆ ಏನ್ಮಾಡೋದು?

'ತುಂಬಾ ಸುಲಭ, ಈ ಸ್ಪಿಯರ್ ಮೇಲೆ ಶೇಕ್ ಆಗ್ಬೇಕು ಅಂದ್ರ ಟೈಟಾಗುವಷ್ಟು ಬಿಯರ್ ಎತ್ತಬೇಕು' ಎಂದ ಪರ್ಮೇಶಿ. ಎಲ್ಲಾ 'ಸೂಪರ್ ಐಡಿಯಾ' ಎಂದು ಕೂಗಿ 'ಚಿಯರ್ಸ್' ಎಂದು ಗ್ಲಾಸ್ ಎತ್ತಿದರು.

ಸಂಗತ

ಮಕ್ಕಳಿಂದ ತಪ್ಪು: ಪರಿವರ್ತನೆಯೇ ಪರಿಹಾರ

ಮಕ್ಕಳಸ್ನೇಹಿ ಕ್ರಮಗಳ ಮೂಲಕ ಸರಿ–ತಪ್ಪುಗಳ ಕುರಿತು ಮನವರಿಕೆ ಮಾಡಬೇಕು

● ಎಚ್.ಬಿ.ಚಂದ್ರಶೇಖರ್

ಬಾಗಲಕೋಟೆ ಜಿಲ್ಲೆಯ ಶಾಲೆಯೊಂದರ ವಿದ್ಯಾರ್ಥಿನಿಯು ಕಳ್ಳತನದ ಆರೋಪದಿಂದ ಮನನೊಂದು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ಆಘಾತಕಾರಿಯಾದುದು. ಇದನ್ನು ನೆಪವಾಗಿ ಇರಿಸಿಕೊಂಡು, ಶಾಲೆ ಹಾಗೂ ಕೌಟುಂಬಿಕ ವಲಯದಲ್ಲಿ ಮಕ್ಕಳು ತಪ್ಪೆಸಗಿದಾಗ ನಾವು ಯಾವ ರೀತಿ ವರ್ತಿಸಬೇಕು ಎಂಬುದರ ಬಗ್ಗೆ ಅವಲೋಕಿಸಬೇಕಾಗಿದೆ. ಬೆಳವಣಿಗೆಯ ಹಾದಿಯಲ್ಲಿ ಮಕ್ಕಳು ತಪ್ಪು ಮಾಡುವುದು ಸಹಜ. ಆಗ ಅವರನ್ನು ತಿದ್ದಲು, ಸರಿದಾರಿಗೆ ತರಲು ಅನುಸರಿಸಬೇಕಾದ ಕ್ರಮಗಳು ಮಾನವೀಯ ನೆಲೆಯಿಂದ ಕೂಡಿರುವಂತೆ ನೋಡಿಕೊಳ್ಳಬೇಕು. ಮಕ್ಕಳ ಸೂಕ್ಷ್ಮ ಮನಸ್ಸಿಗೆ ಗಾಸಿಯಾಗದಂತೆ ಸ್ಪಂದಿಸಬೇಕು.

ಮಕ್ಕಳ ಹಕ್ಕುಗಳ ಜಾಗತಿಕ ಒಡಂಬಡಿಕೆಯ ಮೂಲಕ ಪ್ರಾಪ್ತವಾಗಿರುವ ಮಕ್ಕಳ ಹಕ್ಕುಗಳ ಅನುಚ್ಛೇದ 40ರ ಪ್ರಕಾರ, ಮಕ್ಕಳು ಕಾನೂನನ್ನು ಉಲ್ಲಂಘಿಸಿದ ಆರೋಪ ಎದುರಿಸುತ್ತಿರುವ ಸಂದರ್ಭಗಳಲ್ಲಿ ಅವರನ್ನು ಘನತೆ ಮತ್ತು ಗೌರವದಿಂದ ನಡೆಸಿಕೊಳ್ಳಬೇಕು. ಮಕ್ಕಳ ಹಕ್ಕುಗಳ ಅನುಚ್ಛೇದ 3ರ ಪ್ರಕಾರ, ಮಕ್ಕಳನ್ನು ಬಾಧಿಸುವ ವಿಷಯದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಅವರಿಗೆ ಇರಬಹುದಾದ ಅತ್ಯುತ್ತಮ ಆಸಕ್ತಿಯು ನಮ್ಮ ಪ್ರಥಮ ಆದ್ಯತೆಯಾಗಬೇಕು. ಹೀಗಾಗಿ, ಯಾವುದೇ ಮಗು ತಪ್ಪೆಸಗಿದಾಗ ಅಥವಾ ಕಾನೂನಿನೊಂದಿಗೆ ಸಂಘರ್ಷದಲ್ಲಿದ್ದಾಗ (ಕಳ್ಳತನ, ಸುಲಿಗೆ ಎಂಬ ಪದಗಳನ್ನು ಬಳಸುವಂತಿಲ್ಲ) ಸೂಕ್ಷ್ಮ ಸಂವೇದನೆ ತೋರಬೇಕಿದೆ. ಜೊತೆಗೆ ಈ ಸಮಯದಲ್ಲಿ ಅವರಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗೆಗೆ ವಯಸ್ಕರು ಕಾನೂನಿನ ಅರಿವು ಹೊಂದಬೇಕು.

ಮಕ್ಕಳು ಎಸಗುವ ಸರಳ ಅಥವಾ ಗಂಭೀರವಾದ ತಪ್ಪುಗಳಿಗೆ ಸಂಬಂಧಿಸಿದ ವಿಚಾರಣೆಯನ್ನು ಬಾಲ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015ರಲ್ಲಿ (ತಿದ್ದುಪಡಿ, 2021) ಇರುವಂತೆ ಮಕ್ಕಳಸ್ನೇಹಿ ಕ್ರಮಗಳನ್ನು ಅನುಸರಿಸಿ ಕೈಗೊಳ್ಳಲಾಗುತ್ತದೆ. ಶಾಲೆ, ವಸತಿನಿಲಯಗಳಲ್ಲಿ ಮಕ್ಕಳೆಸಗುವ ತಪ್ಪುಗಳನ್ನು ಅಪರಾಧ ಎಂದು ಪರಿಗಣಿಸಿ, ಶಿಕ್ಷಕರು ಅಥವಾ ವಸತಿನಿಲಯದ ಪಾಲಕರು ಸ್ವತಃ ಪೊಲೀಸ್ ಅಧಿಕಾರಿ, ವಿಚಾರಣಾಧಿಕಾರಿ ಅಥವಾ ನ್ಯಾಯಾಧೀಶರ ಪಾತ್ರವನ್ನು ವಹಿಸಿ ವಿಚಾರಣೆ ಮಾಡುವಂತಿಲ್ಲ. ಈ ಅಂಶಗಳ ಅರಿವಿರದ ಕೆಲವು ಶಿಕ್ಷಕರು ಮಕ್ಕಳನ್ನು ಸರಿದಾರಿಗೆ ತರುವ ಅಧಿಕಾರದ ಸ್ಥಾನದಲ್ಲಿ ತಾವಿದ್ದೇವೆಂದು ಭಾವಿಸಿ, ಕೆಲವೊಮ್ಮೆ ವಿಪರೀತದ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಈ ಮೂಲಕ ಅವರ ಸೂಕ್ಷ್ಮ ಮನಸ್ಸಿಗೆ ಅಳಿಸಲಾಗದ ಗಾಯವುಂಟು ಮಾಡಿಬಿಡುತ್ತಾರೆ. ಮಕ್ಕಳು ಎಸಗುವ ಗಂಭೀರ ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯನ್ನು ಕಾನೂನಿಗೆ ವಿರುದ್ಧವಾಗಿ ಮಾಡಿ, ಅವರ ಹಿತಾಸಕ್ತಿಗಳಿಗೆ ಧಕ್ಕೆ ತರುವವರಿಗೆ ಕಾನೂನಿನ ಪ್ರಕಾರ ಶಿಕ್ಷೆ ಇರುವುದನ್ನು ಗಮನಿಸಬೇಕಾಗಿದೆ.

ಕೆಲವು ಮಕ್ಕಳು ಸುಳ್ಳು ಹೇಳುತ್ತಾರೆ ಮತ್ತು ಕದಿಯುತ್ತಾರೆ. ಅಂತಹ ಸಂದರ್ಭಗಳಲ್ಲಿ ಅವರನ್ನು ಶಿಕ್ಷಿಸಿ, ಸರಿದಾರಿಗೆ ತರುತ್ತೇವೆ ಎಂಬ ಮನೋಭಾವಕ್ಕೆ ಬದಲಾಗಿ, ಅವರ ಮನಃಪರಿವರ್ತನೆ ಮಾಡುವ ದೂರದೃಷ್ಟಿಯ ಕ್ರಮಗಳನ್ನು ತೆಗೆದುಕೊಳ್ಳಲು ಮುಂದಾಗಬೇಕು. ಮಕ್ಕಳ ಕುರಿತಾದ ನಂಬಿಕೆ ಹಾಗೂ ವಿಶ್ವಾಸ ಮಾತ್ರ ಅವರನ್ನು ಸರಿದಾರಿಗೆ ತರಬಲ್ಲದೇ ವಿನಾ ಅವರಾಡುವ ಸುಳ್ಳು ಹಾಗೂ ಕದಿಯುವ ಗುಣಕ್ಕೆ ತಕ್ಕಂತೆ ಅವರಿಗೆ ಸುಳ್ಳ, ಕಳ್ಳ ಎಂಬ ಹಣೆಪಟ್ಟಿ ಕಟ್ಟುವುದರಿಂದ ಪ್ರಯೋಜನವಾಗದು. ಆತುರದಲ್ಲಿ ಕಟ್ಟುವ ಇಂತಹ ಹಣೆಪಟ್ಟಿಗಳು ಅವರನ್ನು ಸಮಾಜದಲ್ಲಿ ಶಾಶ್ವತವಾಗಿ ಕೆಟ್ಟ ಸ್ಥಾನದಲ್ಲಿ ಇರುವಂತೆ ಮಾಡಿಬಿಡುವ ಅಪಾಯ ಇರುತ್ತದೆ.

ಮಕ್ಕಳಸ್ನೇಹಿ ಕ್ರಮಗಳನ್ನು ಅನುಸರಿಸಿ, ಅವರಲ್ಲಿ ಪರಿವರ್ತನೆ ತರುವುದು ಹೊಸ ವಿಷಯವಲ್ಲ. ಸುಮಾರು ನೂರು ವರ್ಷಗಳ ಹಿಂದೆ ಇಂಗ್ಲೆಂಡ್‌ನಲ್ಲಿ ಎ.ಎಸ್.ನೀಲ್ ಅವರು 'ಸಮ್ಮರ್ ಹಿಲ್' ಎಂಬ ಶಾಲೆಯನ್ನು ತೆರೆದು, ಸವಾಲೆನಿಸುವ ಮಕ್ಕಳನ್ನು ಪ್ರೀತಿ, ಆತ್ಮೀಯತೆಯಿಂದ ಪರಿವರ್ತಿಸಿದರು. ಈ ಕಥನಗಳನ್ನು ಎ.ಎಸ್.ನೀಲ್ ಅವರ ಪುಸ್ತಕ 'ಸಮ್ಮರ್ ಹಿಲ್'ನಲ್ಲಿ (ಅನುವಾದ: ಎಸ್.ಸುಕುಮಾರ್, ಪ್ರಕಟಣೆ: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, 2016) ಗಮನಿಸಬಹುದು.

ಮಕ್ಕಳಸ್ನೇಹಿ ಕ್ರಮಗಳ ಕುರಿತು ಗಟ್ಟಿ ಚಿಂತನೆಗಳನ್ನು ಹೊಂದಿರುವ ಅನೇಕ ಶಿಕ್ಷಕರನ್ನು ನಾವೆಲ್ಲರೂ ಗಮನಿಸಿಯೇ ಇರುತ್ತೇವೆ. ಅವರು ಅನುಸರಿಸುವ ಅಂತಹ ವಿಧಾನಗಳನ್ನು ಅಳವಡಿಸಿಕೊಳ್ಳಲು ಮುಂದಾಗಬೇಕಿದೆ. ಕೆಲ ತಿಂಗಳುಗಳ ಹಿಂದೆ ಶಿಕ್ಷಕಿಯೊಬ್ಬರೊಂದಿಗೆ ಸಂವಾದ ಮಾಡುವಾಗ ಅವರು ತಿಳಿಸಿದ ಸಂಗತಿಯೊಂದು ಹೀಗಿತ್ತು: ಒಮ್ಮೆ ತರಗತಿಯಲ್ಲಿದ್ದ ಅವರ ಬ್ಯಾಗ್‌ನಿಂದ ಸಾವಿರಾರು ರೂಪಾಯಿ ಕಳವಾಯಿತು. ಈ ಸಂದರ್ಭದಲ್ಲಿ ಅವರು ತಮ್ಮ ವಿದ್ಯಾರ್ಥಿಗಳಿಗೆ 'ನಮ್ಮ ಮಕ್ಕಳು ಕಳ್ಳರು ಎನಿಸಿಕೊಳ್ಳುವುದು ನನಗಿಷ್ಟವಿಲ್ಲ. ನಾನು ಈ ಬ್ಯಾಗ್‌ನಲ್ಲಿ ಮುಂಚಿನಂತೆ ಹಣವಿಟ್ಟು, ನಿಮ್ಮೆದುರಿಗೆ ಇಲ್ಲಿಯೇ ಇರಿಸುತ್ತೇನೆ. ನಿಮಗೆ ಹಣ ಬೇಕಾದರೆ ನನ್ನನ್ನು ಕೇಳಿ ತೆಗೆದುಕೊಳ್ಳಿ. ಆದರೆ ಯಾರೂ ನನಗೆ ತಿಳಿಯದಂತೆ ಹಣ ತೆಗೆದುಕೊಳ್ಳಬಾರದು' ಎಂದು ಪ್ರೀತಿಯಿಂದ ತಿಳಿಸಿದರಂತೆ. ಆನಂತರ ಅವರ ತರಗತಿಯಲ್ಲಿ ಕಳ್ಳತನ ಆಗಲಿಲ್ಲ.

ಮಕ್ಕಳಿಗೆ 'ನೀವು ಮಾಡಿದ ತಪ್ಪನ್ನು ಕ್ಷಮಿಸಿದ್ದೇನೆ, ನೀವು ಒಳ್ಳೆಯವರು' ಎಂಬ ಮಾತನ್ನು ಪದೇಪದೇ ಹೇಳುತ್ತಾ ಇದ್ದಲ್ಲಿ, ಅವರಲ್ಲಿರುವ ಎಂತಹುದೇ ಮಿತಿಯಿಂದ ಅವರು ಹೊರಬರುವಂತೆ ನಾವು ಸಹಾಯ ಮಾಡಲು ಸಾಧ್ಯವಿದೆ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಆ ಹಣ ಹೋಗಬೇಕಾದ್ದೆಲ್ಲಿಗೆ?

ಚುನಾವಣೆ ದಿನದಿನಕ್ಕೂ ಕಾವು ಪಡೆದುಕೊಳ್ಳುತ್ತಿರುವಂತೆ, ಲಾರಿ, ಬಸ್ಸು, ಕಾರು, ದ್ವಿಚಕ್ರ ವಾಹನಗಳಲ್ಲಿ ಕಂತೆ ಕಂತೆ ಹಣ ಪತ್ತೆಯಾಗುತ್ತಿದೆ. ಎಲ್ಲಿಂದ ಬಂದು ಎಲ್ಲಿಗೆ ಹೋಗುತ್ತದೆ ಎಂಬ ಬಗ್ಗೆ ಯಾರೂ ಬಾಯಿ ಬಿಡುತ್ತಿಲ್ಲ. ಚುನಾವಣಾ ಆಯೋಗ ಇದನ್ನು ಅಕ್ರಮ ಹಣವೆಂದು ವಶಪಡಿಸಿಕೊಳ್ಳುತ್ತದೆ. ಆ ಹಣದ ಬಗ್ಗೆ ಸಾರ್ವಜನಿಕರಿಗೆ ಸಿಗುವುದು ಅಷ್ಟೇ ಮಾಹಿತಿ. ಇಲ್ಲಿ ಒಂದು ಪ್ರಶ್ನೆ ಮೂಡುತ್ತದೆ. ಚಿಕ್ಕ ಕಲ್ಲೆಸೆತದ ಪ್ರಸಂಗದಿಂದ ಹಿಡಿದು ಅತ್ಯಂತ ಜಾಣತನದಿಂದ ನಿರ್ವಹಿಸಿದ ಕೊಲೆಯನ್ನೂ, ಬಾಂಬ್ ಸ್ಫೋಟದ ರೂವಾರಿಗಳನ್ನೂ ನಮ್ಮ ತನಿಖಾ ದಳಗಳು ಪತ್ತೆ ಹಚ್ಚುತ್ತವೆ. ಹೀಗಿರುವಾಗ, ಅದರ ವಾರಸುದಾರರು ಯಾರು ಎಂಬುದನ್ನು ಪತ್ತೆ ಹಚ್ಚುವುದು ಕಷ್ಟ ಆಗಲಾರದು. ಆ ಹಣವನ್ನು ಸಾಗಿಸುತ್ತಿರುವ ವಾಹನ ಚಾಲಕನಿಗೆ ಅದು ಎಲ್ಲಿಂದ ಬಂತು, ಎಲ್ಲಿಗೆ ಹೋಗುತ್ತಿದೆ, ಅದನ್ನು ಯಾರು ವಾಹನದಲ್ಲಿ ಇರಿಸಿದರು ಎಂಬುದು ತಿಳಿದಿರುವುದಿಲ್ಲವೇ?

ಚುನಾವಣಾ ಅವ್ಯವಹಾರ ಕೂಡ ದೇಶದ ಅಭದ್ರತೆಗೆ ಕಾರಣವಾಗುವ ಕುಕೃತ್ಯದಂತೆ ಪ್ರಜಾಪ್ರಭುತ್ವ ದ್ರೋಹಿ ಕೆಲಸ. ಇದನ್ನು ಎನ್‌ಐಎಯಂತಹ ಸಂಸ್ಥೆಗೆ ವಹಿಸಿ, ಆ ಹಣದ ಮೂಲ ಪತ್ತೆ ಮಾಡಿ, ಸಂಬಂಧಪಟ್ಟ ಅಭ್ಯರ್ಥಿಯನ್ನು ಸ್ಪರ್ಧೆಯಿಂದ ಅನರ್ಹಗೊಳಿಸಿದರೆ, ಚುನಾವಣೆಯಲ್ಲಿ ಹಣದ ಪ್ರಭಾವ ತಗ್ಗಿ ಅದು ಪಾರದರ್ಶಕವಾಗಿ ನಡೆಯಲು ಸಾಧ್ಯವಾಗುತ್ತದೆ. ಆಗ ಪ್ರಾಮಾಣಿಕರು ಚುನಾಯಿತರಾಗಿ ಪ್ರಜಾಪ್ರಭುತ್ವ ವಿಜೃಂಭಿಸೀತು.

ಸತ್ಯಬೋಧ, ಬೆಂಗಳೂರು

'ರಾಜಕೀಯ ಮೋಹಿನಿ'ಗೆ ಒಲಿದ ಸ್ವಾಮಿಗಳು!

ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಶ್ರೀಗಳು ವೈಯಕ್ತಿಕ ಕಾರಣಕ್ಕೆ ಪ್ರಲ್ಹಾದ ಜೋಶಿಯವರಿಗೆ ಧಾರವಾಡ ಲೋಕಸಭಾ ಕ್ಷೇತ್ರದ ಟಿಕೆಟ್ ನೀಡದಂತೆ ಬಿಜೆಪಿಯನ್ನು ಒತ್ತಾಯಿಸಿರುವ ಹೇಳಿಕೆ ವಿವಾದದ ಸ್ವರೂಪ ಪಡೆದಿದೆ. ಅದಕ್ಕಾಗಿ ಲಿಂಗಾಯತ ಸಮುದಾಯವನ್ನು ಎಳೆದು ತರಲಾಗಿದೆ. ವಿವಿಧ ಸ್ವಾಮೀಜಿಗಳಿಗೆ ರಾಜಕೀಯ ಹೊಸದಲ್ಲ, ಅಂತಹುದರಲ್ಲಿ ಈ ಪ್ರಕರಣ ಮೊದಲನೆಯದೂ ಅಲ್ಲ, ಕೊನೆಯದೂ ಆಗಿರಲಾರದು. ಸ್ವತಃ ಸ್ವಾಮೀಜಿಗಳೇ ಚುನಾವಣೆಗೆ ನಿಂತು, ಅವರಲ್ಲಿ ಕೆಲವರು ಠೇವಣಿಯನ್ನೂ ಕಳೆದುಕೊಂಡಿದ್ದಾರೆ. ರಾಜಕೀಯವೆಂಬ ಮೋಹಿನಿಗೆ ಅವರೂ ವಶವಾಗುತ್ತಿದ್ದಾರೆ. ಮಠಗಳಿಗೆ ಸರ್ಕಾರದಿಂದಲೇ ಹಣ ನೀಡುವ ಪರಿಪಾಟ ಚಲಾವಣೆಗೆ ಬಂದಂದಿನಿಂದ ರಾಜಕೀಯ ನೇತಾರರು ಅವರ ಕೃಪೆಗೆ, ಅವಕೃಪೆಗೆ ಒಳಗಾಗುತ್ತಿದ್ದಾರೆ. ಬಿಜೆಪಿಯು ರಾಮಮಂದಿರ ನಿರ್ಮಾಣವನ್ನು ಚುನಾವಣಾ ವಿಷಯವನ್ನಾಗಿ ಮಾಡಿಕೊಂಡರೆ ತಪ್ಪೇನಲ್ಲ ಎಂದು ಪೇಜಾವರ ಶ್ರೀಗಳು ಹೇಳಿಕೆ ನೀಡಿದರು. ಈಗ ಜಾತಿಗೆ ಅಷ್ಟೇ ಅಲ್ಲ ಉಪಜಾತಿಗೂ ಮಠಾಧೀಶರು ಹುಟ್ಟಿಕೊಂಡಿದ್ದು, ತಮ್ಮ ಜಾತಿಗೇ ಟಿಕೆಟ್, ಸಚಿವ ಸ್ಥಾನ ಬೇಕೆಂದು ಹಟ ಹಿಡಿಯುತ್ತಾರೆ. ಇಲ್ಲದಿದ್ದರೆ ಸರ್ಕಾರವನ್ನು ಬೀಳಿಸುವುದಾಗಿ ಬೆದರಿಕೆ ಒಡ್ಡುತ್ತಾರೆ. ಸಿದ್ಧೇಶ್ವರ ಸ್ವಾಮಿಗಳಂಥ ಕೆಲವರು ಇದಕ್ಕೆ ಅಪವಾದವಾಗಿ ನಿಲ್ಲುತ್ತಾರೆ. ಧರ್ಮ ಮತ್ತು ರಾಜಕೀಯವು ಹಾಲು, ಜೇನಿನಂತೆ ಬೆರೆತುಕೊಂಡಿವೆ. ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ಮತ್ತು ಆ ಮಾರ್ಗದಲ್ಲಿ ಭಕ್ತರನ್ನು ಕರೆದೊಯ್ಯುವುದು ಸ್ವಾಮಿಗಳ ಗುರಿಯಾಗಿ ಉಳಿದಿಲ್ಲ.

ಶಿವಕುಮಾರ ಬಂಡೋಲಿ, ಹುಣಸಗಿ

ದೇವರ ನಂಬಿಕೆ ವೈಯಕ್ತಿಕ ಆಯ್ಕೆ

'ದಲಿತ ಸಮುದಾಯವು ದೇವರು ಮತ್ತು ಕುಡಿತದಿಂದ ದೂರ ಇರದೇ ಹೋದರೆ ಉದ್ಧಾರವಾಗಲ್ಲ' ಎಂಬ, ನಿವೃತ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸುಭಾಷ್ ಭರಣಿ ಅವರ ಹೇಳಿಕೆ (ಪ್ರ.ವಾ., ಮಾರ್ಚ್ 28) ವಿವಾದಕ್ಕೆ ಎಡೆ ಮಾಡಿಕೊಡುವಂತಿದೆ. ಕುಡಿತದಿಂದ ದೂರ ಇರಿ ಎನ್ನುವುದು ಸೂಕ್ತವಾದರೂ ದೇವರಿಂದ ದೂರ ಇರಿ ಎಂದು ಹೇಳುವುದು ಸರಿಯಲ್ಲ. ದೇವರನ್ನು ನಂಬುವುದು ಬಿಡುವುದು ಅವರವರ ವೈಯಕ್ತಿಕ ನಂಬಿಕೆ. ಒಂದು ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಸಮೂಹದ ಎದುರಾಗಲೀ ಸಾರ್ವಜನಿಕ ಸಭೆಗಳಲ್ಲಾಗಲೀ ಇಂತಹ ಹೇಳಿಕೆಗಳನ್ನು ನೀಡಬಾರದು. ಕಷ್ಟಕಾಲದಲ್ಲಿ ಸಹಾಯ ಮಾಡುವವರು ಮನುಷ್ಯರೇ ವಿನಾ ದೇವರಲ್ಲ ಎಂಬ ಮಾತು ಒಪ್ಪತಕ್ಕದ್ದಾದರೂ ಭಗವಂತನು ಮನುಷ್ಯನ ರೂಪದಲ್ಲಿ ಬಂದು ಸಹಾಯ ಮಾಡುತ್ತಾನೆ ಎಂಬುದು ಎಲ್ಲ ಧರ್ಮಗಳ ನಂಬಿಕೆಯೂ ಆಗಿದೆ.

ದೇವರು, ನಂಬಿಕೆ, ನಿರೀಕ್ಷೆ ಮತ್ತು ಭರವಸೆಯ ಮೇಲೆಯೇ ಮನುಷ್ಯ ಜೀವನ ಸಾಗುತ್ತದೆ. ಸನಾತನ ಧರ್ಮದ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಅವರಿಗೆ ಸುಪ್ರೀಂ ಕೋರ್ಟ್, ಒಬ್ಬ ಸಚಿವರಾಗಿ ತಮ್ಮ ಹೇಳಿಕೆಗಳ ಬಗ್ಗೆ ಜಾಗರೂಕರಾಗಿರಬೇಕು ಮತ್ತು ಅವು ಉಂಟು ಮಾಡುವ ಸಂಭವನೀಯ ಪರಿಣಾಮಗಳ ಬಗ್ಗೆ ಗಮನಹರಿಸಬೇಕು ಎಂದು ಹೇಳಿರುವುದನ್ನು ತಿಳಿದುಕೊಳ್ಳುವುದು ಅಗತ್ಯ.

ಎಲ್.ಚಿನ್ನಪ್ಪ, ಬೆಂಗಳೂರು

ಸಭಾ ಕಾರ್ಯಕ್ರಮ: ಯುವಜನರಿಗಷ್ಟೇ ಅಪಥ್ಯವಲ್ಲ!

ಸಭಾ ಕಾರ್ಯಕ್ರಮಗಳು ಯುವಜನರಿಗೆ ಅಪಥ್ಯವಾಗಿರುವ ಕುರಿತು ಡಾ. ಮುರಳೀಧರ ಕಿರಣಕೆರೆ ಉತ್ತಮವಾಗಿ ವಿಶ್ಲೇಷಿಸಿದ್ದಾರೆ (ಸಂಗತ, ಮಾರ್ಚ್ 28). ಇದಕ್ಕೆ ಪೂರಕವಾಗಿ ಒಂದು ಪ್ರಸಂಗ ನೆನಪಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದಿಂದ ಒಂದು ದತ್ತಿ ಉಪನ್ಯಾಸ ಕಾರ್ಯಕ್ರಮ ಆಯೋಜಿಸಬೇಕಾಗಿತ್ತು. ಇಂತಹ ಕಾರ್ಯಕ್ರಮ ಸಾಮಾನ್ಯವಾಗಿ ಪ್ರೇಕ್ಷಕರ ಕೊರತೆಯನ್ನು ಎದುರಿಸುವುದರಿಂದ, ಅದನ್ನು ತಪ್ಪಿಸಲು ಅದರೊಟ್ಟಿಗೆ ಮಹಿಳಾ ದಿನಾಚರಣೆಯನ್ನೂ ಆಯೋಜಿಸಿದರೆ, ಆ ನೆಪದಲ್ಲಿ ಮಹಿಳಾಮಣಿಗಳಾದರೂ ಬಂದು ಪ್ರೇಕ್ಷಕರ ಕೊರತೆ ನೀಗೀತೆಂಬ ದೂರದೃಷ್ಟಿಯಿಂದ ಘಟಕದ ಅಧ್ಯಕ್ಷರು ಮುಂದಾದರು. ಆದರೆ ಮಹಿಳೆಯರು ಉಪನ್ಯಾಸ ಕೇಳಲು ತಮಗೆ ಇಷ್ಟವಿಲ್ಲವೆಂದೂ ಉಪನ್ಯಾಸ ಮುಗಿದ ಮೇಲೆಯೇ ತಾವು ಕಾರ್ಯಕ್ರಮಕ್ಕೆ ಬರುವುದಾಗಿಯೂ ಪಟ್ಟು ಹಿಡಿದರು. ದತ್ತಿ ಉಪನ್ಯಾಸ ಎಂದಿನಂತೆ ಕಸಾಪ ಪದಾಧಿಕಾರಿಗಳ ಹಾಗೂ ಬೆರಳೆಣಿಕೆಯಷ್ಟು ಮಂದಿಯ ಸಮ್ಮುಖದಲ್ಲಿ ನೀರಸವಾಗಿ ನಡೆಯಿತು. ಅದು ಮುಗಿಯುವುದಕ್ಕೇ ಕಾಯುತ್ತಿದ್ದಂತೆ ಮಹಿಳೆಯರು ಆಮೇಲೆ ಬಂದರು. ಪ್ರೇಕ್ಷಕರಿಗಾಗಿ ಹಾಕಿದ್ದ ಆಸನಗಳು ಭರ್ತಿಯಾದವು. ತಮಗಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ 'ಮಹಿಳಾ ದಿನಾಚರಣೆ' ಕಾರ್ಯಕ್ರಮವನ್ನು ಯಶಸ್ವಿಯಾಗಿಸಿದರು. ಹೀಗಿದೆ, ಹೆಚ್ಚಿನವರಿಗೆ ಬೇಡವಾದ ಈ ಉಪನ್ಯಾಸಗಳ ಕತೆ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಮಿಳುನಾಡು ಲೆಕ್ಕಾಚಾರ ಬದಲು

ತಮಿಳುನಾಡಿನ ಮತದಾರರು ಪ್ರತಿ ಐದು ವರ್ಷಕ್ಕೊಮ್ಮೆ ರಾಜ್ಯ ಸರ್ಕಾರವನ್ನು ಬದಲಿಸುತ್ತಲೇ ಇರುತ್ತಾರೆ. ಇದಕ್ಕೆ ಕೆಲವೊಮ್ಮೆ ಅಪವಾದ ಎಂಬಂತೆ ಅದೇ ಸರ್ಕಾರ ಬಂದಿದೆಯಾದರೂ ಮತ ಪ್ರಮಾಣದಲ್ಲಿ ಜನರು ಬದಲಾವಣೆ ಬಯಸಿದ್ದು ಕಾಣುತ್ತದೆ. ಲೋಕಸಭಾ ಚುನಾವಣೆಯಲ್ಲೂ ತಮಿಳುನಾಡಿನ ಜನರು ಇದೇ ರೀತಿ ಮತದಾನ ಮಾಡುತ್ತಾರೆ. ತಮಿಳುನಾಡಿನಲ್ಲಿ ಪ್ರಾಬಲ್ಯವಿರುವುದು ದ್ರಾವಿಡ ಪಕ್ಷಗಳದ್ದೇ. ಅವುಗಳ ಮಧ್ಯೆ ಕಾಂಗ್ರೆಸ್ ಅಲ್ಪ ಸ್ವಲ್ಪ ನೆಲೆ ಉಳಿಸಿಕೊಂಡಿದೆ. ಬಿಜೆಪಿ ನೆಲೆ ಕಂಡುಕೊಳ್ಳಲು ಹರಸಾಹಸ ಪಡುತ್ತಿದೆ ಎಂಬುದನ್ನು ಚುನಾವಣಾ ಫಲಿತಾಂಶದ ದತ್ತಾಂಶಗಳೇ ಹೇಳುತ್ತವೆ. ಆದರೆ ಈ ಲೋಕಸಭಾ ಚುನಾವಣೆಯಲ್ಲಿ ಈ ಲೆಕ್ಕಾಚಾರ ತುಸು ಬದಲಾದಂತೆ ಕಾಣುತ್ತಿದೆ

ಪ್ರಜಾವಾಣಿ ವಾರ್ತೆ

ತಮಿಳುನಾಡಿನಲ್ಲಿ ರಾಜ್ಯ ವಿಧಾನಸಭಾ ಚುನಾವಣೆ ಇರಲಿ ಅಥವಾ ಲೋಕಸಭಾ ಚುನಾವಣೆಯೇ ಇರಲಿ ಪೈಪೋಟಿ ಇರುವುದು ಎರಡು ದ್ರಾವಿಡ ಪಕ್ಷಗಳ ಮಧ್ಯೆ ಮಾತ್ರ. ರಾಷ್ಟ್ರೀಯ ಪಕ್ಷಗಳಿಗೆ ಅಲ್ಲಿ ನೆಲೆಯೇ ಇಲ್ಲ ಅಥವಾ ದ್ರಾವಿಡ ಪಕ್ಷಗಳ ನೆರವಿನೊಂದಿಗೆ ಅವು ಕಣಕ್ಕೆ ಇಳಿಯಬೇಕಷ್ಟೇ. ಪ್ರತಿ ಲೋಕಸಭಾ ಚುನಾವಣೆಯಲ್ಲೂ ತಮಿಳುನಾಡಿನ ಮತದಾರರು ದ್ರಾವಿಡ ಪಕ್ಷಗಳಾದ ಡಿಎಂಕೆಯನ್ನೋ ಅಥವಾ ಎಐಎಡಿಎಂಕೆಯನ್ನೋ ಬೆಂಬಲಿಸುತ್ತಾರೆ. ಈ ಎರಡು ಪಕ್ಷಗಳಲ್ಲಿ ಒಂದು ಪಕ್ಷದ ಕೈಹಿಡಿದರೆ, ಮತ್ತೊಂದು ಪಕ್ಷವನ್ನು ನೆಲಕಚ್ಚಿಸುತ್ತಾರೆ. ಈವರೆಗೆ ಇಲ್ಲಿ ನಡೆದ ಚುನಾವಣೆಗಳಲ್ಲಿ ರಾಷ್ಟ್ರೀಯ ಪಕ್ಷಗಳು ಈ ಎರಡು ದ್ರಾವಿಡ ಪಕ್ಷಗಳ ಜತೆಗಿನ ಮೈತ್ರಿಯಲ್ಲಿಯೇ ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದವು. ಆದರೆ ಈ ಬಾರಿ ಬಿಜೆಪಿ ದ್ರಾವಿಡ ಪಕ್ಷಗಳ ಬಣಗಳನ್ನು ಬಿಟ್ಟು ತಮಿಳುನಾಡಿನಲ್ಲಿ ತೃತೀಯ ರಂಗ ರಚಿಸಲು ಮುಂದಾಗಿದೆ.

ತಮಿಳುನಾಡಿನ ರಾಜಕಾರಣದ ಈಗಿನ ಪರಿಸ್ಥಿತಿಯನ್ನು ಗಮನಿಸಿದರೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಹೆಚ್ಚು ಪ್ರಬಲ ಪಕ್ಷದಂತೆ ಭಾಸವಾಗುತ್ತದೆ. ಪಕ್ಷದಲ್ಲಿ ಒಳಜಗಳವಿಲ್ಲ–ಬಣ ರಾಜಕಾರಣವಿಲ್ಲ, ಆಡಳಿತ ವಿರೋಧಿ ಅಲೆ ಇಲ್ಲ, ತಮಿಳು ಮತ್ತು ದ್ರಾವಿಡ ಅಸ್ಮಿತೆಯ ಪರವಾಗಿ ನಿಲ್ಲುವ ಯಾವ ಅವಕಾಶವನ್ನೂ ಡಿಎಂಕೆ ಕಳೆದುಕೊಂಡಿಲ್ಲ. ಹೀಗಾಗಿ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಡಿಎಂಕೆಯೇ ಅತಿಹೆಚ್ಚು ಸ್ಥಾನಗಳನ್ನು ಗೆಲ್ಲುವ ನೆಚ್ಚಿನ ಪಕ್ಷವಾಗಿದೆ. ಅದೂ, ತಮಿಳುನಾಡು ಮತದಾರರು ತಮ್ಮ ಸಂಪ್ರದಾಯವನ್ನು ಮುರಿದರೆ ಮಾತ್ರ. ಏಕೆಂದರೆ 2019ರ ಲೋಕಸಭಾ ಚುನಾವಣೆಯಲ್ಲಿ ಡಿಎಂಕೆ–ಕಾಂಗ್ರೆಸ್–ಎಡಪಕ್ಷಗಳ ಮೈತ್ರಿಕೂಟವು 39ರಲ್ಲಿ 37 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದವು. ಪ್ರತಿಬಾರಿ ಮತ್ತೊಂದು ಪಕ್ಷಕ್ಕೆ ಬೆಂಬಲ ನೀಡುವ ಸಂಪ್ರದಾಯಕ್ಕೆ ಮತದಾರರು ಕಟ್ಟುಬಿದ್ದರೆ, ಎಐಎಡಿಎಂಕೆಯನ್ನು ಹೆಚ್ಚು ಸ್ಥಾನಗಳಲ್ಲಿ ಗೆಲ್ಲಿಸಬೇಕು.

ಆದರೆ ತಮಿಳುನಾಡಿನ ರಾಜಕೀಯ ಪರಿಸ್ಥಿತಿ ಅಷ್ಟು ಸರಳವಾಗಿಲ್ಲ. ಡಿಎಂಕೆಯಷ್ಟೇ ಪ್ರಬಲ ದ್ರಾವಿಡ ಪಕ್ಷವಾಗಿದ್ದ ಎಐಎಡಿಎಂಕೆಯಲ್ಲಿ ಈಗ ಅಂತಹ ಬಲವಿಲ್ಲ. ಎಐಎಡಿಎಂಕೆಯ ಚಾಲಕ ಶಕ್ತಿಯಾಗಿದ್ದದ್ದು ಜಯಲಲಿತಾ. ಅವರ ನಿಧನದ ನಂತರ ಪಕ್ಷವು ಹಲವು ಹೋಳಾಗಿದೆ. ಒಳಜಗಳದ ಕಾರಣದಿಂದ ಉತ್ತಮ ಆಡಳಿತ ನೀಡುವಲ್ಲೂ ಪಕ್ಷ ವಿಫಲವಾಗಿತ್ತು, ಪದೇ–ಪದೇ ಮುಖ್ಯಮಂತ್ರಿ ಬದಲಾಗಿದ್ದರು. ಅದರ ಬೆನ್ನಲ್ಲೇ ನಡೆದಿದ್ದ 2019ರ ಲೋಕಸಭಾ ಚುನಾವಣೆಯಲ್ಲಿ ಕೇವಲ ಒಂದು ಕ್ಷೇತ್ರದಲ್ಲಿ ಗೆದ್ದ ಪಕ್ಷವು, ನೆಲಕಚ್ಚಿತ್ತು. ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ದೊಡ್ಡಸಂಖ್ಯೆಯ ಚುನಾಯಿತ ಜನಪ್ರತಿನಿಧಿಗಳು ಇಲ್ಲದೇ ಇರುವುದು ಮತ್ತು ಎಲ್ಲರನ್ನೂ ಒಟ್ಟಿಗೇ ಕರೆದೊಯ್ಯುವ ನಾಯಕತ್ವ ಇಲ್ಲದಿರುವುದು ಪಕ್ಷದ ಬಲವನ್ನು ಕುಂದಿಸಿದೆ.

ಬಿಜೆಪಿಯ ಎನ್‌ಡಿಎ ಒಟ್ಟಿಗೆ ಗುರುತಿಸಿಕೊಂಡಿದ್ದ ಎಐಎಡಿಎಂಕೆಗೆ ಅದರಿಂದಲೂ ತುಸು ಹಿನ್ನಡೆಯಾಗಿತ್ತು. ಬಿಜೆಪಿಯ ‘ಹಿಂದಿ ಹೇರಿಕೆ ನೀತಿ’ಗಳು, ದ್ರಾವಿಡ ಅಸ್ಮಿತೆ ನಿರಾಕರಣೆಯಂತಹ ನೀತಿಗಳನ್ನು ವಿರೋಧಿಸಲು ಸಾಧ್ಯವಾಗದಂತಹ ಸ್ಥಿತಿಗೆ ಎಐಎಡಿಎಂಕೆ ದೂಡಲ್ಪಟ್ಟಿತ್ತು. ತಡವಾಗಿಯಾದರೂ ಆ ಸ್ಥಿತಿಯಿಂದ ಹೊರಬರಲು ಯತ್ನಿಸಿದ ಪಕ್ಷವು, ಬಿಜೆಪಿ ಮೈತ್ರಿಯನ್ನೇ ಕಡಿದುಕೊಂಡಿತು. ಈ ಮೂಲಕ ತನ್ನ ದ್ರಾವಿಡ ಅಸ್ಮಿತೆಯನ್ನು ಗಟ್ಟಿಗೊಳಿಸಿಕೊಳ್ಳಲು ಯತ್ನಿಸುತ್ತಿದೆ. ಆದರೆ ಅದರ ಹಲವು ಮಿತ್ರಪಕ್ಷಗಳನ್ನು ಬಿಜೆಪಿ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಒಂದೆರಡು ಸಣ್ಣ–ಪುಟ್ಟ ಪಕ್ಷಗಳನ್ನು ಹೊರತುಪಡಿಸಿದರೆ ಬಹುತೇಕ ಏಕಾಂಗಿಯಾಗಿ ಚುನಾವಣೆಯನ್ನು ಎದುರಿಸುವ ಅನಿವಾರ್ಯ ಎಐಎಡಿಎಂಕೆಗೆ ಇದೆ. ಈ ಚುನಾವಣೆ ಆ ಪಕ್ಷಕ್ಕೆ ದೊಡ್ಡ ಸವಾಲು ಒಡ್ಡಿದರೂ, ಪಕ್ಷವು ಸಾಗಬೇಕಾದ ಹಾದಿಯನ್ನು ಈ ಚುನಾವಣೆ ನಿರ್ಧರಿಸಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಇನ್ನೊಂದೆಡೆ ಡಿಎಂಕೆ ತನ್ನ ಮಿತ್ರಪಕ್ಷಗಳೊಂದಿಗೆ ಸೀಟು ಹಂಚಿಕೆಯನ್ನು ಅಂತಿಮಗೊಳಿಸಿಕೊಂಡಿದೆ. ಕಾಂಗ್ರೆಸ್ ಮತ್ತು ಎಡಪಕ್ಷಗಳಿಗೆ ಈ ಹಿಂದಿನಂತೆಯೇ ಹಲವು ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದೆ. ಕಮಲ್ ಹಾಸನ್ ನೇತೃತ್ವದ ಮಕ್ಕಳ ನೀತಿ ಮಯ್ಯಂ ಪಕ್ಷದೊಂದಿಗೂ ಮೈತ್ರಿ ಮಾಡಿಕೊಂಡಿದೆ. ಹಲವು ಕ್ಷೇತ್ರಗಳಲ್ಲಿ ಈ ಎಲ್ಲಾ ಪಕ್ಷಗಳ ಒಮ್ಮತದ ಅಭ್ಯರ್ಥಿ ಕಣಕ್ಕೆ ಇಳಿಯುವ ಸಾಧ್ಯತೆ ಇದೆ. ಇವುಗಳ ಸಿದ್ಧತೆ ಅಂತಿಮ ಹಂತಕ್ಕೆ ಬಂದಿದೆ.



ಬಿಜೆಪಿ ತೃತೀಯ ರಂಗ

ಬಿಜೆಪಿ ಈ ಬಾರಿ ತಮಿಳುನಾಡಿನಲ್ಲಿ ತನ್ನ ನೆಲೆ ಪರೀಕ್ಷಿಸಲು ಮುಂದಾಗಿದೆ. ಎಐಎಡಿಎಂಕೆಯು ದೂರವಿಟ್ಟ ನಂತರ ಬಿಜೆಪಿಯು ಮತ್ತೆ ಮತ್ತೆ ಮರುಮೈತ್ರಿಗಾಗಿ ಎಡತಾಕಿತ್ತು. ಅಲ್ಲದೆ, ಎಐಎಡಿಎಂಕೆಯ ಹಲವು ನಾಯಕರು ಬಿಜೆಪಿ ಸೇರಲಿದ್ದಾರೆ ಎಂದೂ ಬಿಜೆಪಿ ನಾಯಕರು ಪದೇ–ಪದೇ ಹೇಳಿದ್ದರು. ಎಐಎಡಿಎಂಕೆ ನಾಯಕರನ್ನು ಬಿಜೆಪಿಗೆ ಬರಮಾಡಿಕೊಳ್ಳಲು ಕಾರ್ಯಕ್ರಮವನ್ನೂ ಆಯೋಜಿಸಿತ್ತು. ಆದರೆ ಅಂತಹ ಕಾರ್ಯಕ್ರಮಗಳು ರದ್ದಾದದ್ದು ಮಾತ್ರ ಗಮನಾರ್ಹ. ಹೀಗಾಗಿ ಬಿಜೆಪಿ ತಂತ್ರವನ್ನು ಬದಲಿಸಿತು.

ಬಿಜೆಪಿ ಈ ಬಾರಿ ತಂತ್ರ ಬದಲಿಸಲು ಪಕ್ಷದ ಬಗ್ಗೆ ತಮಿಳುನಾಡಿನಲ್ಲಿ ಇದ್ದ ಅಭಿಪ್ರಾಯ ಬದಲಾಗಿದ್ದೂ ಒಂದು ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ಅಣ್ಣಾಮಲೈ ನೇತೃತ್ವದಲ್ಲಿ ರಾಜ್ಯ ಬಿಜೆಪಿ ನಾಯಕರು/ಕಾರ್ಯಕರ್ತರು ಡಿಎಂಕೆ ಸರ್ಕಾರದ ವಿರುದ್ಧ ದೊಡ್ಡದನಿಯಲ್ಲಿ ಮಾತನಾಡಿದ್ದರು. ಅಣ್ಣಾಮಲೈ ಜನಪ್ರಿಯತೆಯ ಕಾರಣದಿಂದ ಬಿಜೆಪಿ ಕಾರ್ಯಕ್ರಮಗಳಲ್ಲಿ ಜನರೂ ಸೇರತೊಡಗಿದರು. ಹೀಗಾಗಿ ರಾಜ್ಯದಲ್ಲಿ ಬಿಜೆಪಿ ಜನಪ್ರಿಯತೆಯೂ ಹೆಚ್ಚಾಗಿದೆ ಎಂದು ಅಂದಾಜಿಸಲಾಗಿದೆ. ರಾಜ್ಯ ಬಿಜೆಪಿಯೇ ನಡೆಸಿದ ಸಮೀಕ್ಷೆಯ ಪ್ರಕಾರ ಈ ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡಿನಲ್ಲಿ ಪಕ್ಷಕ್ಕೆ ಶೇ 20ಕ್ಕಿಂತಲೂ ಹೆಚ್ಚು ಮತಗಳು ಬರುತ್ತವೆ. ಇವುಗಳಿಂದ ಹೆಚ್ಚು ಸ್ಥಾನವನ್ನು ಗೆದ್ದುಬಿಡುತ್ತೇವೆ ಎಂಬ ಹಮ್ಮು ನಮಗಿಲ್ಲ. ಆದರೆ ನಮ್ಮ ಪಕ್ಷದ ಮತಬ್ಯಾಂಕ್ ವಿಸ್ತರಿಸಲಿದೆ. ಪಕ್ಷಕ್ಕೆ ಸ್ವತಂತ್ರ ನೆಲೆ ದೊರೆಯಲಿದೆ ಎಂಬುದು ರಾಜ್ಯ ಬಿಜೆಪಿ ನಾಯಕರ ಮಾತು.

ಹೀಗಿದ್ದೂ ಸಂಪೂರ್ಣ ಸ್ವತಂತ್ರವಾಗಿ ಕಣಕ್ಕೆ ಇಳಿಯುವ ಕೆಲಸವನ್ನು ಬಿಜೆಪಿ ಮಾಡಿಲ್ಲ. ಉತ್ತರ ತಮಿಳುನಾಡಿನಲ್ಲಿ ನೆಲೆ ಹೊಂದಿರುವ ಪಿಎಂಕೆಯ ಜತೆಗೆ ಮೈತ್ರಿಯನ್ನು ಅಂತಿಮಗೊಳಿಸಿಕೊಂಡಿದೆ. ಎಐಎಡಿಎಂಕೆಯ ಮೈತ್ರಿಯಲ್ಲಿದ್ದ ಪಿಎಂಕೆಯನ್ನು ಅದರಿಂದ ದೂರ ಮಾಡುವ ಮೂಲಕ, ಎಐಎಡಿಎಂಕೆಯನ್ನು ದುರ್ಬಲಗೊಳಿಸಿದೆ. ಇದು ಬಿಜೆಪಿ–ಪಿಎಂಕೆ ಅಭ್ಯರ್ಥಿಗಳಿಗೆ ಅನುಕೂಲವೂ ಆಗಬಹುದು ಅಥವಾ ಅನನುಕೂಲವೂ ಆಗಬಹುದು. ಇದಲ್ಲದೇ ಎಐಎಡಿಎಂಕೆಯಿಂದ ಹೊರಬಂದ ಟಿಟಿವಿ ದಿನಕರನ್ ಅವರೊಂದಿಗೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ, ಎಐಎಡಿಎಂಕೆಯಿಂದ ಹೊರಹಾಕಲ್ಪಟ್ಟ ಒ.ಪನೀರಸೆಲ್ವಂ ಈಗಾಗಲೇ ಬಿಜೆಪಿಗೆ ಬೆಂಬಲ ಘೋಷಿಸಿದ್ದಾರೆ. ಡಿಎಂಡಿಕೆ, ಎಐಡಿಎಂಎಂಕೆ ಜತೆಗೆ ಮೈತ್ರಿ ಮಾತುಕತೆ ನಡೆಸುತ್ತಿದೆ. ಈ ಚುನಾವಣೆಗೆ ಇಷ್ಟೆಲ್ಲಾ ಸಿದ್ಧತೆ ನಡೆಸಿದ್ದರೂ, ಬಿಜೆಪಿಯು ತಮಿಳರ ವಿರೋಧಿ ಎಂದು ಇಲ್ಲಿನ ಮತದಾರರಲ್ಲಿ ಇರುವ ಅಭಿಪ್ರಾಯವನ್ನು ತೊಡೆದುಹಾಕುವ ಕೆಲಸವನ್ನು ಬಿಜೆಪಿ ಮಾಡುತ್ತಿಲ್ಲ. ಹೀಗಾಗಿ ಪಕ್ಷಕ್ಕೆ ಈ ಬಾರಿ ಹೆಚ್ಚಿನ ಮತಬೆಂಬಲ ದೊರೆಯುತ್ತದೆ ಎಂದು ನಿರೀಕ್ಷಿಸಲಾಗದು ಎಂಬುದು ರಾಜಕೀಯ ಪಂಡಿತರ ಅಭಿಪ್ರಾಯ.

ತೆಲಂಗಾಣ: ‘ಕೈ’ಗೆ ಶಕ್ತಿ, ಬಿಆರ್‌ಎಸ್‌ಗೆ ನಿಶ್ಶಕ್ತಿ

ಪ್ರಜಾವಾಣಿ ವಾರ್ತೆ

‘ನಾನು ಮುಖ್ಯಮಂತ್ರಿಯಾದ ಬಳಿಕ ನನ್ನೊಳಗಿನ ಆಡಳಿತಗಾರನನ್ನು ನೋಡಿದ್ದೀರಿ. ಆದರೆ, ಇಲ್ಲಿಂದ ಮುಂದೆ ನೀವು ನನ್ನನ್ನು ತೆಲಂಗಾಣ ಕಾಂಗ್ರೆಸ್ ಘಟಕದ ಅಧ್ಯಕ್ಷನನ್ನಾಗಿ, ನನ್ನ ಕೆಲಸವನ್ನು ನೋಡಲಿದ್ದೀರಿ’ ಎಂದು ಲೋಕಸಭೆ ಚುನಾವಣೆ ಘೋಷಣೆಯಾದ ಬಳಿಕ ಮುಖ್ಯಮಂತ್ರಿ ರೇವಂತ ರೆಡ್ಡಿ ಹೇಳಿದ್ದಾರೆ. ಸರ್ಕಾರ ರಚನೆಗೊಂಡ ನಂತರದಿಂದಲೂ ‘ಸರ್ಕಾರ ಬೀಳಲಿದೆ’ ಎಂಬ ಹೇಳಿಕೆಗಳನ್ನು ವಿರೋಧ ಪಕ್ಷಗಳು ಹೇಳಿಕೊಂಡೇ ಬರುತ್ತಿವೆ. ಸರ್ಕಾರವನ್ನೂ ಉಳಿಸಿಕೊಳ್ಳಬೇಕು, ಇನ್ನೊಂದೆಡೆ ಲೋಕಸಭೆ ಚುನಾವಣೆಯಲ್ಲಿ ಪಕ್ಷವು ಹೆಚ್ಚು ಸ್ಥಾನಗಳನ್ನೂ ಗೆಲ್ಲಬೇಕು –ಇದು ರೇವಂತ ರೆಡ್ಡಿ ಅವರ ಮುಂದಿರುವ ಸವಾಲು.

ಇದಕ್ಕೆ ಪುಷ್ಟಿ ಕೊಡುವಂತೆ, ಬಿಆರ್‌ಎಸ್‌ನ ಹಲವು ನಾಯಕರು ಕಾಂಗ್ರೆಸ್ ಸೇರಿಕೊಳ್ಳುತ್ತಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಗ್ರೇಟರ್ ಹೈದರಾಬಾದ್ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿತ್ತು. ಈ ಪ್ರದೇಶವು ಬಿಆರ್‌ಎಸ್‌ನ ಭದ್ರಕೋಟೆಯಂತಿದೆ. ಆದರೆ, ಈಗ ಈ ಪ್ರದೇಶದ ಬಿಆರ್‌ಎಸ್ ಸಂಸದರು, ಶಾಸಕರು ಕಾಂಗ್ರೆಸ್ ಸೇರ್ಪಡೆಗೊಂಡಿದ್ದಾರೆ. ಬಿಆರ್‌ಎಸ್‌ನ ರಾಜ್ಯಸಭಾ ಸದಸ್ಯ ಕೆ. ಕೇಶವ್ ರಾವ್ ಅವರೂ ಪಕ್ಷ ತೊರೆದು ಕಾಂಗ್ರೆಸ್ ಸೇರಲು ಸಿದ್ಧರಾಗಿದ್ದಾರೆ. ಅವರ ಮಗಳು ಗ್ರೇಟರ್ ಹೈದರಾಬಾದ್ ನಗರಪಾಲಿಕೆ ಮೇಯರ್ ಆಗಿರುವ ಗದ್ವಾಲ್ ವಿಜಯಲಕ್ಷ್ಮಿ ಕೂಡ ಕಾಂಗ್ರೆಸ್ ಸೇರಲಿದ್ದಾರೆ ಮತ್ತು ಹಲವು ಕಾರ್ಪೊರೇಟರ್‌ಗಳನ್ನು ಕರೆತರಲಿದ್ದಾರೆ ಎಂಬ ಸುದ್ದಿ ಹರಡಿದೆ. ಇದು ಕಾಂಗ್ರೆಸ್‌ಗೆ ಲಾಭವನ್ನೇ ತಂದುಕೊಡಲಿದೆ. ಬಿಆರ್‌ಎಸ್‌ನಿಂದ ಬಂದ ಹಲವರಿಗೆ ಕಾಂಗ್ರೆಸ್ ಲೋಕಸಭಾ ಟಿಕೆಟ್ ಅನ್ನೂ ನೀಡಿದೆ. ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ನೀಡಿದ್ದ ಆರು ಗ್ಯಾರಂಟಿಗಳು ಕೂಡ ಪಕ್ಷಕ್ಕೆ ಅನುಕೂಲ ಮಾಡಿಕೊಡಲಿವೆ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ಶಕ್ತಿ ಕುಂದಿಸಿಕೊಂಡ ಬಿಆರ್‌ಎಸ್: ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಇತ್ತೀಚೆಗೆ ಬಿಆರ್‌ಎಸ್ ಅಧ್ಯಕ್ಷ ಕೆ. ಚಂದ್ರಶೇಖರ ರಾವ್ ಅವರ ಪುತ್ರಿ, ಶಾಸಕಿ ಕೆ. ಕವಿತಾ ಅವರನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬಂಧಿಸಿದ್ದಾರೆ. ವಿಧಾನಸಭೆ ಚುನಾವಣೆ ಪ್ರಚಾರದ ಉದ್ದಕ್ಕೂ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಬಿಆರ್‌ಎಸ್‌ನ ಭ್ರಷ್ಟಾಚಾರದ ಕುರಿತು ಮಾತನಾಡುತ್ತಲೇ ಇದ್ದವು. ಕವಿತಾ ಅವರ ಬಂಧನ ಇದಕ್ಕೆ ಸಾಕ್ಷ್ಯ ಒದಗಿಸಿದೆ. ಕಲ್ಲೇಶ್ವರ ನೀರಾವರಿ ಯೋಜನೆ ಕೂಡ ವಿಧಾನಸಭಾ ಚುನಾವಣೆಯ ದೊಡ್ಡ ವಿಚಾರವೇ ಆಗಿತ್ತು. ಈ ಯೋಜನೆಯ ಗುತ್ತಿಗೆ ನೀಡುವಲ್ಲಿಯೂ ಭ್ರಷ್ಟಾಚಾರ ನಡೆದಿದೆ ಎನ್ನುವುದು ಚುನಾವಣಾ ಬಾಂಡ್ ಮಾಹಿತಿಗಳು ಬಹಿರಂಗಗೊಂಡ ಬಳಿಕ ಬಹಿರಂಗವಾಯಿತು. ಕಲ್ಲೇಶ್ವರ ನೀರಾವರಿ ಯೋಜನೆಯ ಗುತ್ತಿಗೆ ಪಡೆದಿದ್ದ ಮೇಘ ಇಂಜಿನಿಯರಿಂಗ್ ಕಂಪನಿಯು ಬಿಆರ್‌ಎಸ್ ಪಕ್ಷಕ್ಕೆ ಚುನಾವಣಾ ಬಾಂಡ್ ಮೂಲಕ ₹195 ಕೋಟಿ ದೇಣಿಗೆ ನೀಡಿದೆ. ಇದೂ ಕೂಡ ಪಕ್ಷಕ್ಕೆ ಹೊಡೆತ ಬೀಳಬಹುದು ಎನ್ನಲಾಗಿದೆ.

> ಕೆಲವೇ ತಿಂಗಳ ಹಿಂದಷ್ಟೇ ತೆಲಂಗಾಣದಲ್ಲಿ ವಿಧಾನಸಭಾ ಚುನಾವಣೆ ನಡೆದಿತ್ತು. ಅಧಿಕಾರದಲ್ಲಿದ್ದ ಬಿಆರ್‌ಎಸ್ ಪಕ್ಷವನ್ನು ಸೋಲಿಸಿ, ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರಕ್ಕೆ ಏರಿತ್ತು. ಲೋಕಸಭೆ ಚುನಾವಣೆಯ ಹೋರಾಟಕ್ಕೆ ಕಾಂಗ್ರೆಸ್‌ಗೆ ಈ ಗೆಲುವೇ ದೊಡ್ಡ ಬಲ. ಆದರೆ, ಅಧಿಕಾರದಿಂದ ಇಳಿದ ಬಿಆರ್‌ಎಸ್ ಮಾತ್ರ ತನ್ನ ಬಲವನ್ನು ದಿನದಿಂದ ದಿನಕ್ಕೆ ಕುಂದಿಸಿಕೊಳ್ಳುತ್ತಲೇ ಇದೆ. ಬಿಆರ್‌ಎಸ್ ಪಕ್ಷದೊಳಗೇ ಅಸಮಾಧಾನ ತೀವ್ರಗೊಂಡಿದೆ. ಸಾಲು ಸಾಲು ನಾಯಕರು ಕಾಂಗ್ರೆಸ್ ಸೇರುತ್ತಿದ್ದಾರೆ. ಬಿಜೆಪಿಗೂ ಹಲವು ನಾಯಕರು ಸೇರಿಕೊಂಡಿದ್ದಾರೆ

ಪಕ್ಷದ ನಾಯಕರು ಕಾಂಗ್ರೆಸ್ ಹಾಗೂ ಬಿಜೆಪಿಗೆ ಪಕ್ಷಾಂತರ ಗೊಳ್ಳುತ್ತಿರುವುದೂ ಚಂದ್ರಶೇಖರ ರಾವ್ ಅವರ ತಲೆನೋವಿಗೆ ಕಾರಣವಾಗಿದೆ (ಬಿಜೆಪಿಯ 15 ಅಭ್ಯರ್ಥಿಗಳಲ್ಲಿ 9 ಅಭ್ಯರ್ಥಿಗಳು ಬಿಆರ್‌ಎಸ್‌ನಿಂದ ಬಂದವರು). ಪಕ್ಷದ ಹಿರಿಯ ನಾಯಕರೇ ಪಕ್ಷ ತೊರೆಯುತ್ತಿದ್ದಾರೆ. ಇನ್ನಷ್ಟು ನಾಯಕರು ಪಕ್ಷ ತೊರೆಯದಂತೆ ನೋಡಿಕೊಳ್ಳಲು ಕೆಸಿಆರ್ ಮಗ, ಮಾಜಿ ಸಚಿವ ಕೆ.ಟಿ. ರಾಮ್‌ರಾವ್ ಅವರಿಗೆ ಜವಾಬ್ದಾರಿ ನೀಡಲಾಗಿದೆ. ಜೊತೆಗೆ, ಲೋಕಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಪಟ್ಟಿಯನ್ನೂ ಪಕ್ಷ ಬಿಡುಗಡೆ ಮಾಡಿದೆ. ಪಕ್ಷ ತೊರೆಯಬಹುದು ಎಂದು ಅನುಮಾನ ಇದ್ದ ನಾಯಕರಿಗೆ ಲೋಕಸಭೆಯ ಟಿಕೆಟ್ ನೀಡಲಾಗಿದೆ.

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಎಸ್‌ಸಿ, ಎಸ್‌ಟಿ, ಒಬಿಸಿ ಗುರಿ

ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ ಮೊದಲ ವಾರದಲ್ಲಿ ತೆಲಂಗಾಣದಲ್ಲಿ ಚುನಾವಣಾ ರ‍್ಯಾಲಿ ನಡೆಸಿದ್ದರು. ಬಿಆರ್‌ಎಸ್ ಹಾಗೂ ಕಾಂಗ್ರೆಸ್ ವಿರುದ್ಧ ಭಾಷಣ ಮಾಡಿದ್ದರು. ಇದೇ ವೇಳೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಕುರಿತೂ ಮಾತನಾಡಿದ್ದರು. ‘ನಮ್ಮ ಕೇಂದ್ರ ಸರ್ಕಾರದ ಎಲ್ಲ ಯೋಜನೆಗಳ ಫಲಾನುಭವಿಗಳೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಜನರೇ ಆಗಿದ್ದಾರೆ. ಹೀಗೆ ಮಾಡುವುದೇ ಸಾಮಾಜಿಕ ನ್ಯಾಯದ ನಿಜವಾದ ಹೋರಾಟ. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಕಾಂಗ್ರೆಸ್ ಹಾಗೂ ಬಿಆರ್‌ಎಸ್ ರಾಜಕೀಯ ಲಾಭಗಳಿಸುತ್ತವೆ. ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಲು ಇವರೇ ಯತ್ನಿಸಿದ್ದರು’ ಎಂದು ಮೋದಿ ಮಾತನಾಡಿದ್ದರು. ಈ ಮೂಲಕ ತೆಲಂಗಾಣದಲ್ಲಿ ಬಿಜೆಪಿಯು ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ಮತ ಸೆಳೆಯುವ ಯತ್ನ ನಡೆಸುತ್ತಿದೆ ಎಂಬುದು ಸ್ಪಷ್ಟ.

ಇದಕ್ಕೆ ಕಾರಣವೂ ಇದೆ. ಮೊದಲನೆಯದು ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ಮತಗಳ ಪ್ರಮಾಣ ಶೇ 80ಕ್ಕಿಂತಲೂ ಅಧಿಕ. ರಾಜ್ಯದ ಒಟ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ಎಸ್‌ಸಿ ಹಾಗೂ ಎಸ್‌ಟಿ ಮೀಸಲು ಕ್ಷೇತ್ರಗಳ ಸಂಖ್ಯೆ 31. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್ 23 ಕ್ಷೇತ್ರಗಳನ್ನು ಗೆದ್ದುಕೊಂಡಿದೆ. ಬಿಜೆಪಿಗೆ ಒಂದು ಕ್ಷೇತ್ರದಲ್ಲೂ ಗೆಲುವು ದೊರೆತಿಲ್ಲ. ಇದೇ ಕಾರಣಕ್ಕೆ ಪ್ರಧಾನಿ ಅವರು ಪದೇ ಪದೇ ಎಸ್‌ಸಿ, ಎಸ್‌ಟಿ ಜನರ ಕುರಿತು ರಾಜ್ಯದಲ್ಲಿ ಮಾತನಾಡುತ್ತಿದ್ದಾರೆ. ಈ ವರ್ಗದ ಜನರು ಬಿಆರ್‌ಎಸ್‌ನ ಮತಬ್ಯಾಂಕ್. ಇದೇ ಕ್ಷೇತ್ರಗಳಲ್ಲಿ 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಆರ್‌ಎಸ್ 25 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಆದರೆ, ಈಗ ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಾಬಲ್ಯ ಅಧಿಕಗೊಂಡಿದೆ, ಬಿಆರ್‌ಎಸ್ ಬಲ ಕುಂದಿದೆ ಮತ್ತು ಬಿಜೆಪಿಗೆ ಜಾಗವೇ ಇಲ್ಲದಂತಾಗಿದೆ.

2019ರ ಲೋಕಸಭಾ ಚುನಾವಣೆ ಫಲಿತಾಂಶ



* 2014ರಲ್ಲಿ ತೆಲಂಗಾಣವನ್ನು ರಚಿಸಲಾಯಿತು. 2019ರಿಂದ ತೆಲಂಗಾಣದಲ್ಲಿ ಲೋಕಸಭೆ ಚುನಾವಣೆಯು ನಡೆಯುತ್ತಿದೆ

ಹೊಡೆದಾಟದಲ್ಲೇ ಕಥೆಯ ಹುಡುಕಾಟ


ಯುವ

ನಾವು ನೋಡಿದ ಸಿನಿಮಾ

ತಂದೆ ಎಂಬ ಪಾತ್ರವನ್ನು ಮುಖ್ಯಭೂಮಿಕೆಯಲ್ಲಿಟ್ಟುಕೊಂಡು ಅದರ ಸುತ್ತ ಸಿನಿಮಾಗಳನ್ನು ಹೆಣೆದವರು ಸಂತೋಷ್ ಆನಂದ್‌ರಾಮ್. ‘ಯುವ’ ಚಿತ್ರವೂ ಇಂತಹದೇ ಕಥೆಯೊಂದನ್ನು ಹೊತ್ತುಬಂದಿದೆ. ಆದರೆ ಸದೃಢವಾದ ಕಥೆಯೊಂದಿಲ್ಲದೆ ಹಲವು ಸಿನಿಮಾಗಳ ಮಿಶ್ರಣದಂತೆ ಇದು ಭಾಸವಾಗುತ್ತದೆ. ಭಾವನಾತ್ಮಕ ವಿಷಯಗಳು ಸಿನಿಮಾದಲ್ಲಿದ್ದರೂ ಅತಿಯಾದ ಹೊಡೆದಾಟ ಚಿತ್ರದ ಕಥೆಯನ್ನು ಹಳಿತಪ್ಪಿಸಿದೆ.

ಚಿತ್ರದ ನಾಯಕ ‘ಯುವ’(ಯುವ ರಾಜ್‌ಕುಮಾರ್) ಮಧ್ಯಮ ವರ್ಗದ ಯುವಕ. ಮಂಗಳೂರಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿ. ಆತನ ಪ್ರೇಯಸಿ ‘ಸಿರಿ’(ಸಪ್ತಮಿ ಗೌಡ). ಅಲ್ಲಿ ಸ್ಥಳೀಯ ಹುಡುಗರಿಗೂ, ಹಾಸ್ಟೆಲ್‌ನಲ್ಲಿರುವ ಹೊರಜಿಲ್ಲೆಯ ಹುಡುಗರ ನಡುವೆ ಜಗಳ. ತನ್ನ ಐಷಾರಾಮಿ ಬೈಕ್ ಹಾನಿಗೊಳಿಸಿದ ಸ್ಥಳೀಯ ವಿದ್ಯಾರ್ಥಿಗಳ ಮೇಲೆ ‘ಯುವ’ ಮುಗಿಬೀಳುತ್ತಾನೆ. ಇಲ್ಲಿಂದ ಗ್ಯಾಂಗ್‌ವಾರ್. ಹಾಸ್ಟೆಲ್ ಹುಡುಗರಿಗೆ ‘ಯುವ’ ನಾಯಕ. ಧೂಮಪಾನ, ಮದ್ಯಪಾನ ಇಲ್ಲಿ ಅನಿಯಮಿತ. ಕುಸ್ತಿಪಟುವಾಗಿದ್ದ ‘ಯುವ’ ಏಕೆ ಹೀಗಾಗುತ್ತಾನೆ? ಸನ್ನಿವೇಶವೊಂದು ಆತನನ್ನು ಬದಲಾಯಿಸುತ್ತದೆಯೇ? ಎನ್ನುವುದು ಚಿತ್ರದ ಮುಂದಿನ ಕಥೆ.

ನಿರ್ದೇಶಕರು ‘ಯುವ’ ಎಂಬ ಪಾತ್ರವನ್ನು ತೆರೆಯಲ್ಲಿ ಸ್ಥಾಪಿಸಲು ಬರೆದ ಚಿತ್ರಕಥೆಯು ಚಿತ್ರದ ಮೊದಲಾರ್ಧ. ಇದು ಬರೀ ಹೊಡೆದಾಟದಿಂದ ಕೂಡಿದೆ. ಸೂತ್ರ ಕಿತ್ತ ಗಾಳಿಪಟದಂತೆ ಚಿತ್ರಕಥೆ ಎತ್ತೆತ್ತಲೋ ಸಾಗುತ್ತದೆ. ಹಿನ್ನೆಲೆ ಸಂಗೀತ, ಸಂಭಾಷಣೆಗಳಿಗಿಂತ ಹೆಚ್ಚು ಕಿವಿಗಪ್ಪಳಿಸುತ್ತವೆ. ಪಾತ್ರಗಳು ಕಿರುಚುತ್ತಲೇ ಇರುತ್ತವೆ. ಮಂಗಳೂರಿನ ಸ್ಲ್ಯಾಂಗ್ ಬಳಕೆ, ದೇಹಭಾಷೆ ವಾಸ್ತವಕ್ಕಿಂತ ಭಿನ್ನ.

ಮಧ್ಯಂತರದ ಬಳಿಕ ಸಿನಿಮಾದ ಚಿತ್ರಣ ಬದಲಾಗುತ್ತದೆ. ಭಾವಾನತ್ಮಕ ಕಥೆಯೊಂದು ಪಾತ್ರಗಳನ್ನು ನಡೆಸಿಕೊಂಡು ಹೋಗುತ್ತದೆ. ದ್ವಿತೀಯಾರ್ಧದಲ್ಲಿ ಲಾಜಿಕ್ ಇಲ್ಲದ ಕೆಲ ದೃಶ್ಯಗಳು ಇದ್ದರೂ, ಕಥೆಯ ಕಾರಣದಿಂದ ಸಿನಿಮಾ ಹಳಿಗೆ ಬರುತ್ತದೆ. ಫುಡ್ ಡೆಲಿವರಿ ಬಾಯ್ಸ್ ಕಥೆ, ವ್ಯಥೆ ಮೂಲಕ ನಿರುದ್ಯೋಗದ ಅಂಶವನ್ನು ಉಲ್ಲೇಖಿಸಲಾಗಿದೆ. ಚಿತ್ರದ ನಾಯಕ ಕುಸ್ತಿಪಟು ಆಗಿದ್ದರೂ ಅದನ್ನು ಸೂಕ್ತವಾಗಿ ತೋರ್ಪಡಿಸುವ ದೃಶ್ಯಗಳಿಲ್ಲ. ಕ್ಲೈಮ್ಯಾಕ್ಸ್‌ನಲ್ಲಿ ಕುಸ್ತಿ ಪಂದ್ಯದ ದೃಶ್ಯಗಳಿದ್ದರೂ ಆಸ್ವಾದಿಸುವ ಅಂಶಗಳು ಅದರಲ್ಲಿ ಇಲ್ಲ. ‘ತೋರಿಸಬೇಕು’ ಎನ್ನುವುದಕ್ಕಷ್ಟೇ ಇದು ಸೀಮಿತವಾಗಿದೆ. ‘ದಂಗಲ್’ನ ಕ್ಲೈಮ್ಯಾಕ್ಸ್‌ಗೆ ಇದು ಹೋಲಿಕೆಯಾಗುತ್ತದೆ. ಚಿತ್ರದಲ್ಲಿ ಹಾಸ್ಯದ ಕೊರತೆಯಿದೆ. ಕ್ಯಾಂಪಸ್ ದೃಶ್ಯಗಳಿದ್ದರೂ, ಅವು ಕೇವಲ ಹೊಡೆದಾಟಕ್ಕೆ ಬಳಕೆಯಾಗಿವೆ. ಅಂತಹ ಸಂದರ್ಭದಲ್ಲೂ ಕಾಲೇಜಿನ ಪ್ರಾಂಶುಪಾಲರಾಗಿ ಗೋಪಾಲ್ ದೇಶಪಾಂಡೆ ದೃಶ್ಯವೊಂದರಲ್ಲಿ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸುತ್ತಾರೆ.

ಅಪ್ಪನ ಪಾತ್ರದಲ್ಲಿ ಅಚ್ಯುತ್ ಕುಮಾರ್ ಜೀವಿಸಿದ್ದಾರೆ. ಅದು ಅವರಿಗೆ ಹೊಸದೇನಲ್ಲ ಎನಿಸುವಂತಿದೆ. ಯುವ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಅವರಿಗೆ ಆ್ಯಕ್ಷನ್ ಜಾನರ್ ಸಿನಿಮಾಗಳಲ್ಲಿ ಭವಿಷ್ಯವಿದೆ ಎನ್ನುವುದಕ್ಕೆ ಸಾಕ್ಷ್ಯದಂತಿದೆ ‘ಯುವ’ ಸಿನಿಮಾ. ಪುನೀತ್ ರಾಜ್‌ಕುಮಾರ್ ಅವರ ಸಿಗ್ನೇಚರ್ ಫೈಟ್ಸ್ ಹಾಗೂ ಆ್ಯಕ್ಷನ್‌ಗಳನ್ನು ಇಲ್ಲಿ ಕಾಣಬಹುದು. ‘ಅಪ್ಪು’ವಿಗೆ ಕನೆಕ್ಟ್ ಆಗುವ ಅಂಶಗಳೂ ಸಿನಿಮಾದಲ್ಲಿವೆ. ಈ ಸಿನಿಮಾದಲ್ಲಿ ಗಟ್ಟಿಯಾದ ಕಥೆಯಿಲ್ಲದ ಕಾರಣ ಪೂರ್ಣಪ್ರಮಾಣದ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಲು ಅವರಿಗಿಲ್ಲಿ ಸಾಧ್ಯವಾಗಿಲ್ಲ ಎಂಬಂತೆ ಭಾಸವಾಗುತ್ತದೆ. ಸಪ್ತಮಿ, ಸುಧಾರಾಣಿ, ಹಿತಾ, ಗೋಪಾಲ್ ದೇಶಪಾಂಡೆ, ಗಿರಿರಾಜ್ ತಮ್ಮ ಪಾತ್ರಗಳನ್ನು ಸೂಕ್ತವಾಗಿ ನಿಭಾಯಿಸಿದ್ದಾರೆ. ‘ಅಪ್ಪುಗೆ’ ಹಾಗೂ ‘ಕವಿತೆ..ಕವಿತೆ..’ ಹಾಡುಗಳು ಅರ್ಥಗರ್ಭಿತವಾಗಿ, ಇಂಪಾಗಿವೆ.

ಅಭಿಲಾಷ್ ಪಿ.ಎಸ್.

ಯುವ (ಕನ್ನಡ)
- **ನಿರ್ಮಾಣ: : ವಿಜಯ್ ಕಿರಗಂದೂರ್**
- **ನಿರ್ದೇಶನ: ಸಂತೋಷ್ ಆನಂದ್‌ರಾಮ್**
- **ತಾರಾಗಣ: ಯುವ ರಾಜ್‌ಕುಮಾರ್, ಸಪ್ತಮಿ ಗೌಡ, ಅಚ್ಯುತ್‌ಕುಮಾರ್, ಸುಧಾರಾಣಿ, ಹಿತಾ ಚಂದ್ರಶೇಖರ್, ಗೋಪಾಲ್ ದೇಶಪಾಂಡೆ ಮತ್ತಿತರರು.**

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5636

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅತ್ಯಂತ ಸರಾಗವಾದ ಹಂಚಿಕೆ (5)
4.ವಿಪುಲವಾಗಿ ಬಂದಿರುವ ಕ್ಷೋಭೆ! (3)
5.ಬಳೆಗಳನ್ನು ಒಟ್ಟಾಗಿ ಕಟ್ಟಿದ ಗೊಂಚಲು (3)
6.ಹರನಲ್ಲಿರುವ ಆಯುಧ ಕಾಣುತ್ತಿದೆಯೇ? (3)
8.ಇಂದ್ರಿಯ ನಿಗ್ರಹವಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)
9.ಹೊಗೆಸೊಪ್ಪು ಇಲ್ಲಿದೆ (3)
12.ಮಂದಿ ಹೊಕ್ಕಿರುವ ಗುಡಿ (3)
15.ಜನರ ನಡುವೆಯೇ ನುಗ್ಗಿರುವ ಆಳು (3)
16.ಅವನಿರುವ ಭೂಮಿ (3)
17.ಹಳೆಯದನ್ನು ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ
1.ಮೋಹಕವಾದ ನಗೆಯುಳ್ಳವಳು (4)
2.ಊಟದ ಮನೆಯಿದು (5)
3.ಯಮನ ಬಳಿಯಿರುವ ಜೋಡಿ (3)
4.ಪ್ರೇಮಿಗಳ ಅಗಲಿಕೆಯ ನೋವು (3)
7.ತಾರೀಫು ಮಾಡಿದವನು ತೋರಿಸಿದ ದಿನಾಂಕ! (3)
8.ಬಿಡದಿಗೆ ಬಂದಿರುವ ಪತ್ನಿ (3)
10.ಲಾಂಗೂಲ ಹಿಡಿದು ಆಗಮಿಸಿದ ಹಿಂಬಾಲಕ (5)
11.ಅತೀ ಬುದ್ಧಿವಂತನಿವನು (4)
13.ಜನಿವಾರ ಧರಿಸಿದ ರಾತ್ರಿ! (3)
14.ಆ ಕಡೆ ನಿಂತಿರುವವನ ಮುಖ! (3)



5635ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಯೋಧಿಕ 3.ಶತಪದ
5.ನಸುಕು 6.ತಿಲೋದಕ
8.ನಮ್ಮಾಸು 10.ಮರ್ಕಟ
12.ನಸುನಗು 15.ವಠಾರ
16.ಕೆನೆಹಾಲು 17.ಕಡುಗಲಿ

ಮೇಲಿಂದ ಕೆಳಕ್ಕೆ:
1.ವರ್ಧಂತಿ 2.ಕನಕ
3.ಶಕುನ 4.ದಟ್ಟಿ
7.ಲೋಕಾಭಿರಾಮ
9.ಸುಪ್ತಚೇತನ
11.ಟವಲು 12.ನರಕ
13.ಗುದ್ದಲಿ 14.ಸೆಕೆ

ಸುಡೊಕು 6021

			4		2		7	6
3		6				2		5
	2			5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6020 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಮಾರ್ಚ್ 30, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಪಂಚಮಿ ಗಂ. 21-14 ನಕ್ಷತ್ರ: ಅನುರಾಧಾ ಗಂ.22-04 ಯೋಗ: ಸಿದ್ಧಿ (ಆಸ್ರಿಕ್) ಗಂ. 22-46 ಕರಣ: ಕೌಲವ ಗಂ. 08-52, ಮೀನ ಮಾಸದ 16 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 4. ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-32 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 19 ರಂಜಾನ್ , ದಿನ ವಿಶೇಷ : ರಂಗ ಪಂಚಮಿ, ಈಸ್ಟರ್ ಶನಿವಾರ (ಕ್ರಿಶ್ಚಿಯನ್).ಅದೃಷ್ಟ ಸಂಖ್ಯೆ : 7, 3

ಮೇಷ: ರಾಜಕೀಯ ವ್ಯಕ್ತಿಗಳು ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರವನ್ನು ಪಡೆದುಕೊಳ್ಳುವಲ್ಲಿ ಸಫಲರಾಗುವಿರಿ. ಕೆಲವು ಕಠಿಣ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿದ್ದು ಮನಸ್ಸು ನಿರಾಳವಾಗಲಿದೆ.

ವೃಷಭ: ತೆರಿಗೆ ಸಂಬಂಧಿ ಅಥವಾ ಲೇವಾದೇವಿ ನಡೆಸುವವರಿಗೆ ಉತ್ತಮ ದಿನ. ಕೆಲವು ವಿಚಾರಗಳಿಗೆ ಭಾವುಕರಾಗುವ ಸನ್ನಿವೇಶ ಎದುರಾಗುವುದು. ಕ್ರೀಡಾಪಟುಗಳಿಗೆ ಪ್ರಾಯೋಜಕರು ದೊರೆತು ಸಂತಸವಾಗುತ್ತದೆ.

ಮಿಥುನ: ಮದುವೆಗಾಗಿ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳುವ ಬಗ್ಗೆ ಯೋಚನೆಗಳು ಬರಲಿದೆ. ನಿಧಾನಗತಿಯಲ್ಲಿ ಸಾಗುತ್ತಿರುವ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಮೋಸದ ಬಲೆಗೆ ಬೀಳದಿರಿ.

ಕರ್ಕಾಟಕ: ಕಾಂಟ್ರಾಕ್ಟ್ ವ್ಯವಹಾರಸ್ಥರಿಗೆ ಸರ್ಕಾರದಿಂದ ಹೆಚ್ಚಿನ ಗುತ್ತಿಗೆ ಕೆಲಸಗಳನ್ನು ಪಡೆಯುವ ಮಹತ್ವಾಕಾಂಕ್ಷೆ ಉಂಟಾಗಲಿದೆ. ವಿರೋಧಿಗಳ ಮಧ್ಯದಲ್ಲೇ ವಾಸಸ್ಥಾನವಿದೆ ಎಂಬುದನ್ನು ಮರೆಯದಿರಿ.

ಸಿಂಹ: ಧಾರ್ಮಿಕ ವಿಚಾರಗಳಲ್ಲಿ ಸಾಧನೆ ಮಾಡುವವರಿಗೆ ಸುಸಮಯ. ವೃದ್ಧಾಶ್ರಮ ವಾಸಿಗಳಿಗೆ ಹೆಚ್ಚಿನ ಸಹಾಯ ಮತ್ತು ಸಿಹಿತಿನಿಸುಗಳು ಸಿಗಲಿದೆ. ರೈತರ ಬೆಳೆಗಳಿಗೆ ಉತ್ತಮ ಬೆಲೆ ದೊರೆಯುವ ಸಂಭವವಿದೆ.

ಕನ್ಯಾ: ನಾಳೆಯ ಯೋಜನೆಗಳಿಗೆ ಗಮನ ಕೊಡುವುದರಿಂದ ಕೆಲಸ ಪೂರ್ಣಗೊಳಿಸಲು ಸಹಾಯ ಮಾಡಲಿದೆ. ಹಿರಿಯರ ಆರೋಗ್ಯದ ಬಗೆಗೆ ಕಾಳಜಿ ವಹಿಸುವುದು ಅನಿವಾರ್ಯವಾಗುವುದು.

ತುಲಾ: ಆಕಸ್ಮಿಕವಾಗಿ ಪ್ರತಿಭೆ ಬೆಳಕಿಗೆ ಬರಲಿದೆ. ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ. ಸಾಧ್ಯತೆಗಳನ್ನು ಅರಿತುಕೊಂಡು ವ್ಯವಹಾರದಲ್ಲಿ ಮುಂದುವರಿಯುವುದು ಉತ್ತಮ.

ವೃಶ್ಚಿಕ: ಸೂಕ್ಷ್ಮ ವಿಚಾರಗಳಲ್ಲಿ ಬುದ್ಧಿವಂತಿಕೆಯ ನಿರ್ಣಯಗಳನ್ನು ಕೈಗೊಳ್ಳುವಿರಿ. ಜೀವನ ಸಂಗಾತಿಯ ಹುಡುಕಾಟದ ಬಗ್ಗೆ ಗಮನಿಸಿ. ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಸಮಯ ಒದಗಿಬರುವುದು.

ಧನು: ವಿದೇಶದಲ್ಲಿರುವ ಮಕ್ಕಳ ಅಥವಾ ಬಂಧು ಮಿತ್ರರ ಆಗಮನ ಮನಸ್ಸಿಗೆ ಸಂತೋಷ ಕೊಡುತ್ತದೆ. ತೆಗೆದುಕೊಂಡ ನಿರ್ಧಾರಗಳು ತಪ್ಪಾಗಿರುವ ಬಗ್ಗೆ ಅರಿವಾಗುವುದು. ನೀಲಿ ಬಣ್ಣ ಶುಭ ತರಲಿದೆ.

ಮಕರ: ಕಠಿಣ ನಿರ್ಧಾರದಿಂದ ಹಿಂದಿನ ಕೆಲಸಕಾರ್ಯಗಳೆಲ್ಲವು ಪೂರ್ಣಗೊಳ್ಳಲಿದೆ. ವಿದ್ಯಾಪೇಕ್ಷಿಗಳು ಶ್ರದ್ಧೆಯಿಂದ ಸತತ ಪರಿಶ್ರಮ ಪಟ್ಟರೆ ಫಲವುಂಟು. ವೈದ್ಯ ವೃತ್ತಿಯವರಿಗೆ ವಿಶೇಷ ಲಾಭವಿದೆ.

ಕುಂಭ: ಸಣ್ಣಮಟ್ಟದ ಗುತ್ತಿಗೆದಾರರಿಗೆ ಸರ್ಕಾರಿ ಕಾಮಗಾರಿಗಳು ದೊರೆಯುವ ಸಂಭವವಿದೆ. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿ ಬರಲಿದೆ. ಇದರಿಂದಾಗಿ ಎಲ್ಲಾ ಸುಲಭವಾಗಿ ಕೆಲಸ ಪೂರೈಸುವಿರಿ.

ಮೀನ: ವೈಯಕ್ತಿಕ ಮತ್ತು ವ್ಯವಹಾರಿಕವಾಗಿ ಬಾಕಿ ಇರುವ ಕೆಲಸಗಳನ್ನು ಪೂರ್ತಿಗೊಳಿಸುವ ಬಗ್ಗೆ ಹೆಚ್ಚಿನ ಗಮನಹರಿಸಿ. ಪರಿಸ್ಥಿತಿಯ ಮೇಲೆ ಹತೋಟಿ ಸಾಧಿಸಲು ಪ್ರಯತ್ನ ಪಡುವುದು ಒಳ್ಳೆಯದು.

ರಥದ ಚಕ್ರಕ್ಕೆ ಸಿಲುಕಿ ಹೋಂ ಗಾರ್ಡ್ ಸಾವು

ಕಲಬುರಗಿ: ಶರಣಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಸಂಜೆ ನಡೆದ ಉಚ್ಚಾಯಿ (ಸಣ್ಣ ರಥೋತ್ಸವ) ಸಂದರ್ಭದಲ್ಲಿ ರಾಮ ಸಿದ್ಧಪ್ಪ ರಥದ ಚಕ್ರಕ್ಕೆ ಸಿಲುಕಿ ಭದ್ರತಾ ಕರ್ತವ್ಯದಲ್ಲಿದ್ದ ಗೃಹರಕ್ಷಕ ದಳದ (ಹೋಂ ಗಾರ್ಡ್) ಸಿಬ್ಬಂದಿ ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನ ಉಜಳಂಬ ಗ್ರಾಮದ ರಾಮ ಸಿದ್ಧಪ್ಪ (31) ಮೃತಪಟ್ಟವರು. ಬೀದರ್ ಜಿಲ್ಲೆಯ ಅಶೋಕ ರೆಡ್ಡಿ ಅವರು ಗಾಯಗೊಂಡಿದ್ದು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಚೇತನ್ ಆರ್. ಮಾಹಿತಿ ನೀಡಿದರು.

ಸಂಜೆ 6.30ರ ಸುಮಾರಿಗೆ ಉಚ್ಚಾಯಿ ನಡೆಯುತ್ತಿದ್ದ ಸಂದರ್ಭದಲ್ಲಿ ರಥದ ಬಳಿ ಸಾಗುತ್ತಿದ್ದ ಭಕ್ತರನ್ನು ನಿಯಂತ್ರಿಸಲು ಮುಂದಾದ ರಾಮ ಅವರು ರಥದಡಿ ಸಿಲುಕಿದರು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ್ಲಿ ಅವರು ಮೃತಪಟ್ಟರು.

‘ದಿ ರಾಮೇಶ್ವರ ಕೆಫೆ’ ಬಾಂಬ್ ಸ್ಫೋಟ ಪ್ರಕರಣ: ಶಂಕಿತರ ಸುಳಿವು ಕೊಟ್ಟರೆ ₹10 ಲಕ್ಷ

ವೇಷ ಮರೆಸಿಕೊಂಡು ಶಂಕಿತರ ಓಡಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಿ ರಾಮೇಶ್ವರ ಕೆಫೆ’ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಚುರುಕುಗೊಳಿಸಿರುವ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ತಲೆಮರೆಸಿಕೊಂಡಿರುವ ಇಬ್ಬರು ಶಂಕಿತರ ಸುಳಿವು ನೀಡಿದವರಿಗೆ ಪ್ರತ್ಯೇಕವಾಗಿ ₹10 ಲಕ್ಷ ಬಹುಮಾನ ನೀಡುವುದಾಗಿ ಘೋಷಿಸಿದೆ.

ಶಂಕಿತರಾದ ಮುಸಾವೀರ್ ಹುಸೇನ್ ಶಾಜೀದ್ ಹಾಗೂ ಅಬ್ದುಲ್ ಮತೀನ್ ಅಹ್ಮದ್ ತಾಹಾ ಅವರಿರುವ ಸ್ಥಳದ ಬಗ್ಗೆ ಮಾಹಿತಿ ನೀಡಿದರೆ ಬಹುಮಾನ ನೀಡಲಾಗುವುದು. ಶಂಕಿತರ ಸುಳಿವು ಕೊಟ್ಟವರ ಹೆಸರನ್ನು ಗೋಪ್ಯವಾಗಿಡಲಾಗುವುದು ಎಂದು ಎನ್‌ಐಎ ಅಧಿಕಾರಿಗಳು ತಿಳಿಸಿದ್ದಾರೆ.

‘ಸದ್ಯ ಎನ್‌ಐಎ ತನಿಖೆಯಲ್ಲಿ, ತೀರ್ಥಹಳ್ಳಿಯ ಶಂಕಿತ ಮುಸಾವೀರ್ ಹುಸೇನ್ ಶಾಜೀದ್ ಎಂಬಾತನೇ ಮಾರ್ಚ್ 1ರಂದು ಬ್ಯಾಗ್‌ನಲ್ಲಿ ದಿ ರಾಮೇಶ್ವರ ಕೆಫೆಗೆ ಬಾಂಬ್ ತಂದಿಟ್ಟಿದ್ದ ಎಂಬುದು ಗೊತ್ತಾಗಿದೆ. ಈತನ ಕೃತ್ಯಕ್ಕೆ ತೀರ್ಥಹಳ್ಳಿಯ ಇನ್ನೊಬ್ಬ ಶಂಕಿತ ಅಬ್ದುಲ್ ಮತೀನ್ ಅಹ್ಮದ್ ತಾಹಾ ಸಹಕಾರ ನೀಡಿದ್ದ. ಇವರು ನಡೆಸಿದ್ದ ಕೃತ್ಯಕ್ಕೆ ಪ್ರಬಲ ಪುರಾವೆಗಳು ಸಿಕ್ಕಿವೆ. ಅಲ್ಲದೇ ಬಂಧಿತ ಪ್ರಮುಖ ಸಂಚುಕೋರ ಮುಜಮ್ಮಿಲ್ ಶರೀಫ್ ವಿಚಾರಣೆಯ ವೇಳೆ ನೀಡಿದ ಮಾಹಿತಿ ಆಧರಿಸಿ, ಇಬ್ಬರ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮುಸಾವೀರ್ ಹುಸೇನ್ ಶಾಜೀದ್‌ಗೆ ಅಂದಾಜು 30 ವರ್ಷ ಇರಬಹುದು. ಈತ ಕಟುಮಸ್ತಾದ ದೇಹ ಹೊಂದಿದ್ದು, ಸುಮಾರು 6 ಅಡಿ 2 ಇಂಚು ಎತ್ತರವಿದ್ದಾನೆ. ಮಹಮ್ಮದ್ ಜುನೇದ್ ಸೈಯದ್ ಹೆಸರಿನಲ್ಲಿ ನಕಲಿ ಚಾಲನಾ ಪರವಾನಗಿ ಹೊಂದಿದ್ದಾನೆ. ಇನ್ನೂ ಹಲವು ನಕಲಿ ದಾಖಲಾತಿ ತಯಾರಿಸಿಕೊಂಡಿದ್ದಾನೆ. ಜೀನ್ಸ್ ಪ್ಯಾಂಟ್, ಟೀ ಶರ್ಟ್, ಸ್ಮಾರ್ಟ್ ವಾಚ್, ಮಾಸ್ಕ್ ಧರಿಸಿ ಓಡಾಟ ನಡೆಸುತ್ತಿದ್ದಾನೆ. ಕೆಲವೊಮ್ಮೆ ವಿಗ್ ಹಾಗೂ ನಕಲಿ ಗಡ್ಡ ವೇಷದಲ್ಲಿ ಓಡಾಟ ನಡೆಸುತ್ತಿದ್ದಾನೆ. ಕಡಿಮೆ ದರದ ಹೋಟೆಲ್ ಹಾಗೂ ಪುರುಷರ ಹಾಸ್ಟೆಲ್‌ಗಳಲ್ಲಿ ವಾಸ್ತವ್ಯ ಮಾಡುತ್ತಿದ್ದಾನೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

‘ಅಬ್ದುಲ್ ಮತೀನ್ ಅಹ್ಮದ್ ತಾಹಾ ಎಂಬಾತನಿಗೂ ಅಂದಾಜು 30 ವರ್ಷ ಇರಬಹುದು. ಸಾಧಾರಣ ಮೈಕಟ್ಟು ಹೊಂದಿದ್ದು, 5 ಅಡಿ 5 ಇಂಚು ಎತ್ತರವಿದ್ದಾನೆ. ಮುಂಭಾಗದಲ್ಲಿ ತಲೆಕೂದಲು ಇಲ್ಲ. ವಿಘ್ನೇಶ್ ಹೆಸರಿನಲ್ಲಿ ಆಧಾರ್ ಕಾರ್ಡ್ ಹೊಂದಿದ್ದಾನೆ. ಉಳಿದ ಕೆಲವು ದಾಖಲೆಗಳನ್ನು ಹಿಂದೂ ಯುವಕರ ಹೆಸರಿನಲ್ಲಿ ನಕಲಿ ಆಗಿ ತಯಾರಿಸಿಕೊಂಡಿದ್ದಾನೆ. ಹೆಚ್ಚಾಗಿ ಹಾಸ್ಟೆಲ್‌ಗಳಲ್ಲಿ ವಾಸ್ತವ್ಯ ಮಾಡುತ್ತಿದ್ದಾನೆ. ಇಬ್ಬರು ಹೊರಗೆ ಓಡಾಟ ನಡೆಸುವಾಗ ನಾನಾ ವೇಷ ಧರಿಸುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಇಬ್ಬರು ಶಂಕಿತರ ಸುಳಿವು ಲಭಿಸಿದ ಕೂಡಲೇ 080-29510900, 8904241100 ಹಾಗೂ ಇ-ಮೇಲ್ ವಿಳಾಸ info.blr.nia@gov.inಗೆ ಮಾಹಿತಿ ನೀಡಬಹುದು ಅಥವಾ ವಿಳಾಸ: ರಾಷ್ಟ್ರೀಯ ತನಿಖಾ ದಳ, 3ನೇ ಮಹಡಿ, ಬಿಎಸ್‌ಎನ್‌ಎಲ್ ಟೆಲಿಫೋನ್ ಎಕ್ಸ್‌ಚೆಂಜ್, 80 ಅಡಿ ರಸ್ತೆ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು 08 –ಇಲ್ಲಿಗೆ ಕಳುಹಿಸಬಹುದು ಎಂದು ಅಧಿಕಾರಿಗಳು ಕೋರಿದ್ದಾರೆ.

ಅಬ್ದುಲ್ ಮತೀನ್ ಅಹ್ಮದ್ ತಾಹಾ

ಮುಸಾವೀರ್ ಹುಸೇನ್ ಶಾಜೀದ್

ಎನ್‌ಐಎ ಕಸ್ಟಡಿಗೆ ಪ್ರಮುಖ ಸಂಚುಕೋರ

ಬಂಧಿತ, ಚಿಕ್ಕಮಗಳೂರಿನ ಮೂಡಿಗೆರೆ ಮುಜಮ್ಮಿಲ್ ಶರೀಫ್‌ನನ್ನು ನಗರದ ಎನ್‌ಐಎ ವಿಶೇಷ ನ್ಯಾಯಾಲಯವು ಏಳು ದಿನಗಳ ಕಾಲ ಎನ್‌ಐಎ ಕಸ್ಟಡಿಗೆ ನೀಡಿ, ಆದೇಶಿಸಿದೆ. ಕಸ್ಟಡಿ ಪಡೆದಿರುವ ತನಿಖಾಧಿಕಾರಿಗಳು ವಿಚಾರಣೆ ಮುಂದುವರಿಸಿದ್ದಾರೆ.

ಕೆಫೆ ಸ್ಫೋಟದ ಪ್ರಮುಖ ಆರೋಪಿಗೆ ಬಾಂಬ್ ತಯಾರಿಸಲು ಅಗತ್ಯವಾದ ಕಚ್ಚಾ ಸಾಮಗ್ರಿಗಳನ್ನು ಸಾಗಿಸಿರುವ ಜತೆಗೆ ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸಿದ್ದ ಮಾಹಿತಿ ತನಿಖಾ ತಂಡಕ್ಕೆ ಲಭ್ಯವಾಗಿದೆ. ಹೀಗಾಗಿ, ಹೆಚ್ಚಿನ ವಿಚಾರಣೆಗೆ ಅನುಮತಿ ನೀಡುವಂತೆ ಮಾಡಿಕೊಂಡ ಮನವಿ ಪುರಸ್ಕರಿಸಿದ ನ್ಯಾಯಾಲಯ, ಶಂಕಿತನನ್ನು ಎನ್‌ಐಎ ಕಸ್ಟಡಿಗೆ ನೀಡಿದೆ.

‘ಕಳೆದ ಆರು ತಿಂಗಳ ಹಿಂದೆ ಬೆಂಗಳೂರು ತೊರೆದು ಮೂಡಿಗೆರೆಯ ಅಂಗಡಿಯೊಂದರಲ್ಲಿ ಈತ ಕೆಲಸ ಮಾಡುತ್ತಿದ್ದ. ಅಬ್ದುಲ್ ಮತೀನ್ ತಾಹಾ ಹಾಗೂ ಮುಜಮ್ಮಿಲ್ ಇಬ್ಬರು ಎಸ್ಸೆಸ್ಸೆಲ್ಸಿ ತನಕ ಜೊತೆಯಾಗಿ ಓದಿದ್ದರು’ ಎಂದು ಮೂಲಗಳು ತಿಳಿಸಿವೆ.

ಮತದಾನ ಜಾಗೃತಿ ಜಿಲ್ಲಾಡಳಿತ ಹಾಗೂ ಸ್ವೀಪ್ ಸಮಿತಿ ನೇತೃತ್ವದಲ್ಲಿ ಬೈಂದೂರು ತಾಲ್ಲೂಕಿನ ಶಿರೂರು ಅಳ್ವೆಗದ್ದೆ ಸಮುದ್ರ ತೀರದಲ್ಲಿ ಅಧಿಕಾರಿಗಳು ಸಮುದ್ರದಲ್ಲಿ ಈಜಾಡುತ್ತಾ ಮತದಾನ ಜಾಗೃತಿ ಮೂಡಿಸಿದರು

ಸುದ್ದಿ 2 ನಿಮಿಷ

ಉಗಾಂಡದ ಮಗು ದತ್ತು ಸ್ವೀಕಾರ ಪರಿಗಣಿಸಲು ನಿರ್ದೇಶನ

ಬೆಂಗಳೂರು: ಉಗಾಂಡದ ಮಗುವನ್ನು ದತ್ತು ಪಡೆಯುವುದಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ‘ಹೇಗ್ ದತ್ತು ಒಪ್ಪಂದಕ್ಕೆ ಉಗಾಂಡ ಸಹಿ ಹಾಕದೇ ಇರುವುದು ಭಾರತೀಯ ದಂಪತಿಯ ಮಗುವಿನ ಹಕ್ಕು ಕಸಿಯಲು ಕಾರಣವಾಗದು’ ಎಂಬ ಅಭಿಪ್ರಾಯವನ್ನು ಹೈಕೋರ್ಟ್ ವ್ಯಕ್ತಪಡಿಸಿದೆ.

ಈ ಸಂಬಂಧ ದಂಪತಿ ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಉಗಾಂಡದ ಮಗುವನ್ನು ದತ್ತು ಪಡೆಯುವುದಕ್ಕೆ ದಂಪತಿ ಸಲ್ಲಿಸಿರುವ ಮನವಿ ಪರಿಗಣಿಸಿ’ ಎಂದು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ ಅಡಿ ದತ್ತು ಪ್ರಕ್ರಿಯೆ ನಡೆಯದೇ ಇದ್ದರೂ ದಂಪತಿಯ ಮಗುವಿನ ಹಕ್ಕು ಮೊಟಕಾಗದಂತೆ ನೋಡಿಕೊಳ್ಳಬೇಕು’ ಎಂದು ನ್ಯಾಯಪೀಠ ಹೇಳಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸಮೀರ್ ಶರ್ಮಾ ಹಾಗೂ ಕೇಂದ್ರ ಸರ್ಕಾರದ ಪರ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಉಗಾಂಡದಲ್ಲಿದ್ದ ಭಾರತೀಯ ದಂಪತಿ ಉಗಾಂಡದ ಮಗುವೊಂದನ್ನು ದತ್ತು ಪಡೆದಿದ್ದರು. ಈ ಸಂಬಂಧ ಉಗಾಂಡ ನ್ಯಾಯಾಲಯ ದಂಪತಿಗೆ ಮಗುವಿನ ದತ್ತು ಸ್ವೀಕಾರದ ಹಕ್ಕನ್ನು ಖಾತರಿಪಡಿಸಿತ್ತು. ಇದನ್ನು ಔಪಚಾರಿಕಗೊಳಿಸುವುದಕ್ಕಾಗಿ ದಂಪತಿ ಭಾರತದ ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರಕ್ಕೆ (ಸಿಎಆರ್‌ಎ) ಮನವಿ ಸಲ್ಲಿಸಿದ್ದರು. ಈ ಮನವಿಗೆ ಸಿಎಆರ್‌ಎ ಸ್ಪಂದಿಸಿರಲಿಲ್ಲ. ಇದಕ್ಕಾಗಿ ದಂಪತಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಆರು ಜಿಲ್ಲೆಗಳಿಗೆ ಬಿಸಿ ಗಾಳಿ

ಬೆಂಗಳೂರು: ಉತ್ತರ ಒಳನಾಡಿನ ಆರು ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಬಿಸಿ ಗಾಳಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲಬುರಗಿ, ಬಾಗಲಕೋಟೆ, ರಾಯಚೂರು, ವಿಜಯಪುರ, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಯ ಒಂದೆರಡು ಕಡೆ ಬಿಸಿ ಗಾಳಿ ಕಾಣಿಸಿಕೊಳ್ಳುವ ಸಂಭವವಿದೆ. ಮುಂದಿನ ಮೂರು ದಿನಗಳು ಒಳನಾಡಿನ ಒಂದೆರಡು ಕಡೆ ಗರಿಷ್ಠ ತಾಪಮಾನ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ. ರಾಜ್ಯದಾದ್ಯಂತ ಒಣ ಹವೆ ಮುಂದುವರಿಯಲಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮುಂದಿನ ಎರಡು ದಿನ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಹೇಳಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕಲಬುರಗಿಯಲ್ಲಿ ಗರಿಷ್ಠ (40.9 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ಹಾಗೂ ಚಾಮರಾಜನಗರದಲ್ಲಿ ಕನಿಷ್ಠ (19.5 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ ಎಂದು ಇಲಾಖೆ ತಿಳಿಸಿದೆ.

25 ಪತ್ರಕರ್ತರಿಗೆ ‘ಕೆಯುಡಬ್ಲ್ಯುಜೆ ದತ್ತಿ ಪ್ರಶಸ್ತಿ’ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ‘ಕೆಯುಡಬ್ಲ್ಯುಜೆ ದತ್ತಿ ಪ್ರಶಸ್ತಿ’ಗಳನ್ನು ಗುರುವಾರ ಪ್ರಕಟಿಸಿದ್ದು, 25 ಪತ್ರಕರ್ತರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಗಳು ತಲಾ ₹5 ಸಾವಿರ ನಗದು ಒಳಗೊಂಡಿವೆ. ‘ಡಾ.ಬಾಬಾ ಸಾಹೇಬ ಅಂಬೇಡ್ಕರ್ ಪ್ರಶಸ್ತಿ’ಗೆ ಮಂಗಳೂರಿನ ಬಿ.ಎಂ.ಬಶೀರ್, ‘ಗೊಮ್ಮಟ ಮಾಧ್ಯಮ ಪ್ರಶಸ್ತಿ’ಗೆ ಬೆಳಗಾವಿಯ ಕುಂತಿನಾಥ ಕಲಮನಿ, ‘ಡಿವಿಜಿ ಪ್ರಶಸ್ತಿ’ಗೆ ಬೆಂಗಳೂರಿನ ವಿ.ವೆಂಕಟೇಶ್, ‘ಸಿ.ಆರ್.ಕೃಷ್ಣರಾವ್ (ಸಿಆರ್‌ಕೆ) ಪ್ರಶಸ್ತಿ’ಗೆ ಬೆಂಗಳೂರಿನ ಸಿ.ಜಿ.ಮಂಜುಳ, ‘ಯಶೋಧಮ್ಮ ಜಿ ನಾರಾಯಣ ಪ್ರಶಸ್ತಿ’ಗೆ ಮೈಸೂರಿನ ಮಲ್ಲಿಗೆ ಮಾಚಮ್ಮ, ‘ಎಸ್.ವಿ.ಜಯಶೀಲರಾವ್ ಪ್ರಶಸ್ತಿ’ಗೆ ಹುಬ್ಬಳ್ಳಿಯ ಮೋಹನ ಹೆಗಡೆ, ‘ಡಾ.ಎಂ.ಎಂ.ಕಲಬುರ್ಗಿ ಪ್ರಶಸ್ತಿ’ಗೆ ಸನತ್ ಕುಮಾರ್ ಬೆಳಗಲಿ, ‘ಕಿಡಿ ಶೇಷಪ್ಪ ಪ್ರಶಸ್ತಿ’ಗೆ ಹಾಸನದ ಬಿ.ಎಂ.ನಂದೀಶ್ ಆಯ್ಕೆಯಾಗಿದ್ದಾರೆ.

‘ಎಚ್.ಎಸ್.ದೊರೆಸ್ವಾಮಿ ಪ್ರಶಸ್ತಿ’ಗೆ ಬೆಂಗಳೂರಿನ ಆರ್.ಜಯಕುಮಾರ್, ‘ಪಿ.ಆರ್.ರಾಮಯ್ಯ ಪ್ರಶಸ್ತಿ’ಗೆ ಮೈಸೂರಿನ ಸಿ.ಕೆ.ಮಹೇಂದ್ರ, ‘ಎಚ್.ಕೆ.ವೀರಣ್ಣಗೌಡ ಪ್ರಶಸ್ತಿ’ಗೆ ರಾಮನಗರದ ಅಶೋಕ್ ರಾಮ್, ‘ರಾಜಶೇಖರಕೋಟಿ ಪ್ರಶಸ್ತಿ’ಗೆ ಬಾಗಲಕೋಟೆಯ ಶಶಿಕುಮಾರ್ ಬಿ. ಕೆರೂರ, ‘ಪಿ.ರಾಮಯ್ಯ ಪ್ರಶಸ್ತಿ’ಗೆ ರಾಣೆಬೆನ್ನೂರಿನ ಮನೋಹರ ಮಲ್ಲಾಡದ, ‘ಮ.ರಾಮಮೂರ್ತಿ ಪ್ರಶಸ್ತಿ’ಗೆ ಬೆಂಗಳೂರಿನ ಎಚ್.ಕೆ. ಬಸವರಾಜು, ‘ಗರುಡನಗಿರಿ ನಾಗರಾಜ್ ಪ್ರಶಸ್ತಿ’ಗೆ ಬೆಂಗಳೂರಿನ ಪ್ರಭುಲಿಂಗ ಶಾಸ್ತ್ರಿಮಠ ಭಾಜನರಾಗಿದ್ದಾರೆ.

‘ಮಹದೇವ ಪ್ರಕಾಶ್ ಪ್ರಶಸ್ತಿ’ಗೆ ಕಲಬುರಗಿಯ ವಿಜಯಕುಮಾರ್ ವಾರದ, ‘ಶಿವಮೊಗ್ಗದ ಮಿಂಚು ಶ್ರೀನಿವಾಸ್ ಪ್ರಶಸ್ತಿ’ಗೆ ಭದ್ರಾವತಿಯ ಎನ್.ಬಾಬು, ‘ಎಚ್.ಎಸ್.ರಂಗಸ್ವಾಮಿ ಪ್ರಶಸ್ತಿ’ಗೆ ಯಾದಗಿರಿಯ ನಾಮದೇವ ವಾಟ್ಕರ್, ‘ಎಂ.ನಾಗೇಂದ್ರರಾವ್ ಪ್ರಶಸ್ತಿ’ಗೆ ದಾವಣಗೆರೆಯ ರವಿ ಆರ್., ‘ಗಿರಿಜಮ್ಮ ರುದ್ರಪ್ಪ ತಾಳಿಕೋಟೆ ಪ್ರಶಸ್ತಿ’ಗೆ ಕೋಲಾರದ ಕೆ.ಗೋಪಿಕಾ ಮಲ್ಲೇಶ್, ‘ಗುರುಲಿಂಗಸ್ವಾಮಿ ಹೊಳಿಮಠ ಪ್ರಶಸ್ತಿ’ಗೆ ಚಾಮರಾಜನಗರದ ಆರ್.ಸಿ.ಪುಟ್ಟರಾಜು ಆಯ್ಕೆಯಾಗಿದ್ದಾರೆ. ವಿಶೇಷ ಪ್ರಶಸ್ತಿಗೆ ಚಿಕ್ಕಪ್ಪನಳ್ಳಿ ಷಣ್ಮುಖ, ಎಸ್.ಬಿ.ರವಿಕುಮಾರ್, ಶ.ಮಂಜುನಾಥ್ ಹಾಗೂ ರವಿ ಮಲ್ಲಾಪುರ ಭಾಜನರಾಗಿದ್ದಾರೆ. ಚಿತ್ರದುರ್ಗದಲ್ಲಿ ಏ.1ರಂದು ನಡೆಯುವ ಕಾರ್ಯಕ್ರಮದಲ್ಲಿ ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಕ್ರಮ ಕಸಾಯಿಖಾನೆ ಮೇಲೆ ದಾಳಿ

ಚನ್ನರಾಯಪಟ್ಟಣ (ಹಾಸನ): ಇಲ್ಲಿನ ಬಾಗೂರು ರಸ್ತೆಯಲ್ಲಿ ರೋಷನ್ ನಗರದ ಅಕ್ರಮ ಕಸಾಯಿಖಾನೆ ಮೇಲೆ ದಾಳಿ ನಡೆಸಿದ ಪೊಲೀಸರು, ಆರೋಪಿ ಇರ್ಷಾದ್ ಎಂಬಾತನನ್ನು ಬಂಧಿಸಿ, ಎರಡೂವರೆ ಟನ್ ಮಾಂಸವನ್ನು ವಶಕ್ಕೆ ಪಡೆದರು.

ಪ್ರಾಣಿ ದಯಾ ಸಂಘದವರು ನೀಡಿದ ಮಾಹಿತಿ ಮೇರೆಗೆ ನಗರ ಠಾಣೆ ಇನ್‌ಸ್ಪೆಕ್ಟರ್ ರಘುಪತಿ ಎಸ್.ಎಂ. ಹಾಗೂ ಸಿಬ್ಬಂದಿ ಶುಕ್ರವಾರ ಬೆಳಗಿನ ಜಾವ ದಾಳಿ ನಡೆಸಿದಾಗ, ಶೆಡ್‌ನಲ್ಲಿ 60 ಗೋವುಗಳ ಮಾಂಸವನ್ನು ನೇತು ಹಾಕಲಾಗಿತ್ತು.

ಸಿಂಧಿ ಕರುಗಳ ರಕ್ಷಣೆ: ಚನ್ನರಾಯಪಟ್ಟಣದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 26 ಸಿಂಧಿ ಕರುಗಳನ್ನು ಪೊಲೀಸರು ರಕ್ಷಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ, ಶುಕ್ರವಾರ ಬೆಳಗಿನ ಜಾವ ಮೈಸೂರು ರಸ್ತೆಯಲ್ಲಿ ಗೂಡ್ಸ್ ವಾಹನ ತಪಾಸಣೆ ನಡೆಸಿದಾಗ, ಕರುಗಳ ಸಾಗಣೆ ಪತ್ತೆಯಾಯಿತು. ಚಾಲಕ ಪರಾರಿಯಾಗಿದ್ದಾನೆ.

ಹವ್ಯಕ ವಾರ್ಷಿಕ ವಿಶೇಷ ಪ್ರಶಸ್ತಿಗಳು ಪ್ರಕಟ

ಬೆಂಗಳೂರು: ಅಖಿಲ ಹವ್ಯಕ ಮಹಾಸಭೆ ನೀಡುವ ‘ವಾರ್ಷಿಕ ಹವ್ಯಕ ವಿಶೇಷ ಪ್ರಶಸ್ತಿ’ಗೆ ವಿವಿಧ ಕ್ಷೇತ್ರಗಳ ಎಂಟು ಮಂದಿ ಸಾಧಕರು ಆಯ್ಕೆಯಾಗಿದ್ದಾರೆ.

‘ಹವ್ಯಕ ವಿಭೂಷಣ ಪ್ರಶಸ್ತಿ’ಗೆ ಎಚ್.ಎಂ. ತಿಮ್ಮಪ್ಪ ಕಲಸಿ (ಸಾಹಿತ್ಯ), ‘ಹವ್ಯಕ ಭೂಷಣ ಪ್ರಶಸ್ತಿ’ಗೆ ಗಣೇಶ ಎಲ್. ಭಟ್ (ಶಿಲ್ಪಶಾಸ್ತ್ರ), ಶಿವಾನಂದ ಕಳವೆ (ಪರಿಸರ), ಗೋಪಾಲಕೃಷ್ಣ ದೇಲಂಪಾಡಿ (ಯೋಗ), ‘ಹವ್ಯಕ ಶ್ರೀ ಪ್ರಶಸ್ತಿ’ಗೆ ಗಿರಿಧರ್ ದಿವಾನ್ (ಛಾಯಾಗ್ರಹಣ, ಸಂಗೀತ ನಿರ್ದೇಶನ), ಗಣೇಶ್ ದೇಸಾಯಿ (ಸಂಗೀತ), ಮಂಗಳ ಬಾಲಚಂದ್ರ (ಕಥಾಕೀರ್ತನಕಾರರು), ‘ಹವ್ಯಕ ಸೇವಾಶ್ರೀ ಪ್ರಶಸ್ತಿ’ಗೆ ಶ್ರೀಕಾಂತ ಹೆಗಡೆ ಅಂತ್ರವಳ್ಳಿ (ಹವ್ಯಕ ಮಾಸಪತ್ರಿಕೆ ಮಾಜಿ ಸಂಪಾದಕ) ಅವರು ಆಯ್ಕೆಯಾಗಿದ್ದಾರೆ.

ಇದೇ 31ರಂದು ಬೆಂಗಳೂರಿನ ಮಲ್ಲೇಶ್ವರದ ಹವ್ಯಕ ಭವನದಲ್ಲಿ ನಡೆಯುವ ‘81ನೇ ವರ್ಷದ ಹವ್ಯಕ ಸಂಸ್ಥಾಪನೋತ್ಸವ’ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಜಯಪ್ರಕಾಶ್ ಹೆಗ್ಡೆ ವಿರುದ್ಧ ಪ್ರಕರಣ

ಉಡುಪಿ: ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದ ಮೇಲೆ ಉಡುಪಿ– ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ. ಜಯಪ್ರಕಾಶ್ ಹೆಗ್ಡೆ ವಿರುದ್ಧ ಶಿರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಲ್ಲಿನ ಜಾರಂದಾಯ ದೈವಸ್ಥಾನದ ಧಾರ್ಮಿಕ ಉತ್ಸವಕ್ಕೆ ತೆರಳಿ ಚುನಾವಣಾ ಸಂಬಂಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ ಕಾಪು ತಾಲ್ಲೂಕಿನ ಫ್ಲೈಯಿಂಗ್ ಸ್ಕ್ವಾಡ್ ನೀಡಿದ ದೂರಿನಂತೆ ಪ್ರಕರಣ ದಾಖಲಾಗಿದೆ.

ಲೋಕಸಭೆ ಕಣಕ್ಕೆ ಎಂಇಎಸ್ ಸಮಿತಿ ರಚನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಮನೋಹರ ಕಿಣೇಕರ್

ಬೆಳಗಾವಿ: ‘ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ಮಹಾರಾಷ್ಟ್ರ ಏಕೀಕರಣ ಸಮಿತಿಯಿಂದ (ಎಂಇಎಸ್) ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸಬೇಕು. ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು. ಇದರ ಸಾಧಕ–ಬಾಧಕ ಕುರಿತು ಚರ್ಚಿಸಲು 21 ಜನರ ಸಮಿತಿ ರಚಿಸಲಾಗುವುದು’ ಎಂದು ಎಂಇಎಸ್ ಕಾರ್ಯಾಧ್ಯಕ್ಷ ಮನೋಹರ ಕಿಣೇಕರ್ ಹೇಳಿದರು.

ಲೋಕಸಭಾ ಚುನಾವಣೆಗೆ ಬೆಳಗಾವಿ ಕ್ಷೇತ್ರದಿಂದ ಎಂಇಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ವಿಷಯದ ಕುರಿತು ಚರ್ಚಿಸಲು ಇಲ್ಲಿನ ಮರಾಠ ಮಂದಿರ ಕಚೇರಿಯಲ್ಲಿ ಶುಕ್ರವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,‘ಈ ಸಲದ ಚುನಾವಣೆಯಲ್ಲಿ ಎಂಇಎಸ್‌ನಿಂದ ಅಭ್ಯರ್ಥಿ ಅಖಾಡಕ್ಕಿಳಿಸುವುದು ನಿಶ್ಚಿತ’ ಎಂದರು.

‘ಒಬ್ಬರನ್ನೇ ನಿಲ್ಲಿಸಿ ಸ್ಪರ್ಧೆ ಒಡ್ಡೋಣ ಎಂದು ಕೆಲವರು ಸಲಹೆ ನೀಡಿದರೆ, ಇನ್ನೂ ಕೆಲವರು 500 ಮಂದಿ ಕಣಕ್ಕಿಳಿಸೋಣ ಎಂದು ಕೆಲವರು ಸಲಹೆ ನೀಡಿದ್ದಾರೆ. ಇನ್ನೂ ಕೆಲವರು ಚುನಾವಣೆಯನ್ನೇ ಬಹಿಷ್ಕರಿಸಲು ಕೋರಿದ್ದಾರೆ. ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ಮತ್ತೊಮ್ಮೆ ಸಭೆ ಕರೆಯಲಾಗುವುದು’ ಎಂದರು.

‘500 ಮಂದಿ ಕಣಕ್ಕಿಳಿಸಿದರೆ ಠೇವಣಿ ಭರಿಸುವುದು ಕಷ್ಟವಾಗುತ್ತದೆ. ಠೇವಣಿ ಹೇಗೆ ಸಂಗ್ರಹಿಸಬೇಕು ಎಂಬ ಬಗ್ಗೆಯೂ ಚಿಂತನೆ ನಡೆಸಿದ್ದೇವೆ’ ಎಂದರು.

ಎಂಇಎಸ್ ಮುಖಂಡರಾದ ರಮಾಕಾಂತ ಕೊಂಡೂಸ್ಕರ್, ಶುಭಂ ಶೆಳಕೆ, ಮಾಲೋಜಿ ಅಷ್ಟೇಕರ್, ಶಿವಾಜಿ ಸುಂಠಕರ್ ಇತರರಿದ್ದರು.

ರಹಸ್ಯ ಕ್ಯಾಮೆರಾದಿಂದ ಆರೋಪಿ ಪತ್ತೆ

ಪ್ರಜಾವಾಣಿ ವಾರ್ತೆ

ಶಹಾಬಾದ್ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮುತಗಾ ಗ್ರಾಮದ ಕಂಠಿ ಬಸವೇಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಸಂದರ್ಭದಲ್ಲಿ ಮೂರ್ತಿ ಕದ್ದು ಹುಣ್ಣಿಮೆ ದಿನ ವಾಪಸ್ ತಂದಿಡುತ್ತಿದ್ದ ಪ್ರಕರಣವನ್ನು ಭೇದಿಸಿರುವ ಪೊಲೀಸರು, ಈ ಸಂಬಂಧ ಹಸಿರು ಸೇನೆ (ಚೊನಪ್ಪ ಪೂಜಾರಿ ಬಣ) ರಾಜ್ಯ ಕಾರ್ಯದರ್ಶಿ ಬಸವರಾಜ್ ಕೋರಿ ಅವರನ್ನು ಬಂಧಿಸಿದ್ದಾರೆ.

ದೇವಸ್ಥಾನದ ಗದ್ದುಗೆಯಲ್ಲಿದ್ದ ಬಸವಣ್ಣನ ಮೂರ್ತಿ ಮತ್ತು ಪಲ್ಲಕ್ಕಿಯಲ್ಲಿದ್ದ ಬಸವೇಶ್ವರರ ಮೂರ್ತಿಯನ್ನು ಅಮಾವಾಸ್ಯೆಯ ಒಂದು ದಿನ ಮುಂಚಿತವಾಗಿ ಬಸವರಾಜ್ ಕೋರಿ ಕಳವು ಮಾಡುತ್ತಿದ್ದ. ನಂತರ ಹುಣ್ಣಿಮೆಯ ದಿನ ಅದನ್ನು ವಾಪಸ್ ತಂದು ಇಡುತ್ತಿದ್ದ. ಈ ರೀತಿ ಮೂರು ಬಾರಿ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಬಸವರಾಜ್ ಕೋರಿ

ಕಳೆದ ಫೆ. 9ರಂದು ಮೂರನೇ ಬಾರಿ ಮೂರ್ತಿ ಕಳವು ಮಾಡಿದ್ದಾಗ ಅದನ್ನು ವಿರೂಪಗೊಳಿಸಲಾಗಿತ್ತು. ಈ ಬಗ್ಗೆ ಬಸವರಾಜ್ ಕೋರಿ ಅವರೇ ದೂರನ್ನೂ ನೀಡಿದ್ದರು. ಪೊಲೀಸರು ತನಿಖೆ ನಡೆಸುತ್ತಿದ್ದ ಸಂದರ್ಭದಲ್ಲೂ ಬಸವರಾಜ್ ಜೊತೆಗೆ ಇದ್ದು, ಅನುಮಾನ ಬಾರದಂತೆ ಇರುತ್ತಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು, ರಹಸ್ಯವಾಗಿ ಕ್ಯಾಮೆರಾ ಅಳವಡಿಸಿ ಕಾರ್ಯಾಚರಣೆ ನಡೆಸುವ ಮೂಲಕ ಆರೋಪಿ ಬಸವರಾಜ್ ಅವರನ್ನು ಬಂಧಿಸಿದ್ದಾರೆ.

‘ದೇವಸ್ಥಾನದ ಟ್ರಸ್ಟಿನ ಹೆಸರಿನಲ್ಲಿ ಸುಮಾರು 35 ಎಕರೆ ಜಮೀನು ಮತ್ತು ಇತರೆ ಆಸ್ತಿ ಇದೆ. ಟ್ರಸ್ಟ್‌ನಲ್ಲಿ ತಾನೂ ಸೇರಿಕೊಳ್ಳಬೇಕು ಎಂಬ ಕಾರಣಕ್ಕೆ ಬಸವರಾಜ್ ಈ ಕೃತ್ಯ ಎಸಗಿದ್ದಾನೆ’ ಎಂದು ಡಿವೈಎಸ್ಪಿ ಶಂಕರ್‌ಗೌಡ ಪಾಟೀಲ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸಿಪಿಐ ನಟರಾಜ ಲಾಡೆ, ಎಸ್‌ಐ ಗುಂಡಪ್ಪ, ದೊಡ್ಡಪ್ಪಗೌಡ, ಸಿದ್ದು ಒಡೆಯರ್, ಶ್ರೀಕಾಂತ್ ರಾಠೋಡ್ ಹಾಜರಿದ್ದರು.

‘ನಕ್ಸಲ್ ಚಟುವಟಿಕೆ ಮೇಲೆ ನಿಗಾ’

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು– ಕೇರಳ ರಾಜ್ಯದ ಗಡಿಭಾಗದಲ್ಲಿ ಹೆಚ್ಚುತ್ತಿರುವ ನಕ್ಸಲ್ ಚಟುವಟಿಕೆಗಳ ಮೇಲೆ ತೀವ್ರ ನಿಗಾ ವಹಿಸಲು ಹಾಗೂ ಉಭಯ ರಾಜ್ಯಗಳ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟೆಚ್ಚರ ವಹಿಸಲು ವಿರಾಜಪೇಟೆಯಲ್ಲಿ ಶುಕ್ರವಾರ ನಡೆದ ಅಂತರರಾಜ್ಯ ಅಪರಾಧ ಸಭೆಯಲ್ಲಿ ನಿರ್ಧರಿಸಲಾಯಿತು.

ಈ ಸಭೆಯಲ್ಲಿ ಕೊಡಗು ಹಾಗೂ ಕೇರಳ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು.

ನಕ್ಸಲ್ ಚಟುವಟಿಕೆಯ ಮಾಹಿತಿಯನ್ನೂ ಉಭಯತ್ರಯರೂ ವಿನಿಮಯ ಮಾಡಿಕೊಂಡರು. ಇನ್ನು ಮುಂದೆ ಅತೀವ ಎಚ್ಚರಿಕೆ ನಿರ್ಧರಿಸಲಾಯಿತು.

ಕೇರಳ ರಾಜ್ಯ ಇರಿಟ್ಟಿಯ ಎಎಸ್‌ಪಿ ಯೋಗೇಶ್ ಮಾಂದಿಯಾ, ಮಾನಂದವಾಡಿ ಡಿವೈಎಸ್‌ಪಿ ಪಿ.ಬ್ರಿಜೇಶ್, ತಿರುನೆಲ್ಲಿಯ ಇನ್‌ಸ್ಪೆಕ್ಟರ್ ಲಾಲ್ ಸಿ ಬೇಬಿ, ಇರಿಟ್ಟಿಯ ಇನ್‌ಸ್ಪೆಕ್ಟರ್ ಜಿತೇಶ್, ಕರ್ನಾಟಕದ ವಿರಾಜಪೇಟೆ ಉಪವಿಭಾಗದ ಡಿವೈಎಸ್‌ಪಿ ಆರ್. ಮೋಹನ್ ಕುಮಾರ್, ನಾಗರಹೊಳೆಯ ಎಸಿಎಫ್ ಪಿ.ಅನುಷಾ, ತಿತಿಮತಿಯ ಎಸಿಎಫ್ ಕೆ.ಪಿ.ಗೋಪಾಲ್, ಕುಟ್ಟ ಇನ್‌ಸ್ಪೆಕ್ಟರ್ ಸುನಿಲ್‌ಕುಮಾರ್, ವಿರಾಜಪೇಟೆ ಸಿಪಿಐ ಶಿವರುದ್ರ ಸೇರಿದಂತೆ 18 ಮಂದಿ ಗಡಿಭಾಗದ ಪೊಲೀಸ್ ಇನ್‌ಸ್ಪೆಕ್ಟರ್‌ಗಳು, ಸಬ್‌ಇನ್‌ಸ್ಪೆಕ್ಟರ್‌ಗಳು ಭಾಗವಹಿಸಿದ್ದರು.

ಅಧಿಕಾರಿಗಳ ಸಭೆ: ತಾಲ್ಲೂಕಿನ ಕೂಡುಮಂಗಳೂರು ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಅಂತರಜಿಲ್ಲಾ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಹಲವು ವಿಷಯಗಳು ಚರ್ಚೆಗೆ ಬಂದವು.

ಈ ವೇಳೆ ಮಾತನಾಡಿದ ಕೊಡಗು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ‘ಜಿಲ್ಲೆಯ ಗಡಿಭಾಗದಲ್ಲಿ ವಿವಿಧ ಅಪರಾಧ ಪ್ರಕರಣಗಳು ನಡೆಯುತ್ತಿದ್ದು, ಅಪರಿಚಿತ ವ್ಯಕ್ತಿಗಳ ಶವ ಪತ್ತೆ, ಕಾಣೆಯಾಗಿರುವ ಪ್ರಕರಣ ಹಾಗೂ ಗಾಂಜಾ ಸಾಗಾಟ, ಮಾರಾಟ ಸೇರಿದಂತೆ ಇತರೆ ಪ್ರಕರಣಗಳಲ್ಲಿನ ಆರೋಪಿಗಳ ಬಂಧನಕ್ಕೆ ಗಡಿಭಾಗದ ಪೊಲೀಸ್ ಅಧಿಕಾರಿಗಳ ಸಹಕಾರ ಮುಖ್ಯ’ ಎಂದರು. ವಿವಿಧ ಪ್ರಕರಣಗಳ ಹಾಗೂ ಅಪರಾಧ ಕೃತ್ಯಗಳ ಮಾಹಿತಿಗಳು ಪರಸ್ಪರ ಹಂಚಿಕೊಂಡು ಸಹಕರಿಸಿದಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗುತ್ತವೆ ಎಂದರು.

ಹುಬ್ಬಳ್ಳಿಯಲ್ಲಿ ನಾಗರಾಜ ಅವರ ಆಟೊರಿಕ್ಷಾದಲ್ಲಿ ಅಳವಡಿಸಲಾದ ನೀರಿನ ಕ್ಯಾನ್
–ಪ್ರಜಾವಾಣಿ ಚಿತ್ರ: ಗುರು ಹಬೀಬ

ಉಚಿತ ನೀರು: ಆಟೊ ಚಾಲಕರ ಮಾದರಿ ನಡೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಿಸಿಲಿನ ಝಳ ಪ್ರತಿ ದಿನ ಹೆಚ್ಚುತ್ತಿದ್ದು, ಜನ ತತ್ತರಿಸುವಂತಾಗಿದೆ. ಹೊರಗಡೆ ಓಡಾಡುವ ಜನರ ಬಾಯಾರಿಕೆ ನೀಗಿಸಲು ಇಲ್ಲಿನ ವೀರಾಪುರ ಓಣಿಯ ಆಟೊರಿಕ್ಷಾ ಚಾಲಕ ನಾಗರಾಜ ಗಬ್ಬೂರ ಅವರು ತಮ್ಮ ಆಟೊರಿಕ್ಷಾದಲ್ಲಿ ಕುಡಿಯುವ ನೀರಿನ ಉಚಿತ ವ್ಯವಸ್ಥೆ ಕಲ್ಪಿಸಿದ್ದಾರೆ. ಇದು ಹಲವು ಆಟೊರಿಕ್ಷಾ ಚಾಲಕರಿಗೆ ಮಾದರಿ ಆಗಿದೆ.

ಇಲ್ಲಿನ ಸಿದ್ಧಾರೂಢ ಮಠದ ಆವರಣದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಉತ್ತರ ಕರ್ನಾಟಕ ಆಟೊ ಚಾಲಕರ ಸಂಘದ ಅಧ್ಯಕ್ಷ ಶೇಖರಯ್ಯ ಮಠಪತಿ ನೇತೃತ್ವ ವಹಿಸಿದ್ದರು.

‘ಬಾಯಾರಿದವರಿಗೆ ನೀರು ನೀಡುವುದು ಕರ್ತವ್ಯ, ಸಂಸ್ಕೃತಿಯೂ ಹೌದು. 2016ರಿಂದ ಆಟೊರಿಕ್ಷಾದಲ್ಲಿ ನೀರಿನ ಕ್ಯಾನ್ ಅಳವಡಿಸಿಕೊಂಡು ಜನರಿಗೆ ಉಚಿತವಾಗಿ ನೀರು ಹಂಚುತ್ತಿರುವೆ. ಜನರಿಂದ ಉತ್ತಮ ಸ್ಪಂದನೆ ಸಿಗುತ್ತಿದೆ. ನನ್ನಿಂದ ಪ್ರೇರಿತರಾಗಿ ಇನ್ನೂ 14 ಆಟೊರಿಕ್ಷಾ ಚಾಲಕರು ಉಚಿತ ನೀರಿನ ಸೇವೆ ಆರಂಭಿಸಿದ್ದು ಖುಷಿ ಕೊಟ್ಟಿದೆ. ಅವರೆಲ್ಲರಿಗೆ ಕ್ಯಾನ್ ಅಳವಡಿಸುವ ಸ್ಟ್ಯಾಂಡ್ ನಿರ್ಮಿಸಿ ಕೊಟ್ಟಿದ್ದೇನೆ’ ಎಂದು ನಾಗರಾಜ ಗಬ್ಬೂರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರತಿದಿನ ಮೂರರಿಂದ ನಾಲ್ಕು ಕ್ಯಾನ್ ನೀರು ಖಾಲಿ ಆಗುತ್ತದೆ. ಶುದ್ಧ ಕುಡಿಯುವ ನೀರನ್ನೇ ಒದಗಿಸುತ್ತೇನೆ. ಪ್ರತಿ ಕ್ಯಾನ್‌ಗೆ ₹5 ಖರ್ಚು ಆಗುತ್ತದೆ. ಅದೇನೂ ಹೊರೆಯಲ್ಲ. ನೀರು ಕುಡಿದವರೆಲ್ಲರೂ ನನ್ನ ಆಟೊರಿಕ್ಷಾದಲ್ಲಿ ಬರುತ್ತಾರೆ ಎಂಬ ನಿರೀಕ್ಷೆ ಇಲ್ಲ. ಪ್ರಯಾಣಿಕರು ಅಲ್ಲದೇ ಯಾರಾದರೂ ನೀರು ಕುಡಿಯಬಹುದು’ ಎನ್ನುತ್ತಾರೆ ಅವರು.

ಪುಟ್ಟ ಗ್ರಂಥಾಲಯ: ‘ಕನ್ನಡವನ್ನು ಮರೆಯಬಾರದು, ಪುಸ್ತಕಗಳನ್ನು ಓದಬೇಕು ಎಂಬ ಉದ್ದೇಶದಿಂದ ಆಟೊರಿಕ್ಷಾದಲ್ಲಿ ಪುಟ್ಟ ಗ್ರಂಥಾಲಯದ ವ್ಯವಸ್ಥೆಯೂ ಮಾಡಿದ್ದೇನೆ’ ಎಂದರು.

‘ತೆರಿಗೆ ಭಯೋತ್ಪಾದನೆ’ ಬಿಜೆಪಿ ವಿರುದ್ಧ ಕಾಂಗ್ರೆಸ್ ಆರೋಪ

ಒಂದನೇ ಪುಟದಿಂದ...

‘ಕಾಂಗ್ರೆಸ್ ಪಕ್ಷವನ್ನು ಆರ್ಥಿಕವಾಗಿ ಕುಗ್ಗಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ, ಅದಕ್ಕೆಲ್ಲ ನಾವು ಬಗ್ಗುವುದಿಲ್ಲ. ಇಂತಹ ನೋಟಿಸ್‌ಗಳಿಗೆಲ್ಲ ಹೆದರುವುದಿಲ್ಲ. ಬದಲಿಗೆ ಮತ್ತಷ್ಟು ಉತ್ಸಾಹದಿಂದ ಮುನ್ನುಗ್ಗುತ್ತೇವೆ. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಾರ ಮುಂದುವರಿಯುತ್ತದೆ. ಪಕ್ಷದ ಭರವಸೆಗಳನ್ನು ದೇಶದ ಜನರ ಬಳಿಗೆ ಕೊಂಡೊಯ್ಯುತ್ತೇವೆ’ ಎಂದು ಅವರು ಪ್ರತಿಪಾದಿಸಿದರು.

ಶೀಘ್ರವೇ ‘ಸುಪ್ರೀಂ’ನಲ್ಲಿ ವಿಚಾರಣೆ: ಕಾಂಗ್ರೆಸ್ ಮತ್ತು ಇತರ ಸಮಾನಮನಸ್ಕ ವಿರೋಧ ಪಕ್ಷಗಳನ್ನು ಐಟಿ ಇಲಾಖೆಯು ಗುರಿಯಾಗಿಸುತ್ತಿದೆ ಎಂದ ಮಾಕನ್, ಐ.ಟಿ ಇಲಾಖೆಯ ಬೇಡಿಕೆಗಳ ನೋಟಿಸ್ ಕುರಿತು ಕಾಂಗ್ರೆಸ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯು ಶೀಘ್ರದಲ್ಲಿಯೇ ಸುಪ್ರೀಂ ಕೋರ್ಟ್‌ನಲ್ಲಿ ನಡೆಯಲಿದೆ ಎಂದರು.

ಕಾಂಗ್ರೆಸ್‌ನ ಚುನಾವಣಾ ವೆಚ್ಚಕ್ಕೆ ತಡೆ ಒಡ್ಡಲು, ಹಣಕಾಸು ಹೊಂದಿಸಿಕೊಳ್ಳುವಲ್ಲಿ ವಿಳಂಬ ಆಗುವಂತೆ ಮಾಡಲು ಮತ್ತು ಒಟ್ಟಾರೆಯಾಗಿ ನಿಷ್ಕ್ರಿಯಗೊಳಿಸಲು ಈ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ದೂರಿದರು.

> ಕೇಂದ್ರ ಸರ್ಕಾರದ ‘ತೆರಿಗೆ ಭಯೋತ್ಪಾದನೆ’ ಖಂಡಿಸಿ ದೇಶದಾದ್ಯಂತ ಶನಿವಾರ ಮತ್ತು ಭಾನುವಾರ ಕಾಂಗ್ರೆಸ್ ಬೃಹತ್ ಪ್ರತಿಭಟನೆ ನಡೆಸಲಿದೆ
> **ಕೆ.ಸಿ. ವೇಣುಗೋಪಾಲ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ)

‘ದಿವಂಗತ ಸೀತಾರಾಮ್ ಕೇಸರಿ ಅವರು ಪಕ್ಷದ ಖಜಾಂಚಿಯಾಗಿದ್ದ 1993–94ರ ಆರ್ಥಿಕ ವರ್ಷಗಳನ್ನೂ ಅಂದಾಜಿಸಿರುವುದು ನಿಜಕ್ಕೂ ಆಘಾತಕಾರಿ. ಎಂಟು ವರ್ಷಗಳ ಪೈಕಿ ನಾಲ್ಕು ವರ್ಷಗಳಿಗೆ ಸಂಬಂಧಿಸಿದ ಮೌಲ್ಯಮಾಪನ ಆದೇಶಗಳೇ ಇಲ್ಲದೆ ಐ.ಟಿ ಇಲಾಖೆಯು ಬೇಡಿಕೆ ಆದೇಶಗಳನ್ನು ಹೊರಡಿಸಿದೆ. ಇದು ಭಾರತದ ತೆರಿಗೆಯ ಇತಿಹಾಸದಲ್ಲಿಯೇ ಕಂಡರಿಯದ್ದಾಗಿದೆ’ ಎಂದರು. ಐ.ಟಿ ಇಲಾಖೆ ನಡೆಸಿದ ದಾಳಿ ವೇಳೆಯಲ್ಲಿ ದೊರೆತಿದೆ ಎನ್ನಲಾದ ಡೈರಿಗಳನ್ನು ಆಧರಿಸಿ ಈ ಆದೇಶಗಳನ್ನು ಹೊರಡಿಸಲಾಗಿದೆ. ದಾಳಿಗೊಳಗಾದ ಹಲವರು ಐ.ಟಿ ಇಲಾಖೆಯ ದೋಷಪೂರಿತ ಶೋಧ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ತಡೆಯಾಜ್ಞೆಗಳನ್ನು ತಂದಿದ್ದಾರೆ ಎಂದೂ ಮಾಕನ್ ವಿವರಿಸಿದರು.

‘ಇತರ ಡೈರಿಗಳನ್ನು ಏಕೆ ಗಮನಿಸಿಲ್ಲ’: ‘ಕಾಂಗ್ರೆಸ್ ವಿರುದ್ಧವೇ ಏಕೆ ಈ ರೀತಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಬಿಜೆಪಿ ಅಥವಾ ಅದರ ಮೈತ್ರಿ ಪಕ್ಷಗಳ ವಿರುದ್ಧ ಐ.ಟಿ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಐ.ಟಿ ಇಲಾಖೆಯು ಯಡಿಯೂರಪ್ಪ ಡೈರಿ, ಜೈನ್ ಡೈರಿ, ಸಹಾರಾ ಡೈರಿ, ಬಿರ್ಲಾ ಡೈರಿ, ಬಂಗಾರು ಲಕ್ಷ್ಮಣ್ ಅಪರಾಧಗಳ ಬಗ್ಗೆ ಏಕೆ ಗಮನಹರಿಸಿಲ್ಲ’ ಎಂದು ಅವರು ಕೇಳಿದರು.

‘ಆಯೋಗ ಮೂಕಪ್ರೇಕ್ಷಕ’: ‘ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯ ಭರವಸೆ ನೀಡುವ ಚುನಾವಣಾ ಆಯೋಗ ಏಕೆ ಮೂಕ ಪ್ರೇಕ್ಷಕನಂತಾಗಿದೆ, 2024ರ ಲೋಕಸಭೆ ಚುನಾವಣೆಯನ್ನು ಮುಕ್ತ ಮತ್ತು ನ್ಯಾಯಸಮ್ಮತ ಎಂದು ಕರೆಯುವುದಾದರೂ ಹೇಗೆ’ ಎಂದು ಅವರು ಪ್ರಶ್ನಿಸಿದರು.

ಮತ್ತೆ ಮೂರು ಕಡೆ ಬಿಜೆಪಿಗೆ ‘ಉರಿ’

ಒಂದನೇ ಪುಟದಿಂದ...

‘ಇನ್ನೂ ಕಾಲ ಮಿಂಚಿಲ್ಲ. ಟಿಕೆಟ್ ಬದಲಾಯಿಸಲು ಅವಕಾಶವಿದೆ. ನಮ್ಮ ನೋವು ಪಕ್ಷದ ವರಿಷ್ಠರಿಗೆ ಅರ್ಥವಾಗಿದೆ ಎಂದು ಭಾವಿಸಿದ್ದೇನೆ. ನಮಗೆ ಮತದಾರರ ಹಿತಾಸಕ್ತಿ ಮುಖ್ಯವೇ ಹೊರತು ಪಕ್ಷದ ತೀರ್ಮಾನವಲ್ಲ. ಪುತ್ರ ರಘುಚಂದನ್ ಯಾವ ರೀತಿ ಸ್ಪರ್ಧಿಸಬೇಕು ಎಂಬುದು ಪಕ್ಷದ ನಿಲುವು ಆಧರಿಸಿ ತೀರ್ಮಾನವಾಗಲಿದೆ’ ಎಂದು ಶಾಸಕ ಎಂ.ಚಂದ್ರಪ್ಪ ತಿಳಿಸಿದರು.

ರಾಯಚೂರಿನಲ್ಲಿ ಹಾಲಿ ಸಂಸದ ರಾಜಾ ಅಮರೇಶ್ವರ ನಾಯಕರಿಗೆ ಟಿಕೆಟ್ ಘೋಷಣೆಯಾದ ಬಳಿಕ, ಅತೃಪ್ತಿ ತೀವ್ರಗೊಂಡಿದೆ. ಆಕಾಂಕ್ಷಿಗಳಾಗಿದ್ದ ಮಾಜಿ ಸಂಸದ ಬಿ.ವಿ.ನಾಯಕ ಹಾಗೂ ಮಾಜಿ ಶಾಸಕ ತಿಪ್ಪರಾಜು ಹವಾಲ್ದಾರ್ ಬೆಂಬಲಿಗರು ಜಿಲ್ಲೆಯ ವಿವಿಧೆಡೆ ಸಭೆ ನಡೆಸಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈ ಸಭೆಗಳಲ್ಲಿ ಬ್ಯಾನರ್‌ಗಳ ಹಿಡಿದ ಪಕ್ಷದ ಕಾರ್ಯಕರ್ತರು, ‘ಗೋ ಬ್ಯಾಕ್ ಅಮರೇಶ್ವರ ನಾಯಕ’ ಎಂಬ ಘೋಷಣೆಗಳನ್ನು ಕೂಗಿದ್ದಾರೆ.

ರಾಯಚೂರು ಕ್ಷೇತ್ರದ ಬಿಜೆಪಿ ಪ್ರಭಾರಿ, ಕುಷ್ಟಗಿ ಶಾಸಕ ದೊಡ್ಡನಗೌಡ ಪಾಟೀಲ, ಬಿಜೆಪಿ ವಿಭಾಗೀಯ ಕಾರ್ಯದರ್ಶಿ ಚಂದ್ರಶೇಖರ ಪಾಟೀಲ ಜಿಲ್ಲೆಗೆ ಬಂದು ಇಬ್ಬರು ಆಕಾಂಕ್ಷಿಗಳ ಮನೆಗೆ ತೆರಳಿ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಇದೇ ಅವಧಿಯಲ್ಲಿ ಕಾರ್ಯಕರ್ತರು ಅಮರೇಶ್ವರ ನಾಯಕ ಅವರ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದೂ ನಡೆದಿದೆ.

ಅಮರೇಶ್ವರ ನಾಯಕ ಅವರೇ ಸ್ಪರ್ಧಿಸುವುದಾದರೆ ಅವರ ಪರವಾಗಿ ಪ್ರಚಾರ ಮಾಡುವುದಿಲ್ಲ ಎಂದು ಕಾರ್ಯಕರ್ತರು ಬಹಿರಂಗವಾಗಿಯೇ ಹೇಳಿದ್ದಾರೆ. ಇದರಿಂದ ಮುಜುಗರಕ್ಕೆ ಒಳಗಾದ ಪಕ್ಷದ ಪ್ರಭಾರಿಗಳು ಕಾರ್ಯಕರ್ತರ ಅಭಿಪ್ರಾಯವನ್ನು ವರಿಷ್ಠರ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದ್ದಾರೆ.

ಬೆಳಗಾವಿಯಲ್ಲಿ ಜಗದೀಶ ಶೆಟ್ಟರ್ ಸ್ಪರ್ಧೆಯ ವಿರುದ್ಧ ಅಸಮಾಧಾನ ಹೊಂದಿದ್ದ ಬಹುತೇಕರನ್ನು ಬಿ.ಎಸ್. ಯಡಿಯೂರಪ್ಪ ಸಮಾಧಾನ ಪಡಿಸಿದ್ದರು. ಬಳಿಕ, ವಿರೋಧ ತಣ್ಣಗಾದಂತಿತ್ತು.

ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿದ ಬಿಜೆಪಿ ಮಹಾನಗರ ಜಿಲ್ಲಾ ಘಟಕದ ಉಪಾಧ್ಯಕ್ಷ ಮಹಾಂತೇಶ ವಕ್ಕುಂದ ಅವರು, ‘ಬೆಳಗಾವಿ ಲೋಕಸಭೆ ಕ್ಷೇತ್ರದಿಂದ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ತೀರ್ಮಾನಿಸಿರುವೆ. ಈ ಸಂಬಂಧ ಚರ್ಚಿಸಲು ಮಾರ್ಚ್ 31ರಂದು ನಗರದಲ್ಲಿ ಸಮಾನಮನಸ್ಕರ ಸಭೆ ಕರೆದಿರುವೆ’ ಎಂದರು.

‘ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ಜಗದೀಶ ಶೆಟ್ಟರ್ ಅವರು, ಪ್ರಧಾನಿ ಮೋದಿ ಮತ್ತು ಬಿಜೆಪಿ ನಾಯಕರನ್ನು ಮನಬಂದಂತೆ ಟೀಕಿಸಿದ್ದರು. ಈಗ ಅವರನ್ನೇ ಮತ್ತೆ ಪಕ್ಷಕ್ಕೆ ಬರಮಾಡಿಕೊಂಡು, ಬೆಳಗಾವಿ ಟಿಕೆಟ್ ಕೊಟ್ಟಿರುವುದು ಸರಿಯಲ್ಲ’ ಎಂದು ಹೇಳಿದರು.

‘ಸ್ಥಳೀಯವಾಗಿ ಹಲವು ಟಿಕೆಟ್ ಆಕಾಂಕ್ಷಿಗಳಿದ್ದರೂ ಹೊರಗಿನವರಿಗೆ ಮಣೆ ಹಾಕಿದ್ದು ಒಳ್ಳೆಯದಲ್ಲ. ಯಾರಿಗೆ ಟಿಕೆಟ್ ನೀಡುವುದು ಸೂಕ್ತವೆಂದು ಪಕ್ಷದವರು ನಡೆಸಿದ ಸಮೀಕ್ಷೆ ಸುಳ್ಳು. ಸಮೀಕ್ಷೆಯಲ್ಲಿ ಹೆಸರೇ ಬಾರದವರಿಗೆ ಟಿಕೆಟ್ ಕೊಟ್ಟಿರುವುದರಿಂದ ನಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ’ ಎಂದು ಅವರು ತಿಳಿಸಿದರು.

ಚಿತ್ರದುರ್ಗ: ಬಿಜೆಪಿ ಕಚೇರಿ ಬಳಿ ಹೈಡ್ರಾಮಾ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ ವಿರುದ್ಧ ಎಂ.ಸಿ. ರಘುಚಂದನ್ ಬೆಂಬಲಿಗರು ಶುಕ್ರವಾರ ಪ್ರತಿಭಟನೆ ನಡೆಸಿದರು. ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು ಪರಿಸ್ಥಿತಿ ತಿಳಿಗೊಳಿಸಿದರು.

ಬಿಜೆಪಿ ಟಿಕೆಟ್ ಘೋಷಣೆಯಾದ ಬಳಿಕ ಮೊದಲ ಬಾರಿಗೆ ಕ್ಷೇತ್ರ ಪ್ರವೇಶಿಸಿದ ಗೋವಿಂದ ಕಾರಜೋಳ ಅವರಿಗೆ ‘ಗೋ ಬ್ಯಾಕ್’ ನಾಮಫಲಕ ಪ್ರದರ್ಶಿಸಲಾಯಿತು. ಇದಕ್ಕೆ ಪ್ರತಿಯಾಗಿ ಕಾರಜೋಳ ಬೆಂಬಲಿಗರು ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಅವರನ್ನು ಪಕ್ಷದಿಂದ ಉಚ್ಚಾಟಿಸುವಂತೆ ಪಟ್ಟು ಹಿಡಿದರು.

ನಗರದ ಬಿಜೆಪಿ ಲೋಕಸಭಾ ಚುನಾವಣಾ ಕಾರ್ಯಾಲಯದಲ್ಲಿ ಕಾರ್ಯಕರ್ತರ ಸಭೆ ಹಮ್ಮಿಕೊಳ್ಳಲಾಗಿತ್ತು. ಹಿರಿಯೂರು ಮಾರ್ಗವಾಗಿ ನಗರಕ್ಕೆ ಆಗಮಿಸುತ್ತಿದ್ದ ಕಾರಜೋಳ ಅವರನ್ನು ರಘುಚಂದನ್ ಬೆಂಬಲಿಗರು ಹೆದ್ದಾರಿಯಲ್ಲಿ ತಡೆಯಲು ಪ್ರಯತ್ನಿಸಿದರು. ಮಾರ್ಗ ಬದಲಿಸಿ ಕಚೇರಿಗೆ ಆಗಮಿಸಿದ ಬಿಜೆಪಿ ಮುಖಂಡರು ಸಭೆ ಆರಂಭಿಸಿದರು.

ಕಚೇರಿ ಬಳಿಗೆ ಧಾವಿಸಿದ ಪ್ರತಿಭಟನಕಾರರು ಕಾರಜೋಳ ವಿರುದ್ಧ ಘೋಷಣೆ ಕೂಗಿದರು. ಸ್ಥಳೀಯರಿಗೆ ಅವಕಾಶ ಮಾಡಿಕೊಡುವಂತೆ ಒತ್ತಾಯಿಸಿದರು. ಸ್ಥಳದಲ್ಲಿದ್ದ ಪೊಲೀಸರು ಪ್ರತಿಭಟನಕಾರರನ್ನು ವಶಕ್ಕೆ ಪಡೆದರು.

ಎಂ.ಚಂದ್ರಪ್ಪ ಉಚ್ಚಾಟನೆಗೆ ಪಟ್ಟು: ಬಿಜೆಪಿ ಅಧಿಕೃತ ಅಭ್ಯರ್ಥಿ ವಿರುದ್ಧ ಕೆಲಸ ಮಾಡುತ್ತಿರುವ ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂದು ಕಾರ್ಯಕರ್ತರು ಪಟ್ಟುಹಿಡಿದರು.

ನನ್ನ ಗಂಡನ ಕಣ ಕಣದಲ್ಲಿಯೂ ದೇಶಭಕ್ತಿ ಇದೆ: ಸುನೀತಾ; ವಾಟ್ಸ್‌ಆ್ಯಪ್ ಮೂಲಕ ಜನರ ಬೆಂಬಲ ಕೋರಿಕೆ

ಕೇಜ್ರಿವಾಲ್ ಪತ್ನಿಯಿಂದ ಅಭಿಯಾನ

ಸುನೀತಾ ಕೇಜ್ರಿವಾಲ್

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಬಂಧನದಲ್ಲಿರುವ ತಮ್ಮ ಪತಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಬೆಂಬಲ ನೀಡುವಂತೆ ಕೋರಿ ಅವರ ಪತ್ನಿ ಸುನೀತಾ ಕೇಜ್ರಿವಾಲ್ 'ಕೇಜ್ರಿವಾಲ್‌ಗೆ ಆಶೀರ್ವಾದ' ಎಂಬ ಹೊಸ ಅಭಿಯಾನವನ್ನು ಪ್ರಾರಂಭಿಸಿದ್ದಾರೆ.

ತಮ್ಮ ಪತಿ ಅರವಿಂದ್ ಕೇಜ್ರಿವಾಲ್ 'ಅತ್ಯಂತ ಭ್ರಷ್ಟ ಮತ್ತು ಸರ್ವಾಧಿಕಾರಿ ಶಕ್ತಿಗೆ ಸವಾಲು ಹಾಕಿದ್ದಾರೆ. ಜನರು ತಮ್ಮ ಆಶೀರ್ವಾದ ಮತ್ತು ಪ್ರಾರ್ಥನೆಯ ಮೂಲಕ ಅವರಿಗೆ ಬೆಂಬಲ ನೀಡಬೇಕು' ಎಂದು ಸುನೀತಾ ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

'ಕೇಜ್ರಿವಾಲ್‌ಗೆ ಆಶೀರ್ವಾದ' ಎಂಬ ವಾಟ್ಸ್‌ಆ್ಯಪ್ ಅಭಿಯಾನವನ್ನು ಸುನೀತಾ ಪ್ರಾರಂಭಿಸಿದರು. 8297324624 ಮತ್ತು 9700297002 ಎಂಬ ಎರಡು ವಾಟ್ಸ್‌ಆ್ಯಪ್ ಸಂಖ್ಯೆಯನ್ನು ನೀಡಿದ ಅವರು, 'ಈ ಮೊಬೈಲ್ ಸಂಖ್ಯೆಗಳಿಗೆ ಕೇಜ್ರಿವಾಲ್ ಅವರಿಗೆ ನೀವು ಆಶೀರ್ವಾದ, ಪ್ರಾರ್ಥನೆ ಅಥವಾ ಯಾವುದೇ ರೀತಿಯ ಸಂದೇಶಗಳನ್ನು ರವಾನಿಸಬಹುದು. ಕೇಜ್ರಿವಾಲ್ ಅವರಿಗೆ ನಿಮ್ಮ ಸಂದೇಶಗಳನ್ನು ತಿಳಿಸುತ್ತೇನೆ' ಎಂದರು.

'ಗುರುವಾರ ಅರವಿಂದ ಕೇಜ್ರಿವಾಲ್ ನ್ಯಾಯಾಲಯದಲ್ಲಿ ತಮ್ಮ ಪರವಾಗಿ ತಾವೇ ವಾದ ಮಂಡಿಸಿದರು. ಇಡೀ ದೇಶವೇ ಅದನ್ನು ಕೇಳಿದೆ. ನೀವು ಕೇಳಲಿಲ್ಲವೆಂದಾದರೆ ಒಮ್ಮೆ ಕೇಳಿ. ನ್ಯಾಯಾಲಯದ ಮುಂದೆ ಅವರು ಏನೇ ಹೇಳಿದ್ದರೂ ಅದಕ್ಕೆ ಧೈರ್ಯ ಬೇಕು. ಕೇಜ್ರಿವಾಲ್ ನಿಜವಾದ ದೇಶಭಕ್ತ. ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಸ್ವಾತಂತ್ರ್ಯ ಹೋರಾಟಗಾರರು ಹೇಗೆ ಹೋರಾಡಿದರೋ ಅದೇ ರೀತಿ ಕೇಜ್ರಿವಾಲ್ ಹೋರಾಡುತ್ತಿದ್ದಾರೆ. ನಾನು ಕಳೆದ 30 ವರ್ಷಗಳಿಂದ ಅವರ ಜೊತೆಗಿದ್ದೇನೆ. ಅವರ ಕಣ ಕಣದಲ್ಲಿಯೂ ದೇಶಭಕ್ತಿ ಇದೆ. ದೇಶದ ಅತ್ಯಂತ ಶಕ್ತಿಶಾಲಿ, ಭ್ರಷ್ಟ ಮತ್ತು ಸರ್ವಾಧಿಕಾರಿಗಳಿಗೆ ಅವರು ಸವಾಲು ಹಾಕಿದ್ದಾರೆ' ಎಂದರು.

'ಅರವಿಂದ ಕೇಜ್ರಿವಾಲ್ ಅವರನ್ನು ನಿಮ್ಮ ಮಗ ಮತ್ತು ಸಹೋದರ ಎಂದು ನೀವು ಕರೆದಿದ್ದಿರಿ. ಈಗ ನಿಮ್ಮ ಸಹೋದರ, ಮಗನ ಈ ಹೋರಾಟಕ್ಕೆ ನೀವು ಬೆಂಬಲಿಸುವುದಿಲ್ಲವೇ? ಸಮರದಲ್ಲಿ ನಾವೆಲ್ಲರೂ ಹೋರಾಡುತ್ತೇವೆ ಎಂದು ನನಗೆ ವಿಶ್ವಾಸವಿದೆ' ಎಂದರು.

ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ನಡೆಸಿದ ಆರೋಪದಡಿ ಇ.ಡಿ. ಕೇಜ್ರಿವಾಲ್ ಅವರನ್ನು ಬಂಧಿಸಿದೆ.

'ಚುನಾವಣಾ ತಂತ್ರದ ಮಾಹಿತಿ ಪಡೆಯಲು ಇ.ಡಿ ಯತ್ನ'

ನವದೆಹಲಿ (ಪಿಟಿಐ): 'ಜಾರಿ ನಿರ್ದೇಶನಾಲಯವನ್ನು (ಇ.ಡಿ.) ಬಿಜೆಪಿಯು ರಾಜಕೀಯ ಅಸ್ತ್ರವಾಗಿ ಬಳಸುತ್ತಿದ್ದು, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಮೊಬೈಲ್ ಫೋನ್ ಮೂಲಕ ಎಎಪಿಯ ಲೋಕಸಭಾ ಚುನಾವಣಾ ತಂತ್ರಗಾರಿಕೆಯ ಮಾಹಿತಿ ಪಡೆಯಲು ಯತ್ನಿಸುತ್ತಿದೆ' ಎಂದು ದೆಹಲಿ ಸಚಿವೆ ಆತಿಶಿ ಶುಕ್ರವಾರ ಆರೋಪಿಸಿದರು.

'ವಾಸ್ತವವಾಗಿ ಕೇಜ್ರಿವಾಲ್ ಅವರ ಫೋನ್‌ನಲ್ಲಿ ಏನಿದೆ ಎಂಬುದನ್ನು ಅರಿಯುವುದು ಇ.ಡಿ. ಉದ್ದೇಶವಲ್ಲ. ಆದರೆ, ಈ ಕುರಿತು ತಿಳಿದುಕೊಳ್ಳುವ ತವಕ ಬಿಜೆಪಿಗಿದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'2021–22ರಲ್ಲಿ ಅಬಕಾರಿ ನೀತಿ ಜಾರಿಗೆ ಬಂದಾಗ ಕೇಜ್ರಿವಾಲ್ ಅವರ ಬಳಿ ಈ ಫೋನ್ ಇರಲಿಲ್ಲ. ಇದು ಕೆಲವೇ ತಿಂಗಳಷ್ಟು ಹಳೆಯದು. ಆ ಅವಧಿಯಲ್ಲಿ ಕೇಜ್ರಿವಾಲ್ ಬಳಸಿದ್ದ ಫೋನ್ ಲಭ್ಯವಿಲ್ಲ ಎಂದು ಇ.ಡಿ. ಹೇಳಿದೆ. ಹೊಸ ಫೋನಿನ ಪಾಸ್‌ವರ್ಡ್ ಬೇಕು ಎಂದೂ ಅದು ಹೇಳುತ್ತಿದೆ. ಎಎಪಿಯ ಲೋಕಸಭಾ ಚುನಾವಣೆಯ ಕಾರ್ಯತಂತ್ರ, ಪ್ರಚಾರ ಯೋಜನೆ, 'ಇಂಡಿಯಾ' ಮೈತ್ರಿಕೂಟದ ಜತೆಗಿನ ಮಾತುಕತೆ, ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳ ತಂತ್ರಗಾರಿಕೆ ಕುರಿತ ವಿವರವನ್ನು ಪಡೆಯಲು ಬಿಜೆಪಿ ಹವಣಿಸುತ್ತಿದೆ. ಇದಕ್ಕಾಗಿ ಇ.ಡಿಯನ್ನು ಅಸ್ತ್ರವಾಗಿ ಬಳಸುತ್ತಿದೆ' ಎಂದು ಅವರು ದೂರಿದರು.

ರಾಬ್ಡಿದೇವಿಗೆ ಹೋಲಿಸಿದ ಕೇಂದ್ರ ಸಚಿವ ಹರ್ದೀಪ್

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪತ್ನಿ ಸುನೀತಾ ಅವರನ್ನು ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಅವರಿಗೆ ಹೋಲಿಸಿದರು.

ಶುಕ್ರವಾರ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ಬಿಹಾರದಲ್ಲಿ ರಾಬ್ಡಿ ದೇವಿ ಅವರು ಮಾಡಿದಂತೆ ಮೇಡಂ ಸಹ ಪತಿಯ ಹುದ್ದೆಯಲ್ಲಿ ಕೂರಲು ಸಿದ್ಧರಾಗುತ್ತಿರಬಹುದು' ಎಂದು ವ್ಯಂಗ್ಯವಾಡಿದರು.

ಎಎಪಿ ಆಯೋಜಿತ 'ಮಹಾರ್‍ಯಾಲಿ'ಯಲ್ಲಿ 'ಇಂಡಿಯಾ' ನಾಯಕರು ಭಾಗಿ

ನವದೆಹಲಿ (ಪಿಟಿಐ): ಎಎಪಿ ಮಾ.31ರಂದು ಆಯೋಜಿಸಿರುವ 'ಮಹಾರ್‍ಯಾಲಿ'ಯಲ್ಲಿ ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ ಪ್ರಮುಖ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಶರದ್ ಪವಾರ್, ಉದ್ಧವ್ ಠಾಕ್ರೆ, ಅಖಿಲೇಶ್ ಯಾದವ್ ಮತ್ತು ತೇಜಸ್ವಿ ಯಾದವ್ ಭಾಗಿಯಾಗಲಿದ್ದಾರೆ ಎಂದು ಪಕ್ಷದ ಹಿರಿಯ ನಾಯಕ ಗೋಪಾಲ್ ರಾಯ್ ತಿಳಿಸಿದರು.

ಡೆರೆಕ್ ಒಬ್ರಾಯನ್, ತ್ರಿಚಿ ಶಿವ, ಫಾರೂಕ್ ಅಬ್ದುಲ್ಲಾ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಚಂಪೈ ಸೊರೇನ್ ಹಾಗೂ ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಪತ್ನಿ ಕಲ್ಪನಾ ಸೊರೇನ್ ಭಾಗಿಯಾಗಲಿದ್ದಾರೆ ಎಂದರು.

ಕೇಜ್ರಿವಾಲ್ ಬಂಧನ ಖಂಡಿಸಿ ರಾಮಲೀಲಾ ಮೈದಾನದಲ್ಲಿ ರ್‍ಯಾಲಿ ನಡೆಸಲು ಸಂಬಂಧಿಸಿದ ಅಧಿಕಾರಿಗಳಿಂದ ಅನುಮತಿ ಪಡೆಯಲಾಗಿದೆ. ಕಾರ್ಯಕ್ರಮದಲ್ಲಿ 20,000ಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಹೇಳಿದರು.

ತನಿಖಾ ಸಂಸ್ಥೆ ದುರ್ಬಳಕೆ: ಇ.ಸಿ ಮಧ್ಯಪ್ರವೇಶಕ್ಕೆ ಮನವಿ

ನವದೆಹಲಿ (ಪಿಟಿಐ): ಬಿಜೆಪಿಯು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಾಯಕರು, ಈ ಕುರಿತು ಭಾರತೀಯ ಚುನಾವಣಾ ಆಯೋಗವು (ಇ.ಸಿ) ಮಧ್ಯಪ್ರವೇಶಿಸಬೇಕು ಎಂದು ಕೋರಲಿದ್ದಾರೆ.

ಟಿಎಂಸಿ ನಾಯಕರು ಸೋಮವಾರ ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ತಮ್ಮ ಕಳವಳ ವ್ಯಕ್ತಪಡಿಸಲಿದ್ದಾರೆ.

ಚುನಾವಣಾ ಆಯೋಗದ ಕಚೇರಿಯ ಹೊರಗೆ ಸುದ್ದಿಗಾರರ ಜತೆ ಮಾತನಾಡಿದ ಪಶ್ಚಿಮ ಬಂಗಾಳದ ಸಚಿವೆ ಶಶಿ ಪಂಜಾ ಅವರು, 'ಚುನಾವಣೆ ಘೋಷಣೆಗೂ ಮುನ್ನ ಜಾರ್ಖಂಡ್ ಮಾಜಿ ಸಿ.ಎಂ ಹೇಮಂತ್ ಸೊರೇನ್ ಅವರನ್ನು ಬಂಧಿಸಲಾಯಿತು. ಅಲ್ಲದೆ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಬಳಿಕ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಲಾಗಿದೆ. ಇದರಿಂದ ನಾವು ವಿಚಲಿತರಾಗಿದ್ದೇವೆ' ಎಂದು ಹೇಳಿದರು.

ನೀತಿ ಸಂಹಿತೆ ಜಾರಿಯಾದ ಬಳಿಕ ಇವುಗಳ ನಿಯಂತ್ರಣದ ಅಧಿಕಾರ ಚುನಾವಣಾ ಆಯೋಗಕ್ಕೆ ಬರುತ್ತದೆ. ಹಾಗಾಗಿ ಆಯೋಗವು ತನ್ನ ಅಧಿಕಾರವನ್ನು ಚಲಾಯಿಸಬೇಕು ಎಂದು ಅವರು ವಿನಂತಿಸಿದರು.

'ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ ಮತ್ತು ಎನ್‌ಐಎಯಂತಹ ಕೇಂದ್ರೀಯ ಸಂಸ್ಥೆಗಳು ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿವೆ. ಅವುಗಳನ್ನು ಪ್ರತಿಪಕ್ಷಗಳ ವಿರುದ್ಧ ಅಸ್ತ್ರವಾಗಿ ಬಳಸಲಾಗುತ್ತಿದೆ. ಈ ಕುರಿತು ನಮ್ಮ ಕಳವಳ ವ್ಯಕ್ತಪಡಿಸಲು ಆಯೋಗದ ಸಮಯ ಕೋರಿದ್ದೇವೆ. ನಮ್ಮ ಭೇಟಿಗೆ ಸೋಮವಾರ ಅವಕಾಶ ನೀಡಲಾಗಿದೆ' ಎಂದು ಪಂಜಾ ತಿಳಿಸಿದರು.

ಈ ಸಂಸ್ಥೆಗಳು ಪಶ್ಚಿಮ ಬಂಗಾಳದ ಟಿಎಂಸಿ ನಾಯಕರು ಮತ್ತು ಕಾರ್ಯಕರ್ತರಿಗೂ ಸಮನ್ಸ್ ನೀಡುತ್ತಿವೆ. ಇದರಿಂದ ಚುನಾವಣಾ ಪ್ರಚಾರಕ್ಕೆ ಅಡ್ಡಿ ಎದುರಾಗಿದೆ ಎಂದು ಆರೋಪಿಸಿದ ಅವರು, ಈ ಕುರಿತು ಚುನಾವಣಾ ಆಯೋಗ ಮಧ್ಯಪ್ರವೇಶಿಸಬೇಕು ಎಂದು ಕೋರಿದರು.

ರಾಜ್ಯಸಭೆಯಲ್ಲಿ ಟಿಎಂಸಿ ಸಂಸದೀಯ ಪಕ್ಷದ ನಾಯಕ ಡೆರೆಕ್ ಒಬ್ರಾಯನ್, ಸಂಸದರಾದ ಡೋಲಾ ಸೇನ್, ಸಾಕೇತ್ ಗೋಖಲೆ, ಸಾಗರಿಕಾ ಘೋಷ್ ಅವರು ನಿಯೋಗದಲ್ಲಿದ್ದರು.

ಕವಿತಾ ಆರೋಪ: ಅಧಿಕಾರಿಗಳ ಸ್ಪಷ್ಟನೆ ಕೇಳಿದ ನ್ಯಾಯಾಲಯ

ಕೆ.ಕವಿತಾ

ನವದೆಹಲಿ (ಪಿಟಿಐ): ಮನೆಯಲ್ಲಿ ತಯಾರಿಸಿದ ಆಹಾರ ಮತ್ತು ಇತರ ವಸ್ತುಗಳನ್ನು ನೀಡುವಂತೆ ನ್ಯಾಯಾಲಯ ನೀಡಿರುವ ಆದೇಶವನ್ನು ಜೈಲಿನ ಅಧಿಕಾರಿಗಳು ಪಾಲಿಸುತ್ತಿಲ್ಲ ಎಂದು ಆರೋಪಿಸಿ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ತಿಹಾರ್ ಜೈಲಿನ ಅಧಿಕಾರಿಗಳು ಪ್ರತಿಕ್ರಿಯೆ ನೀಡುವಂತೆ ನ್ಯಾಯಾಲಯ ಸೂಚಿಸಿದೆ.

ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಕವಿತಾ ಅವರು, 'ನನ್ನ ಆರೋಗ್ಯದ ದೃಷ್ಟಿಯಿಂದ ಮನೆಯಲ್ಲಿ ತಯಾರಿಸಿದ ಅಡುಗೆ ಮತ್ತು ಇತರ ವಸ್ತುಗಳನ್ನು ಬಳಸಲು ಅನುಮತಿ ನೀಡಬೇಕು' ಎಂದು ಮಂಗಳವಾರ ಮನವಿ ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ, ನಿಯಮಗಳ ಅನ್ವಯ ಕವಿತಾ ಅವರಿಗೆ ಮನೆಯಲ್ಲಿ ತಯಾರಿಸಿದ ಅಡುಗೆ, ಚಪ್ಪಲಿ, ಬಟ್ಟೆ, ಹೊದಿಕೆ, ಪುಸ್ತಕ, ಪೆನ್ನು, ಪೇಪರ್, ಒಡವೆ, ಔಷಧ ಮತ್ತಿತರ ವಸ್ತುಗಳನ್ನು ಬಳಸಲು ಅವಕಾಶ ನೀಡುವಂತೆ ವಿಶೇಷ ನ್ಯಾಯಾಧೀಶರು ತಿಹಾರ್ ಜೈಲಿನ ಅಧಿಕಾರಿಗಳಿಗೆ ಸೂಚಿಸಿದ್ದರು.

ಕವಿತಾ ಅವರು ಗುರುವಾರ ಮತ್ತೆ ಹೊಸ ಅರ್ಜಿಯನ್ನು ಸಲ್ಲಿಸಿದ್ದು, ಅದರಲ್ಲಿ 'ಜೈಲಿನ ಅಧಿಕಾರಿಗಳು ನ್ಯಾಯಲಯದ ಆದೇಶವನ್ನು ಪಾಲಿಸುತ್ತಿಲ್ಲ' ಎಂದು ಆರೋಪಿಸಿದ್ದಾರೆ. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ ಜೈಲಿನ ಅಧಿಕಾರಿಗಳಿಂದ ಉತ್ತರ ಬಯಸಿದೆ ಮತ್ತು ವಿಚಾರಣೆಯನ್ನು ಶನಿವಾರಕ್ಕೆ ಮುಂದೂಡಿದೆ.

ಕರಾವಳಿ ಪಡೆ ಸಾಮರ್ಥ್ಯ ವೃದ್ಧಿಯ ಗುರಿ: ಗಿರಿಧರ್

ಓಕಾ (ಪಿಟಿಐ): ಭಾರತೀಯ ಕರಾವಳಿ ರಕ್ಷಣಾ ಪಡೆಯ(ಐಸಿಜಿ) ಶಕ್ತಿ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದ್ದು, ಇದರಿಂದ ದೇಶದ ಕರಾವಳಿಯು ಸುರಕ್ಷಿತವಾಗಿರಲಿದೆ ಎಂದು ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಶುಕ್ರವಾರ ತಿಳಿಸಿದರು.

ಗುಜರಾತ್‌ನ ಓಕಾದಲ್ಲಿ ಐಸಿಜಿಯ ಹೋವರ್‌ಕ್ರಾಫ್ಟ್ ನಿರ್ವಹಣಾ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅರಮನೆ ಅವರು, 'ಪಾಕಿಸ್ತಾನದ ಕರಾವಳಿ ಸೇರಿದಂತೆ ಸಮುದ್ರದಲ್ಲಿನ ದೂರದ ಪ್ರದೇಶಗಳ ಮೇಲೆ ನಿಗಾ ಇಡುವ ಸಾಮರ್ಥ್ಯವನ್ನು ಕರಾವಳಿ ಪಡೆ ಹೊಂದಿದೆ. ಭಾರತೀಯ ಕರಾವಳಿ ಪಡೆಗೆ ಅಗತ್ಯವಾದ ಅತ್ಯುತ್ತಮ ಉಪಕರಣಗಳನ್ನು ಒದಗಿಸಲು ಕೇಂದ್ರ ಸರ್ಕಾರವು ಪ್ರಯತ್ನಿಸುತ್ತಿದೆ' ಎಂದು ಹೇಳಿದರು.

ಮೆರವಣಿಗೆ... 'ಗುಡ್ ಫ್ರೈಡೆ' ಅಂಗವಾಗಿ ಪಂಜಾಬ್‌ನ ಅಮೃತಸರದಲ್ಲಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಕ್ರೈಸ್ತರು ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ತನಿಖೆಗೆ ಆದೇಶ ನೀಡಿದ ಬಾಂದಾದ ಸಿಜೆಎಂ • ಜೈಲಿನಲ್ಲಿ ವಿಷಪ್ರಾಶನ –ಆರೋಪ

ಮುಖ್ತಾರ್ ಸಾವು ನ್ಯಾಯಾಂಗ ತನಿಖೆಗೆ

ಹೃದಯಸ್ತಂಭನದಿಂದಾಗಿ ಆಸ್ಪತ್ರೆಯಲ್ಲಿ ಮೃತಪಟ್ಟ ಮಾಜಿ ಶಾಸಕ, ಗ್ಯಾಂಗ್‌ಸ್ಟರ್ ಮುಖ್ತಾರ್ ಅನ್ಸಾರಿಯವರ ಘಾಜಿಪುರ ನಿವಾಸದ ಬಳಿ ಶುಕ್ರವಾರ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು –ಪಿಟಿಐ ಚಿತ್ರ

ಲಖನೌ (ಪಿಟಿಐ): ಮಾಜಿ ಶಾಸಕ, ಗ್ಯಾಂಗ್‌ಸ್ಟರ್ ಮುಖ್ತಾರ್ ಅನ್ಸಾರಿ ಸಾವಿನ ಕುರಿತು ನ್ಯಾಯಾಂಗ ತನಿಖೆಗೆ ಬಾಂದಾದ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಸಿಜೆಎಂ) ನ್ಯಾಯಾಲಯವು ಶುಕ್ರವಾರ ಆದೇಶಿಸಿದೆ.

ಇಲ್ಲಿನ ಜನಪ್ರತಿನಿಧಿಗಳ ನ್ಯಾಯಾಲಯದ ಹೆಚ್ಚುವರಿ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಗರಿಮಾ ಸಿಂಗ್ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಿ ಸಿಜೆಎಂ ಭಗವಾನ್ ದಾಸ್ ಗುಪ್ತಾ ಆದೇಶ ಹೊರಡಿಸಿದ್ದಾರೆ.

ತನಿಖಾ ವರದಿಯನ್ನು ಒಂದು ತಿಂಗಳಲ್ಲಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಜೈಲಿನಲ್ಲಿದ್ದ 63 ವರ್ಷದ ಅನ್ಸಾರಿ ಗುರುವಾರ ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು.

ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಜೈಲಿನ ಅಧಿಕಾರಿಗಳು ರಾಣಿ ದುರ್ಗಾವತಿ ವೈದ್ಯಕೀಯ ಕಾಲೇಜಿಗೆ ಕರೆತಂದಿದ್ದರು. ಬಳಿಕ ಹೃದಯಸ್ತಂಭನದಿಂದ ಅನ್ಸಾರಿ ಮೃತಪಟ್ಟಿದ್ದಾರೆ ಎಂದು ಘೋಷಿಸಲಾಗಿತ್ತು.

ಇವರ ಸಹೋದರ, ಘಾಜಿಪುರದ ಸಂಸದ ಅಫ್ಜಲ್ ಅನ್ಸಾರಿ ಅವರು ಕಳೆದ ಮಂಗಳವಾರವಷ್ಟೇ, 'ನನ್ನ ಸಹೋದರನಿಗೆ ಜೈಲಿನಲ್ಲಿ ವಿಷಪ್ರಾಶನ (ಸ್ಲೋ ಪಾಯ್ಸನ್) ಮಾಡಲಾಗಿದೆ' ಎಂದು ಆರೋಪಿಸಿದ್ದರು.

'ಜೈಲಿನಲ್ಲಿ ಆಹಾರಕ್ಕೆ ವಿಷ ಹಾಕಿದ್ದಾರೆ ಎಂದು ಮುಖ್ತಾರ್ ತಿಳಿಸಿದ್ದ. ಎರಡನೇ ಬಾರಿಗೆ ಹೀಗೆ ನಡೆದಿದೆ. 40 ದಿನದ ಹಿಂದೆಯೂ ಆಹಾರದಲ್ಲಿ ವಿಷ ಬೆರೆಸಲಾಗಿತ್ತು. ಈಗ ಆತನ ಸ್ಥಿತಿ ಗಂಭೀರವಾಗಿದೆ' ಎಂದು ಅಫ್ಜಲ್ ದೂರಿದ್ದರು.

ಮಾರ್ಚ್ 21ರಂದು ವರ್ಚುವಲ್ ಸ್ವರೂಪದಲ್ಲಿ ನಡೆದಿದ್ದ ವಿಚಾರಣೆ ವೇಳೆ ಅಫ್ಜಲ್ ಈ ಮಾತು ಹೇಳಿದ್ದರು.

ಜೈಲಿನ ಸೂಪರಿಂಟೆಂಡೆಂಟ್ ಮನವಿ ಆಧರಿಸಿ ನ್ಯಾಯಾಂಗ ತನಿಖೆಗೆ ಆದೇಶಿಸಲಾಗಿದೆ ಎಂದು ಸಿಜೆಎಂ ತಿಳಿಸಿದರು. ಡಿಜಿಪಿ (ಕಾರಾಗೃಹ) ಎಸ್.ಎನ್.ಸಬತ್ ಅವರೂ ನ್ಯಾಯಾಂಗ ತನಿಖೆ ನಡೆಯಲಿದೆ ಎಂದು ತಿಳಿಸಿದ್ದರು.

ಮನೆಗೆ ಮೃತನ ಶವ: ಮರಣೋತ್ತರ ಪರೀಕ್ಷೆಯ ಬಳಿಕ ಮುಖ್ತಾರ್ ಶವವನ್ನು ಕುಟುಂಬದವರಿಗೆ ಹಸ್ತಾಂತರಿಸಿದ್ದು, ಬಿಗಿ ಭದ್ರತೆಯಲ್ಲಿ ಘಾಜಿಪುರ್‌ಗೆ ತರಲಾಯಿತು.

ಮೃತರ ಮನೆ ಬಳಿ ಹೆಚ್ಚಿನ ಜನರು ಸೇರಿದ್ದು, ಮುಂಜಾಗ್ರತೆಯಾಗಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಮುಂಜಾಗ್ರತೆ ಕ್ರಮವಾಗಿ ಬಾಂದಾ, ಮಾಉ, ಘಾಜಿಪುರ, ವಾರಾಣಸಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸೆಕ್ಷನ್ 144ರ ಅನ್ವಯ ನಿಷೇಧಾಜ್ಞೆ ಹೇರಲಾಗಿತ್ತು. ಈ ಜಿಲ್ಲೆಗಳಲ್ಲಿ ಮೃತ ಮುಖ್ತಾರ್ ಅನ್ಸಾರಿ ಪ್ರಭಾವ ಹೆಚ್ಚಾಗಿತ್ತು.

ವಿಷಪ್ರಾಶನ ಪುತ್ರ ಆರೋಪ

ಲಖನೌ (ಪಿಟಿಐ): 'ಜೈಲಿನಲ್ಲಿ ನನ್ನ ತಂದೆಗೆ ವಿಷ ಪ್ರಾಶನ (ಸ್ಲೋ ಪಾಯ್ಸನ್) ಮಾಡಲಾಗಿತ್ತು' ಎಂದು ಮಾಜಿ ಶಾಸಕ, ಗ್ಯಾಂಗ್‌ಸ್ಟರ್ ಮುಖ್ತಾರ್ ಅನ್ಸಾರಿ ಪುತ್ರ ಉಮರ್ ಅನ್ಸಾರಿ ಆರೋಪಿಸಿದ್ದಾರೆ. ಆದರೆ, ಈ ಆರೋಪವನ್ನು ಅಧಿಕಾರಿಗಳು ನಿರಾಕರಿಸಿದ್ದಾರೆ.

ತಮಗೆ ನಿಧಾನವಾಗಿ ಪರಿಣಾಮ ಬೀರುವ ವಿಷ ಪ್ರಾಶನ ಮಾಡಲಾಗಿದೆ ಎಂದು ತಂದೆ ಹೇಳಿದ್ದರು. ಈಗ ಇಡೀ ದೇಶಕ್ಕೆ ಅದು ಗೊತ್ತಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

'ಎಲ್ಲ ಪ್ರಕರಣಗಳ ತನಿಖೆಯಾಗಲಿ'

ನೊಯ್ಡಾ (ಪಿಟಿಐ): ಪೊಲೀಸ್ ವಶದಲ್ಲಿದ್ದಾಗ ಸಂಭವಿಸಿರುವ ಸಾವಿನ ಪ್ರಕರಣಗಳು ಉತ್ತರ ಪ್ರದೇಶದಲ್ಲಿಯೇ ಅಧಿಕವಾಗಿವೆ. ಈ ಎಲ್ಲ ಪ್ರಕರಣಗಳನ್ನು ತನಿಖೆಗೆ ಒಳಪಡಿಸಬೇಕು ಎಂದು ಕಾಂಗ್ರೆಸ್ ನಾಯಕ ಪಂಖೂರಿ ಪಾಠಕ್ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಜಾಲತಾಣ ವಿಭಾಗದ ಅಧ್ಯಕ್ಷರಾದ ಪಂಖೂರಿ, ಉತ್ತರ ಪ್ರದೇಶದಲ್ಲಿ ನಿತ್ಯವೂ ಇಂಥ ಘಟನೆಗಳು ನಡೆಯುತ್ತಿವೆ. ದೇಶದಲ್ಲಿಯೇ ಈ ವಿಷಯದಲ್ಲಿ ರಾಜ್ಯ ಮೊದಲ ಸ್ಥಾನದಲ್ಲಿದೆ' ಎಂದರು.

'ಪೊಲೀಸ್ ವಶದಲ್ಲಿದ್ದಾಗ ಸತ್ತವರಲ್ಲಿ ದಲಿತರು, ಮುಸಲ್ಮಾರು, ಬ್ರಾಹ್ಮಣರು, ಹಿಂದುಳಿದವರು ಹೀಗೆ ಎಲ್ಲ ವರ್ಗದವರಿದ್ದಾರೆ. ಇವುಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ನರೇಗಾ ಕೂಲಿ ಪರಿಷ್ಕರಣೆ: ಸ್ಪಷ್ಟನೆ

ನವದೆಹಲಿ(ಪಿಟಿಐ): ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ (ನರೇಗಾ) ಕೂಲಿ ದರದಲ್ಲಿ ಹೆಚ್ಚಳವನ್ನು 'ಕೃಷಿ ಕಾರ್ಮಿಕರಿಗೆ ಸಂಬಂಧಿಸಿದ' ಗ್ರಾಹಕರ ಬೆಲೆ ಸೂಚ್ಯಂಕದ (ಸಿಪಿಐ–ಎಎಲ್) ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಕೂಲಿ ದರದಲ್ಲಿ ಅಲ್ಪ ಹೆಚ್ಚಳ ಮಾಡಲಾಗಿದೆ ಎಂಬ ಟೀಕೆಗಳ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯ ಈ ಸ್ಪಷ್ಟನೆ ನೀಡಿದೆ.

ವಿವಿಧ ರಾಜ್ಯಗಳಿಗೆ ಅನ್ವಯವಾಗುವಂತೆ ನರೇಗಾ ಕೂಲಿ ದರದಲ್ಲಿ ಶೇ 4ರಿಂದ 10ರಷ್ಟು ಹೆಚ್ಚಳ ಮಾಡಿ, ಸಚಿವಾಲಯ ಬುಧವಾರ ಅಧಿಸೂಚನೆ ಪ್ರಕಟಿಸಿತ್ತು.

ಕಳೆದ ವರ್ಷದಿಂದ ಗ್ರಾಹಕರ ಬೆಲೆ ಸೂಚ್ಯಂಕದಲ್ಲಿ ಶೇ 7.7ರಷ್ಟು ಹೆಚ್ಚಳ ಕಂಡುಬಂದಿದೆ.

ರಾಜು ಪಾಲ್ ಹತ್ಯೆ ಪ್ರಕರಣ: 7 ಜನ ದೋಷಿ–ಕೋರ್ಟ್

ನವದೆಹಲಿ (ಪಿಟಿಐ): ಬಿಎಸ್‌ಪಿ ಮಾಜಿ ಶಾಸಕ ರಾಜು ಪಾಲ್ ಅವರ ಹತ್ಯೆ ಪ್ರಕರಣದ ಏಳು ಆರೋಪಿಗಳನ್ನು ಸಿಬಿಐ ವಿಶೇಷ ಕೋರ್ಟ್ ಶುಕ್ರವಾರ ಅಪರಾಧಿಗಳೆಂದು ತೀರ್ಮಾನಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ರಾಜಕಾರಣಿ ಹಾಗೂ ಗ್ಯಾಂಗ್‌ಸ್ಟರ್ ಆತಿಕ್ ಅಹಮದ್, ಅವರ ಸಹೋದರನೂ ಆದ ಪ್ರಮುಖ ಆರೋಪಿ ಖಾಲಿದ್ ಅಜೀಮ್ ಅಲಿಯಾಸ್ ಅಶ್ರಫ್ ಹಾಗೂ ಗುಲ್‌ಬುಲ್ ಅಲಿಯಾಸ್ ರಫೀಕ್ ಮೃತಪಟ್ಟ ಕಾರಣ ಪ್ರಕರಣದಲ್ಲಿ ಅವರ ಕುರಿತ ವಿಚಾರಣೆಯನ್ನು ರದ್ದುಗೊಳಿಸಲಾಯಿತು ಎಂದೂ ಹೇಳಿದ್ದಾರೆ.

ಉತ್ತರ ಪ್ರದೇಶದ ಪ್ರಯಾಗರಾಜ್‌ನ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಮುಖಂಡ ರಾಜು ಪಾಲ್ ಅವರನ್ನು 2005ರ ಜನವರಿಯಲ್ಲಿ ಗುಂಟೇಟಿನಿಂದ ಕೊಲ್ಲಲಾಗಿತ್ತು. 2004ರ ವಿಧಾನಸಭಾ ಉಪ ಚುನಾವಣೆಯಲ್ಲಿ ಪಶ್ಚಿಮ ಪ್ರಯಾಗರಾಜ್ ಕ್ಷೇತ್ರದಲ್ಲಿ ರಾಜು ಪಾಲ್ ವಿರುದ್ಧ ನಿಂತು ಸೋತಿದ್ದ ಅಶ್ರಫ್ ರಾಜಕೀಯ ದ್ವೇಷದಿಂದ ಹತ್ಯೆ ಮಾಡಿದ್ದ. 2016ರಲ್ಲಿ ಈ ಪ್ರಕರಣದ ತನಿಖೆಯನ್ನು ಸಿಬಿಐ ವಹಿಸಿಕೊಂಡಿತ್ತು.

ರಣಜೀತ್ ಪಾಲ್, ಅಬಿದ್, ಫರ್ಹಾನ್ ಅಹಮದ್, ಇಸ್ರಾರ್ ಅಹಮದ್, ಜಾವೇದ್, ಗುಲ್‌ಹಸನ್ ಹಾಗೂ ಅಬ್ದುಲ್ ಕಾವಿ ಇವರನ್ನು ಅಪರಾಧಿಗಳೆಂದು ಪ್ರಕಟಿಸಿದ ಕೋರ್ಟ್, ಅಪರಾಧದ ಸಂಚು, ಕೊಲೆ ಸೇರಿದಂತೆ ಪ್ರಮುಖ ಪ್ರಕರಣಗಳನ್ನು ಗೊತ್ತುಪಡಿಸಿದೆ. ಫರ್ಹಾನ್ ಅಹಮದ್ ಮೇಲೆ ಭಾರತೀಯ ಶಸ್ತ್ರ ಕಾಯ್ದೆಯ ಅನ್ವಯ ಹೆಚ್ಚುವರಿ ಪ್ರಕರಣವನ್ನೂ ಸೇರಿಸಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಭಾರತ– ಉಕ್ರೇನ್ ದ್ವಿಪಕ್ಷೀಯ ಸಭೆ

ಸಂಘರ್ಷ, ಪರಿಣಾಮದ ಚರ್ಚೆ

ಎಸ್.ಜೈಶಂಕರ್ ಮತ್ತು ಡಿಮಿಟ್ರೋ ಕುಲೇಬಾ

ನವದೆಹಲಿ (ಪಿಟಿಐ): 'ಸಾಗುತ್ತಿರುವ ಸಂಘರ್ಷ ಮತ್ತು ಅದರ ವ್ಯಾಪಕ ಪರಿಣಾಮಗಳು' ಎಂಬ ವಿಷಯವನ್ನು ಕೇಂದ್ರೀಕರಿಸಿ ಭಾರತ ಮತ್ತು ಉಕ್ರೇನ್ ಶುಕ್ರವಾರ ದೆಹಲಿಯಲ್ಲಿ 'ಮುಕ್ತ ಮತ್ತು ವ್ಯಾಪಕ' ದ್ವಿಪಕ್ಷೀಯ ಸಭೆ ನಡೆಸಿದವು. ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಹಾಗೂ ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೋ ಕುಲೇಬಾ ಈ ಸಭೆಯನ್ನು ನಡೆಸಿದರು.

ಎರಡು ವರ್ಷಗಳಿಗಿಂತ ಹೆಚ್ಚು ಕಾಲದಿಂದ ನಡೆಯುತ್ತಿರುವ ಉಕ್ರೇನ್– ರಷ್ಯಾ ಸಂಘರ್ಷಕ್ಕೆ ಶಾಂತಿಯುತ ಪರಿಹಾರ ಹುಡುಕುವ ಪ್ರಯತ್ನಗಳ ನಡುವೆ ಕುಲೇಬಾ ಅವರು ಎರಡು ದಿನಗಳ ಭಾರತ ಭೇಟಿಗೆ ಆಗಮಿಸಿದ್ದರು. ಭೇಟಿಯ ಎರಡನೇ ದಿನವಾದ ಶುಕ್ರವಾರ, ಜೈಶಂಕರ್ ಹಾಗೂ ಕುಲೇಬಾ ಹೈದರಾಬಾದ್ ಹೌಸ್‌ನಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಸಭೆ ಬಳಿಕ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದ ಜೈಶಂಕರ್, 'ಉಕ್ರೇನ್ ವಿದೇಶಾಂಗ ಸಚಿವರಾದ ಡೆಮೊಟ್ರ ಕುಲೇಬಾ ಅವರೊಂದಿಗೆ ಮುಕ್ತ ಮತ್ತು ವ್ಯಾಪಕವಾದ ಸಂಭಾಷಣೆ ನಡೆಯುತ್ತಿದೆ. ನಮ್ಮ ಚರ್ಚೆಗಳು ಸದ್ಯದ ಸಂಘರ್ಷ ಮತ್ತು ಅದರ ವ್ಯಾಪಕವಾದ ಪರಿಣಾಮಗಳ ಮೇಲೆ ಕೇಂದ್ರೀಕೃತವಾಗಿವೆ. ಸಭೆಯಲ್ಲಿ ವಿವಿಧ ಉಪಕ್ರಮಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ನಮ್ಮಿಬ್ಬರ ಆಸಕ್ತಿಯ ಜಾಗತಿಕ ಮತ್ತು ಪ್ರಾದೇಶಿಕ ವಿಷಯಗಳ ಬಗ್ಗೆಯೂ ಮಾತನಾಡಿದರು. ದ್ವಿಪಕ್ಷೀಯ ಸಹಕಾರ ಸೇರಿದಂತೆ ಒಟ್ಟಾರೆ ಸಂಬಂಧವನ್ನು ಬಲಪಡಿಸಲು ನಮ್ಮ ಬದ್ಧತೆಯನ್ನು ಪುನರುಚ್ಚರಿಸಿದೆ' ಎಂದಿದ್ದಾರೆ.

'ಎಸ್. ಜೈಶಂಕರ್ ಅವರ ಆಹ್ವಾನದ ಮೇರೆಗೆ ಭಾರತಕ್ಕೆ ಭೇಟಿ ನೀಡಿದೆ. ಭಾರತ ಮತ್ತು ಉಕ್ರೇನ್ ಸಹಕಾರವು ಮುಖ್ಯವಾಗಿದೆ. ನಾವು ಪರಸ್ಪರ ಸಂಬಂಧಗಳನ್ನು ಪುನಶ್ಚೇತನಗೊಳಿಸುತ್ತೇವೆ. ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿಯವರ ನಡುವಿನ ಸಂವಾದವನ್ನು ಆಧರಿಸಿ ಶಾಂತಿ ಸೂತ್ರಕ್ಕೆ ನಾವು ನಿರ್ದಿಷ್ಟವಾಗಿ ಗಮನ ನೀಡುತ್ತೇವೆ' ಎಂದು ಕುಲೇಬಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜಮ್ಮು: ಕಂದಕಕ್ಕೆ ಕಾರು ಉರುಳಿ 10 ಜನ ಸಾವು

ಬನಿಹಾಲ್/ಜಮ್ಮು (ಪಿಟಿಐ): ಜಮ್ಮು– ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಎಸ್‌ಯುವಿ ವಾಹನವೊಂದು 300 ಅಡಿ ಆಳದ ಕಂದಕಕ್ಕೆ ಉರುಳಿಬಿದ್ದಿದ್ದು, 10 ಜನ ಮೃತಪಟ್ಟಿದ್ದಾರೆ.

ಶ್ರೀನಗರದಿಂದ ಜಮ್ಮುವಿಗೆ ತೆರಳುತ್ತಿದ್ದ ವಾಹನವು ರಾಮ್‌ಬನ್ ಜಿಲ್ಲೆಯ ಬ್ಯಾಟರಿ ಚೆಶ್ಮಾ ಪ್ರದೇಶದಲ್ಲಿ ಗುರುವಾರ ತಡರಾತ್ರಿ ಚಾಲಕನ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿತು.

ಘಟನೆಯಲ್ಲಿ ಮೃತಪಟ್ಟ 9 ಪ್ರಯಾಣಿಕರ ಮೃತದೇಹಗಳನ್ನು ಹೊರತೆಗೆಯಲಾಗಿದ್ದು, ಅಪಘಾತಕ್ಕೀಡಾದ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರಿನ ಚಾಲಕ ಬಲ್ವಾನ್ ಸಿಂಗ್ (47) ಕೂಡ ಘಟನೆಯಲ್ಲಿ ಸತ್ತಿದ್ದು, ಇವರು ಬಿಹಾರ ಮೂಲದವರಾಗಿದ್ದಾರೆ. ಭಾರಿ ಮಳೆಯ ಹೊರತಾಗಿಯೂ ಪೊಲೀಸರು ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆ ಸಿಬ್ಬಂದಿ ಸ್ಥಳದಿಂದ ಶವಗಳನ್ನು ಹೊರತೆಗೆದಿದ್ದಾರೆ.

ಘಟನೆ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ. ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ನೀಡಲಾಗುವುದು ಎಂದು ಪ್ರಧಾನ ಮಂತ್ರಿ ಕಾರ್ಯಾಲಯ ತಿಳಿಸಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಮತ್ತು ಡೆಮಾಕ್ರಟಿಕ್ ಪ್ರೊಗ್ರೆಸಿವ್ ಆಜಾದ್ ಪಕ್ಷದ ಅಧ್ಯಕ್ಷ ಗುಲಾಮ್ ನಬಿ ಆಜಾದ್ ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದು, ಘಟನೆ ಕುರಿತು ದುಃಖ ವ್ಯಕ್ತಪಡಿಸಿದ್ದಾರೆ.

ಲೈಂಗಿಕ ಅಪರಾಧದ ಆರೋಪ ಇದ್ದಮಾತ್ರಕ್ಕೆ ಕ್ರಮ ಸಲ್ಲ: ಸುಪ್ರೀಂ ಕೋರ್ಟ್

'ಮುನ್ನೆಚ್ಚರಿಕೆ ಕ್ರಮದ ಬಂಧನ ಸರಿಯಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅತ್ಯಾಚಾರಕ್ಕೆ ಸಂಬಂಧಿಸಿದ್ದೂ ಸೇರಿದಂತೆ ಲೈಂಗಿಕ ಅಪರಾಧದ ಆರೋಪ ಎದುರಿಸುತ್ತಿದ್ದಾನೆ ಎಂಬ ಏಕೈಕ ಕಾರಣಕ್ಕೆ ವ್ಯಕ್ತಿಯ ವಿರುದ್ಧ ಮುನ್ನೆಚ್ಚರಿಕೆ ಕ್ರಮದ ಬಂಧನಕ್ಕೆ ಸಂಬಂಧಿಸಿದ ಕಠಿಣ ಅವಕಾಶ ಬಳಸುವುದನ್ನು ಸಮರ್ಥಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸರ್ಕಾರಿ ಉದ್ಯೋಗದಲ್ಲಿರುವ ಮಹಿಳೆ ಮೇಲೆ ನಡೆದ ಅತ್ಯಾಚಾರ ಹಾಗೂ ಐಫೋನ್ ಸೇರಿದಂತೆ ಆಕೆ ಬಳಿ ಇದ್ದ ಬೆಲೆಬಾಳುವ ವಸ್ತುಗಳನ್ನು ದೋಚಿದ ಆರೋಪದಡಿ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಬಂಡಿ ನಾರಾಯಣ ಎಂಬುವವರನ್ನು ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸುವ ಕುರಿತು ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಅರವಿಂದ ಕುಮಾರ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಆರೋಪಿತ ವ್ಯಕ್ತಿಯು ಇದೇ ರೀತಿಯ ಅಪರಾಧಗಳನ್ನು ಮತ್ತೆ ಎಸಗುವ ಸಾಧ್ಯತೆಗಳು ಹೆಚ್ಚು ಹಾಗೂ ಇದರಿಂದ ಸಾರ್ವಜನಿಕ ಸುವ್ಯವಸ್ಥೆಗೆ ಅಪಾಯ ತಪ್ಪಿದ್ದಲ್ಲ. ಅದರಲ್ಲೂ, ಮಹಿಳೆಯರಲ್ಲಿ ಭಯ ಮತ್ತು ಅಸುರಕ್ಷತೆ ಭಾವನೆ ಮೂಡುತ್ತದೆ' ಎಂದು ಬಂಡಿ ನಾರಾಯಣ ವಿರುದ್ಧ ಗುಂಟೂರು ಜಿಲ್ಲಾಧಿಕಾರಿ ಕಳೆದ ವರ್ಷ ಜೂನ್ 30ರಂದು ಹೊರಡಿಸಿದ್ದ ಮುನ್ನೆಚ್ಚರಿಕೆ ಬಂಧನ ಕುರಿತ ಆದೇಶದಲ್ಲಿ ತಿಳಿಸಿದ್ದರು.

'ಇವು ಸುಲಿಗೆ ಮತ್ತು ಅತ್ಯಾಚಾರ ಕುರಿತ ಪ್ರತ್ಯೇಕವಾದ ಪ್ರಕರಣಗಳಿಗೆ ಸಂಬಂಧಿಸಿದ ಆರೋಪಗಳಾಗಿವೆ. ಬಂಧಿತನು ಇಂಥ ಅಪರಾಧಗಳನ್ನು ಮತ್ತೆ ಎಸಗುತ್ತಾನೆ ಎಂಬುದನ್ನು ತೋರಿಸುವ ಯಾವುದೇ ಸಾಕ್ಷ್ಯಗಳು ಸಂಬಂಧಪಟ್ಟ ಅಧಿಕಾರಿಗಳ ಬಳಿ ಇಲ್ಲ. ಹೀಗಾಗಿ, ಸೂಕ್ತ ದಾಖಲೆಗಳು/ಸಾಕ್ಷ್ಯಗಳು ಇಲ್ಲದಿರುವಾಗ ಜಿಲ್ಲಾಧಿಕಾರಿ ಹೊರಡಿಸಿರುವ ಆದೇಶವನ್ನು ಸಮರ್ಥಿಸಲು ಸಾಧ್ಯ ಇಲ್ಲ' ಎಂದು ಪೀಠ ಹೇಳಿದೆ.

'ಬಂಡಿ ನಾರಾಯಣ ವಿರುದ್ಧ 2023ರ ಏಪ್ರಿಲ್ 27ರಂದು ಸುಲಿಗೆ ಮಾಡಿದ ಆರೋಪ ಇತ್ತು. ಇದರ ಜೊತೆಗೆ, ಅವರ ವಿರುದ್ಧ ಕಳೆದ ಮೇ 1ರಂದು ಅತ್ಯಾಚಾರ ಎಸಗಿದ ಆರೋಪ ಹೊರಿಸಲಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಸಂಕ್ಷಿಪ್ತ ಸುದ್ದಿ

ಜಲಾಶಯಗಳಲ್ಲಿ ನೀರು ಸಂಗ್ರಹ ಕುಸಿತ

ನವದೆಹಲಿ(ಪಿಟಿಐ): ದೇಶದ 150 ಪ್ರಮುಖ ಜಲಾಶಯಗಳಲ್ಲಿ ಅವುಗಳ ಗರಿಷ್ಠ ಸಂಗ್ರಹ ಸಾಮರ್ಥ್ಯದ ಶೇ 36ರಷ್ಟು ಮಾತ್ರ ನೀರು ಲಭ್ಯ ಇದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ, ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳ ಜಲಾಶಯಗಳಲ್ಲಿ ನೀರಿನ ಸಂಗ್ರಹ ಸಾಮರ್ಥ್ಯ ಗಣನೀಯ ಪ್ರಮಾಣದಲ್ಲಿ ಕುಸಿದಿದೆ ಎಂದು ಕೇಂದ್ರ ಜಲ ಆಯೋಗ ಬಿಡುಗಡೆ ಮಾಡಿರುವ ಅಂಕಿಅಂಶ ಹೇಳುತ್ತದೆ.

ಕಳೆದ ಹತ್ತು ವರ್ಷಗಳ ಸರಾಸರಿ ಪ್ರಮಾಣಕ್ಕೆ ಹೋಲಿಸಿದರೂ, ನೀರು ಸಂಗ್ರಹ ಸಾಮರ್ಥ್ಯದಲ್ಲಿ ಇಳಿಕೆ ಕಂಡುಬಂದಿದೆ ಎಂದು ಆಯೋಗ ತಿಳಿಸಿದೆ.

ಬೆಂಗಳೂರು ನೀರಿನ ಕೊರತೆಯಿಂದ ಸಂಕಷ್ಟ ಎದುರಿಸುತ್ತಿವೆ. ಕರ್ನಾಟಕದಲ್ಲಿ ಕಳೆದ ಮುಂಗಾರಿನಲ್ಲಿ ಮಳೆ ಕಡಿಮೆ ಬಿದ್ದ ಕಾರಣ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿದೆ. ವೇಗದ ನಗರೀಕರಣದ ಪರಿಣಾಮ ಕೆರೆಗಳು ಸಹ ಬತ್ತಿಹೋಗಿವೆ ಸಮಸ್ಯೆ ಮತ್ತಷ್ಟು ಉಲ್ಬಣಿಸಿದೆ ಎಂದು ಆಯೋಗ ಗುರುವಾರ ಬಿಡುಗಡೆ ಮಾಡಿರುವ ಬುಲೆಟಿನ್‌ನಲ್ಲಿ ತಿಳಿಸಲಾಗಿದೆ.

ಪ್ರಸಕ್ತ ಬೇಸಿಗೆಯಲ್ಲಿ ದಿನಗಳು ಕಳೆದಂತೆ, ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತಿದೆ ಎಂದು ತಿಳಿಸಿದೆ.

150 ಜಲಾಶಯಗಳ ಗರಿಷ್ಠ ಸಂಗ್ರಹ ಸಾಮರ್ಥ್ಯ 178.784 ಬಿಸಿಎಂ (ಶತಕೋಟಿ ಘನ ಮೀಟರ್‌ಗಳು) ಇದೆ. ಸದ್ಯ, ಒಟ್ಟು ಸಾಮರ್ಥ್ಯದ ಶೇ 36ರಷ್ಟು ಅಂದರೆ, 64.606 ಬಿಸಿಎಂನಷ್ಟು ನೀರು ಸಂಗ್ರಹ ಇದೆ ಎಂದು ಆಯೋಗ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ 150 ಜಲಾಶಯಗಳಲ್ಲಿ 76.991 ಬಿಸಿಎಂನಷ್ಟು ನೀರು ಲಭ್ಯವಿತ್ತು ಎಂದಿದೆ.

ಸಿ–ವಿಜಿಲ್: 79,000 ದೂರು ದಾಖಲು

ನವದೆಹಲಿ (ಪಿಟಿಐ): ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿ ಈವರೆಗೆ 79,000ಕ್ಕೂ ಹೆಚ್ಚು ದೂರುಗಳನ್ನು ಸಿ–ವಿಜಿಲ್ ಮೊಬೈಲ್ ಆ್ಯಪ್ ಮೂಲಕ ಸ್ವೀಕರಿಸಲಾಗಿದೆ ಎಂದು ಚುನಾವಣಾ ಆಯೋಗ ಶುಕ್ರವಾರ ತಿಳಿಸಿದೆ.

'ಈ ಪೈಕಿ ಶೇ 99ರಷ್ಟು ದೂರುಗಳನ್ನು ಪರಿಹರಿಸಲಾಗಿದೆ ಮತ್ತು ಶೇ 89ರಷ್ಟು ದೂರುಗಳನ್ನು 100 ನಿಮಿಷಗಳ ಒಳಗಾಗಿ ಪರಿಹರಿಸಲಾಗಿದೆ' ಎಂದು ಹೇಳಿದೆ.

ಅಕ್ರಮ ಬ್ಯಾನರ್ ಮತ್ತು ಹೋರ್ಡಿಂಗ್‌ಗಳ ವಿರುದ್ಧ 58,500ಕ್ಕೂ ಹೆಚ್ಚು ದೂರುಗಳು ಹಣ, ಉಡುಗೊರೆ ಮತ್ತು ಮದ್ಯ ವಿತರಣೆಗೆ ಸಂಬಂಧಿಸಿ 1,400 ದೂರು ದಾಖಲಾಗಿವೆ. ಇನ್ನು 2,454 ದೂರುಗಳು ಆಸ್ತಿ ಹಾನಿಗೆ ಸಂಬಂಧಿಸಿದವು, 535 ದೂರುಗಳು ಬಂದೂಕು, ಮದ್ದುಗುಂಡಿಗೆ ಸಂಬಂಧಿಸಿದವುಗಳಾಗಿವೆ. ನಿಷೇಧಿತ ಸಂದರ್ಭದಲ್ಲಿ ಪ್ರಚಾರ ಕೈಗೊಂಡಿದ್ದಕ್ಕೆ ಸಂಬಂಧಿಸಿದಂತೆ 1,000 ದೂರುಗಳು ದಾಖಲಾಗಿವೆ ಎಂದು ತಿಳಿಸಿದೆ.

ಮತಕ್ಕಾಗಿ ಕೋಟ್ಯಂತರ ಅನುದಾನ

ಪ್ರತಿ ಚುನಾವಣೆಗೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದಲ್ಲಿ ಹತ್ತು ಹಲವು ಯೋಜನೆಗಳನ್ನು ಉದ್ಘಾಟಿಸುತ್ತಾರೆ. ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಹೊಸ ಹೊಸ ಯೋಜನೆಗಳನ್ನು ಘೋಷಿಸುತ್ತಾರೆ. ಇದು 2014ರಿಂದ ಬಿಜೆಪಿ ಅನುಸರಿಸಿಕೊಂಡು ಬಂದ ಅಲಿಖಿತ ಸಂಪ್ರದಾಯ

● ಮಂಜುನಾಥ ಹೆಬ್ಬಾರ್

ನವದೆಹಲಿ: ಅಭಿವೃದ್ಧಿ ಕನಸುಗಳನ್ನು ಬಿತ್ತಿ ಗೆಲ್ಲುವುದು ಬಿಜೆಪಿಯ ಯಶಸ್ವಿ ಚುನಾವಣಾ ತಂತ್ರ. ದೆಹಲಿ ಗದ್ದುಗೆಗೆ ಮತ್ತೆ ಲಗ್ಗೆ ಹಾಕಲು ಪಕ್ಷ ಈ ಸಲವೂ ಅಭಿವೃದ್ಧಿ ಮಂತ್ರ ಜಪಿಸಿದೆ.

ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಣೆಗೆ ಮುನ್ನ ಕರ್ನಾಟಕದಲ್ಲಿ ಹಲವು ಸಾವಿರ ಕೋಟಿ ರೂಪಾಯಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಜನರ ಮನ ಗೆಲ್ಲುವ ಪ್ರಯತ್ನ ಮಾಡಿದೆ. ಯುಪಿಎ ಸರ್ಕಾರ ಘೋಷಿಸಿದ ಯೋಜನೆಗಳನ್ನು ಬಿಜೆಪಿ ಸರ್ಕಾರ ತನ್ನದೆಂದು ಬಿಂಬಿಸಿಕೊಳ್ಳುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ಪೈಪೋಟಿಗೆ ಇಳಿದಿದೆ. ಲೋಕಸಭಾ ಚುನಾವಣೆಯ ಪ್ರಚಾರ ಕಣದಲ್ಲಿ 'ಅಭಿವೃದ್ಧಿ ರಾಜಕಾರಣ' ಸದ್ದು ಮಾಡಲಿದೆ.

2023ರ ಕರ್ನಾಟಕ ವಿಧಾನಸಭಾ ಚುನಾವಣೆಗೆ ಮೊದಲು ಪ್ರಧಾನಿ ಅವರು ಅನೇಕ ಯೋಜನೆಗಳಿಗೆ ಚಾಲನೆ ನೀಡಿದ್ದರು. ಗಡ್ಕರಿ ಅವರು ಸುಮಾರು ₹15 ಸಾವಿರ ಕೋಟಿಗಳ ಯೋಜನೆಗಳನ್ನು ಪ್ರಕಟಿಸಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋತು ಅಧಿಕಾರ ಕಳೆದುಕೊಂಡಿತು. ಆ ಬಳಿಕ ಸುಮಾರು 10 ತಿಂಗಳು ಉಭಯ ನಾಯಕರು ರಾಜ್ಯದ ಮೂಲಸೌಕರ್ಯ ಯೋಜನೆಗಳ ವಿಷಯದಲ್ಲಿ ಮೌನಕ್ಕೆ ಶರಣಾದರು. ಮತ್ತೆ ಅಭಿವೃದ್ಧಿ ಪರ್ವ ಆರಂಭವಾಗಿದ್ದು ಫೆಬ್ರುವರಿ ಹಾಗೂ ಮಾರ್ಚ್ ತಿಂಗಳಿನಲ್ಲೇ. ರೈಲು, ಹೆದ್ದಾರಿ ಸೇರಿದಂತೆ ಹಲವು ಮೂಲಸೌಕರ್ಯ ಯೋಜನೆಗಳಿಗೆ ಪ್ರಧಾನಿ ಚಾಲನೆ ಕೊಟ್ಟರು.

ಮತ ಮಂಥನ

ಬೆಂಗಳೂರು–ಮೈಸೂರು ಹೆದ್ದಾರಿ ಯೋಜನೆಯು ಕಳೆದ ವರ್ಷವಿಡೀ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರ ನಡುವೆ ಜಟಾಪಟಿಗೆ ಕಾರಣವಾಯಿತು. 'ಬೆಂಗಳೂರು–ಮೈಸೂರು ಹೆದ್ದಾರಿ ಯೋಜನೆ ನಮ್ಮದು' ಎಂಬುದು ಎರಡೂ ಪಕ್ಷಗಳ ನಾಯಕರ ಮಾತು. ಯೋಜನೆಗೆ ಚಾಲನೆ ನೀಡಿದ್ದು ಯುಪಿಎ ಸರ್ಕಾರ ಎಂಬುದು ಕಾಂಗ್ರೆಸ್ ನಾಯಕರ ವಾದವಾದರೆ, ಯೋಜನೆಗೆ ಶುರುವಾಗಿದ್ದೇ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಎಂಬುದು ಬಿಜೆಪಿ ನಾಯಕರ ಸ್ಪಷ್ಟ ನುಡಿ. ಏಳೆಂಟು ಲೋಕಸಭಾ ಕ್ಷೇತ್ರಗಳ ಮತದಾರರ ಮೇಲೆ ಪರಿಣಾಮ ಬೀರುವ ಈ ಯೋಜನೆಯ ರಾಜಕೀಯ ಲಾಭ ಪಡೆಯಲು ಎರಡೂ ಪಕ್ಷಗಳ ನಾಯಕರು ಹಾತೊರೆಯುತ್ತಿದ್ದಾರೆ.

ದಕ್ಷಿಣ ಕನ್ನಡದ ಸಂಸದ ನಳಿನ್ ಕುಮಾರ್ ಕಟೀಲು ಇತ್ತೀಚಿನ ದಿನಗಳಲ್ಲಿ ಹೆಚ್ಚು ಸುದ್ದಿಯಾಗಿದ್ದು ಮಂಗಳೂರಿನ ಪಂಪ್‌ವೆಲ್ ಮೇಲ್ಸೇತುವೆ ವಿಷಯದಲ್ಲಿ. ಮೇಲ್ಸೇತುವೆಯ ಆಮೆಗತಿ ಕಾಮಗಾರಿ ವಿಷಯ ಮುಂದಿಟ್ಟುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅವರನ್ನು ತೀವ್ರವಾಗಿ ಟೀಕಿಸಲಾಗಿತ್ತು. ಪಕ್ಷ ತೀವ್ರ ಮುಜುಗರಕ್ಕೂ ಒಳಗಾಗಿತ್ತು. ನಳಿನ್ ಅವರಿಗೆ ಪಕ್ಷ ಈ ಸಲ ಟಿಕೆಟ್ ನಿರಾಕರಿಸಿದೆ.

ರಾಜ್ಯದಲ್ಲಿ ಕಳೆದೊಂದು ದಶಕದಲ್ಲಿ ₹64 ಸಾವಿರ ಕೋಟಿಯ ಹೆದ್ದಾರಿ ಯೋಜನೆಗಳಿಗೆ ಚಾಲನೆ ನೀಡಲಾಗಿದೆ ಎಂಬುದು ಕೇಂದ್ರ ಸರ್ಕಾರ ಪದೇ ಪದೇ ಹೇಳುತ್ತಿದೆ. ಅನುದಾನದ ಕೊರತೆ, ಭೂಸ್ವಾಧೀನ ಸಮಸ್ಯೆ, ಸಮನ್ವಯ ಕೊರತೆ ಹಾಗೂ ಗುತ್ತಿಗೆದಾರರ ವಿಳಂಬ ಧೋರಣೆಯಿಂದಾಗಿ ಈ ಯೋಜನೆಗಳು ತೆವಳುತ್ತಾ ಸಾಗಿವೆ. ಕೆಲವು ಕಾಮಗಾರಿಗಳ ಗಡುವು ಮುಗಿದು ಮೂರು–ನಾಲ್ಕು ವರ್ಷಗಳೇ ಕಳೆದಿವೆ. ಗುಂಡಿ ಬಿದ್ದ ಹೆದ್ದಾರಿಗಳಲ್ಲಿ ಸಾಗಿ ನೊಂದ ಮತದಾರರ ಕೋಪಕ್ಕೆ ತುತ್ತಾಗಿ ಕೆಲವು ನಾಯಕರು ಸೋತು ಸುಣ್ಣವಾಗಿದ್ದಾರೆ. ಮೂಲಸೌಕರ್ಯ ಯೋಜನೆಗಳ ಅನುಷ್ಠಾನವನ್ನೇ ಹಲವು ನಾಯಕರು ಗೆಲುವಿಗೆ 'ಬಂಡವಾಳ'ವನ್ನಾಗಿ ಮಾಡಿಕೊಂಡಿದ್ದಾರೆ.

ಪ್ರತಿ ವರ್ಷ ಕೇಂದ್ರ ಸರ್ಕಾರದ ಬಜೆಟ್ ಮಂಡನೆಯಾದ ಬೆನ್ನಲ್ಲೇ ರೈಲ್ವೆ ಸಚಿವರು ಪತ್ರಿಕಾಗೋಷ್ಠಿ ನಡೆಸುತ್ತಾರೆ. 'ಯುಪಿಎ ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ಪ್ರತಿವರ್ಷ ₹850 ಕೋಟಿ ಅನುದಾನ ನೀಡಲಾಗುತ್ತಿತ್ತು. ಎನ್‌ಡಿಎ ಸರ್ಕಾರ ಬಂದ ಮೇಲೆ ಅನುದಾನ ಪ್ರಮಾಣ ₹7 ಸಾವಿರ ಕೋಟಿಗೆ ಏರಿದೆ' ಎಂದು ಅವರು ಮಾಹಿತಿ ನೀಡುತ್ತಾರೆ. ರಾಜ್ಯದಲ್ಲಿನ ಹೊಸ ರೈಲ್ವೆ ಯೋಜನೆಗಳ ವಿವರವನ್ನೂ ಕೊಡುತ್ತಾರೆ. ಹುಬ್ಬಳ್ಳಿ–ಅಂಕೋಲಾ, ಬಾಗಲಕೋಟೆ–ಕುಡಚಿ, ತುಮಕೂರು–ದಾವಣಗೆರೆ, ಕಡೂರು–ಸಕಲೇಶಪುರ ಮಾರ್ಗ ಸೇರಿದಂತೆ 10 ರೈಲ್ವೆ ಯೋಜನೆಗಳನ್ನು ಉಲ್ಲೇಖಿಸುತ್ತಾರೆ. ತಮಾಷೆಯೆಂದರೆ, ಮಲ್ಲಿಕಾರ್ಜುನ ಖರ್ಗೆ ಅವರು ರೈಲ್ವೆ ಸಚಿವರಾಗಿದ್ದ ಕಾಲದಿಂದಲೂ ಈ ಯೋಜನೆಗಳು ಹೊಸ ಯೋಜನೆಗಳ ಪಟ್ಟಿಯಲ್ಲಿವೆ.

ಭಾರತಮಾಲಾ ಯೋಜನೆ

2,059 ಕಿ.ಮೀ. ರಾಜ್ಯದಲ್ಲಿ ಯೋಜನೆಯ ಒಟ್ಟು ಉದ್ದ

1,603 ಕಿ.ಮೀ. ಈವರೆಗೆ ಮಂಜೂರು

855 ಕಿ.ಮೀ. ಈವರೆಗೆ ಪೂರ್ಣವಾಗಿರುವುದು

₹13,915 ಕೋಟಿ ಕಳೆದ ಐದು ವರ್ಷಗಳಲ್ಲಿ 'ನಮ್ಮ ಮೆಟ್ರೊ' ಯೋಜನೆಗೆ ಕೇಂದ್ರದಿಂದ ಅನುದಾನ ಮಂಜೂರು

6,177 ಕಿ.ಮೀ. 2014ರ ವರೆಗೆ ರಾಷ್ಟ್ರೀಯ ಹೆದ್ದಾರಿಯಾಗಿ ಅಧಿಸೂಚನೆ

8,191 ಕಿ.ಮೀ. ಇಲ್ಲಿಯವರೆಗೆ ರಾಷ್ಟ್ರೀಯ ಹೆದ್ದಾರಿಯಾಗಿ ಅಧಿಸೂಚನೆ

92 ರಾಜ್ಯದಲ್ಲಿ ಅನುಷ್ಠಾನ ಹಂತದಲ್ಲಿರುವ ಹೆದ್ದಾರಿ ಯೋಜನೆಗಳು

3,052 ಕಿ.ಮೀ. ಈ ಯೋಜನೆಗಳ ಒಟ್ಟು ಉದ್ದ

₹63,956 ಕೋಟಿ ಈ ಯೋಜನೆಗಳ ಒಟ್ಟು ಮೊತ್ತ

ದಟ್ಟಣೆಯ ತಾಪದಲ್ಲಿ...

ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿ ದಟ್ಟಣೆ ಸಮಸ್ಯೆ ನಿವಾರಿಸಲು ನೈಸ್ ರಸ್ತೆಯ ಮಾದರಿಯಲ್ಲೇ ತುಮಕೂರು ರಸ್ತೆಯಿಂದ ಹೊಸೂರು ರಸ್ತೆವರೆಗೆ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಿಸುವ ಯೋಜನೆಯು ಪ್ರತಿ ಚುನಾವಣೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರ ನಡುವೆ ವಾಕ್ಸಮರಕ್ಕೆ ಕಾರಣವಾಗುತ್ತಿದೆ.

ಈ ಯೋಜನೆಯನ್ನು ಬಿಡಿಎ 12 ವರ್ಷಗಳ ಹಿಂದೆಯೇ ರೂಪಿಸಿತ್ತು. ಆರಂಭದಲ್ಲಿ ಇದರ ಅಂದಾಜು ವೆಚ್ಚ ₹500 ಕೋಟಿ ಇತ್ತು. 2013ರಲ್ಲಿ ಇದು ₹5,000 ಕೋಟಿಗೆ ಹೆಚ್ಚಿತ್ತು. ಇದೀಗ, ಈ ಯೋಜನೆಯ ಮೊತ್ತ ₹20 ಸಾವಿರ ಕೋಟಿ ದಾಟಿದೆ. ಈ ಯೋಜನೆಗೆ ₹6 ಸಾವಿರ ಕೋಟಿ ವಿಶೇಷ ಅನುದಾನ ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಹತ್ತಾರು ಸಲ ಮನವಿ ಸಲ್ಲಿಸಿದೆ. ಅನುದಾನ ನೀಡಲು ಕೇಂದ್ರ ಸರ್ಕಾರ ಈವರೆಗೆ ಒಪ್ಪಿಲ್ಲ. ಈ ಯೋಜನೆ ಇನ್ನೂ ಶುರುವಾಗಿಲ್ಲ.

ಉಪನಗರ ರೈಲು ಯೋಜನೆಯ ಕಥೆ ಇದಕ್ಕಿಂತ ಭಿನ್ನವಾಗಿಲ್ಲ. ₹17 ಸಾವಿರ ಕೋಟಿ ಮೊತ್ತದ ಉಪನಗರ ರೈಲು ಯೋಜನೆಗೆ ಕೇಂದ್ರ ₹2,479 ಕೋಟಿ ಭರಿಸಲಿದೆ. ಆದರೆ, ಕೇಂದ್ರ ರೈಲ್ವೆ ಸಚಿವಾಲಯವು ಬಜೆಟ್ ಅನುದಾನದ ರೂಪದಲ್ಲಿ ನೀಡುವುದು ₹500 ಕೋಟಿ ಮಾತ್ರ. ಉಳಿದ ಮೊತ್ತವನ್ನು ರೈಲ್ವೆ ಜಾಗದ ನಗದೀಕರಣದಿಂದ ಹೊಂದಿಸಬೇಕಿದೆ. ಈ ಯೋಜನೆ ಆಮೆಗತಿಯಲ್ಲಿ ಸಾಗಿದೆ. ಸಂಚಾರ ದಟ್ಟಣೆಯ ಬಲೆಯೊಳಗೆ ಸಿಲುಕಿ ಜನರು ಯಾತನೆ ಪಡುತ್ತಲೇ ಇದ್ದಾರೆ. ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆ ಪ್ರತಿ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳಿಗೆ ಅಸ್ತ್ರವಾಗುತ್ತಿದೆ. ಲೋಕಸಭಾ ಚುನಾವಣೆಯಲ್ಲೂ ಈ ವಿಷಯ ಮತ್ತೆ ಮುನ್ನೆಲೆಗೆ ಬಂದಿದೆ.

ಗುಸುಗುಸು

ಮುನಿಯಪ್ಪಗೆ 'ಸ್ವಾಮಿ' ಬಣದ ಸಡ್ಡು್ಯಕೆ?

ಕಳೆದ ಲೋಕಸಭಾ ಚುನಾವಣೆಯಲ್ಲಿ ಕೋಲಾರದಲ್ಲಿ ಸೋಲಿಸಿ ಕಳಿಸಿದರೂ ಮತ್ತೆ ಜಿಲ್ಲೆ ಮೇಲೆ ಹಿಡಿತ ಸಾಧಿಸಲು ಸಚಿವ ಕೆ.ಎಚ್. ಮುನಿಯಪ್ಪ ಹವಣಿಸುತ್ತಿರುವುದಕ್ಕೆ ಮಾಜಿ ಸಚಿವ ಕೆ.ಆರ್. ರಮೇಶ್‌ಕುಮಾರ್ (ಸ್ವಾಮಿ–ಸ್ವಾಮೊಳ್ಳು) ನೇತೃತ್ವದ ಬಣ ತಿರುಗಿಬಿದ್ದಿದೆ. ಮುನಿಯಪ್ಪ ಕಾಟ ತಪ್ಪಿತು ಎಂದುಕೊಳ್ಳುತ್ತಿರುವಾಗಲೇ ಅಳಿಯ ಚಿಕ್ಕಪೆದ್ದಣ್ಣನ ಮೂಲಕ, ಮತ್ತೆ ಇಣುಕಲು ಹೊರಟಿರುವುದಕ್ಕೆ 'ಸ್ವಾಮಿ'ಯವರ ಬಣ ಸೆಟೆದು ನಿಂತಿದೆಯಂತೆ. ಏಳು ಬಾರಿ ಕೋಲಾರದಲ್ಲಿ ಗೆದ್ದ ಮುನಿಯಪ್ಪ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದವರಿಗಿಂತ ಅನ್ಯರ ಬೆಂಬಲವನ್ನೇ ನೆಚ್ಚಿಕೊಂಡಿದ್ದರು. ವಿಧಾನಸಭೆ ಚುನಾವಣೆಯಲ್ಲಿ ಗೆದ್ದ–ಸೋತ ಎದುರಾಳಿ ಪಕ್ಷದವರ ಜತೆ ಕೂಡಿಕೆ ಮಾಡಿಕೊಂಡು, ತಮ್ಮ ಕ್ಷೇತ್ರ ಭದ್ರ ಪಡಿಸಿಕೊಳ್ಳುತ್ತಿದ್ದರು. ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್‌ನಲ್ಲಿ ತಮಗೆ ಆಗದವರಿಗೆ ಟಿಕೆಟ್ ತಪ್ಪಿಸುವುದು, ಅದು ಸಾಧ್ಯವಾಗದೇ ಇದ್ದಲ್ಲಿ, ಲೋಕಸಭೆ ಚುನಾವಣೆಯಲ್ಲಿ ತಮಗೆ ನೆರವಾದವರಿಗೆ ಸಹಾಯ ಮಾಡಿ, ತಮ್ಮ ಪಕ್ಷದವರನ್ನೇ ಸೋಲಿಸುವುದು ಮುನಿಯಪ್ಪ ಅವರ ರಾಜಕಾರಣ ಎಂಬುದು ಕೋಲಾರದಲ್ಲಿ ರಹಸ್ಯವಾಗಿರುವ 'ಚಿನ್ನ'ದಂಥ ಮಾತು. ಈ ಅಂಶವೇ ಮುನಿಯಪ್ಪ ಮೇಲೆ ಕಾಂಗ್ರೆಸ್ ನಾಯಕರು ಮುನಿಸಿಕೊಳ್ಳಲು ಕಾರಣ. ಹೀಗಾಗಿ, 2019ರ ಚುನಾವಣೆಯಲ್ಲಿ ಮುನಿಯಪ್ಪರನ್ನು ಸೋಲಿಸಲೇಬೇಕು ಎಂದು ಪಣತೊಟ್ಟವರೆಲ್ಲ ಒಟ್ಟಾದರು; ಬೆಂಗಳೂರಿನ ಪಾಲಿಕೆ ಸದಸ್ಯರಾಗಿದ್ದ ಮುನಿಸ್ವಾಮಿ ಅವರನ್ನು ಕರೆತಂದು, ಮುನಿಯಪ್ಪಗೆ ಸೋಲುಣಿಸಿದ್ದರು. ವಿಧಾನಸಭೆಗೆ ದೇವನಹಳ್ಳಿಯಲ್ಲಿ ಸ್ಪರ್ಧಿಸಿದ ಅವರು, ಕೋಲಾರದ ವಿವಿಧ ಕ್ಷೇತ್ರಗಳಲ್ಲಿ ಹಸ್ತಕ್ಷೇಪವನ್ನೂ ಮಾಡಿದರು. ಕೆಲವರು ಕಾಂಗ್ರೆಸ್ ಅಲೆ–ಸ್ವಂತ ಬಲದ ಮೇಲೆ ಗೆದ್ದರೆ, ಕೆಲವರು ಸೋತರು. ಅಳಿಯನಿಗೆ ಟಿಕೆಟ್ ಕೊಟ್ಟರೆ ಮತ್ತೆ ಮುನಿಯಪ್ಪ ಕೋಲಾರದ ಚಿನ್ನ ಬಿಡುವುದಿಲ್ಲ. 'ಸ್ವಾಮಿ'ಯವರ ಬಣ ಈಗಲೇ ಎಚ್ಚೆತ್ತು ಯುದ್ಧಕ್ಕೆ ಅಣಿಯಾಗಿದೆಯಂತೆ...


ಮುನಿಯಪ್ಪ

ಮತ ಆಮಿಷ: ಆಯೋಗದ ವಶ

₹20.85 ಕೋಟಿ ನಗದು

ಉಚಿತ ಉಡುಗೊರೆ	₹70.86 ಲಕ್ಷ
ಮದ್ಯ	₹27.27 ಕೋಟಿ (8.63 ಲಕ್ಷ ಲೀ)
ಮಾದಕವಸ್ತು	₹1.47 ಕೋಟಿ (211.23 ಕೆ.ಜಿ.)
ಚಿನ್ನ	₹9.15 ಕೋಟಿ (15.32 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!

ವೈಟ್ ಕಾಲರ್ ಬಂದರೆ ಏನು ಪ್ರಯೋಜನ ಎಂದು ಜನ ಈ ಚುನಾವಣೆಯಲ್ಲಿ ತೋರಿಸುತ್ತಾರೆ. ₹593 ಕೋಟಿ ಆಸ್ತಿ ಘೋಷಿಸಿಕೊಂಡಿರುವ ಸುರೇಶ್ ಅವರ ಆದಾಯ 12 ವರ್ಷಗಳ ಹಿಂದೆ ಎಷ್ಟಿತ್ತು? ಈಗ ಎಷ್ಟಾಗಿದೆ ಎಂಬುದರಲ್ಲೇ ಯಾರು ಪ್ರಾಮಾಣಿಕರು ಎಂಬುದು ಗೊತ್ತಾಗುತ್ತದೆ. ಮಂಜುನಾಥ್ ಪರವಾಗಿ ಜನರೇ ಎದ್ದು ನಿಂತಿದ್ದಾರೆ. ಭ್ರಷ್ಟ ಸುರೇಶ್ ಬೇಕಾ? ಸೀದಾ ಸಾದಾ ವ್ಯಕ್ತಿತ್ವದ ಮಂಜುನಾಥ್ ಬೇಕಾ ಎಂಬುದನ್ನು ಜನ ತೀರ್ಮಾನಿಸುತ್ತಾರೆ

ಸಿ.ಪಿ.ಯೋಗೇಶ್ವರ, ವಿಧಾನ ಪರಿಷತ್ ಸದಸ್ಯ

(ಜನರ ನಡುವೆ ನಿಂತು ಕಷ್ಟ–ಸುಖಗಳಿಗೆ ಸ್ಪಂದಿಸುವ 'ಡಿ.ಕೆ.ಸುರೇಶ್ ಬೇಕೋ ಅಥವಾ ವೈಟ್ ಕಾಲರ್ ವ್ಯಕ್ತಿ ಬೇಕೋ' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತಿಗೆ ಪ್ರತಿಕ್ರಿಯೆ

ಕ್ಷೇತ್ರ ಮಹಾತ್ಮೆ

ಕ್ಷೇತ್ರ ಮಹಾತ್ಮೆ– ಬೆಳಗಾವಿ



ಹಲವು 'ಪ್ರಭಾವಿ' ಕುಟುಂಬಗಳು ತಮ್ಮದೇ ಕೋಟೆಗಳನ್ನು ಕಟ್ಟಿಕೊಂಡಿರುವ ಬೆಳಗಾವಿಯಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಣೆಗೆ ಮುಂದಾಗಿರುವ ಸಚಿವೆ ಲಕ್ಷ್ಮೀ ಹೆಬ್ಬಾಳಕರ ತಮ್ಮ ಮಗ ಮೃಣಾಲ್ ಅವರನ್ನು ಕಣಕ್ಕೆ ಇಳಿಸಿದ್ದಾರೆ. ಸಂಸದೆ ಮಂಗಳಾ ಅಂಗಡಿ ಅವರ ಬದಲಿಗೆ ಅವರ ಬೀಗರಾದ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಹುಬ್ಬಳ್ಳಿಯಲ್ಲಿ ಬಾಗಿಲು ಹಾಕಿದ್ದ 'ಅಂಗಡಿ'ಯ ಶಟರ್ ಅನ್ನು ಬೆಳಗಾವಿಯಲ್ಲಿ ತೆರೆಯಲು ಓಡಾಡುತ್ತಿದ್ದಾರೆ. ಬೆಳಗಾವಿಯೆಂದರೆ ಜಾರಕಿಹೊಳಿ, ಕೋರೆ, ಕತ್ತಿ, ಸವದಿ, ಹುಕ್ಕೇರಿ ಕುಟುಂಬದ ಕೋಟೆ. ಅವರೆಲ್ಲರನ್ನೂ ಒಂದುಗೂಡಿಸಿಯೋ, ಎದುರು ಹಾಕಿಕೊಂಡೋ ಸುರೇಶ ಅಂಗಡಿ ಗೆಲ್ಲುತ್ತಲೇ ಬಂದಿದ್ದರು. ರಾಜಕೀಯವಾಗಿ ಅಷ್ಟೇನೂ ಪ್ರಭಾವ ಇಲ್ಲದ ಕಾಲದಲ್ಲಿ ಸುರೇಶ ಅಂಗಡಿ ಎದುರು ಸೋತಿದ್ದ ಲಕ್ಷ್ಮೀ, ಈಗ ತಮ್ಮ ಮಗನ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ. ಬೆಳಗಾವಿ ಗೆಲ್ಲಿಸಿಕೊಡುವ ಹೊಣೆ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೆಗಲಿಗೆ ಇದೆ. ಲಕ್ಷ್ಮೀ ಬೆನ್ನಿಗೆ ಸರ್ಕಾರ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇದ್ದರೆ, ಶೆಟ್ಟರ್‌ಗೆ ವಿರೋಧವೇ ಕಾಡುತ್ತಿದೆ. ಕಾಂಗ್ರೆಸ್‌ಗೆ ಬಂದು ಬಿಜೆಪಿಗೆ ಹೋದ ಶೆಟ್ಟರ್‌ಗೆ ಕಮಲದ ಸುವಾಸನೆ ಇನ್ನೂ ಸಿಕ್ಕಿಲ್ಲ. ಮೃಣಾಲ್‌ಗೆ 'ಲಕ್ಷ್ಮೀ'ಯ ಬಲವಿದೆ. ಶೆಟ್ಟರ್ ಅಂಗಡಿ ತೆರೆಯಲಿದೆಯೋ ಮೃಣಾಲ್ 'ಹಸ್ತ'ಕ್ಕೆ ಅಭಯ ಸಿಗಲಿದೆಯೋ... ಗುಟ್ಟು ಗೊತ್ತಿರುವುದು ಜಾರಕಿಹೊಳಿ ಕುಟುಂಬಕ್ಕಷ್ಟೆ.

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಬಿಜೆಪಿ–ಜೆಡಿಎಸ್ ಸಮನ್ವಯ ಸಭೆಯಲ್ಲಿ ಜಿ.ಟಿ. ದೇವೇಗೌಡ, ಆರ್.ಅಶೋಕ, ರಾಧಾಮೋಹನ್‌ದಾಸ್ ಅಗರವಾಲ್, ಎಚ್.ಡಿ. ದೇವೇಗೌಡ, ಬಿ.ಎಸ್. ಯಡಿಯೂರಪ್ಪ ಎಚ್.ಡಿ.ಕುಮಾರಸ್ವಾಮಿ, ಬಿ.ವೈ.ವಿಜಯೇಂದ್ರ, ಬಸವರಾಜ ಬೊಮ್ಮಾಯಿ, ಡಿ.ವಿ. ಸದಾನಂದಗೌಡ ಒಗ್ಗಟ್ಟು ಪ್ರದರ್ಶಿಸಿದರು. –ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯ ಗರ್ವಭಂಗ ಆಗಲೇಬೇಕು: ದೇವೇಗೌಡ

ಬೆಂಗಳೂರು: ನರೇಂದ್ರ ಮೋದಿ ಅವರು ದುರ್ಬಲ ಪ್ರಧಾನಿ, ತಾನು ಪ್ರಬಲ ಮುಖ್ಯಮಂತ್ರಿ ಎಂದು ಕೊಚ್ಚಿಕೊಳ್ಳುತ್ತಿರುವ ಸಿದ್ದರಾಮಯ್ಯ ಅವರ ಗರ್ವ ಇದೇ ಲೋಕಸಭಾ ಚುನಾವಣೆಯಲ್ಲಿ ಭಂಗವಾಗಲೇಬೇಕು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಹೇಳಿದರು.

ಶುಕ್ರವಾರ ನಡೆದ ಬಿಜೆಪಿ–ಜೆಡಿಎಸ್ ಸಮನ್ವಯ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ನರೇಂದ್ರ ಮೋದಿ ಅವರಂತಹ ಜಗಮೆಚ್ಚಿದ ನಾಯಕರ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲೂ ಮೈತ್ರಿ ಅಭ್ಯರ್ಥಿ ಗೆಲ್ಲಿಸುವ ಮೂಲಕ ತವರಿನಲ್ಲೇ ಅವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಶಾಸಕ ಜಿ.ಟಿ. ದೇವೇಗೌಡರಿಗೆ ಅವರು ಸೂಚಿಸಿದರು.

'ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿ ಎಂದಾಗ ಇಲ್ಲ ಎಂದರು. ಈಗ ಸಿದ್ದರಾಮಯ್ಯ ಪ್ರಧಾನಿ ವಿರುದ್ಧವೇ ಕೋರ್ಟ್‌ಗೆ ಹೋಗಿದ್ದಾರೆ. ಎಂಥಾ ಜನ ಇವರು. ತುಮಕೂರಿಗೆ ಕಳಿಸಿ, ನನ್ನನ್ನೇ ಸೋಲಿಸಿದರು. ಅಧಿಕಾರದ ಮದ ಇಳಿಸುವ ಸಾಮರ್ಥ್ಯ 91 ವರ್ಷದ ಈ ದೇವೇಗೌಡನಿಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯತೀಂದ್ರ ಹೇಳಿಕೆಗೆ ಬಿಜೆಪಿ ಆಕ್ರೋಶ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗೂಂಡಾ ಎಂದು ಟೀಕಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಅವರ ವಿರುದ್ಧ ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಯತೀಂದ್ರ ಅವರ ಹೇಳಿಕೆ ಖಂಡನಾರ್ಹ ಮಾತ್ರವಲ್ಲ, ತೀರಾ ಕೀಳು ಮಟ್ಟದ್ದಾಗಿದೆ. ಸಾರ್ವಜನಿಕ ಜೀವನದ ಕನಿಷ್ಠ ಘನತೆಯನ್ನೂ ಅವರು ಮರೆತಂತಿದೆ ಎಂದು ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, ಮೈಸೂರು ಸೇರಿದಂತೆ ಕರ್ನಾಟಕದ ಇನ್ನಿತರ ಭಾಗಗಳ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲು ನಿಚ್ಚಳವಾಗಿದೆ. ಹತಾಶೆಯಿಂದ ಅವಹೇಳನಕಾರಿ ಪದ ಪ್ರಯೋಗಕ್ಕೆ ಮುಂದಾಗಿದ್ದಾರೆ. ಅವರು ಕೂಡಲೇ ಕ್ಷಮೆ ಕೇಳಬೇಕು. ಇನ್ನು ಮುಂದಾದರೂ ಸಾರ್ವಜನಿಕ ಜೀವನದಲ್ಲಿ ಸಭ್ಯತೆಯಿಂದ ವರ್ತಿಸಬೇಕು ಎಂದಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಮುಖ್ಯಮಂತ್ರಿ ಮಗನಾಗಿ, ಮಾಜಿ ಶಾಸಕರಾಗಿ ಯತೀಂದ್ರ ಅವರ ಹೇಳಿಕೆ ಖಂಡನೀಯ. ತಕ್ಷಣ ಅವರು ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ–ಜೆಡಿಎಸ್ ಸಮನ್ವಯ ಸಮಿತಿ ಸಭೆಯ ನಿರ್ಣಯ

ಕಾರ್ಯಕರ್ತರ ಬಾಂಧವ್ಯಕ್ಕೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ನಡುವೆ ಉತ್ತಮ ಬಾಂಧವ್ಯ ಬೆಸೆದು, ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಪೂರಕ ವಾತಾವರಣ ನಿರ್ಮಿಸಲು ಶುಕ್ರವಾರ ನಡೆದ ಸಮನ್ವಯ ಸಮಿತಿ ಸಭೆಯಲ್ಲಿ ಎರಡೂ ಪಕ್ಷಗಳ ನಾಯಕರು ನಿರ್ಣಯ ಕೈಗೊಂಡರು.

ಬಿಜೆಪಿ- ಜೆಡಿಎಸ್ ಎರಡೂ ಒಂದೇ: ಸಭೆಯಲ್ಲಿ ಮಾತನಾಡಿದ ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, 'ಬಿಜೆಪಿ- ಜೆಡಿಎಸ್ ಬೇರೆಯಲ್ಲ. ನಾವೆಲ್ಲ ಒಂದೇ ತಾಯಿ ಮಕ್ಕಳಂತೆ. ಮೈತ್ರಿ ಅಭ್ಯರ್ಥಿಗಳ ಗೆಲುವಿಗೆ ಪಣ ತೊಡಿ' ಎಂದು ಕೋರಿದರು.

ದೇಶ- ವಿದೇಶಗಳಲ್ಲಿ ನಿರಂತರ ಪ್ರವಾಸ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಹಾಗೂ 91ರ ವಯಸ್ಸಿನಲ್ಲೂ ಅತ್ಯಂತ ಉತ್ಸಾಹದಿಂದ ರಾಜ್ಯ ಪ್ರವಾಸ ಮಾಡಲು ಸಿದ್ಧರಾಗಿರುವ ಎಚ್.ಡಿ.ದೇವೇಗೌಡರು ನಮಗೆಲ್ಲ ಆದರ್ಶಪ್ರಾಯ ಎಂದರು.

ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಜೆಡಿಎಸ್ ನಾಯಕರಾದ ಎಚ್. ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ, ಜಿ.ಟಿ.ದೇವೇಗೌಡ, ನಿಖಿಲ್ ಕುಮಾರಸ್ವಾಮಿ, ಬಿಜೆಪಿ ನಾಯಕರಾದ ಬಿ.ಎಸ್. ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ ಆರ್. ಅಶೋಕ, ಬಸವರಾಜ ಬೊಮ್ಮಾಯಿ, ಡಿ.ವಿ. ಸದಾನಂದಗೌಡ, ಗೋವಿಂದ ಕಾರಜೋಳ ಉಪಸ್ಥಿತರಿದ್ದರು.

2006ರಲ್ಲೇ ಬಿಜೆಪಿ–ಜೆಡಿಎಸ್ ಮಧ್ಯೆ ಹೊಂದಾಣಿಕೆಯಾಗಿದ್ದರೂ, ದೇವೇಗೌಡರ ಸಮ್ಮತಿ ಇರಲಿಲ್ಲ. ಈಗ ದೇಶದ ಭದ್ರತೆ, ಅಭಿವೃದ್ಧಿ ದೃಷ್ಟಿಯಿಂದ ಮೈತ್ರಿಗೆ ಪ್ರಧಾನಿ ಹಾಗೂ ಮಾಜಿ ಪ್ರಧಾನಿಯವರ ಸಮ್ಮತಿ ಸಿಕ್ಕಿದೆ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸಮನ್ವಯಕ್ಕೆ ಸೂತ್ರ

- ಬಿಜೆಪಿ–ಜೆಡಿಎಸ್ ಜಿಲ್ಲಾ ಕಚೇರಿಗಳಲ್ಲಿ ಎನ್‌ಡಿಎ ವಿಭಾಗ ತೆರೆಯಬೇಕು
- ವಿಧಾನಸಭಾ ಕ್ಷೇತ್ರವಾರು ಸಮನ್ವಯ ಸಮಿತಿ ಸಭೆ ನಡೆಸಬೇಕು
- ಕರಪತ್ರ, ಬ್ಯಾನರ್, ಬಂಟಿಂಗ್ಸ್ ಮತ್ತಿತರ ಚುನಾವಣಾ ಪ್ರಚಾರ ಸಾಮಗ್ರಿಗಳಲ್ಲಿ ಎರಡೂ ಪಕ್ಷಗಳ ಚಿಹ್ನೆ ಬಳಕೆ
- ಪ್ರಚಾರ ಕಾರ್ಯಗಳಲ್ಲಿ ಎರಡೂ ಪಕ್ಷಗಳ ಬಾವುಟ ಕಡ್ಡಾಯ
- ಎನ್‌ಡಿಎ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ಎರಡೂ ಪಕ್ಷಗಳ ನಾಯಕರು, ಕಾರ್ಯಕರ್ತರು ಉಪಸ್ಥಿತಿ
- ಕಾರ್ಯಕರ್ತರಲ್ಲಿ ಸಾಮರಸ್ಯ ಮೂಡಿಸುವುದು ಎರಡೂ ಪಕ್ಷಗಳ ಹೊಣೆ

'ಎಚ್.ಡಿ. ದೇವೇಗೌಡ ಐ.ಟಿ ಅಧಿಕಾರಿಯೆ?'

ಬೆಂಗಳೂರು: 'ಎಚ್.ಡಿ. ದೇವೇಗೌಡರು ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಯೇ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ಕರ್ನಾಟಕದಿಂದ ಕಾಂಗ್ರೆಸ್ ಹೈಕಮಾಂಡ್‌ಗೆ ಹಣ ರವಾನೆಯಾಗುತ್ತಿದೆ' ಎಂಬ ದೇವೇಗೌಡರ ಆರೋಪ ಕುರಿತು ಶುಕ್ರವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 'ಅವರ ಆರೋಪ ನಿರಾಧಾರ. ರಾಜಕೀಯಕ್ಕಾಗಿ ಆರೋಪ ಮಾಡಬೇಕೆಂದು ಈ ರೀತಿ ಆಪಾದನೆ ಮಾಡಿದ್ದಾರೆ' ಎಂದರು.

'ನಾವು ಯಾರಿಗೂ ಹಣ ಕಟ್ಟುವ ಅಗತ್ಯವಿಲ್ಲ. ನಮ್ಮ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡು ಅದರಲ್ಲಿದ್ದ ಹಣವನ್ನು ಕದ್ದಿದ್ದಾರೆ. ನಮ್ಮ ಪಕ್ಷ 20ಕ್ಕೂ ಹೆಚ್ಚು ಕ್ಷೇತ್ರ ಗೆಲ್ಲಲಿದೆ ಎಂಬುದು ಅವರಿಗೆ ಅರಿವಾಗಿದೆ. ಹೀಗಾಗಿ ಅಸೂಯೆಯಿಂದ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ' ಎಂದರು.

'ತಮ್ಮದೇ ಪಕ್ಷ ಇಟ್ಟುಕೊಂಡು ತಮ್ಮ ಕುಟುಂಬದವರನ್ನು ಬೇರೆ ಪಕ್ಷದಿಂದ ಕಣಕ್ಕಿಳಿಸುತ್ತಾರಾ? ಜೆಡಿಎಸ್ ಅಸ್ತಿತ್ವದಲ್ಲಿಲ್ಲ ಎಂಬುದನ್ನು ಅವರೇ ತೋರಿಸಿದ್ದಾರೆ. ಅವರೇ ತಮ್ಮ ಪಕ್ಷವನ್ನು ಬಿಜೆಪಿ ಜತೆ ವಿಲೀನ ಮಾಡಿಕೊಳ್ಳುತ್ತಿದ್ದಾರೆ' ಎಂದು ಶಿವಕುಮಾರ್ ಹೇಳಿದರು.

ಕಣದತ್ತ ಕಿರುನೋಟ

ಹಾವೇರಿ



ಅಭ್ಯರ್ಥಿಗಳು


ಬಸವರಾಜ ಬೊಮ್ಮಾಯಿ
ಬಿಜೆಪಿ

ಆನಂದಸ್ವಾಮಿ ಗಡ್ಡದೇವರಮಠ
ಕಾಂಗ್ರೆಸ್

ಮಾಜಿ ಸಿಎಂ ವಿರುದ್ಧ 'ಕೈ' ಸಡ್ಡು

ಹಾವೇರಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠ ಅವರು ಚುನಾವಣಾ ಕಣದಲ್ಲಿದ್ದು, ಅನುಭವಿ ಮತ್ತು ಯುವ ರಾಜಕಾರಣಿಯ ನಡುವೆ ಹಣಾಹಣಿ ಇದೆ. ಇಬ್ಬರೂ ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿದವರು.

ಶಿಗ್ಗಾವಿ–ಸವಣೂರು ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾದ ಬಸವರಾಜ ಬೊಮ್ಮಾಯಿ ಅವರು ಸಚಿವರು, ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಶಾಸಕರಾದರೂ ಕೇಂದ್ರ ರಾಜಕಾರಣದತ್ತ ಮುಖ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆ ಮತ್ತು ಯೋಜನೆಗಳನ್ನು ಅವರು ನೆಚ್ಚಿಕೊಂಡಿದ್ದಾರೆ.

ಶಿರಹಟ್ಟಿಯ ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ ಅವರ ಪುತ್ರ ಆನಂದಸ್ವಾಮಿ ಗಡ್ಡದೇವರಮಠ ಅವರು 2011ರಲ್ಲಿ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದರು. 2013ರಲ್ಲಿ ಬೆಳಗಾವಿ ಗ್ರಾಮೀಣ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಲಕ್ಷ್ಮೀ ಹೆಬ್ಬಾಳಕರ ವಿರುದ್ಧ ಸ್ಪರ್ಧಿಸಿದ್ದರು. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಈ ಬಾರಿ ಚುನಾವಣೆಯಲ್ಲಿ 'ಕೈ' ಹಿಡಿಯಲಿವೆ ಎಂಬ ಆಶಾಭಾವನೆ ಇವರದ್ದು.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಜೆಡಿಎಸ್	ಬಿಜೆಪಿ
7	0	1

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,95,366	8,82,430	81

ಒಟ್ಟು 17,77,877

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಶಿವಕುಮಾರ ಉದಾಸಿ	ಬಿಜೆಪಿ	6,83,660
ಸಮೀಪದ ಪ್ರತಿಸ್ಪರ್ಧಿ	ಡಿ.ಆರ್.ಪಾಟೀಲ	ಕಾಂಗ್ರೆಸ್	5,42,778

ರಾಯಚೂರು

ಅಭ್ಯರ್ಥಿಗಳು

ರಾಜಾ ಅಮರೇಶ್ವರ ನಾಯಕ
ಬಿಜೆಪಿ


ಜಿ.ಕುಮಾರ ನಾಯಕ
ಕಾಂಗ್ರೆಸ್

ಅನುಭವಿಗೆ ನಿವೃತ್ತ ಅಧಿಕಾರಿ ಸವಾಲು

ರಾಯಚೂರು: ಅನುಭವಿ ರಾಜಕಾರಣಿ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಮಧ್ಯೆ ಸೆಣಸಾಟಕ್ಕೆ ರಾಯಚೂರು ಲೋಕಸಭಾ ಕ್ಷೇತ್ರದ ಅಖಾಡ ಅಣಿಯಾಗಿದೆ. ಬಿಜೆಪಿಯ ಹಾಲಿ ಸಂಸದ ರಾಜಾ ಅಮರೇಶ್ವರ ನಾಯಕ ವಿರುದ್ಧ ಕಾಂಗ್ರೆಸ್‌ನಿಂದ ಜಿ.ಕುಮಾರ ನಾಯಕ ಕಣಕ್ಕಿಳಿದಿದ್ದಾರೆ. ರಾಜ್ಯ ಮಟ್ಟದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಮಾಡಿಕೊಂಡಿರುವ ಕಾರಣ ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಅಮರೇಶ್ವರ ನಾಯಕ ವಿರುದ್ಧ ಸೋತಿದ್ದ ಕಾಂಗ್ರೆಸ್‌ನ ಬಿ.ವಿ.ನಾಯಕ ಅವರು ವಿಧಾನಸಭೆ ಚುನಾವಣೆಯಲ್ಲಿ ಮಾನ್ವಿ ಕ್ಷೇತ್ರದಿಂದ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು.

ಅಮರೇಶ್ವರ ನಾಯಕ ಸಾರ್ವಜನಿಕವಾಗಿ ಹೆಚ್ಚು ಕಾಣಿಸಿಕೊಳ್ಳದ ಹಾಗೂ ಕಾರ್ಯಕರ್ತರೊಂದಿಗೆ ಹೆಚ್ಚು ಬೆರೆಯದ ಕಾರಣ ಬಿ.ವಿ. ನಾಯಕ ಲೋಕಸಭೆ ಟಿಕೆಟ್ ಮೇಲೆ ಕಣ್ಣಿಟ್ಟಿದ್ದರು. ಬಿಜೆಪಿ ಮೊದಲು ಭರವಸೆ ನೀಡಿ ಕೊನೆಯ ಕ್ಷಣದಲ್ಲಿ ಕೈಕೊಟ್ಟಿದೆ. ಹೀಗಾಗಿ ಬಿ.ವಿ.ನಾಯಕ ಪಕ್ಷದ ವಿರುದ್ಧವೇ ತಿರುಗಿ ಬಿದ್ದಿದ್ದಾರೆ. ಸಂಧಾನ ಏರ್ಪಡದಿದ್ದರೆ ಚುನಾವಣೆಯಲ್ಲಿ ಪಕ್ಷಕ್ಕೆ ಒಳಏಟು ಕೊಡಲಿದ್ದಾರೆ. ಇಲ್ಲಿ ಬಿಜೆಪಿ ನರೇಂದ್ರ ಮೋದಿ ಅಲೆಯನ್ನೇ ನೆಚ್ಚಿಕೊಂಡಿದೆ. ಕಾಂಗ್ರೆಸ್‌ನಲ್ಲಿರುವ ಬಣಗಳು ಒಂದಾಗಿವೆ. ಬಿಜೆಪಿಯಲ್ಲಿ ಎರಡು ಬಣಗಳಾಗಿವೆ. ಬಿಜೆಪಿ ಕಾರ್ಯಕರ್ತರ ಮುನಿಸು ಹಾಗೂ ಕ್ಷೇತ್ರದ ಜನ ಹೊಸ ಮುಖ ಬಯಸುತ್ತಿರುವುದು ಕುಮಾರ ನಾಯಕಗೆ ಅನುಕೂಲಕರವಾಗಿದೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಜೆಡಿಎಸ್	ಬಿಜೆಪಿ
5	1	2

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
9,85,675	10,05,236	297

ಒಟ್ಟು 19,91,218

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಅಮರೇಶ್ವರ ನಾಯಕ	ಬಿಜೆಪಿ	5,98,337
ಸಮೀಪದ ಪ್ರತಿಸ್ಪರ್ಧಿ	ಬಿ.ವಿ.ನಾಯಕ	ಕಾಂಗ್ರೆಸ್	4,80,621

ಬೆಂಗಳೂರು ಗ್ರಾಮಾಂತರ

ಅಭ್ಯರ್ಥಿಗಳು


ಡಿ.ಕೆ. ಸುರೇಶ್
ಕಾಂಗ್ರೆಸ್

ಡಾ. ಸಿ.ಎನ್. ಮಂಜುನಾಥ್
ಬಿಜೆಪಿ–ಜೆಡಿಎಸ್ ಮೈತ್ರಿ

ದೇವೇಗೌಡ–ಡಿ.ಕೆ ಕುಟುಂಬದ ಪ್ರತಿಷ್ಠೆ ಕಣ

ಕಾಂಗ್ರೆಸ್ ಭದ್ರಕೋಟೆಯಾಗಿರುವ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹೋದರ ಹಾಲಿ ಸಂಸದ ಡಿ.ಕೆ. ಸುರೇಶ್ ನಾಲ್ಕನೇ ಸಲ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಅವರಿಗೆ ಎದುರಾಳಿಯಾಗಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರ ಅಳಿಯ ಡಾ. ಸಿ.ಎನ್. ಮಂಜುನಾಥ್ ಅವರನ್ನು ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಬಿಜೆಪಿಯಿಂದ ಕಣಕ್ಕಿಳಿಸಿದೆ.

ಈ ಕ್ಷೇತ್ರವು ನಾಲ್ಕು ದಶಕಗಳಿಂದ ದೇವೇಗೌಡ ಮತ್ತು ಡಿ.ಕೆ. ಶಿವಕುಮಾರ್ ಕುಟುಂಬದ ರಾಜಕೀಯ ಮೇಲಾಟಕ್ಕೆ ಸಾಕ್ಷಿಯಾಗಿದ್ದು, ಮತ್ತೊಮ್ಮೆ ಎರಡೂ ಕುಟುಂಬದವರು ಮುಖಾಮುಖಿಯಾಗಿದ್ದಾರೆ.

2013ರ ಲೋಕಸಭಾ ಉಪ ಚುನಾವಣೆಯಲ್ಲಿ ಅನಿತಾ ಕುಮಾರಸ್ವಾಮಿ ಮತ್ತು ಮೊನ್ನೆಯ ರಾಮನಗರ ವಿಧಾನಸಭೆ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಸೋಲುಗಳಿಗೆ ಡಿ.ಕೆ ಸಹೋದರರ ವಿರುದ್ಧ ಸೇಡು ತೀರಿಸಿಕೊಳ್ಳಲು ಗೌಡರ ಕುಟುಂಬ ಹವಣಿಸುತ್ತಿದೆ. ಮತ್ತೊಂದು ಗೆಲುವಿನೊಂದಿಗೆ ಗೌಡರ ಕುಟುಂಬಕ್ಕೆ ಸಡ್ಡು ಹೊಡೆಯಲು ಡಿ.ಕೆ. ಸಹೋದರರು ಸನ್ನದ್ಧರಾಗಿದ್ದಾರೆ.

ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿರುವ ಡಿ.ಕೆ. ಶಿವಕುಮಾರ್ ಅವರಿಗೆ ತನ್ನ ಬೆನ್ನೆಲುಬಾಗಿರುವ ಸಹೋದರನ ಗೆಲುವು ಅನಿವಾರ್ಯ. ಈ ಚುನಾವಣೆ ಅವರ ಸಾಮರ್ಥ್ಯದ ಸತ್ವ ಪರೀಕ್ಷೆಯೂ ಹೌದು.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಜೆಡಿಎಸ್	ಬಿಜೆಪಿ
5	1	2

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
14,06,042	13,57,547	321

ಒಟ್ಟು 27,63,910

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಡಿ.ಕೆ. ಸುರೇಶ್	ಕಾಂಗ್ರೆಸ್	8,78,258
ಸಮೀಪದ ಪ್ರತಿಸ್ಪರ್ಧಿ	ಅಶ್ವತ್ಥನಾರಾಯಣ ಗೌಡ	ಬಿಜೆಪಿ	6,71,388

ಕೇಂದ್ರ ಸರ್ಕಾರದ ಹುದ್ದೆಗಳಿಗೆ ನೇಮಕಾತಿ ನಡೆಯದಿರುವುದರಿಂದ ಯುವ ಜನರಲ್ಲಿ ಸಿಟ್ಟು, ಅಸಹನೆ

ಮತನಿರ್ಣಯ ಪ್ರಭಾವಿಸುವ ನಿರುದ್ಯೋಗ

● ಜಯಸಿಂಹ ಆರ್.

ಉದ್ಯೋಗ ಸೃಷ್ಟಿ ಮತ್ತು ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆಸುತ್ತೇವೆ ಎಂಬ ಘೋಷಣೆಗಳಿಗೆ ಮತದಾರರು, ಅದರಲ್ಲೂ ಯುವ ಮತದಾರರು ಅತ್ಯುತ್ಸಾಹದಿಂದ ಪ್ರತಿಕ್ರಿಯಿಸುತ್ತಾರೆಂದರೆ ನಿರುದ್ಯೋಗದ ಸಮಸ್ಯೆ ಅಷ್ಟರಮಟ್ಟಿಗೆ ಇದೆ ಎಂಬುದನ್ನು ಅದು ಸೂಚಿಸುತ್ತದೆ

ನರೇಂದ್ರ ಮೋದಿ ಅವರು ಪ್ರಧಾನಿ ಆಗುವುದಕ್ಕಿಂತಲೂ ಮೊದಲು ನಡೆದ ಚುನಾವಣೆಯಲ್ಲಿ ಅಂದರೆ, 2014ರ ಲೋಕಸಭಾ ಚುನಾವಣೆಯ ವೇಳೆ 'ಪ್ರತಿವರ್ಷ 2 ಕೋಟಿ ಉದ್ಯೋಗಗಳನ್ನು ಸೃಷ್ಟಿಸುತ್ತೇವೆ' ಎಂದು ಹೇಳಿದ್ದರು. ಆಗ ದೇಶದ ವಿದ್ಯಾವಂತ ಯುವಕರಲ್ಲಿ ಇದ್ದ ನಿರುದ್ಯೋಗದ ಪ್ರಮಾಣ ಶೇ 58.9ರಷ್ಟು. ಮೋದಿ ಅವರ ಘೋಷಣೆ ಹೊಸ ತಲೆಮಾರಿನ ಮತದಾರರನ್ನು, ಉದ್ಯೋಗಕ್ಕಾಗಿ ಎದುರು ನೋಡುತ್ತಿದ್ದವರನ್ನು ಆಕರ್ಷಿಸಿತ್ತು. ಆ ಚುನಾವಣೆಯಲ್ಲಿ ಬಿಜೆಪಿ ಗೆದ್ದು, ಮೋದಿ ಅವರು ಪ್ರಧಾನಿ ಆದ ನಂತರದ ಹಲವು ವರ್ಷಗಳ ವರೆಗೂ ಉದ್ಯೋಗ ಸೃಷ್ಟಿಯ ಮಾತು ಕೇಳುತ್ತಲೇ ಇತ್ತು. 2019ರ ಚುನಾವಣೆಯಲ್ಲೂ ಮೋದಿ ಅವರ ಆ ಘೋಷಣೆ ಪ್ರಚಲಿತದಲ್ಲಿ ಇತ್ತು, ಈ ಚುನಾವಣೆಯಲ್ಲೂ ಅದು ಚರ್ಚೆಯಲ್ಲಿದೆ. ಈ ಬಾರಿ ನಿರುದ್ಯೋಗವು ಈ ಹಿಂದೆಂದಿಗಿಂತಲೂ ಹೆಚ್ಚು ಪ್ರಭಾವ ಬೀರಲಿದೆ ಎಂದು ಅಂದಾಜಿಸಲಾಗಿದೆ.

ದೇಶದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿಲ್ಲ, ನಿರುದ್ಯೋಗದ ಸಮಸ್ಯೆ ಬಿಗಡಾಯಿಸಿದೆ ಎಂದು ವಿರೋಧ ಪಕ್ಷಗಳು ತಮ್ಮ ಪ್ರಚಾರದಲ್ಲಿ ಪದೇ-ಪದೇ ಹೇಳುತ್ತಿವೆ. ಈ ಹಿಂದೆ ಮೋದಿ ಅವರು ಹೇಳಿದ್ದಂತೆ, ತಾವು ಅಧಿಕಾರಕ್ಕೆ ಬಂದರೆ ಇಂತಿಷ್ಟು ನೇಮಕಾತಿಗಳನ್ನು ನಡೆಸುತ್ತೇವೆ ಎಂದೂ ಘೋಷಿಸುತ್ತಿವೆ. ಚುನಾವಣೆ ಸಂದರ್ಭದಲ್ಲಿ ಮಾಡಲಾದ ಇಂತಹ ಘೋಷಣೆಗಳು ಮತದಾನದ ಮೇಲೆ ಪ್ರಭಾವ ಬೀರಿವೆ ಎಂಬುದಕ್ಕೆ ನಮ್ಮೆದುರು ಹಲವಾರು ನಿದರ್ಶನಗಳಿವೆ.

ಮೋದಿಯವರ 'ವರ್ಷಕ್ಕೆ 2 ಕೋಟಿ ಉದ್ಯೋಗ' ಎಂಬುದು ಅದಕ್ಕೆ ದೊಡ್ಡ ಉದಾಹರಣೆ. 2020ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಆರ್‌ಜೆಡಿಯ ತೇಜಸ್ವಿ ಯಾದವ್, 'ಅಧಿಕಾರಕ್ಕೆ ಬಂದರೆ 10 ಲಕ್ಷ ಹುದ್ದೆಗಳಿಗೆ ನೇಮಕಾತಿ ನಡೆಸುತ್ತೇವೆ' ಎಂದು ಘೋಷಿಸಿದ್ದು ಮತ್ತೊಂದು ಉದಾಹರಣೆ. ಮೊದಲನೆಯದ್ದರಲ್ಲಿ ಬಿಜೆಪಿ ಗೆದ್ದು ಅಧಿಕಾರ ಹಿಡಿದಿತ್ತು. ಎರಡನೆಯದ್ದರಲ್ಲಿ ಆರ್‌ಜೆಡಿ ಅಧಿಕಾರಕ್ಕೆ ಬರದಿದ್ದರೂ ಚುನಾವಣಾ ಫಲಿತಾಂಶದಲ್ಲಿ ಅದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಅದೇ ಹಾದಿ ತುಳಿದಿರುವ ರಾಹುಲ್ ಗಾಂಧಿ, 'ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದರೆ 30 ಲಕ್ಷ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಈಗಾಗಲೇ ಘೋಷಿಸಿಬಿಟ್ಟಿದ್ದಾರೆ. ಉದ್ಯೋಗ ಸೃಷ್ಟಿ ಮತ್ತು ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆಸುತ್ತೇವೆ ಎಂಬ ಘೋಷಣೆಗಳಿಗೆ ಮತದಾರರು, ಅದರಲ್ಲೂ ಯುವ ಮತದಾರರು ಅತ್ಯುತ್ಸಾಹದಿಂದ ಪ್ರತಿಕ್ರಿಯಿಸುತ್ತಾರೆಂದರೆ ನಿರುದ್ಯೋಗದ ಸಮಸ್ಯೆ ಅಷ್ಟರಮಟ್ಟಿಗೆ ಇದೆ ಎಂಬುದನ್ನು ಅದು ಸೂಚಿಸುತ್ತದೆ.

ಆರ್ಥಿಕವಾಗಿ ಮುಂದುವರಿದ ದಕ್ಷಿಣದ ರಾಜ್ಯಗಳಲ್ಲಿ ಇಂತಹ ಘೋಷಣೆಗಳು ಹೆಚ್ಚು ಪ್ರಭಾವ ಬೀರುವುದಿಲ್ಲ. ಆದರೆ ಹಿಂದುಳಿದ ಬಿಮಾರು (ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶ) ರಾಜ್ಯಗಳಲ್ಲಿ ಇದರ ಪ್ರಭಾವ ಹೆಚ್ಚು. ಏಕೆಂದರೆ ಈ ರಾಜ್ಯಗಳಲ್ಲಿ ಖಾಸಗಿ ವಲಯದಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಯಾಗುವುದಿಲ್ಲ. ಅತಿಹೆಚ್ಚು ಜನಸಂಖ್ಯೆ ಇರುವ ಈ ರಾಜ್ಯಗಳಲ್ಲಿ ಉದ್ಯೋಗದ ಮೂಲ ಸರ್ಕಾರವೇ ಆಗಿದೆ. ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆಯುವುದು ಮತ್ತು ನಡೆಯದಿರುವುದು ರಾಜ್ಯ ಮಟ್ಟದಲ್ಲಿ ಸರ್ಕಾರ ಬದಲಾಗಲು ಕಾರಣವಾಗುತ್ತದೆ. ಕೆಲ ತಿಂಗಳ ಹಿಂದಷ್ಟೇ ನಡೆದ ರಾಜಸ್ಥಾನ ಚುನಾವಣೆಯಲ್ಲಿ ನಿರುದ್ಯೋಗ ಮತ್ತು ನೇಮಕಾತಿ ಹಗರಣವು ಒಂದು ದೊಡ್ಡ ವಿಷಯವಾಗಿತ್ತು. ಸರ್ಕಾರ ಬದಲಾಗಲು ಅದೂ ಒಂದು ಕಾರಣ ಎಂದು ವಿಶ್ಲೇಷಿಸಲಾಗಿತ್ತು. ಈಗ ಉತ್ತರ ಪ್ರದೇಶದಲ್ಲೂ ಹಲವು ವರ್ಷಗಳಿಂದ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆದಿಲ್ಲ. ಲೋಕಸಭಾ ಚುನಾವಣೆ ಘೋಷಣೆಗೂ ಮುನ್ನವೇ ವಿರೋಧ ಪಕ್ಷಗಳು ಆ ವಿಷಯವನ್ನು ಮುಂದು ಮಾಡಿದ್ದವು, ಈಗಲೂ ಮಾಡುತ್ತಿವೆ.

ಈ ಬಿಮಾರು ರಾಜ್ಯಗಳಲ್ಲಿ ನಿರುದ್ಯೋಗವು ಮತದಾನದ ಸ್ವರೂಪದಲ್ಲಿ ದೊಡ್ಡಮಟ್ಟದ ಬದಲಾವಣೆಗೆ ಕಾರಣವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ನಿರುದ್ಯೋಗ ಮತ್ತು ಉದ್ಯೋಗ ಸೃಷ್ಟಿಗೆ ಸಂಬಂಧಿಸಿದಂತೆ ಈ ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ವಿರುದ್ಧವೂ ಅಸಹನೆ ಹೆಚ್ಚೇ ಇದ್ದಂತಿದೆ. ಸೇನಾ ನೇಮಕಾತಿಯನ್ನು ಕಡೆಗಣಿಸಿ, ಅಗ್ನಿವೀರ ಯೋಜನೆ ಜಾರಿಗೆ ತಂದಿದ್ದು ಅಂತಹ ಸಿಟ್ಟು ಮತ್ತು ಅಸಹನೆಗೆ ಕಾರಣಗಳಲ್ಲಿ ಒಂದು. ಸೇನಾ ನೇಮಕಾತಿಗಾಗಿ ಸಿದ್ಧತೆ ನಡೆಸಿದ್ದ ಲಕ್ಷಾಂತರ ಸಂಖ್ಯೆಯ ಆಕಾಂಕ್ಷಿಗಳು ಅನಿವಾರ್ಯವಾಗಿ ಅರೆಕಾಲಿಕ ಸ್ವರೂಪದ ಹುದ್ದೆಯಾದ ಅಗ್ನಿವೀರರಾಗುತ್ತಿದ್ದಾರೆ. ಈ ಬಗ್ಗೆ ರಾಜಕೀಯ ಪಕ್ಷಗಳ ಸಭೆಗಳಲ್ಲಿ, ಸಂವಾದಗಳಲ್ಲಿ ಯುವಕರು ದೊಡ್ಡಮಟ್ಟದ ಆಕ್ಷೇಪ ಹೊರಹಾಕಿದ್ದಾರೆ. ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಅಗ್ನಿವೀರ ಯೋಜನೆಯ ವಿರುದ್ಧ ತೀರಾ ಈಚೆಗೂ ಪ್ರತಿಭಟನೆಗಳು ನಡೆದಿವೆ. ಇದರ ಜತೆಯಲ್ಲಿ ಕೇಂದ್ರ ಸರ್ಕಾರದ ಹುದ್ದೆಗಳಿಗೆ ನೇಮಕಾತಿ ನಡೆಯದಿರುವುದು (ಸುಮಾರು 9.8 ಲಕ್ಷ ಹುದ್ದೆಗಳು ಖಾಲಿ ಇವೆ), ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ನೇಮಕಾತಿ ನಡೆಸದೇ ಇರುವುದು (ಈ ಸಂಸ್ಥೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂಬುದರ ಒಟ್ಟು ವಿವರವನ್ನು ಸಂಸತ್ತಿನಲ್ಲಿ ಕೇಳಿದರೂ, ಕೇಂದ್ರ ಸರ್ಕಾರ ನೀಡಿಲ್ಲ) ಈ ರಾಜ್ಯಗಳಲ್ಲಿ ನಿರುದ್ಯೋಗಿ ಮತದಾರರ ಮತನಿರ್ಣಯವನ್ನು ಪ್ರಭಾವಿಸುತ್ತದೆ ಎಂದೇ ನಿರೀಕ್ಷಿಸಲಾಗಿದೆ.

ಸೊಲ್ಲೆತ್ತದ ಬಿಜೆಪಿ

ದೇಶದಲ್ಲಿ ನಿರುದ್ಯೋಗದ ಸಮಸ್ಯೆ ತಮ್ಮ ಆಡಳಿತಾವಧಿಯಲ್ಲಿ ಹೆಚ್ಚಾಗಿದೆ ಎಂಬುದನ್ನು ಬಿಜೆಪಿ ನಿರಾಕರಿಸುತ್ತಲೇ ಬಂದಿದೆ. ಹೀಗಾಗಿ ಈಗ ನಿರುದ್ಯೋಗದ ಸಮಸ್ಯೆ ಮತ್ತು ಉದ್ಯೋಗ ಸೃಷ್ಟಿಯ ಯಾವ ಮಾತುಗಳನ್ನೂ ಬಿಜೆಪಿ ಆಡುತ್ತಿಲ್ಲ.

2017ರಲ್ಲಿ ಬಿಡುಗಡೆಯಾಗಬೇಕಿದ್ದ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ 'ನಿರುದ್ಯೋಗ' ವರದಿಯನ್ನು ಕೇಂದ್ರ ಸರ್ಕಾರ ತಡೆಹಿಡಿಯಿತು. 2017ರಲ್ಲಿ ದೇಶದಲ್ಲಿ ನಿರುದ್ಯೋಗದ ಪ್ರಮಾಣವು ಭಾರಿ ಏರಿಕೆಯಾಗಿದೆ ಮತ್ತು ಅದು 40 ವರ್ಷಗಳಲ್ಲೇ ಗರಿಷ್ಠ ಎಂದು ವರದಿಯಲ್ಲಿ ಹೇಳಲಾಗಿತ್ತು. ಆ ವರದಿಯೇ ಸರಿ ಇಲ್ಲ ಎಂದು ಹೇಳಿದ ಕೇಂದ್ರ ಸರ್ಕಾರವು, ಹಲವು ವರ್ಷಗಳವರೆಗೆ ಅಂತಹ ವರದಿ ಬರುವುದನ್ನೇ ತಡೆಹಿಡಿಯಿತು.

ಭಾರತದಲ್ಲಿ ನಿರುದ್ಯೋಗ ಹೆಚ್ಚಾಗಿದೆ ಎಂದು ಅಂತರರಾಷ್ಟ್ರೀಯ ಸಂಸ್ಥೆಗಳು ನೀಡಿದ ವರದಿಯನ್ನೂ ಬಿಜೆಪಿ ನಿರಾಕರಿಸಿದೆ. ಈ ವಾರವಷ್ಟೇ ಬಿಡುಗಡೆಯಾದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ವರದಿಯಲ್ಲಿ, 'ಭಾರತದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಾಗಿದೆ. ನಿರುದ್ಯೋಗಿಗಳಲ್ಲಿ ಯುವಜನರ ಪ್ರಮಾಣ ಶೇ 82.9ರಷ್ಟು, ವಿದ್ಯಾವಂತ ನಿರುದ್ಯೋಗಿಗಳ ಪ್ರಮಾಣ ಶೇ 65.7ಕ್ಕೆ ಏರಿಕೆಯಾಗಿದೆ. ಭಾರತವು ತೋರಿಸುತ್ತಿರುವ ಆರ್ಥಿಕ ಬೆಳವಣಿಗೆಯು, ಉದ್ಯೋಗ ಸೃಷ್ಟಿಗೆ ನೆರವಾಗುತ್ತಿಲ್ಲ' ಎಂದು ವಿಶ್ಲೇಷಿಸಲಾಗಿತ್ತು. ಎಂದಿನಂತೆ ಈ ಬಾರಿಯೂ ಬಿಜೆಪಿ ಸರ್ಕಾರ ಇದನ್ನು ನಿರಾಕರಿಸಿದೆ. 'ನಮ್ಮ ದೇಶದ ವರದಿಗಳನ್ನು ಮಾತ್ರ ನಂಬಬೇಕು' ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಗುರುವಾರವಷ್ಟೇ ಹೇಳಿದ್ದಾರೆ.

ಆದರೆ ನಿರುದ್ಯೋಗಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಚಿತ್ರಣ ನೀಡುವ ವರದಿಗಳನ್ನು ಕೇಂದ್ರ ಸರ್ಕಾರ ಒದಗಿಸುತ್ತಲೇ ಇಲ್ಲ. ಕಾರ್ಮಿಕ ಸಚಿವಾಲಯ ಪ್ರತಿ ತ್ರೈಮಾಸಿಕಕ್ಕೊಮ್ಮೆ ಮತ್ತು ವರ್ಷಕ್ಕೊಮ್ಮೆ ನೀಡುತ್ತಿದ್ದ 'ಉದ್ಯೋಗ–ನಿರುದ್ಯೋಗ' ವರದಿಯನ್ನು 2016ರ ನಂತರ ಬಿಡುಗಡೆಯೇ ಮಾಡಿಲ್ಲ. ಆದರೆ ಉದ್ಯೋಗ ಸೃಷ್ಟಿಯನ್ನಂತೂ ಮಾಡುತ್ತಿದ್ದೇವೆ ಎಂದು ಭವಿಷ್ಯ ನಿಧಿ ಚಂದಾದಾರಿಕೆ ಹೆಚ್ಚಳ, ಎಂಎಸ್‌ಎಂಇ ನೋಂದಣಿ ಹೆಚ್ಚಳದ ದತ್ತಾಂಶಗಳನ್ನು ಬಿಜೆಪಿ ಸರ್ಕಾರ ಮುಂದಿಡುತ್ತದೆ. ಈ ಹತ್ತು ವರ್ಷಗಳಲ್ಲಿ ಪ್ರತಿ ವರ್ಷ ಒಂದು ಕೋಟಿಗಿಂತ ಹೆಚ್ಚು ಮಂದಿ ಭವಿಷ್ಯ ನಿಧಿ ಚಂದಾದಾರಿಕೆ ಪಡೆದಿದ್ದಾರೆ. ಈ ಪ್ರಕಾರ ಹತ್ತು ವರ್ಷದಲ್ಲಿ 10 ಕೋಟಿಯಷ್ಟು ಭವಿಷ್ಯ ನಿಧಿ ಚಂದಾದಾರರ ಸಂಖ್ಯೆ ಹೆಚ್ಚಾಗಿರಬೇಕಲ್ಲವೇ? ವಾಸ್ತವದಲ್ಲಿ ಸಕ್ರಿಯ ಚಂದಾದಾರರ ಸಂಖ್ಯೆ 7.55 ಕೋಟಿ ಮಾತ್ರ. ಸರ್ಕಾರ ಹೇಳುತ್ತಿರುವ ಮಟ್ಟದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ನಿರುದ್ಯೋಗದ ಬಗ್ಗೆ ಬಿಜೆಪಿ ಮತ್ತು ಬಿಜೆಪಿ ನಾಯಕರು ಮಾತನಾಡುತ್ತಿಲ್ಲವಾದರೂ, ಯುವ ಮತದಾರರು ಆ ಬಗ್ಗೆ ಪ್ರಶ್ನೆ ಎತ್ತುತ್ತಿದ್ದಾರೆ.

ಖಾಸಗಿತನಕ್ಕೆ ಧಕ್ಕೆ: ಬಿಜೆಪಿ ಬಶೀರ್‌ಹಾಟ್ ಅಭ್ಯರ್ಥಿ ದೂರು

ರೇಖಾ ಪಾತ್ರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಶೀರ್‌ಹಾಟ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರೇಖಾ ಪಾತ್ರ ಅವರು ಟಿಎಂಸಿ ಮುಖಂಡ ದೇವಾಂಶು ಭಟ್ಟಾಚಾರ್ಯ ತಮ್ಮ 'ಖಾಸಗಿತನ'ಕ್ಕೆ ಧಕ್ಕೆ ಉಂಟುಮಾಡಿದ್ದಾರೆ ಎಂದು ಆರೋಪಿಸಿ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ಈ ಕುರಿತು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೂ ಪತ್ರ ರವಾನಿಸಿರುವ ರೇಖಾ, ತಮ್ಲುಕ್ ಲೋಕಸಭಾ ಕ್ಷೇತ್ರದ ಟಿಎಂಸಿ ಅಭ್ಯರ್ಥಿ ಹಾಗೂ ಪಕ್ಷದ ಸಾಮಾಜಿಕ ಜಾಲತಾಣ ಘಟಕದ ಮುಖ್ಯಸ್ಥರಾಗಿರುವ ಭಟ್ಟಾಚಾರ್ಯ ಅವರು ತಮ್ಮ ವೈಯಕ್ತಿಕ ಮಾಹಿತಿಯನ್ನು ಸಾರ್ವಜನಿಕಗೊಳಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ತಾನು ಬಿಜೆಪಿ ಅಭ್ಯರ್ಥಿಯಾದಾಗಿನಿಂದ ರಾಜಕೀಯ ವಿರೋಧವನ್ನು ಎದುರಿಸುತ್ತಿರುವ ಬಗ್ಗೆ ರೇಖಾ ಅವರು ದೂರಿನಲ್ಲಿ ದಾಖಲಿಸಿದ್ದಾರೆ.

'ದೇವಾಂಶು ಅವರು ತಮ್ಮ ಫೇಸ್‌ಬುಕ್ ಪೋಸ್ಟ್ ಮೂಲಕ ನನ್ನ ಕಕ್ಷಿದಾರರ ಬ್ಯಾಂಕ್ ಖಾತೆ, ಮೊಬೈಲ್ ಸಂಖ್ಯೆ, 'ಸ್ವಸ್ಥ್ಯ ಸಾಥಿ' ಯೋಜನೆಯ ವಿವರಗಳು, 'ದೌರೆ ಸರ್ಕಾರ್' ಯೋಜನೆಯ ವಿವರಗಳನ್ನು ಹಂಚಿಕೊಂಡಿದ್ದಾರೆ. ಇದು ನನ್ನ ಕಕ್ಷಿದಾರರ ಖಾಸಗಿತನದ ಹಕ್ಕಿನ ಉಲ್ಲಂಘನೆಯಾಗಿದೆ ಮತ್ತು ಅವರ ಘನತೆಗೆ ಧಕ್ಕೆ ತಂದಿದೆ' ಎಂದು ರೇಖಾ ಅವರ ವಕೀಲರು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಸಂದೇಶ್‌ಖಾಲಿಯಲ್ಲಿ ಶಾಜಹಾನ್ ಶೇಖ್ ಮತ್ತು ಅವರ ಬೆಂಬಲಿಗರ ವಿರುದ್ಧ ಧ್ವನಿ ಎತ್ತುವ ಮೂಲಕ ಜನಪ್ರಿಯರಾಗಿದ್ದ ರೇಖಾ ಅವರಿಗೆ ಬಿಜೆಪಿ ಬಶೀರ್‌ಹಾಟ್ ಕ್ಷೇತ್ರದ ಟಿಕೆಟ್ ನೀಡಿದೆ.

ಬಿಹಾರ: 'ಮಹಾಘಟಬಂಧನ್' ಸೀಟು ಹಂಚಿಕೆ ಸೂತ್ರ ಘೋಷಣೆ

ಆರ್‌ಜೆಡಿಗೆ 26, ಕಾಂಗ್ರೆಸ್‌ಗೆ 9 ಕ್ಷೇತ್ರ

- ಸೀಟು ಹಂಚಿಕೆ ಸೂತ್ರದಂತೆ ಪೂರ್ಣಿಯಾ ಕ್ಷೇತ್ರವನ್ನು ಆರ್‌ಜೆಡಿಗೆ ಬಿಟ್ಟುಕೊಟ್ಟ ಕಾಂಗ್ರೆಸ್
- ಪೂರ್ಣಿಯಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಪಪ್ಪು ಯಾದವ್
- ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಪಪ್ಪು
- ಸುದ್ದಿಗೋಷ್ಠಿಯಲ್ಲಿ ಪಾಲ್ಗೊಳ್ಳದ ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್
- ಸೀಟು ಹಂಚಿಕೆ ಸೂತ್ರ ಒಮ್ಮತದಿಂದ ನಡೆದಿದೆ: ಮನೋಜ್ ಝಾ

ಪಟ್ನಾ (ಪಿಟಿಐ): ಬಿಹಾರದಲ್ಲಿ ಆರ್‌ಜೆಡಿ ಪಕ್ಷವು ಲೋಕಸಭಾ ಚುನಾವಣೆಯಲ್ಲಿ 26 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ ಎಂದು ವಿರೋಧ ಪಕ್ಷಗಳ ಮೈತ್ರಿಕೂಟ 'ಮಹಾಘಟಬಂಧನ್' ಘೋಷಿಸಿದೆ. ಒಂಬತ್ತು ಕ್ಷೇತ್ರಗಳಲ್ಲಿ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ.

ಬಿಹಾರದ 40 ಲೋಕಸಭಾ ಕ್ಷೇತ್ರಗಳಿಗೆ ಸೀಟು ಹಂಚಿಕೆ ಸೂತ್ರವನ್ನು 'ಮಹಾಘಟಬಂಧನ್' ಶುಕ್ರವಾರ ಘೋಷಿಸಿತು. ಸಿಪಿಐ (ಎಂಎಲ್) ಮೂರು ಸ್ಥಾನಗಳಲ್ಲಿ ಹಾಗೂ ಸಿಪಿಐ ಮತ್ತು ಸಿಪಿಎಂ ಪಕ್ಷಗಳು ತಲಾ ಒಂದು ಸ್ಥಾನಗಳಲ್ಲಿ ಸ್ಪರ್ಧಿಸಲಿವೆ.

ಸೀಟು ಹಂಚಿಕೆ ಸೂತ್ರದಂತೆ ಕಾಂಗ್ರೆಸ್, ಪೂರ್ಣಿಯಾ ಕ್ಷೇತ್ರವನ್ನು ಆರ್‌ಜೆಡಿಗೆ ಬಿಟ್ಟುಕೊಟ್ಟಿದೆ. ರಾಜ್ಯಸಭಾ ಸದಸ್ಯೆ ರಂಜೀತಾ ರಂಜನ್ ಅವರ ಪತಿ ಪಪ್ಪು ಯಾದವ್ ಈ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಪೂರ್ಣಿಯಾ ಕ್ಷೇತ್ರದ ಟಿಕೆಟ್‌ನ ಭರವಸೆ ಕೊಟ್ಟಿದ್ದಾರೆ ಎಂದು ಪಪ್ಪು ಯಾದವ್ ಹೇಳಿದ್ದರು. 'ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದಿಲ್ಲ' ಎಂದು ಮಾಜಿ ಸಂಸದರೂ ಆಗಿರುವ ಅವರು ಸ್ಪಷ್ಟಪಡಿಸಿದ್ದಾರೆ.

'ರಾಹುಲ್ ಗಾಂಧಿ ಅವರನ್ನು ದೇಶದ ಪ್ರಧಾನಿಯನ್ನಾಗಿ ಮಾಡಲು ಮತ್ತು ಬಿಹಾರದಲ್ಲಿ ಕಾಂಗ್ರೆಸ್‌ನ ಬಲವೃದ್ಧಿಗೆ ನೆರವಾಗಲು ನಾನು ಬದ್ಧನಾಗಿದ್ದೇನೆ. ಈ ಚುನಾವಣೆಯಲ್ಲಿ ಪೂರ್ಣಿಯಾ ಕ್ಷೇತ್ರದಲ್ಲಿ ನನ್ನ ಪಾತ್ರ ಏನು ಎಂಬುದನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ನಿರ್ಧರಿಸಲಿದ್ದಾರೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಐದು ಬಾರಿಯ ಸಂಸದ ಪಪ್ಪು ಅವರು 2014 ರಲ್ಲಿ ಮಧೇಪುರ ಕ್ಷೇತ್ರದಿಂದ ಆರ್‌ಜೆಡಿ ಟಿಕೆಟ್‌ನಲ್ಲಿ ಕೊನೆಯದಾಗಿ ಜಯಿಸಿದ್ದರು. ಪೂರ್ಣಿಯಾ ಕ್ಷೇತ್ರದಿಂದ ಮೂರು ಸಲ ಆಯ್ಕೆಯಾಗಿದ್ದರು. ಈ ಬಾರಿ ಮಧೇಪುರ ಅಥವಾ ಸುಪೌಲ್ ಕ್ಷೇತ್ರದಿಂದ ಅವರನ್ನು ಕಣಕ್ಕಿಳಿಸುವ ಊಹಾಪೋಹಗಳು ಎದ್ದಿದ್ದವು. ಆದರೆ ಸೀಟು ಹಂಚಿಕೆ ಸೂತ್ರದಂತೆ ಈ ಎರಡೂ ಕ್ಷೇತ್ರಗಳು ಆರ್‌ಜೆಡಿ ಪಾಲಾಗಿವೆ.

ಆರ್‌ಜೆಡಿಯು ಪೂರ್ಣಿಯಾ ಕ್ಷೇತ್ರದ ಟಿಕೆಟ್ ಅನ್ನು ಬೀಮಾ ಭಾರತಿ ಅವರಿಗೆ ನೀಡಿದೆಯಾದರೂ, ಈ ಬಗ್ಗೆ ಅಧಿಕೃತ ಘೋಷಣೆ ಮಾಡಿಲ್ಲ. ಮೊದಲ ಹಂತದ ಮತದಾನದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಕೊನೆಗೊಂಡ ಮರುದಿನವೇ 'ಮಹಾಘಟಬಂಧನ್'ನ ಸೀಟು ಹಂಚಿಕೆ ಘೋಷಣೆ ಹೊರಬಿದ್ದಿದೆ.

ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಎಲ್ಲ ನಾಲ್ಕೂ ಕ್ಷೇತ್ರಗಳಲ್ಲಿ ಆರ್‌ಜೆಡಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಮೈತ್ರಿಕೂಟದ ಇತರ ಪಕ್ಷಗಳು ಈ ನಡೆಯನ್ನು 'ಏಕಪಕ್ಷೀಯ ತೀರ್ಮಾನ' ಎಂದಿದ್ದವು.

ಸುದ್ದಿಗೋಷ್ಠಿಯಲ್ಲಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಪಾಲ್ಗೊಳ್ಳಬೇಕಿತ್ತು. ಆದರೆ ಅವರ ಅನುಪಸ್ಥಿತಿಯಲ್ಲಿ ಪಕ್ಷದ ರಾಷ್ಟ್ರೀಯ ವಕ್ತಾರ ಮನೋಜ್ ಝಾ ಭಾಗವಹಿಸಿದರು.

ಚುನಾವಣೆ ಬಹಿಷ್ಕರಿಸಲು ನಾಗಾ ಸಂಘಟನೆ ನಿರ್ಧಾರ

ಕೊಹಿಮಾ (ಪಿಟಿಐ): ಪ್ರತ್ಯೇಕ ರಾಜ್ಯದ ಬೇಡಿಕೆ ಈಡೇರುವವರೆಗೆ ಲೋಕಸಭಾ ಚುನಾವಣೆಯಲ್ಲಿ ಪಾಲ್ಗೊಳ್ಳುವುದಿಲ್ಲ ಎನ್ನುವ ತಮ್ಮ ನಿರ್ಧಾರಕ್ಕೆ ಬದ್ಧವಾಗಿರುವುದಾಗಿ ಈಸ್ಟರ್ನ್ ನಾಗಾಲ್ಯಾಂಡ್ ಪೀಪಲ್ಸ್ ಆರ್ಗನೈಸೇಷನ್ (ಇಎನ್‌ಪಿಒ) ಮುಖಂಡರು ಶುಕ್ರವಾರ ಹೇಳಿದರು.

ಇಎನ್‌ಪಿಒ ತಮ್ಮ ಪ್ರಾಂತ್ಯದ 20 ಶಾಸಕರು ಮತ್ತು ಏಕೈಕ ಸಂಸದರೊಂದಿಗೆ ಗುರುವಾರ ತುಯೆನ್ಸಾಂಗ್‌ನಲ್ಲಿ ಗುಪ್ತ ಸಭೆ ನಡೆಸಿತು.

'ಗಡಿ ನಾಗಾಲ್ಯಾಂಡ್ (ಫ್ರಾಂಟಿಯರ್ ನಾಗಾಲ್ಯಾಂಡ್) ಪ್ರಾಂತ್ಯದ ತಮ್ಮ ಬೇಡಿಕೆಯನ್ನು ಕೇಂದ್ರ ಸರ್ಕಾರವು ಈಡೇರಿಸುವವರೆಗೆ ಲೋಕಸಭಾ ಚುನಾವಣೆಯಿಂದ ದೂರವುಳಿಯಲು ಮತ್ತು ತಮ್ಮ ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರ ಕಾರ್ಯಕ್ಕೆ ಅವಕಾಶ ನೀಡದಿರಲು ತೀರ್ಮಾನಿಸಿದ್ದೇವೆ' ಎಂದು ಇಎನ್‌ಪಿಒ ಉಪಾಧ್ಯಕ್ಷ ಡಬ್ಲ್ಯು.ಬೆಂಡಾಂಗ್ ಚಾಂಗ್ ಪಿಟಿಐಗೆ ತಿಳಿಸಿದರು.

ಏಳು ನಾಗಾ ಬುಡಕಟ್ಟುಗಳ ಸಂಘಟನೆಯಾಗಿರುವ ಇಎನ್‌ಪಿಒ ಪೂರ್ವ ನಾಗಾಲ್ಯಾಂಡ್‌ನ ಆರು ಜಿಲ್ಲೆಗಳನ್ನೊಳಗೊಂಡಂತೆ ಪ್ರತ್ಯೇಕ ರಾಜ್ಯದ ಸ್ಥಾಪನೆಗಾಗಿ 2010ರಿಂದಲೂ ಹೋರಾಡುತ್ತಿದೆ.

ಪ್ರಚಾರ

ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಮುಕುಟ್ ಮಣಿ ಅಧಿಕಾರಿ ಅವರು ಪಶ್ಚಿಮ ಬಂಗಾಳದ ಶಾಂತಿಪುರದಲ್ಲಿ ಚುನಾವಣಾ ರ‍್ಯಾಲಿ ನಡೆಸುವಾಗ ಜನರಿಗೆ ಕೈ ಮುಗಿದರು –ಪಿಟಿಐ ಚಿತ್ರ

ಜಾತಿ ಪ್ರಮಾಣ ಪತ್ರ ಅಸಿಂಧು: ಅಭ್ಯರ್ಥಿ ಬದಲು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದ ನಾಗಪುರ ಜಿಲ್ಲೆಯ ರಾಮ್‌ಟೆಕ್ ವಿಧಾನಸಭಾ ಕ್ಷೇತ್ರದ (ಎಸ್‌ಸಿ ಮೀಸಲು) ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ರಶ್ಮಿ ಬಾರ್ವೆ ಅವರ ಜಾತಿ ಪ್ರಮಾಣ ಪತ್ರ ಅಸಿಂಧುವಾಗಿದೆ. ಹೀಗಾಗಿ 'ಡಮ್ಮಿ' ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ರಶ್ಮಿ ಅವರ ಪತಿ ಶ್ಯಾಮರಾವ್ ಬಾರ್ವೆ ಅವರನ್ನೇ ಅಧಿಕೃತ ಅಭ್ಯರ್ಥಿಯನ್ನಾಗಿ ಕಾಂಗ್ರೆಸ್ ಘೋಷಿಸಿದೆ.

ಕಾಂಗ್ರೆಸ್ ತ್ಯಜಿಸಿ ಶಿವಸೇನಾ ಸೇರಿದ್ದ ರಾಜು ಪಾರ್ವೆ ಮತ್ತು ಪ್ರಕಾಶ್ ಅಂಬೇಡ್ಕರ್ ಅವರ 'ವಂಚಿತ್ ಬಹುಜನ ಅಘಾಡಿ'ಯ ಅಭ್ಯರ್ಥಿ ಮಾಜಿ ಐಎಎಸ್ ಅಧಿಕಾರಿ ಕಿಶೋರ್ ಗಜ್‌ಭಿಯೆ ಕಣದಲ್ಲಿರುವ ಇನ್ನಿಬ್ಬರು ಉಮೇದುವಾರರಾಗಿದ್ದಾರೆ.

ಪಶ್ಚಿಮ ಮಹಾರಾಷ್ಟ್ರ: ಸಮಬಲದ ಹೋರಾಟ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮುಂಬೈ: 'ಸಕ್ಕರೆ ಸೀಮೆ' ಎಂದೇ ಹೆಸರುವಾಸಿಯಾಗಿರುವ, ವಿಶಾಲ ಮತ್ತು ಸಮೃದ್ಧ ಪಶ್ಚಿಮ ಮಹಾರಾಷ್ಟ್ರದ ಐದು ಜಿಲ್ಲೆಗಳಲ್ಲಿ ಹರಡಿಕೊಂಡಿರುವ 10 ಲೋಕಸಭಾ ಕ್ಷೇತ್ರಗಳು ಈ ಬಾರಿ ನೇರ ಹಣಾಹಣಿಗೆ ಸಾಕ್ಷಿಯಾಗಲಿವೆ. ಯಾರಿಗೆ ಎಷ್ಟು ಸ್ಥಾನ ಸಿಗಬಹುದು ಎನ್ನುವುದು ಮಾತ್ರ ನಿಗೂಢವಾಗಿದೆ.

ಕಾಂಗ್ರೆಸ್ ಭದ್ರಕೋಟೆಯಾಗಿದ್ದ ಪ್ರಾಂತ್ಯದಲ್ಲಿ 2014 ಮತ್ತು 2019ರ ಚುನಾವಣೆಯಲ್ಲಿ 'ಮೋದಿ ಅಲೆ' ಮೂಲಕ ಬಿಜೆಪಿ ತನ್ನ ಅಸ್ತಿತ್ವ ಸ್ಥಾಪಿಸಿಕೊಂಡಿತು. ವ್ಯವಸ್ಥಿತ ಕೃಷಿ ಜಾಲ ಮತ್ತು ಸಹಕಾರಿ ವಲಯಕ್ಕೆ ಹೆಸರಾದ ಈ ಪ್ರಾಂತ್ಯವು ಪವಾರ್ ಕುಟುಂಬದ ಹೋರಾಟಕ್ಕೂ ಸಾಕ್ಷಿಯಾಗಲಿದೆ.

ಮೇ 7 ಮತ್ತು ಮೇ 13ರಂದು ಮತದಾನ ನಡೆಯಲಿರುವ ಈ ಭಾಗದಲ್ಲಿ ಮರಾಠಾ ಮತ್ತು ಒಬಿಸಿ ಮೀಸಲಾತಿ ವಿಚಾರವೇ ನಿರ್ಣಾಯಕ ಅಂಶವಾಗಿರಲಿದೆ.

ಎನ್‌ಸಿಪಿಯ ಎರಡು ಬಣಗಳ ನಾಯಕಿಯರಾದ ಸುಪ್ರಿಯಾ ಸುಳೆ ಮತ್ತು ಸುನೇತ್ರಾ ಪವಾರ್ –ಪಿಟಿಐ ಚಿತ್ರ

2009ರ ಲೋಕಸಭಾ ಚುನಾವಣೆಯಲ್ಲಿ ಹತ್ತು ಲೋಕಸಭಾ ಸ್ಥಾನಗಳ ಪೈಕಿ ಕಾಂಗ್ರೆಸ್–ಎನ್‌ಸಿಪಿ ತಲಾ 3 ಸ್ಥಾನ, ಶಿವಸೇನಾ 2, ಪಕ್ಷೇತರ 1 ಮತ್ತು ಸ್ವಾಭಿಮಾನಿ ಶೇತ್ಕಾರಿ ಸಂಘಟನೆ ಒಂದು ಕ್ಷೇತ್ರ ಗೆದ್ದಿದ್ದವು. 2014ರಲ್ಲಿ ಎನ್‌ಸಿಪಿ 4, ಬಿಜೆಪಿ 3 ಮತ್ತು ಶಿವಸೇನಾ 2 ಹಾಗೂ ಸ್ವಾಭಿಮಾನಿ ಶೇತ್ಕಾರಿ ಸಂಘಟನೆ ಒಂದು ಕ್ಷೇತ್ರ ಗೆದ್ದಿದ್ದವು. 2019ರಲ್ಲಿ ಬಿಜೆಪಿ ತನ್ನ ಬಲ ವೃದ್ಧಿಸಿಕೊಂಡು 4 ಸ್ಥಾನಗಳಲ್ಲಿ ಜಯ ಸಾಧಿಸಿದರೆ, ಎನ್‌ಸಿಪಿ (ಶರದ್‌ಪವಾರ್ ಬಣ) ಮತ್ತು ಶಿವಸೇನಾ ತಲಾ 3 ಕ್ಷೇತ್ರಗಳನ್ನು ಗೆದ್ದಿದ್ದವು.

ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗಿಲ್ಲ. ಹೀಗಾಗಿ ಈ ಬಾರಿ ಕಾಂಗ್ರೆಸ್ ಗೆಲುವಿಗಾಗಿ ಶತಪ್ರಯತ್ನ ಮಾಡುತ್ತಿದೆ. ಈ ನಡುವೆ ಎನ್‌ಸಿಪಿ ಮತ್ತು ಶಿವಸೇನಾ ಪಕ್ಷಗಳು ವಿಭಜನೆಗೊಂಡು, ರಾಜಕೀಯ ಸಮೀಕರಣಗಳು ಬದಲಾಗಿವೆ.

ಕಾಂಗ್ರೆಸ್ ನೇತೃತ್ವದ 'ಮಹಾ ವಿಕಾಸ ಅಘಾಡಿ' (ಎಂವಿಎ) ಮತ್ತು ಬಿಜೆಪಿ ನೇತೃತ್ವದ 'ಮಹಾಯುತಿ' ಮೈತ್ರಿಕೂಟಗಳು ಸಮಬಲದೊಂದಿಗೆ ಕದನ ಕಣಕ್ಕೆ ಧುಮುಕಿವೆ.

ಬಾರಾಮತಿ ಕ್ಷೇತ್ರವು ಪಶ್ಚಿಮ ಮಹಾರಾಷ್ಟ್ರದ ಕೇಂದ್ರಬಿಂದು ಎನಿಸಿಕೊಂಡಿದೆ. ಪವಾರ್ ಕುಟುಂಬದ ಭದ್ರಕೋಟೆಯಾಗಿರುವ ಈ ಕ್ಷೇತ್ರಕ್ಕಾಗಿ ಮೂರು ಬಾರಿಯ ಸಂಸದೆ ಸುಪ್ರಿಯಾ ಸುಳೆ ಮತ್ತು ಅಜಿತ್ ಪವಾರ್ ಪತ್ನಿ ಸುನೇತ್ರ ಪವಾರ್ ಪೈಪೋಟಿ ನಡೆಸುತ್ತಿದ್ದಾರೆ. ಅಭ್ಯರ್ಥಿಗಳ ಹೆಸರು ಅಧಿಕೃತವಾಗಿ ಘೋಷಣೆಯಾಗದಿದ್ದರೂ ಆಗಲೇ ಪ್ರಚಾರ ಕಾರ್ಯ ಆರಂಭಿಸಲಾಗಿದೆ. ಐದು ದಶಕಗಳಲ್ಲಿ ಮೊದಲ ಬಾರಿಗೆ ಬಾರಾಮತಿಯಲ್ಲಿ ಪವಾರ್ ಕುಟುಂಬದ ಸದಸ್ಯರ ನಡುವೆಯೇ ಹೋರಾಟ ನಡೆಯುತ್ತಿದೆ.

ಮಾಜಿ ಮುಖ್ಯಮಂತ್ರಿ ಸುಶೀಲ್‌ಕುಮಾರ್ ಶಿಂದೆ ಅವರ ಪುತ್ರಿ ಪ್ರಣೀತಿ ಶಿಂದೆ ಸೋಲಾಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದು, ಅವರಿಗೆ ವಿರುದ್ಧವಾಗಿ ಬಿಜೆಪಿಯಿಂದ ಮಾಲ್‌ಶಿರಸ್ ಶಾಸಕ ರಾಮ್ ಸತ್ಪುತೆ ಕಣಕ್ಕಿಳಿದಿದ್ದಾರೆ.

ಸ್ಥಾನ ಹಂಚಿಕೆಗೆ ಸಂಬಂಧಿಸಿದಂತೆ ಎರಡೂ ಕೂಟಗಳಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದು, ಮುಂದಿನ ದಿನಗಳಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ನಡೆದರೂ ಅಚ್ಚರಿಯೇನಿಲ್ಲ.

ರಾಜವಂಶಸ್ಥರ ರಾಜಕೀಯ

ಕೊಲ್ಲಾಪುರ ಮತ್ತು ಸತಾರಾದ ಚುನಾವಣೆಯಲ್ಲಿ ರಾಜಮನೆತನಗಳು ಕೂಡ ಹೋರಾಟ ನಡೆಸುತ್ತಿವೆ. ಕೊಲ್ಲಾಪುರದಲ್ಲಿ ಎಂವಿಎದಿಂದ ಛತ್ರಪತಿ ಶಿವಾಜಿ ರಾಜಮನೆತನದ 12ನೇ ವಂಶಸ್ಥ ಹಾಗೂ ಕೊಲ್ಲಾಪುರದ ಸಮಾಜ ಸುಧಾರಕ ರಾಜಶ್ರೀ ಛತ್ರಪತಿ ಶಾಹು ಮಹಾರಾಜ್ ಅವರ ಮೊಮ್ಮಗ ಶಾಹು ಎರಡನೇ ಶಹಾಜಿ ಛತ್ರಪತಿ ಕಣಕ್ಕಿಳಿದಿದ್ದಾರೆ. ಬಿ.ಆರ್.ಅಂಬೇಡ್ಕರ್ ಅವರಿಗೂ ಶಾಹು ಮಹಾರಾಜ್ ಅವರಿಗೂ ಇದ್ದ ನಂಟಿನ ಕಾರಣಕ್ಕಾಗಿ 'ವಂಚಿತ್ ಬಹುಜನ್ ಅಘಾಡಿ'ಯ ಪ್ರಕಾಶ್ ಅಂಬೇಡ್ಕರ್ ಅವರೂ ಶಹಾಜಿ ಛತ್ರಪತಿ ಅವರನ್ನು ಬೆಂಬಲಿಸುತ್ತಿದ್ದಾರೆ.

ಸತಾರಾ ಕ್ಷೇತ್ರದಲ್ಲಿ ಛತ್ರಪತಿ ಶಿವಾಜಿ ಮನೆತನದ 13ನೇ ವಂಶಸ್ಥ, ಹಾಲಿ ಬಿಜೆಪಿ ರಾಜ್ಯಸಭಾ ಸದಸ್ಯ ಛತ್ರಪತಿ ಉದಯನ್‌ರಾಜೇ ಭೋಂಸ್ಲೆ ಅವರಿಗೆ ಟಿಕೆಟ್ ಸಿಗುವುದು ಬಹುತೇಕ ಖಚಿತವಾಗಿದೆ. ಅವರು ಈ ಹಿಂದೆ ಎನ್‌ಸಿಪಿಯಿಂದ ಮೂರು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು.

ಚುಟುಕು

ವಯನಾಡ್: ಬಿಜೆಪಿ ಅಭ್ಯರ್ಥಿ ಸುರೇಂದ್ರನ್ ವಿರುದ್ಧ 242 ಪ್ರಕರಣ

ಸುರೇಂದ್ರನ್

ಕೊಚ್ಚಿ (ಪಿಟಿಐ): ಕೇರಳದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ, ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ರಾಹುಲ್ ಗಾಂಧಿ ವಿರುದ್ಧ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ಸುರೇಂದ್ರನ್ ವಿರುದ್ಧ ಬರೋಬ್ಬರಿ 242 ಪ್ರಕರಣಗಳಿವೆ.

ಚುನಾವಣೆಯ ಹಿನ್ನೆಲೆಯಲ್ಲಿ ಸುರೇಂದ್ರನ್ ಅವರು ತಮ್ಮ ವಿರುದ್ಧದ ಪ್ರಕರಣಗಳ ವಿವರಗಳನ್ನು ಪಕ್ಷದ ಮುಖವಾಣಿಯಲ್ಲಿ ಮೂರು ಪುಟಗಳಲ್ಲಿ ಪ್ರಕಟಿಸಿದ್ದಾರೆ.

ಇದೇ ರೀತಿ ಎರ್ನಾಕುಳಂ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಎಸ್.ರಾಧಾಕೃಷ್ಣನ್ ಅವರ ವಿರುದ್ಧ 211 ಪ್ರಕರಣಗಳು ದಾಖಲಾಗಿವೆ.

'ಹೆಚ್ಚಿನ ಪ್ರಕರಣಗಳು 2018ರಲ್ಲಿ ನಡೆದ ಶಬರಿಮಲೆ ಪ್ರತಿಭಟನೆಗಳಿಗೆ ಸಂಬಂಧಿಸಿದವು. ಬಹುತೇಕ ಪ್ರಕರಣಗಳು ನ್ಯಾಯಾಲಯದಲ್ಲಿವೆ. ಪಕ್ಷವು ಮುಷ್ಕರ ಅಥವಾ ಪ್ರತಿಭಟನೆಗೆ ಕರೆ ನೀಡಿದಾಗ ಪೊಲೀಸರು ಅದಕ್ಕೆ ಸಂಬಂಧಿಸಿ ಪ್ರಕರಣ ದಾಖಲಿಸುತ್ತಾರೆ' ಎಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಜಾರ್ಜ್ ಕುರಿಯನ್ ಪಿಟಿಐಗೆ ತಿಳಿಸಿದರು.

ಜಿಗಿ–ನೆಗೆದಾಟ

ಮಧ್ಯಪ್ರದೇಶ: ಕಾಂಗ್ರೆಸ್ ಶಾಸಕ ಕಮಲೇಶ್ ಶಾ ಬಿಜೆಪಿಗೆ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಛಿಂದವಾಡಾ ಜಿಲ್ಲೆಯ ಅಮರ್‌ವಾಡಾ ಕ್ಷೇತ್ರದಿಂದ ಮೂರು ಬಾರಿ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾಗಿದ್ದ ಕಮಲೇಶ್ ಶಾ ಅವರು ಪಕ್ಷ ತೊರೆದು ಬಿಜೆಪಿಗೆ ಶುಕ್ರವಾರ ಸೇರ್ಪಡೆಗೊಂಡರು.

ಛಿಂದವಾಡಾವು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಮುಖಂಡ ಕಮಲ್‌ನಾಥ್ ಅವರ ತವರು ಜಿಲ್ಲೆಯಾಗಿದೆ.

ಕಾಂಗ್ರೆಸ್ ಮಾಜಿ ಶಾಸಕ ಬಿಜೆಡಿಗೆ (ಭುವನೇಶ್ವರ ವರದಿ) (ಪಿಟಿಐ): ಒಡಿಶಾದ ಮಾಜಿ ಸಚಿವ ಹಾಗೂ ಕಾಂಗ್ರೆಸ್‌ನ ಮಾಜಿ ಶಾಸಕ ಸುರೇಂದ್ರ ಸಿಂಗ್ ಭೋಯಿ ಅವರು ಪಕ್ಷ ತೊರೆದು, ಆಡಳಿತಾರೂಢ ಬಿಜೆಡಿಗೆ ಶುಕ್ರವಾರ ಸೇರ್ಪಡೆಗೊಂಡರು.

ಇವರು 38 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿದ್ದರು.

ಇಬ್ಬರು ಬಿಜೆಪಿ ಮುಖಂಡರು ಬಿಜೆಡಿಗೆ?: ಬಿಜೆಪಿಯ ನೀಲಗಿರಿ ಕ್ಷೇತ್ರದ ಶಾಸಕ ಸುಕಾಂತ್ ನಾಯಕ್ ಮತ್ತು ಬಿಜೆಪಿಯ ಕಟಕ್ ಜಿಲ್ಲಾ ಘಟಕದ ಅಧ್ಯಕ್ಷ ಪ್ರಕಾಶ್ ಚಂದ್ರ ಬೆಹೆರಾ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಇವರಿಬ್ಬರು ಬಿಜೆಡಿಗೆ ಸೇರ್ಪಡೆಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಎಂಥಾ ಮಾತು!

ಅಭಿವೃದ್ಧಿಯೇ ಬಿಜೆಪಿಯ ಪ್ರಮುಖ ಕಾರ್ಯಸೂಚಿ. ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಚುನಾವಣೆಯಲ್ಲಿ ಗೆಲ್ಲಲು ನಾವು ಹೆಚ್ಚು ಶ್ರಮ ವಹಿಸಬೇಕಿಲ್ಲ. ತಮ್ಮ ಹೃದಯದಲ್ಲಿ ಏನಿದೆ ಎಂಬುದನ್ನು ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದ ಜನರು ಶೀಘ್ರ ಬಹಿರಂಗಪಡಿಸಲಿದ್ದಾರೆ. 2014ರಿಂದ ದೇಶದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದ್ದು, ಪ್ರತಿಯೊಬ್ಬ ಭಾರತೀಯನಲ್ಲೂ ರಾಷ್ಟ್ರೀಯತೆ ಜಾಗೃತಗೊಂಡಿದೆ

ಕಂಗನಾ ರನೌತ್, ನಟಿ, ಬಿಜೆಪಿ ಅಭ್ಯರ್ಥಿ

ಬಿಜೆಪಿ ದೊಡ್ಡ ಮಾತುಗಳನ್ನಾಡುತ್ತದೆ. ಮಧ್ಯಪ್ರದೇಶದಲ್ಲಿ ಅದು 20 ವರ್ಷಗಳಿಂದ ಅಧಿಕಾರದಲ್ಲಿದೆ. ಆದರೆ, ಛಿಂದವಾಡಾ ಜಿಲ್ಲೆಗಾಗಿ ಅದು ಏನನ್ನೂ ಮಾಡಿಲ್ಲ. ಯಾರೇ ಸರ್ಕಾರ ರಚನೆ ಮಾಡಿದರೂ, ನಾವು ಜನರ ಕೆಲಸಗಳನ್ನು ಮಾಡುತ್ತೇವೆ. ನಿಮ್ಮ ಕೆಲಸಗಳನ್ನು ಮಾಡುತ್ತಿರುವವನು ನಾನೇ ಆದ್ದರಿಂದ ಛಿಂದವಾಡಾದ ಕೆಲಸಗಳು ನಿಲ್ಲುವುದಿಲ್ಲ. ಕೊನೆಯವರೆಗೂ ನಿಮ್ಮ ಪ್ರೀತಿ ಮತ್ತು ವಿಶ್ವಾಸ ಸಿಗಲಿದೆ ಎಂದು ನಂಬಿದ್ದೇನೆ. ನಾನು ನಿಮಗೆ ಹೇಳುವುದು ಒಂದೇ, ನೀವು ಸತ್ಯದೊಂದಿಗೆ ನಿಲ್ಲಬೇಕು

ಕಮಲ್‌ನಾಥ್, ಕಾಂಗ್ರೆಸ್ ಮುಖಂಡ

ಕ್ಷೇತ್ರ ಮಹಾತ್ಮೆ

ಮಹಾರಾಷ್ಟ್ರದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ನಾಗ್ಪುರ ಕ್ಷೇತ್ರದಲ್ಲಿ ಕಲಿಗಳ ಹೋರಾಟಕ್ಕೆ ವೇದಿಕೆ ಸಿದ್ಧವಾಗಿದೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಬಿಜೆಪಿಯಿಂದ ಸ್ಪರ್ಧಿಸಿದರೆ, ವಿಕಾಸ್ ಠಾಕ್ರೆ ಅವರನ್ನು ಕಾಂಗ್ರೆಸ್ ಅಖಾಡಕ್ಕಿಳಿಸಿದೆ. ಎರಡು ಬಾರಿ ಇಲ್ಲಿಂದ ಗೆಲುವಿನ ನಗೆ ಬೀರಿರುವ ಗಡ್ಕರಿ ಅವರು ಸ್ಥಳೀಯವಾಗಿಯೂ ಬಹಳ ಪ್ರಭಾವವಿರುವ ಮುಖಂಡರಾಗಿದ್ದಾರೆ. ಇದೇ ಕಾರಣಕ್ಕೆ ನಾಗ್ಪುರ ಪಶ್ಚಿಮ ಕ್ಷೇತ್ರದ ಶಾಸಕರಾಗಿರುವ ವಿಕಾಸ್ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯನ್ನಾಗಿಸಿದೆ. ನಾಗ್ಪುರ ಮಹಾನಗರ ಪಾಲಿಕೆಯ ಮೇಯರ್ ಆಗಿಯೂ ಕಾರ್ಯನಿರ್ವಹಿಸಿ ಅನುಭವವಿರುವ ವಿಕಾಸ್, ಸ್ಥಳೀಯ ರಾಜಕಾರಣದಲ್ಲಿ ಆಳವಾಗಿ ಬೇರು ಬಿಟ್ಟವರು. ಈ ಕಾರಣಕ್ಕೆ ಸ್ಪರ್ಧೆಯು ಕುತೂಹಲ ಮೂಡಿಸಿದೆ. ವಿಕಾಸ್ ಅವರು ನಾಗ್ಪುರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಕಾಂಗ್ರೆಸ್‌ನ ವಿಲಾಸ್ ಮುತ್ತೆಂವರ್ ಅವರು 2009ರಲ್ಲಿ ಈ ಕ್ಷೇತ್ರದಲ್ಲಿ ಗೆದ್ದಿದ್ದರು. ಬಳಿಕ ಗಡ್ಕರಿ ಅವರು ಇಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿದ್ದರು. ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದಿರುವ ಗಡ್ಕರಿ, 2009ರಲ್ಲಿ ಪಕ್ಷದ ರಾಷ್ಟ್ರೀಯ ಘಟಕದ ಅಧ್ಯಕ್ಷರಾಗಿಯೂ ಪಕ್ಷ ಸಂಘಟನೆಗೆ ದುಡಿದಿದ್ದರು. ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಪ್ರಭಾವಿಯಾಗಿರುವ ಇವರಿಗೆ ಈ ಬಾರಿಯೂ ನಾಗ್ಪುರದಿಂದ ಸುಲಭ ಜಯ ಲಭಿಸಲಿದೆ ಎಂಬುದು ಬಿಜೆಪಿಯ ವಿಶ್ವಾಸ.

ಮುಖಾಮುಖಿ

ಗುನಾ (ಮಧ್ಯಪ್ರದೇಶ)

ಜ್ಯೋತಿರಾದಿತ್ಯ ಸಿಂಧಿಯಾ (ಬಿಜೆಪಿ)

ರಾವ್ ಯಾದವೇಂದ್ರ ಸಿಂಗ್ (ಕಾಂಗ್ರೆಸ್)

V/S

ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು, ತಮಗೆ ನಾಲ್ಕು ಬಾರಿ ಜಯ ತಂದುಕೊಟ್ಟಿರುವ ಗುನಾ ಲೋಕಸಭಾ ಕ್ಷೇತ್ರದಿಂದ ಈ ಬಾರಿಯೂ ಕಣಕ್ಕಿಳಿದಿದ್ದಾರೆ. ತಂದೆ ಮಾಧವ್‌ರಾವ್ ಸಿಂಧಿಯಾ ಪ್ರತಿನಿಧಿಸಿದ್ದ ಈ ಕ್ಷೇತ್ರವು ಸುರಕ್ಷಿತ ಎಂದು ಭಾವಿಸಿದ್ದ ಅವರಿಗೆ ಕಳೆದ ಚುನಾವಣೆಯಲ್ಲಿ ಅದೃಷ್ಟ ಕೈಕೊಟ್ಟಿತ್ತು. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಅವರನ್ನು ಬಿಜೆಪಿಯ ಕೃಷ್ಣಪಾಲ್ ಸಿಂಗ್ ಯಾದವ್ ಭಾರಿ ಅಂತರದಿಂದ ಸೋಲಿಸಿದ್ದರು. ಆದರೆ ಈ ಬಾರಿ ಪರಿಸ್ಥಿತಿ ಬದಲಾಗಿದೆ. ಜ್ಯೋತಿರಾದಿತ್ಯ ಅವರು ಬಿಜೆಪಿ ಪಾಳೆಯದಲ್ಲಿದ್ದಾರೆ. ಆದ್ದರಿಂದಲೇ ಅವರಲ್ಲಿ ಗೆಲುವಿನ ನಿರೀಕ್ಷೆ ಹೆಚ್ಚಿದೆ. ಒಂದು ಕಾಲದಲ್ಲಿ ಕಾಂಗ್ರೆಸ್‌ನ ಭದ್ರಕೋಟೆ ಎಂದೇ ಬಿಂಬಿತವಾಗಿದ್ದ ಈ ಕ್ಷೇತ್ರದ ಮತದಾರರು ಪಕ್ಷಾಂತರ ಮಾಡಿ ಬಿಜೆಪಿಗೆ ಜಿಗಿದಿರುವ ಜ್ಯೋತಿರಾದಿತ್ಯ ಅವರ ಕೈ ಹಿಡಿಯುವರೇ ಎಂದು ಕಾದು ನೋಡಬೇಕಾಗಿದೆ.

2023ರ ವಿಧಾನಸಭೆ ಚುನಾವಣೆಗೆ ಮೊದಲು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ರಾವ್ ಯಾದವೇಂದ್ರ ಸಿಂಗ್ ಅವರನ್ನು ಕಾಂಗ್ರೆಸ್, ಗುನಾ ಕ್ಷೇತ್ರದಿಂದ ಕಣಕ್ಕಿಳಿಸಿದೆ. ಕಾಂಗ್ರೆಸ್ ಪಕ್ಷಕ್ಕೆ ಈ ಕ್ಷೇತ್ರದಲ್ಲಿ ಸಾಕಷ್ಟು ಪ್ರಭಾವವಿದ್ದರೂ, ಜ್ಯೋತಿರಾದಿತ್ಯ ಅವರಂತಹ ಪ್ರಬಲ ಅಭ್ಯರ್ಥಿಯನ್ನು ಮಣಿಸಲು ಕಮಲ ಪಾಳಯದಿಂದ ಬಂದಿರುವ ಅಭ್ಯರ್ಥಿಯನ್ನೇ ಅಖಾಡಕ್ಕಿಳಿಸುವ ಮೂಲಕ ಕಣವನ್ನು ರಂಗೇರಿಸಿದೆ. ಯಾದವೇಂದ್ರ ಅವರ ತಂದೆ ದೇಶರಾಜ್ ಸಿಂಗ್ ಯಾದವ್ ಅವರು ಬಿಜೆಪಿಯಲ್ಲಿ ಶಾಸಕರಾಗಿದ್ದವರು. ಸದ್ಯ ಜಿಲ್ಲಾ ಪಂಚಾಯಿತಿ ಸದಸ್ಯರಾಗಿರುವ ಯಾದವೇಂದ್ರ ಅವರನ್ನು ಇಂತಹ ಪ್ರತಿಷ್ಠಿತ ಕ್ಷೇತ್ರದಿಂದ ಕಾಂಗ್ರೆಸ್ ಕಣಕ್ಕಿಳಿಸಿರುವುದರ ಹಿಂದಿನ ಲೆಕ್ಕಾಚಾರವೂ ಇದೇ ಆಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮುಂಗಾವಲಿ ಕ್ಷೇತ್ರದಿಂದ ಸ್ಪರ್ಧಿಸಿ ಇವರು ಸೋತಿದ್ದರು.

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

11ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಕ್ಷ್ಮೀದೇವಿ
ನಿಧನ : 30.03.2013
ನೀವು ನಮ್ಮನ್ನ ಅಗಲಿ ಇಂದಿಗೆ ಹನ್ನೊಂದು ವರ್ಷ ತುಂಬಿದೆ. ನಿಮ್ಮ ಸವಿನೆನಪು ಸದಾ ಹಸಿರಾಗಿ ನಮ್ಮ ಮನದಲ್ಲಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಇಂತಿ ಪತಿ - ವಿ. ಕೃಷ್ಣಪ್ಪ
ಮಕ್ಕಳು ಹಾಗೂ ಮೊಮ್ಮಕ್ಕಳು
ಕುಟುಂಬವರ್ಗ ಹಾಗೂ ಬಂಧು-ಮಿತ್ರರು
ತ್ಯಾಗರಾಜನಗರ, ಬೆಂ-28.
9341373739, 9900444777
ದಿನಾಂಕ 30.03.2024

15ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಎನ್. ಲಕ್ಷ್ಮಮ್ಮನವರು
ಕೆ. ನಾರಾಯಣಪುರ, ಎಂ. ನಂಜಪ್ಪನವರ ವೃತ್ತ, ಬೆಂಗಳೂರು-77
ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳು. ನಿಮ್ಮ ತಾಳ್ಮೆ, ತ್ಯಾಗ, ಪ್ರೀತಿ, ಮಾರ್ಗದರ್ಶನಗಳೇ ನಮಗೆ ದಾರಿದೀಪ. ನಿಮ್ಮನ್ನು ಸದಾ ಸ್ಮರಿಸುವ..
ದುಃಖತಪ್ತರು: ಮಗ-ಸೊಸೆ, ಮೊಮ್ಮಕ್ಕಳು ಮತ್ತು ಎಂ. ನಂಜಪ್ಪನವರ ಕುಟುಂಬವರ್ಗದವರು

ಚಿರಸ್ಮರಣೆ

ಶ್ರೀ ಹೆಚ್.ಎಂ.ಹುಚ್ಚೇಗೌಡರು
ನಿಧನ: 30-03-1999
ನೀವು ನಮ್ಮನ್ನು ಅಗಲಿ ಇಪ್ಪತ್ತೈದು ವರ್ಷವಾಯಿತು, ನಿಮ್ಮ ಸವಿನೆನಪು ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ, ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಧರ್ಮಪತ್ನಿ: ಕಮಲಮ್ಮ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

NAME CHANGE ANNOUNCEMENT
Log on to :
dhclassifieds.com

SAD DEMISE

We regret to inform about the Sad Demise of
Smt. R.H. USHA
President, Sri Vani Group of Institutions
on 29th March, 2024 at 5.30 pm
Last Rites will be Performed at T R Mill Crematorium, Chamarajapet at 12 Noon on 30th March, 2024.
Sri Vani Group of Institutions
Contact Info: Siddharth - 9916344416

ಕೃತಕ ಬುದ್ಧಿಮತ್ತೆ ಆಧಾರಿತ ವಿಡಿಯೊ, ಫೋಟೊಕ್ಕೆ ವಾಟರ್‌ಮಾರ್ಕ್ ಅಗತ್ಯ

ಎ.ಐ ದುರ್ಬಳಕೆ: ಮೋದಿ ಆತಂಕ

ನವದೆಹಲಿ (ಪಿಟಿಐ): 'ಕೌಶಲ ರಹಿತ ಹಾಗೂ ಸೂಕ್ತ ತರಬೇತಿ ಇಲ್ಲದವರ ಕೈಗೆ ಕೃತಕ ಬುದ್ಧಿಮತ್ತೆಯ (ಎ.ಐ) ತಂತ್ರಜ್ಞಾನ ಸಿಕ್ಕಿದರೆ ದುರ್ಬಳಕೆ ಆಗುವ ಸಾಧ್ಯತೆ ಹೆಚ್ಚಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಮೈಕ್ರೊಸಾಫ್ಟ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ಅವರೊಟ್ಟಿಗೆ ಶುಕ್ರವಾರ ಪ್ರಧಾನಿ ನಿವಾಸದಲ್ಲಿ ನಡೆದ ಮಾತುಕತೆ ವೇಳೆ ಎ.ಐ ತಂತ್ರಜ್ಞಾನಕ್ಕೆ ಸಂಬಂಧಿಸಿದ ಅಪಾಯಗಳ ಬಗ್ಗೆ ಮೋದಿ ಬಿಡಿಸಿಟ್ಟರು.

'ತಪ್ಪು ಮಾಹಿತಿ ಹಾಗೂ ಡೀಪ್‌ಫೇಕ್‌ಗಳಿಂದ ಸಮಾಜಕ್ಕೆ ಅಪಾಯ ಕಟ್ಟಿಟ್ಟಬುತ್ತಿ. ಹಾಗಾಗಿ, ಎ.ಐ ತಂತ್ರಜ್ಞಾನ ಬಳಸಿ ಸೃಷ್ಟಿಸುವ ವಿಡಿಯೊ ಮತ್ತು ಫೋಟೊಗಳ ಮೇಲೆ ಸ್ಪಷ್ಟವಾಗಿ ವಾಟರ್‌ಮಾರ್ಕ್ ಹಾಕಬೇಕಿದೆ' ಎಂದು ಹೇಳಿದರು.

ಈ ತಂತ್ರಜ್ಞಾನ ಬಳಸಿ ಸೃಷ್ಟಿಸುವ ಡೀಪ್‌ಫೇಕ್ ಕಂಟೆಂಟ್‌ಗಳನ್ನು ಗುರುತಿಸಬೇಕಿದೆ. ಜೊತೆಗೆ, ಅದನ್ನು ಸೃಷ್ಟಿಸುವ ಮೂಲದ ಬಗ್ಗೆಯೂ ಬಹಿರಂಗಪಡಿಸಬೇಕಿದೆ. ಈ ಬಗ್ಗೆ ಕ್ರಮಕೈಗೊಳ್ಳುವುದು ಈಗ ಅನಿವಾರ್ಯವಾಗಿದೆ ಎಂದು ಹೇಳಿದರು.

'ನಾವು ಯಾವುದನ್ನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎಂಬ ಬಗ್ಗೆ ಪ್ರಕಟಿಸಬೇಕು. ಈ ನಿಟ್ಟಿನಲ್ಲಿ ಗಂಭೀರವಾಗಿ ಚಿಂತಿಸುವ ಅಗತ್ಯವಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ದುರ್ಬಳಕೆಯನ್ನು ತಡೆಯಬೇಕಿದೆ ಎಂದು ಹೇಳಿದರು.

'ಎ.ಐ ತಂತ್ರಜ್ಞಾನ ಬಳಸಿಕೊಂಡು ನನ್ನ ಧ್ವನಿಯನ್ನೇ ದುರುಪಯೋಗ ಪಡಿಸಿಕೊಳ್ಳಬಹುದು. ಆರಂಭದಲ್ಲಿ ಇಂತಹ ವರ್ತನೆಯು ಜನರನ್ನು ವಂಚಿಸುತ್ತದೆ. ಜೊತೆಗೆ ತಪ್ಪುದಾರಿಗೆ ಎಳೆಯುತ್ತದೆ. ಅಲ್ಲದೆ, ಸಮಾಜದಲ್ಲಿ ಕೋಲಾಹಲ ಸೃಷ್ಟಿಗೂ ಕಾರಣವಾಗುತ್ತದೆ' ಎಂದು ಎಚ್ಚರಿಸಿದರು.

ನವದೆಹಲಿಯ ಪ್ರಧಾನಿ ನಿವಾಸದಲ್ಲಿ ಮೈಕ್ರೊಸಾಫ್ಟ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ಮತ್ತು ನರೇಂದ್ರ ಮೋದಿ ಅವರು ಮಾತುಕತೆ ನಡೆಸಿದರು –ಪಿಟಿಐ ಚಿತ್ರ

> **ಕೃಷಿ, ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ತಂತ್ರಜ್ಞಾನದ ಪಾತ್ರ ಹಿರಿದು. ಎಲ್ಲರಿಗೂ ಅದರ ನೆರವು ಸಿಗಬೇಕಿದೆ. ಹಳ್ಳಿಗಳಿಗೆ ತಂತ್ರಜ್ಞಾನ ಕೊಂಡೊಯ್ಯಲು ಶ್ರಮಿಸುತ್ತಿದ್ದೇವೆ**
> **ನರೇಂದ್ರ ಮೋದಿ,** ಪ್ರಧಾನಿ

ಜನರು ಎ.ಐ ಅನ್ನು ಮ್ಯಾಜಿಕ್ ಸಾಧನವಾಗಿ ಅಥವಾ ಸೋಮಾರಿತನದಿಂದ ಬಳಸಿದರೆ ಗಂಭೀರ ಅನ್ಯಾಯಕ್ಕೆ ಎಡೆಮಾಡಿ ಕೊಡುತ್ತದೆ. ಎ.ಐ ಮತ್ತು ಚಾಟ್‌ಜಿಪಿಟಿಯೊಂದಿಗೆ ಸ್ಪರ್ಧಿಸಿ ಅವುಗಳ ಸಾಮರ್ಥ್ಯವನ್ನು ಮೀರಲು ಶ್ರಮಿಸಬೇಕು ಎಂದು ಹೇಳಿದರು.

ಇದೇ ವೇಳೆ ಮೋದಿ ಅವರು ನಮೊ ಆ್ಯಪ್ ಮೂಲಕ ಸೆಲ್ಫಿ ತೆಗೆದುಕೊಳ್ಳುವಂತೆ ಬಿಲ್ ಗೇಟ್ಸ್ ಅವರಿಗೆ ಕೋರಿದರು. ಈ ಆ್ಯಪ್‌ನಲ್ಲಿ ಅಳವಡಿಸಿರುವ ಎ.ಐ ಮತ್ತು ಮುಖ ಗುರುತಿಸುವಿಕೆ ತಂತ್ರಜ್ಞಾನದ ಬಗ್ಗೆ ವಿವರಿಸಿದರು. ಭಾರತದ ತಂತ್ರಜ್ಞಾನ ಕುರಿತು ಬಿಲ್ ಗೇಟ್ಸ್ ಮೆಚ್ಚುಗೆ ವ್ಯಕ್ತಪಡಿಸಿದರು.

ಬೈಜುಸ್ ಸಭೆ: ಅಂತರ ಕಾಯ್ದುಕೊಂಡ ಹೂಡಿಕೆದಾರರು

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯ ಮಾತೃಸಂಸ್ಥೆಯಾದ ಥಿಂಕ್ ಆ್ಯಂಡ್ ಲರ್ನ್‌ನಿಂದ ಶುಕ್ರವಾರ ಕರೆದಿದ್ದ ವಿಶೇಷ ಸಾಮಾನ್ಯ ಸಭೆಯಲ್ಲಿ (ಇಜಿಎಂ) ಆಡಳಿತ ಮಂಡಳಿಯು ಮಂಡಿಸಿದ ನಿರ್ಣಯಕ್ಕೆ ಷೇರುದಾರರಿಂದ ಯಾವುದೇ ಆಕ್ಷೇಪ ವ್ಯಕ್ತವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಕಂಪನಿಯ ಒಟ್ಟು ₹1,664 (200 ಮಿಲಿಯನ್ ಡಾಲರ್) ಕೋಟಿ ಮೊತ್ತದ ಅಧಿಕೃತ ಷೇರು ಬಂಡವಾಳ ಹೆಚ್ಚಳಕ್ಕೆ ಸಂಬಂಧಿಸಿದಂತೆ ಒಪ್ಪಿಗೆ ಪಡೆಯಲು ಈ ಸಭೆ ಕರೆಯಲಾಗಿತ್ತು.

ಸಿಇಒ ಬೈಜು ರವೀಂದ್ರನ್ ಹಾಗೂ ಅವರ ಕುಟುಂಬದ ಸದಸ್ಯರನ್ನು ಆಡಳಿತ ಮಂಡಳಿಯಿಂದ ಹೊರಹಾಕುವಂತೆ ಆಗ್ರಹಿಸಿದ್ದ ಪ್ರಮುಖ ಹೂಡಿಕೆದಾರರು ಸಭೆಯಿಂದ ಅಂತರ ಕಾಯ್ದುಕೊಂಡಿದ್ದರು.

'ಬೆಳಿಗ್ಗೆ 10ಗಂಟೆಗೆ ಸಭೆ ಆರಂಭವಾಯಿತು. ಸುಮಾರು 20 ಹೂಡಿಕೆದಾರರ ಪರವಾಗಿ ಅವರ ಪ್ರತಿನಿಧಿಗಳು ಭಾಗವಹಿಸಿದ್ದರು. ನಿರ್ಣಯಕ್ಕೆ ಸಂಬಂಧಿಸಿದಂತೆ ಕೆಲವರು ಅಂಚೆ ಮೂಲಕ ಮತ ಚಲಾವಣೆಗೆ ಕೋರಿದರು. ಇದಕ್ಕೆ ಆಡಳಿತ ಮಂಡಳಿಯಿಂದ ಉತ್ತರ ನೀಡಲಾಯಿತು. ಬಳಿಕ ಮಂಡನೆಯಾದ ನಿರ್ಣಯಕ್ಕೆ ಯಾವುದೇ ವಿರೋಧ ವ್ಯಕ್ತವಾಗಲಿಲ್ಲ' ಎಂದು ಮೂಲಗಳು ತಿಳಿಸಿವೆ.



ಬೈಜುಸ್ ಕರೆದಿದ್ದ ಸಭೆ ಪ್ರಶ್ನಿಸಿ ಪ್ರಮುಖ ಆರು ಹೂಡಿಕೆದಾರರು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬೆಂಗಳೂರು ಘಟಕದ ಮೆಟ್ಟಿಲೇರಿದ್ದಾರೆ. ಕಂಪನಿಯಲ್ಲಿ ಈ ಹೂಡಿಕೆದಾರರು ಶೇ 32ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿದ್ದಾರೆ. 'ನಮ್ಮ ಪರವಾಗಿ ಅಧಿಕೃತ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು' ಎಂದು ಹೂಡಿಕೆದಾರರು ತಿಳಿಸಿದ್ದಾರೆ.

ನಿರ್ಣಯಕ್ಕೆ ಸಂಬಂಧಿಸಿದಂತೆ ಅಂಚೆ ಮೂಲಕ ಮತ ಚಲಾಯಿಸಲು ಏಪ್ರಿಲ್ 6ರ ವರೆಗೆ ಅವಕಾಶವಿದೆ. ಆ ನಂತರ ಸಭೆಯ ಫಲಿತಾಂಶವು ಪ್ರಕಟವಾಗಲಿದೆ.

ಆಕಾಸಾ ಏರ್‌ನಿಂದ ಅಂತರರಾಷ್ಟ್ರೀಯ ಸೇವೆ

ಮುಂಬೈ (ಪಿಟಿಐ): ದೇಶೀಯ ವಿಮಾನಯಾನ ಸಂಸ್ಥೆ ಆಕಾಸಾ ಏರ್‌ನಿಂದ ಅಂತರರಾಷ್ಟ್ರೀಯ ವಿಮಾನ ಸೇವೆ ಆರಂಭಗೊಂಡಿದೆ. ಮೊದಲಿಗೆ ಮುಂಬೈನಿಂದ ದೋಹಾ ನಡುವೆ ಕಂಪನಿಯ ವಿಮಾನಗಳು ಸಂಚರಿಸಲಿವೆ.

'ಅಲ್ಲದೆ ಕುವೈತ್, ಜೆಡ್ಡಾ ಹಾಗೂ ರಿಯಾದ್ ಮಾರ್ಗದಲ್ಲಿ ವಿಮಾನಗಳ ಹಾರಾಟಕ್ಕೆ ಅನುಮತಿ ಸಿಕ್ಕಿದೆ. ಕೆಲವೇ ತಿಂಗಳುಗಳಲ್ಲಿ ಕ್ಷಿಪ್ರಗತಿಯಲ್ಲಿ ಅಂತರರಾಷ್ಟ್ರೀಯ ವಿಮಾನ ಕಾರ್ಯಾಚರಣೆ ಸೇವೆಯನ್ನು ಮತ್ತಷ್ಟು ವಿಸ್ತರಿಸಲಾಗುವುದು' ಎಂದು ಕಂಪನಿ ತಿಳಿಸಿದೆ.

ದೋಹಾಗೆ ತೆರಳುವ ವಿಮಾನದ ಸಮಯಕ್ಕೆ ಅನುಗುಣವಾಗಿ ಪ್ರಯಾಣಿಕರು ತೆರಳಲು ಅನುಕೂಲವಾಗುವಂತೆ ಅಹಮದಾಬಾದ್, ಗೋವಾ, ವಾರಾಣಸಿ, ಲಖನೌ, ಬೆಂಗಳೂರು, ಕೊಚ್ಚಿ ಮತ್ತು ನವ ದೆಹಲಿಯಿಂದ ಮುಂಬೈಗೆ ವಿಮಾನಗಳ ಸಂಪರ್ಕ ಸೇವೆ ಕಲ್ಪಿಸಲಾಗಿದೆ ಎಂದು ಆಕಾಸಾ ಏರ್ ತಿಳಿಸಿದೆ.

ದೇಶೀಯವಾಗಿ ಮುಂಬೈ, ಅಹಮದಾಬಾದ್, ಬೆಂಗಳೂರು, ಚೆನ್ನೈ, ಕೊಚ್ಚಿ ಹಾಗೂ ಇತರೆ ನಗರಗಳಿಂದ ಆಕಾಸಾ ಏರ್ ಕಾರ್ಯಾಚರಣೆ ನಡೆಸುತ್ತದೆ.

ಮುಂಬೈ ಧಾರಣೆ

ಶೇಂಗಾ

29-3-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	910 (910)
ಪಾಮ್ ವಾರದ ಡೆಲಿವರಿ	945 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹68,000 (67,100)
ಬೆಳ್ಳಿ ಕೆ.ಜಿ ₹74,550 (74,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹245-378
ದ್ವಿತಳಿ (ಬಿ.ವಿ) ₹266-548

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹440
12 ಕ್ಕೆ ₹60
ಮೈಸೂರು
100ಕ್ಕೆ ₹440

ಸುದ್ದಿ 2 ನಿಮಿಷ

ಇಂದು, ನಾಳೆ ಎಲ್‌ಐಸಿ ಕಚೇರಿ ಕಾರ್ಯ ನಿರ್ವಹಣೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಕಚೇರಿಗಳು ಮಾರ್ಚ್ 30 ಮತ್ತು 31ರಂದು ಎಂದಿನಂತೆ ಕಾರ್ಯ ನಿರ್ವಹಿಸಲಿವೆ.

2023-24ನೇ ಹಣಕಾಸು ವರ್ಷವು ಮುಕ್ತಾಯಗೊಳ್ಳುತ್ತಿದೆ. ಹಾಗಾಗಿ, ಆದಾಯ ತೆರಿಗೆ ಉಳಿತಾಯದ ಪ್ರಕ್ರಿಯೆ ಪೂರ್ಣಗೊಳಿಸುವುದಕ್ಕೆ ಸಂಬಂಧಿಸಿದಂತೆ ತೆರಿಗೆದಾರರಿಗೆ ಅನುಕೂಲ ಕಲ್ಪಿಸಲು ಈ ಎರಡೂ ದಿನಗಳಂದು ಕಚೇರಿಗಳು ತೆರೆದಿರುತ್ತವೆ ಎಂದು ಎಲ್‌ಐಸಿ ತಿಳಿಸಿದೆ.

ಶನಿವಾರ ಮತ್ತು ಭಾನುವಾರ ಕೂಡ ಕಾರ್ಯ ನಿರ್ವಹಿಸುವಂತೆ ಎಲ್ಲಾ ಬ್ಯಾಂಕ್‌ಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದೆ. ಅಲ್ಲದೆ, ಸಾಮಾನ್ಯ ದಿನಗಳಲ್ಲಿನ ಕೆಲಸದ ಅವಧಿಯಂತೆ ಕಾರ್ಯ ನಿರ್ವಹಿಸಲು ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಕೂಡ ಆದೇಶಿಸಿದೆ. ಈ ದಿನಗಳಲ್ಲಿ ಪಾಲಿಸಿದಾರರಿಗೆ ಯಾವುದೇ ಸಮಸ್ಯೆಯಾಗದಂತೆ ಕಾರ್ಯ ನಿರ್ವಹಿಸಲಾಗುವುದು ಎಂದು ತಿಳಿಸಿದೆ.

ಬ್ಯಾಂಕ್ ಆಫ್ ಇಂಡಿಯಾಗೆ ₹564 ಕೋಟಿ ದಂಡ

ನವದೆಹಲಿ (ಪಿಟಿಐ): ಆದಾಯ ಘೋಷಣೆ ವೇಳೆ ನಿಯಮಾವಳಿಗಳನ್ನು ಉಲ್ಲಂಘಿಸಿರುವ ಆರೋಪದ ಮೇರೆಗೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾಗೆ, ಆದಾಯ ತೆರಿಗೆ ಇಲಾಖೆಯು ₹564.44 ಕೋಟಿ ದಂಡ ವಿಧಿಸಿದೆ.

2018–19ನೇ ಆರ್ಥಿಕ ವರ್ಷದ ಆದಾಯಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಸಲ್ಲಿಸಿದ್ದ ರಿಟರ್ನ್ಸ್ ಅನ್ನು ತೆರಿಗೆ ಅಧಿಕಾರಿಗಳು ಮೌಲ್ಯಮಾಪನ ಮಾಡಿದ್ದರು. ಈ ವೇಳೆ ರಿಟರ್ನ್ಸ್‌ನಲ್ಲಿ ಘೋಷಿಸಿದ್ದಕ್ಕಿಂತಲೂ ಆದಾಯ ಹೆಚ್ಚಾಗಿದೆ. ಹಾಗಾಗಿ, ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 270ಎ ಅನ್ವಯ ದಂಡ ವಿಧಿಸಲಾಗಿದೆ. ಈ ಕುರಿತು ಷೇರುಪೇಟೆಗೆ ಬ್ಯಾಂಕ್ ಮಾಹಿತಿ ನೀಡಿದೆ.

'ರಾಷ್ಟ್ರೀಯ ಅಮೌಖಿಕ ಮೇಲ್ಮನವಿ ಕೇಂದ್ರದ (ಎನ್‌ಎಫ್‌ಎಸಿ) ಆದಾಯ ತೆರಿಗೆ ಆಯುಕ್ತರಿಗೆ, ಈ ದಂಡದ ಬಗ್ಗೆ ಮೇಲ್ಮನವಿ ಸಲ್ಲಿಸುವ ಪ್ರಕ್ರಿಯೆಯು ನಡೆಯುತ್ತಿದೆ' ಎಂದು ಬ್ಯಾಂಕ್ ತಿಳಿಸಿದೆ.

ತೆರಿಗೆ ಇಲಾಖೆಗೆ ಸಲ್ಲಿಸಿರುವ ಆದಾಯದ ವಿವರ ಕುರಿತಂತೆ ನ್ಯಾಯಯುತವಾಗಿ ಸಾಕ್ಷ್ಯಗಳನ್ನು ಮಂಡಿಸಲಾಗುವುದು. ಹಾಗಾಗಿ, ಮೇಲ್ಮನವಿ ಕೇಂದ್ರವು ದಂಡದ ಮೊತ್ತವನ್ನು ಕಡಿಮೆಗೊಳಿಸುವ ಭರವಸೆಯಿದೆ. ಇಲಾಖೆಯ ಈ ಕ್ರಮವು ಬ್ಯಾಂಕ್‌ನ ಹಣಕಾಸಿನ ಕಾರ್ಯಾಚರಣೆ ಅಥವಾ ಇತರೆ ಚಟುವಟಿಕೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಹೇಳಿದೆ.

ರದ್ದಾದರೂ ಬಾಂಡ್ ಪೂರೈಕೆ

ಒಂದನೇ ಪುಟದಿಂದ...

ಇದರೊಂದಿಗೆ, ಕೇಂದ್ರ ಸರ್ಕಾರ ತಲಾ ಒಂದು ಕೋಟಿ ರೂಪಾಯಿ ಮೌಲ್ಯದ 33 ಸಾವಿರ ಚುನಾವಣಾ ಬಾಂಡ್‌ಗಳನ್ನು ಮುದ್ರಿಸಿದೆ.

ಅಲ್ಲದೆ, 2018ರಲ್ಲಿ ಈ ಯೋಜನೆ ಪ್ರಾರಂಭಗೊಂಡಾಗಿನಿಂದ ಒಟ್ಟು 6.82 ಲಕ್ಷ ಬಾಂಡ್‌ಗಳನ್ನು ಮುದ್ರಿಸಿದೆ ಎಂಬ ಮಾಹಿತಿ ನೀಡಲಾಗಿದೆ. ಫೆಬ್ರುವರಿ 21ರಂದು ಪೂರೈಕೆ ಮಾಡಿರುವ ಬಾಂಡ್‌ಗಳಿಗೆ ಸಂಬಂಧಿಸಿ ₹1.93 ಕೋಟಿ ಜಿಎಸ್‌ಟಿ ವಿಧಿಸಲಾಗಿತ್ತು ಎಂಬ ಮಾಹಿತಿಯನ್ನು ನೀಡಲಾಗಿದೆ. 'ಎಷ್ಟು ಮೌಲ್ಯದ ಚುನಾವಣಾ ಬಾಂಡ್‌ಗಳ ಮುದ್ರಣ ಹಾಗೂ ಪೂರೈಕೆಗೆ ಕೇಂದ್ರ ಸರ್ಕಾರ ಅಥವಾ ಎಸ್‌ಬಿಐನಿಂದ ಬೇಡಿಕೆ ಸಲ್ಲಿಕೆ ಯಾಗಿತ್ತು ಎಂಬ ನನ್ನ ಪ್ರಶ್ನೆಗೆ ಸಂಸ್ಥೆ ಉತ್ತರ ನೀಡಿಲ್ಲ' ಎಂದು ಬತ್ರಾ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಭವಿಷ್ಯ

Astrology

★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಪ್ರವಾಸ

Travel

19.4.2024, 1.5.2024 ಅಯೋಧ್ಯಾ,ಕಾಶಿ,ಗಯಾ, ಪ್ರಯಾಗ್‌ರಾಜ್, 9.5.2024ದೆಹಲಿ,ಹರಿದ್ವಾರ, ಆಗ್ರಾ,ಪ್ರಯಾಗ್‌ರಾಜ್, ಅಯೋಧ್ಯಾ,ಕಾಶಿ, ಗಯಾ9.6.2024 ಯಮುನೋತ್ರಿ,ಗಂಗೋತ್ರಿ,ಕೇದಾರನಾಥ್,ಬದ್ರಿನಾಥ್27.6.2024 ಅಮರನಾಥ್,ಅಮೃತಸರ್, ವೈಷ್ಣೋದೇವಿ,ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಸೌತ್ ಆಫ್ರಿಕಾ 8 ದಿನಗಳು, 8 ದಿನಗಳ ನೇಪಾಳ ಮುಕ್ತಿನಾಥ ಭೂತಾನ್ 8 ದಿನಗಳು, 6 ದಿನಗಳ ಬಾಲಿ, 7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್, 4 ದಿನಗಳ ಲಕ್ಷದೀಪ(ಕ್ರೂಸ), ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ 18 ದಿನಗಳು ಭಟ್ ಟ್ರಾವೆಲ್ಸ್ 9844166555 7975132507

6 ದಿನಗಳ ಬಾಲಿ. 8 ದಿನಗಳ ಮುಕ್ತಿನಾಥ ನೇಪಾಳ ವಿಶೇ ಷ. 6 ದಿನಗಳ ಶ್ರೀಲಂಕಾ. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080793

14 ದಿನಗಳ ಚಾರ್ಧಾಮ್ ಪ್ರವಾಸ 11.05.24. 14ದಿನಗಳ ಅಯೋಧ್ಯೆ,ಕಾಶಿ ನೇಪಾಳ ಪ್ರವಾಸ 21.05.24. 14ದಿನಗಳ ಅಮರನಾಥ ಪ್ರವಾಸ 23.06.24. Twite Holidays. ಸಂಪರ್ಕಿಸಿ: 9611801143, 8088559962.

05.05.2024ರಿಂದ 25ದಿನಗಳ ಚಾರಧಾಮ್ ಸಮೇತ, ವೈಷ್ಣೋದೇವಿ,ಅಮೃತಸರ್, ಕಾಶಿ, ಅಯೋಧ್ಯ, ಹರಿದ್ವಾರ್, ಆಗ್ರಾ ಇತ್ಯಾದಿ. 01.07.2024 ಮತ್ತು 12.07.2024ರಿಂದ 12ದಿನಗಳು ಅಮರನಾಥ್ ಸಮೇತ ಕಾಶ್ಮೀರ್, ಶ್ರೀನಗರ,ಗುಲ್ಮಾರ್ಗ್, ಅವಂತಿಪುರ,ವಾಘಬಾರ್ಡರ್,ಇತ್ಯಾದಿ. ಏಷ್ಯನ್ ಟ್ರಾವೆಲ್ ಲೈನ್ಸ್, ನಂ.20,`ಆರ್.ವಿ.ರಸ್ತೆ, ಬೆಂಗಳೂರು-04. 8105657052, 9480182865.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Flat

Jayanagar

2BHK APT. SALE Jayanagar, Floor 1, behind Lalbagh, lift, Balcony, car park, security, brokers excuse, Buyers only, 65 lakhs, Whatsapp: +91-9284538248

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ವಿದೇಶಿ ರಾಯಭಾರಿ ಆದೇಶದಂತೆ ಇಬ್ರಾಹಿಂ ಆಡಳಿತ: ಮೊಯಿಜು

ಮಾಲೆ (ಪಿಟಿಐ): ಮಾಲ್ದೀವ್ಸ್‌ನ ಮಾಜಿ ಅಧ್ಯಕ್ಷ ಇಬ್ರಾಹಿಂ ಮೊಹಮದ್ ಸೊಲಿಹ್ ಅವರು 'ವಿದೇಶಿ ರಾಯಭಾರಿ' ಆದೇಶದಂತೆ ಕಾರ್ಯನಿರ್ವಹಿಸಿದ್ದರು ಎಂದು ಹಾಲಿ ಅಧ್ಯಕ್ಷ ಮೊಹಮದ್ ಮೊಯಿಜು ಆರೋಪಿಸಿದ್ದಾರೆ. ಆದರೆ ನಿರ್ದಿಷ್ಟವಾಗಿ ಯಾವ ದೇಶದ ರಾಯಭಾರಿ ಎಂಬುದನ್ನು ಅವರು ಉಲ್ಲೇಖಿಸಿಲ್ಲ.

ಮೊಯಿಜು

ಸಾರ್ವಜನಿಕ ಸೇವಾ ಮಾಧ್ಯಮ (ಪಿಎಸ್‌ಎಮ್) ಸಂದರ್ಶದಲ್ಲಿ ಇತ್ತೀಚೆಗೆ ಮಿಲಿಟರಿ ಡ್ರೋನ್‌ಗಳ ಖರೀದಿಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳ ಟೀಕೆಗಳ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮೊಯಿಜು 'ವಿಪಕ್ಷ ಎಂಡಿಪಿ 2018ರಿಂದ 2023ರ ಅವಧಿಯಲ್ಲಿ ಅಧಿಕಾರದಲ್ಲಿದ್ದಾಗ ಸಂಸತ್ತಿನಲ್ಲಿ ಬಹುಮತವನ್ನು ಹೊಂದಿತ್ತು. ಆದರೂ ಮಾಲ್ದೀವ್ಸ್‌ನ ಸ್ವಾತಂತ್ರ್ಯವನ್ನು ರಕ್ಷಿಸಲು ಪಕ್ಷವು ವಿಫಲವಾಗಿದೆ.

ಈ ರೀತಿ ಇಬ್ರಾಹಿಂ ಮೊಹಮದ್ ಸೊಲಿಹ್ ಅವರು ವಿದೇಶಿ ರಾಯಭಾರಿ ಆದೇಶದಂತೆ ಕಾರ್ಯ ನಿರ್ವಹಿಸಿದರು ಮತ್ತು ಇದರಿಂದ ದೇಶದ ವ್ಯಾಪಕ ಹಾನಿ ಆಯಿತು' ಎಂದು ಆರೋಪಿಸಿದ್ದಾರೆ.

ನ್ಯಾಯಯುತ ಚುನಾವಣೆ ನಿರೀಕ್ಷೆ: ವಿಶ್ವಸಂಸ್ಥೆ

ಕೇಜ್ರಿವಾಲ್ ಬಂಧನ, 'ಕೈ' ಪಕ್ಷದ ಖಾತೆ ಜಪ್ತಿ ಹಿನ್ನಲೆ ಭಾರತದ ಸ್ಥಿತಿ ಬಗ್ಗೆ ಪ್ರತಿಕ್ರಿಯೆ

ವಿಶ್ವಸಂಸ್ಥೆ (ಪಿಟಿಐ): 'ಸಾರ್ವತ್ರಿಕ ಚುನಾವಣೆ ನಡೆಯುತ್ತಿರುವ ಭಾರತದಲ್ಲಿ 'ಪ್ರತಿಯೊಬ್ಬರ ಹಕ್ಕುಗಳ' ರಕ್ಷಣೆ ಆಗಲಿದೆ ಹಾಗೂ ಮುಕ್ತ- ನ್ಯಾಯಯುತ ಚುನಾವಣೆ ನಡೆಯಲಿದೆ ಎಂಬ ನಿರೀಕ್ಷೆ ಇದೆ' ಎಂದು ವಿಶ್ವಸಂಸ್ಥೆಯು ಹೇಳಿದೆ.

ಭಾರತದಲ್ಲಿ ಚುನಾವಣೆಗೆ ಮುನ್ನ ರಾಜಕೀಯ ಅನಿಶ್ಚಿತತೆ ತಲೆದೋರಿದೆ ಎಂಬ ಹಿನ್ನೆಲೆಯಲ್ಲಿ ಕೇಳಲಾದ ಪ್ರಶ್ನೆಗೆ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸ್ಟೀಫನ್ ಡುಜಾರಿಕ್ ಗುರುವಾರ ಈ ಪ್ರತಿಕ್ರಿಯೆ ನೀಡಿದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ಹಾಗೂ ಕಾಂಗ್ರೆಸ್ ಪಕ್ಷದ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಗಮನಸೆಳೆಯಲಾಗಿತ್ತು.

'ಚುನಾವಣೆ ನಡೆಯಲಿರುವ ಎಲ್ಲ ದೇಶಗಳಂತೆ ಭಾರತದಲ್ಲಿಯೂ ನಾಗರಿಕರ ಹಕ್ಕುಗಳನ್ನೂ ಒಳಗೊಂಡಂತೆ ಎಲ್ಲರ ಹಕ್ಕುಗಳ ರಕ್ಷಣೆ ಆಗಲಿದೆ ಹಾಗೂ ಪ್ರತಿಯೊಬ್ಬರೂ ಮತಹಕ್ಕು ಚಲಾಯಿಸುವಂತಹ ಮುಕ್ತ- ನ್ಯಾಯಸಮ್ಮತ ವಾತಾವರಣ ನಿರ್ಮಾಣ ಆಗಲಿದೆ ಎಂಬ ವಿಶ್ವಾಸ ನಮ್ಮದಾಗಿದೆ' ಎಂದು ಅವರು ಪ್ರತಿಕ್ರಿಯಿಸಿದರು.

ಕೇಜ್ರಿವಾಲ್ ಅವರ ಬಂಧನ ಹಾಗೂ ಕಾಂಗ್ರೆಸ್ ಪಕ್ಷದ ಬ್ಯಾಂಕ್ ಖಾತೆಗಳ ಜಪ್ತಿ ಕುರಿತಂತೆ ಅಮೆರಿಕವು ತನ್ನ ನಿಲುವು ಪುನರುಚ್ಚರಿಸಿದ ಹಿಂದೆಯೇ ವಿಶ್ವಸಂಸ್ಥೆ ಕೂಡ ಅದೇ ಧಾಟಿಯಲ್ಲಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ.

ಅಮೆರಿಕದ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದ ಭಾರತ ಸರ್ಕಾರ, ಆ ದೇಶದ ರಾಯಭಾರಿಯನ್ನು ಕರೆಸಿ ತನ್ನ ಪ್ರತಿಭಟನೆ ದಾಖಲಿಸಿತ್ತು. ನಂತರವೂ ಅಮೆರಿಕ ಮತ್ತೆ ಗುರುವಾರ ತನ್ನ ಅಭಿಪ್ರಾಯ ಪುನರುಚ್ಚರಿಸಿತ್ತು. ಕೇಜ್ರಿವಾಲ್ ಪ್ರಕರಣದಲ್ಲಿ ಕಾಲಮಿತಿ ವಿಚಾರಣೆ ಹಾಗೂ ನ್ಯಾಯಯುತ ಚುನಾವಣೆ ಬಗ್ಗೆ ನಿಲುವು ಪ್ರತಿಪಾದಿಸಿತ್ತು.

'ಭಾರತವು ತನ್ನ ರಾಯಭಾರಿಯನ್ನು ಕರೆಸಿ ಪ್ರತಿಭಟಿಸಿದೆ ಎಂಬ ವರದಿಗೆ ಪ್ರತಿಕ್ರಿಯಿಸಿ, 'ಖಾಸಗಿ ಚರ್ಚೆ ಕುರಿತು ಪ್ರತಿಕ್ರಿಯಿಸುವುದಿಲ್ಲ. ನ್ಯಾಯಸಮ್ಮತ ಚುನಾವಣೆ ಕುರಿತ ನಿಲುವನ್ನು ಪುನರುಚ್ಚರಿಸುತ್ತೇವೆ. ಬಹುಶಃ ಇದಕ್ಕೆ ಯಾರ ಆಕ್ಷೇಪವೂ ಇರಲಾರದು' ಎಂದು ವಿದೇಶಾಂಗ ಇಲಾಖೆ ವಕ್ತಾರ ಮ್ಯಾಥ್ಯೂ ಮಿಲ್ಲರ್ ಅವರು ಹೇಳಿದ್ದರು.

'ಕೇಜ್ರಿವಾಲ್ ಬಂಧನ ಕುರಿತಂತೆ ಅಮೆರಿಕದ ಹೇಳಿಕೆ ಅನಪೇಕ್ಷಿತ. ದೇಶದ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಗ್ಗೆ ಹೆಮ್ಮೆ ಇದೆ. ಬಾಹ್ಯ ಪ್ರಭಾವಕ್ಕೆ ಒಳಗಾಗದಂತೆ ಮತದಾರರ ಹಕ್ಕುಗಳ ರಕ್ಷಿಸಲಿದೆ' ಎಂದು ಭಾರತ ಪ್ರತಿಕ್ರಿಯಿಸಿತ್ತು.

'ಭಾರತದ ಚುನಾವಣೆ ಮತ್ತು ಕಾನೂನು ಪ್ರಕ್ರಿಯೆ ಕುರಿತಂತೆ ಹೊರಗಿನವರ ಅಭಿಪ್ರಾಯ ಮತ್ತು ಆಪಾದನೆ ಅನಪೇಕ್ಷಿತ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಪ್ರತಿಕ್ರಿಯಿಸಿದ್ದರು.

ಉಕ್ರೇನ್ ಮೇಲೆ 99 ಡ್ರೋನ್, ಕ್ಷಿಪಣಿಗಳಿಂದ ರಷ್ಯಾ ದಾಳಿ

ಕೀವ್ (ಎಪಿ): ಉಕ್ರೇನ್‌ನ ಇಂಧನ ಮೂಲಸೌಕರ್ಯದ ಮೇಲೆ ದೊಡ್ಡ ದಾಳಿ ನಡೆಸಿರುವ ರಷ್ಯಾ, 99 ಡ್ರೋನ್ ಮತ್ತು ಕ್ಷಿಪಣಿಗಳ ಮೂಲಕ ದೇಶದಾದ್ಯಂತ ಹಲವೆಡೆ ಭಾರಿ ದಾಳಿ ನಡೆಸಿದೆ ಎಂದು ಉಕ್ರೇನ್ ಪಡೆಗಳು ತಿಳಿಸಿವೆ.

'ದೇಶದಾದ್ಯಂತ 60 ಶಾಹೆದ್ ಡ್ರೋನ್‌ಗಳು ಮತ್ತು 39 ವಿವಿಧ ಕ್ಷಿಪಣಿಗಳ ದಾಳಿ ನಡೆಸಿದ್ದು, ಇದರಲ್ಲಿ 58 ಡ್ರೋನ್ ಮತ್ತು 26 ಕ್ಷಿಪಣಿಗಳನ್ನು ನಮ್ಮ ವಾಯು ರಕ್ಷಣಾ ಪಡೆ ಹೊಡೆದುರುಳಿಸಿದೆ' ಎಂದು ಉಕ್ರೇನ್‌ನ ವಾಯುಪಡೆ ತಿಳಿಸಿದೆ.

ಕೇಂದ್ರ ಮತ್ತು ಪಶ್ಚಿಮ ಪ್ರದೇಶಗಳಲ್ಲಿನ ಉಷ್ಣ ಮತ್ತು ಜಲವಿದ್ಯುತ್ ಸ್ಥಾವರಗಳನ್ನು ಒಳಗೊಂಡಂತೆ ಇಂಧನ ಮೂಲ ಸೌಕರ್ಯವನ್ನು ಗುರಿಯಾಗಿಸಿಕೊಂಡು ರಷ್ಯಾ ಈ ದಾಳಿ ನಡೆಸಿದೆ ಎಂದು ಉಕ್ರೇನ್‌ನ ಸರ್ಕಾರಿ ಸ್ವಾಮ್ಯದ ಗ್ರಿಡ್ ಆಪರೇಟರ್, ಉಕ್ರೇನರ್ಗೊ ಹೇಳಿದೆ. ಅತಿ ದೊಡ್ಡ ಖಾಸಗಿ ವಿದ್ಯುತ್ ಗ್ರಿಡ್ 'ಡಿಟಿಇಕೆ' ಕೂಡ, ಶುಕ್ರವಾರದ ದಾಳಿಯಲ್ಲಿ ತನ್ನ ಮೂರು ಉಷ್ಣವಿದ್ಯುತ್ ಸ್ಥಾವರಗಳು ಹಾನಿಗೊಳಗಾಗಿವೆ ಎಂದು ತಿಳಿಸಿದೆ.

ಇನ್ನು 5 ವರ್ಷದ ಬಾಲಕಿ ಸೇರಿದಂತೆ ಉಕ್ರೇನ್‌ನ ವಿವಿಧ ಪ್ರದೇಶಗಳಲ್ಲಿ ಐದು ಜನರು ರಷ್ಯಾದ ದಾಳಿಯಲ್ಲಿ ಗಾಯಗೊಂಡಿದ್ದಾರೆ. 10 ವಿವಿಧ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ನಡೆದ ವಾಯುದಾಳಿ ಕುರಿತು ಎಚ್ಚರಿಕೆ ಸಂದೇಶಗಳು ಮುಂದುವರೆದವು ಎಂದು ಉಕ್ರೇನ್‌ನ ಸಚಿವ ಇಹೋರ್ ಕ್ಲಿಮೆನ್ಕೊ ಟೆಲಿಗ್ರಾಮ್‌ನಲ್ಲಿ ತಿಳಿಸಿದ್ದಾರೆ.

8 ಟಿಎಂಸಿ ನಾಯಕರಿಗೆ ಎನ್‌ಐಎ ನೋಟಿಸ್

ಕೋಲ್ಕತ್ತ (ಪಿಟಿಐ): 2022ರಲ್ಲಿ ಪಶ್ಚಿಮ ಬಂಗಾಳದ ಪುರ್ಬಾ ಮೇದಿನಿಪುರ್ ಜಿಲ್ಲೆಯ ಭೂಪತಿನಗರದಲ್ಲಿ ನಡೆದ ಸ್ಫೋಟಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಎಂಟು ನಾಯಕರಿಗೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಮತ್ತೊಮ್ಮೆ ನೋಟಿಸ್ ನೀಡಿದೆ. ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಶುಕ್ರವಾರ ನೋಟಿಸ್ ಜಾರಿ ಮಾಡಲಾಗಿದೆ.

ಕಳೆದ ಬಾರಿ ಮಾ.28ರಂದು ಕೋಲ್ಕತ್ತದ ಎನ್‌ಐಎ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ 8 ನಾಯಕರಿಗೆ ನೋಟಿಸ್ ನೀಡಲಾಗಿತ್ತು. ಆದರೆ, ಎಲ್ಲರೂ ವಿಚಾರಣೆಗೆ ಗೈರುಹಾಜರಾಗಿದ್ದರು. ಅದರ ಬೆನ್ನಲ್ಲೇ ಶನಿವಾರ ಮುಂಜಾನೆ 11 ಗಂಟೆಗೆ ವಿಚಾರಣೆಗೆ ಬರುವಂತೆ ಮತ್ತೊಮ್ಮೆ ನೋಟಿಸ್ ನೀಡಲಾಗಿದೆ.

ಎನ್‌ಐಎ ಕ್ರಮದ ಹಿಂದೆ ಬಿಜೆಪಿಯ ಕೈವಾಡವಿದೆ. ಬಿಜೆಪಿಯು ಪುರ್ಬಾ ಮೇದಿನಿಪುರ್‌ದ ಟಿಎಂಸಿ ನಾಯಕರ ಪಟ್ಟಿಯನ್ನು ಎನ್‌ಐಎಗೆ ನೀಡಿದೆ. ಅಲ್ಲದೇ ಶನಿವಾರ ಟಿಎಂಸಿ ನಾಯಕರ ಮೇಲೆ ದಾಳಿ ಮಾಡಿ ಅವರನ್ನು ಬಂಧಿಸಿ ಎಂದು ಬಿಜೆಪಿ ಸೂಚಿಸಿದೆ ಎಂದು ಟಿಎಂಸಿ ನಾಯಕ ಕುನಾಲ್ ಘೋಷ್ ಆರೋಪಿಸಿದ್ದಾರೆ.

2022ರ ಡಿ.3 ರಂದು ಪುರ್ಬಾ ಮೇದಿನಿಪುರದಲ್ಲಿ ಹುಲ್ಲಿನ ಚಾವಣಿಯಿದ್ದ ಮನೆಯೊಂದು ಸ್ಫೋಟಗೊಂಡು ಮೂವರು ಸಾವನ್ನಪ್ಪಿದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶ: ಯುಪಿಎಸ್‌ಸಿ

ನವದೆಹಲಿ (ಪಿಟಿಐ): ಮಣಿಪುರದ ಗುಡ್ಡಗಾಡು ಜಿಲ್ಲೆಗಳ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರವಾಗಿ ಇಂಫಾಲ್ ಅನ್ನು ಆಯ್ಕೆ ಮಾಡಿಕೊಂಡಿದ್ದರೆ ಪರೀಕ್ಷಾ ಕೇಂದ್ರವನ್ನು ಬದಲಾಯಿಸಿಕೊಳ್ಳಲು ಅವರಿಗೆ ಅವಕಾಶ ನೀಡಲಾಗುವುದು ಮತ್ತು ಅವರ ಪ್ರಯಾಣಕ್ಕೆ ರಾಜ್ಯ ಸರ್ಕಾರವು ಸೌಲಭ್ಯ ಕಲ್ಪಿಸಲಿದೆ ಎಂದು ದೆಹಲಿ ಹೈಕೋರ್ಟ್‌ಗೆ ಕೇಂದ್ರೀಯ ಲೋಕಸೇವಾ ಆಯೋಗ (ಯುಪಿಎಸ್‌ಸಿ) ತಿಳಿಸಿತು.

ಅಭ್ಯರ್ಥಿಗಳು ಆಯಿಜೋಲ್, ಮಿಜೋರಂ, ಕೋಹಿಮಾ, ನಾಗಾಲ್ಯಾಂಡ್, ಶಿಲ್ಲಾಂಗ್, ಮೇಘಾಲಯ, ದಿಸ್ಪುರ್, ಅಸ್ಸಾಂ, ಕೋಲ್ಕತ್ತ, ಪಶ್ಚಿಮ ಬಂಗಾಳ, ದೆಹಲಿ ಇವುಗಳಲ್ಲಿ ಯಾವುದನ್ನಾದರೂ ಪರೀಕ್ಷಾ ಕೇಂದ್ರವಾಗಿ ಆಯ್ಕೆ ಮಾಡಿಕೊಳ್ಳಬಹುದು. ಏಪ್ರಿಲ್ 8ರಿಂದ 19ರ ಒಳಗಾಗಿ ಇ–ಮೇಲ್ ಮೂಲಕ ಮನವಿ ಸಲ್ಲಿಸಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದೆ.

ಚುರಾಚಂದಪುರ ಮತ್ತು ಕಾಂಗ್ಪೋಕ್ಪಿಯಲ್ಲಿ ಪರೀಕ್ಷಾ ಕೇಂದ್ರ ತೆರೆಯುವಂತೆ ಝೋಮಿ ವಿದ್ಯಾರ್ಥಿ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಆಯೋಗವು ಈ ಹೇಳಿಕೆ ನೀಡಿತು. ಈ ಎರಡು ಕಡೆಗಳಲ್ಲಿ ಪರೀಕ್ಷಾ ಕೇಂದ್ರ ತೆರೆಯಲು ಸಾಧ್ಯವಿಲ್ಲ ಎಂದು ಸರ್ಕಾರ ತಿಳಿಸಿದೆ ಎಂದೂ ಕೋರ್ಟ್‌ಗೆ ತಿಳಿಸಿತು.

ಗ್ರೀಕ್: 5.7 ತೀವ್ರತೆ ಭೂಕಂಪ

ಅಥೆನ್ಸ್ (ಎಪಿ): ಶುಕ್ರವಾರ ಮುಂಜಾನೆ ಗ್ರೀಕ್‌ನಲ್ಲಿ 5.7 ಪ್ರಾಥಮಿಕ ತೀವ್ರತೆಯ ಭೂಕಂಪ ಸಂಭವಿಸಿದೆ. ಭೂಕಂಪದಿಂದ ಯಾವುದೇ ಸಾವು, ಹಾನಿ ಅಥವಾ ಗಾಯಾಳುಗಳ ಬಗ್ಗೆ ತಕ್ಷಣಕ್ಕೆ ಯಾವುದೇ ವರದಿಗಳಾಗಿಲ್ಲ. ಪಶ್ಚಿಮ ಪೆಲೊಪೊನೀಸ್ ಕರಾವಳಿಯ ದಕ್ಷಿಣ ಗ್ರೀಕ್‌ನಲ್ಲಿ ಭೂಕಂಪ ಸಂಭವಿಸಿದೆ ಎನ್ನಲಾಗಿದೆ. ಗ್ರೀಕ್ ರಾಜಧಾನಿ ಅಥೆನ್ಸ್‌ನಿಂದ ದಕ್ಷಿಣದ ಕ್ರೀಟ್ ದ್ವೀಪದವರೆಗೂ ಭೂಕಂಪ ಸಂಭವಿಸಿದೆ.

ಪಶ್ಚಿಮದ ನಗರವಾದ ಪತ್ರಾಸ್‌ನ ದಕ್ಷಿಣ ನೈಋತ್ಯಕ್ಕೆ ಸುಮಾರು 120 ಕಿ.ಮೀ. ದೂರದಲ್ಲಿರುವ ಸ್ಟ್ರೊಫೇಡ್ಸ್ ದ್ವೀಪದ ಬಳಿ ಸಮುದ್ರದ ತಳಭಾಗದಲ್ಲಿ ಭೂಕಂಪ ಕೇಂದ್ರೀಕೃತವಾಗಿತ್ತು ಎಂದು ಅಥೆನ್ಸ್‌ನ ಜಿಯೊಡೈನಾಮಿಕ್ ಇನ್‌ಸ್ಟಿಟ್ಯೂಟ್ ತಿಳಿಸಿದೆ.

ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ

ಪ್ರಜಾವಾಣಿ
ಸ್ಪರ್ಧಾವಾಣಿ MASTERMIND
ಈ ಸಂಚಿಕೆಯಲ್ಲಿ 150 ಕ್ಕೂ ಹೆಚ್ಚು ಬಹು ಆಯ್ಕೆಯ ಪ್ರಶ್ನೆಗಳು, QR ಕೋಡ್ ಆಧಾರಿತ 100 ಪ್ರಶ್ನೆಗಳ ಮಾದರಿ ಪರೀಕ್ಷೆ ಹಾಗೂ ವಿಡಿಯೋ ಪಾಠಗಳು

ಸಾಲ್ಟ್– ಸುನಿಲ್ 'ಪವರ್ ಪ್ಲೇ' • ವಿರಾಟ್ ಅಜೇಯ ಆಟ • ಆರ್‌ಸಿಬಿ ಕಳಪೆ ಬೌಲಿಂಗ್

ಅಯ್ಯರ್ ಬಳಗದ ಜಯಭೇರಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಆರಂಭಿಕ ಜೋಡಿ ಫಿಲ್ ಸಾಲ್ಟ್ ಮತ್ತು ಸುನಿಲ್ ನಾರಾಯಣ್ ಅವರ 'ಪವರ್ ಪ್ಲೇ' ಮುಂದೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಭಿಮಾನಿಗಳ ಉತ್ಸಾಹ ಕಮರಿತು. ಆತಿಥೇಯ ಬೌಲರ್‌ಗಳ ದೌರ್ಬಲ್ಯ ಮತ್ತೊಮ್ಮೆ ಬಹಿರಂಗವಾಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ 183 ರನ್‌ಗಳ ಗುರಿ ಬೆನ್ನಟ್ಟಿದ್ದ ಕೋಲ್ಕತ್ತ ತಂಡವು 7 ವಿಕೆಟ್‌ಗಳಿಂದ ಗೆಲ್ಲಲು ಸಾಲ್ಟ್ (30; 20ಎ) ಮತ್ತು ಸುನಿಲ್ (47; 22ಎ) ಹಾಕಿದ ಅಡಿಪಾಯವೇ ಕಾರಣವಾಯಿತು. ಇಬ್ಬರೂ ಸೇರಿ ಮೊದಲ ಆರು ಓವರ್‌ಗಳಲ್ಲಿ 85 ರನ್ ಸೂರೆ ಮಾಡಿದರು. ಈ ಅಡಿಪಾಯದ ಮೇಲೆ ವೆಂಕಟೇಶ್ ಅಯ್ಯರ್ (50; 30ಎ) ಹಾಗೂ ನಾಯಕ ಶ್ರೇಯಸ್ ಅಯ್ಯರ್ (39; 24ಎ) ಜಯದ ಗೋಪುರ ಕಟ್ಟಿದರು. ಬೆಂಗಳೂರು ತಂಡದ ವೇಗಿ ಮೊಹಮ್ಮದ್ ಸಿರಾಜ್ 3 ಓವರ್‌ಗಳಲ್ಲಿ 46 ರನ್ ಬಿಟ್ಟುಕೊಟ್ಟರೆ, ಯಶ್ ದಯಾಳ್ ನಾಲ್ಕು ಓವರ್‌ಗಳಲ್ಲಿ ಸಿರಾಜ್ ಕೊಟ್ಟಷ್ಟೇ ರನ್ ಕೊಟ್ಟರು. ಕ್ರೀಡಾಂಗಣದಲ್ಲಿ ಸೇರಿದ್ದ 32 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ತಮ್ಮ ನೆಚ್ಚಿನ ವಿರಾಟ್ ಕೊಹ್ಲಿಯ (83; 49ಎ, 4X4, 6X4) ಅಜೇಯ ಆಟದ ನೆನಪಿನೊಂದಿಗೆ ನಿರ್ಗಮಿಸಿದರು.

ಕೋಲ್ಕತ್ತ ಬ್ಯಾಟರ್‌ಗಳಿಗೆ ಕಡಿವಾಣ ಹಾಕಲು ಸ್ಪಿನ್ನರ್ ಮಯಂಕ್ ದಾಗರ್ (23ಕ್ಕೆ1) ಹಾಗೂ ಇಂಪ್ಯಾಕ್ಟ್ ಪ್ಲೇಯರ್, ಸ್ಥಳೀಯ ಹುಡುಗ ವೈಶಾಖ ವಿಜಯಕುಮಾರ್ (23ಕ್ಕೆ1) ಪ್ರಯತ್ನಿಸಿದರು. ಆದರೆ ವೈಶಾಖ ಹಾಕಿದ 10ನೇ ಓವರ್‌ನಲ್ಲಿ ಶ್ರೇಯಸ್ ಅವರ ಕ್ಯಾಚ್ ದಯಾಳ್ ಕೈಚೆಲ್ಲಿದ್ದು ಆರ್‌ಸಿಬಿಗೆ ಮತ್ತಷ್ಟು ದುಬಾರಿಯಾಯಿತು.

ಕೆಕೆಆರ್‌ನ ಸುನಿಲ್ ನಾರಾಯಣ್
ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ

ಉದ್ಯಾನನಗರಿಯ ಕ್ರಿಕೆಟ್ ಪ್ರೇಮಿಗಳು ಕೊಹ್ಲಿಯ ಬ್ಯಾಟಿಂಗ್ ಮತ್ತು ಆರ್‌ಸಿಬಿಯ ಗೆಲುವು ಮನದುಂಬಿಕೊಳ್ಳುವ ಆಸೆಗಳೊಂದಿಗೆ ಕ್ರೀಡಾಂಗಣಕ್ಕೆ ಲಗ್ಗೆ ಇಟ್ಟಿದ್ದರು. ವಿರಾಟ್ ಅವರನ್ನು ನಿರಾಶೆಗೊಳಿಸಲಿಲ್ಲ. ಇನಿಂಗ್ಸ್‌ನ ಮೊದಲ ಎಸೆತದಿಂದ ಕೊನೆಯವರೆಗೂ ಕ್ರೀಸ್‌ನಲ್ಲಿದ್ದು ರಂಜಿಸಿದರು. ಟಾಸ್ ಗೆದ್ದ ಕೋಲ್ಕತ್ತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಿಚೆಲ್ ಸ್ಟಾರ್ಕ್ ಹಾಕಿದ ಮೊದಲ ಎಸೆತವನ್ನೇ ಶಾರ್ಟ್ ಥರ್ಡ್‌ಮ್ಯಾನ್ ಬೌಂಡರಿಗೆ ಕಳಿಸುವುದರೊಂದಿಗೆ ಕೊಹ್ಲಿ ಆಟ ಅರಳಿತು. ಐಪಿಎಲ್‌ನಲ್ಲಿ 52ನೇ ಹಾಗೂ ಪ್ರಸಕ್ತ ಟೂರ್ನಿಯ ಎರಡನೇ ಅರ್ಧಶತಕ ಗಳಿಸಿದರು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಹರ್ಷಿತ್ ರಾಣಾ ಅವರ ಎಸೆತವನ್ನು ಸ್ಕೂಪ್ ಮಾಡಿ ಸಿಕ್ಸರ್‌ಗೆ ಎತ್ತಿದ ಫಫ್ ಡುಪ್ಲೆಸಿ ನಂತರದ ಎಸೆತದಲ್ಲಿ ಮತ್ತೊಮ್ಮೆ ಸ್ಕೂಪ್ ಪ್ರಯೋಗಿಸಿ ಫೀಲ್ಡರ್ ಸ್ಟಾರ್ಕ್‌ಗೆ ಸುಲಭದ ಕ್ಯಾಚ್ ಆದರು. ಕ್ರಮಾಂಕದಲ್ಲಿ ಬಡ್ತಿ ಪಡೆದು ಕ್ರೀಸ್‌ಗೆ ಬಂದ ಕ್ಯಾಮರಾನ್ ಗ್ರೀನ್ ಅವರು ಕೊಹ್ಲಿ ಜೊತೆಗೂಡಿ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಇಬ್ಬರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ 42 ಎಸೆತಗಳಲ್ಲಿ 65 ರನ್ ಸೇರಿಸಿದರು.

ಆದರೆ 9ನೇ ಓವರ್‌ನಲ್ಲಿ ರಸೆಲ್ ಎಸೆತವನ್ನು ಬ್ಯಾಕ್‌ವರ್ಡ್ ಸ್ಕ್ವೇರ್ ಲೆಗ್‌ಗೆ ಸಿಕ್ಸರ್ ಎತ್ತಿದ ಗ್ರೀನ್, ನಂತರದ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಬಲಿಷ್ಠ ಬ್ಯಾಟಿಂಗ್ ಪಡೆ ಇರುವ ಕೋಲ್ಕತ್ತ ತಂಡಕ್ಕೆ ದೊಡ್ಡ ಗುರಿ ನೀಡುವುದೇ ಆರ್‌ಸಿಬಿ ತಂತ್ರವಾಗಿತ್ತು. ಅದಕ್ಕೆ ತಕ್ಕಂತೆ ತಂಡವು ಪವರ್‌ಪ್ಲೇನಲ್ಲಿ 61 ರನ್ ಸೇರಿಸಿತು.

ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಆಟದ ವೈಖರಿ
–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ನಂತರವೂ ಕೊಹ್ಲಿ ಹಾಗೂ ಗ್ರಿನ್ ಆಟದಿಂದಾಗಿ ದೊಡ್ಡ ಮೊತ್ತದ ಭರವಸೆ ಇತ್ತು. ಗ್ರೀನ್ ಔಟಾದ ನಂತರ ವೇಗ ತಗ್ಗಿತು.

ಆಗ ಕ್ರೀಸ್‌ಗೆ ಬಂದ ಮ್ಯಾಕ್ಸ್‌ವೆಲ್ ಜೊತೆಗೆ ವಿರಾಟ್ ರನ್ ವೇಗ ಹೆಚ್ಚಿಸಲು ಪ್ರಯತ್ನಿಸಿದರು. ವಿರಾಟ್ ತಾವೆದುರಿಸಿದ 35ನೇ ಎಸೆತದಲ್ಲಿ ಒಂದು ಸಿಕ್ಸರ್ ಮತ್ತು ನಂತರದ ಎಸೆತದಲ್ಲಿ ಒಂದು ರನ್ ಗಳಿಸಿ ಅರ್ಧಶತಕ ಪೂರೈಸಿದರು. ಮ್ಯಾಕ್ಸ್‌ವೆಲ್ ಅವರಿಗೆ ಕೋಲ್ಕತ್ತ ಫೀಲ್ಡರ್‌ಗಳಾದ ರಮಣದೀಪ್ ಮತ್ತು ಸುನಿಲ್ ಅವರು ಜೀವದಾನ ನೀಡಿದರು. ಆದರೂ ದೊಡ್ಡ ಇನಿಂಗ್ಸ್ ಆಡುವ ಮ್ಯಾಕ್ಸ್ (28 ರನ್) ಪ್ರಯತ್ನ ಕೈಗೂಡಲಿಲ್ಲ. ರಜತ್ ಪಾಟೀದಾರ್ (3) ಹಾಗೂ ಅನುಜ್ ರಾವತ್ ಕೂಡ ವಿಫಲರಾದರು.

ಆದರೆ ಕೊನೆಯಲ್ಲಿ ದಿನೇಶ್ ಕಾರ್ತಿಕ್ ಎಂಟು ಎಸೆತಗಳಲ್ಲಿ 20 ರನ್ ಗಳಿಸಿದರು. ಅದರಲ್ಲಿ ಮೂರು ಸಿಕ್ಸರ್ ಸೇರಿದ್ದವು.

ಕೆಕೆಆರ್ ಜಯದ ಓಟ: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ತಂಡವು 2016ರಿಂದ ಇಲ್ಲಿಯವರೆಗೆ ಕೋಲ್ಕತ್ತ ವಿರುದ್ಧ ಜಯಿಸಿಲ್ಲ. 2016, 2017, 2018, 2019, 2023 ಹಾಗೂ ಈ ಬಾರಿ ಕೋಲ್ಕತ್ತ ಜಯಿಸಿದೆ.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 6ಕ್ಕೆ182 (20 ಓವರುಗಳಲ್ಲಿ)
ವಿರಾಟ್ ಕೊಹ್ಲಿ ಔಟಾಗದೇ 83 (59ಎ, 4x4, 6x4)
ಫಫ್ ಡುಪ್ಲೆಸಿ ಸಿ ಸ್ಟಾರ್ಕ್ ಬಿ ಹರ್ಷಿತ್ 8 (6ಎ, 6x1)
ಗ್ರೀನ್ ಬಿ ರಸೆಲ್ 33 (21ಎ, 4x4, 6x2)
ಮ್ಯಾಕ್ಸ್‌ವೆಲ್ ಸಿ ಸಿಂಗ್ ಬಿ ನಾರಾಯಣ್ 28 (19ಎ, 4x3, 6x1)
ಪಾಟೀದಾರ್ ಸಿ ಸಿಂಗ್ ಬಿ ರಸೆಲ್ 3 (4ಎ)
ಅನುಜ್ ರಾವತ್ ಸಿ ಸಾಲ್ಟ್ ಬಿ ಹರ್ಷಿತ್ 3 (3ಎ)
ಕಾರ್ತಿಕ್ ರನೌಟ್ (ಸಾಲ್ಟ್) 20 (8ಎ, 6x3)
ಇತರೆ: 4 (ಬೈ 1, ವೈಡ್ 3)
ವಿಕೆಟ್ ಪತನ: 1–17 (ಫಫ್ ಡುಪ್ಲೆಸಿ, 1.6), 2–82 (ಕ್ಯಾಮರಾನ್ ಗ್ರೀನ್, 8.6), 3–124 (ಗ್ಲೆನ್ ಮ್ಯಾಕ್ಸ್‌ವೆಲ್, 14.1), 4–144 (ರಜತ್ ಪಾಟೀದಾರ್, 16.3), 5–151 (ಅನುಜ್ ರಾವತ್, 17.3), 6–182 (ದಿನೇಶ್ ಕಾರ್ತಿಕ್, 19.6).
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4–0–47–0, ಹರ್ಷಿತ್ ರಾಣಾ 4–0–39–2, ಅನುಕೂಲ್ ರಾಯ್ 2–0–6–0; ಸುನಿಲ್ ನಾರಾಯಣ್ 4–0–40–0, ಆಂಡ್ರೆ ರಸೆಲ್ 4–0–29–2; ವರುಣ್ ಚಕ್ರವರ್ತಿ 2–0–20–0.

ಕೋಲ್ಕತ್ತ ನೈಟ್ ರೈಡರ್ಸ್ 16.5 ಓವರ್‌ಗಳಲ್ಲಿ 3ಕ್ಕೆ 186
ಸಾಲ್ಟ್ ಸಿ ಗ್ರೀನ್ ಬಿ ವೈಶಾಖ 30 (20ಎ, 4x2, 6x2)
ಸುನಿಲ್ ಬಿ ಡಾಗರ್ 47 (22ಎ, 4x2, 6x5)
ವೆಂಕಟೇಶ್ ಸಿ ಕೊಹ್ಲಿ ಬಿ ಯಶ್ 50 (30ಎ, 4x3, 6x4)
ಶ್ರೇಯಸ್ ಅಯ್ಯರ್ ಔಟಾಗದೆ 39 (24ಎ, 4x2, 6x2)
ರಿಂಕು ಸಿಂಗ್ ಔಟಾಗದೆ 5 (5ಎ)
ಇತರೆ: 15 (ಲೆಗ್‌ಬೈ 7, ವೈಡ್ 8)
ವಿಕೆಟ್ ಪತನ: ವಿಕೆಟ್ ಪತನ: **1-86 (ಸುನಿಲ್; 6.3), 2-92 (ಫಿಲ್ ಸಾಲ್ಟ್; 7.5), 3-167 (ವೆಂಕಟೇಶ್ ಅಯ್ಯರ್; 15.1)**
ಬೌಲಿಂಗ್: ಮೊಹಮ್ಮದ್ ಸಿರಾಜ್ 3–0–46–0, ಯಶ್ ದಯಾಳ್ 4–0–46–1, ಅಲ್ಜಾರಿ ಜೋಸೆಫ್ 2–0–34–0, ಮಯಂಕ್ ದಾಗರ್ 2.5–0–23–1, ವೈಶಾಖ ವಿಜಯಕುಮಾರ್ 4–0–23–1, ಕ್ಯಾಮರಾನ್ ಗ್ರೀನ್ 1–0–7–0
ಪಂದ್ಯದ ಆಟಗಾರ: ಸುನಿಲ್ ನಾರಾಯಣ್

ಫಲಿತಾಂಶ: ಕೆಕೆಆರ್‌ಗೆ 7 ವಿಕೆಟ್ ಜಯ

ಗೇಲ್ ದಾಖಲೆ ಮುರಿದ ಕೊಹ್ಲಿ

ಆರ್‌ಸಿಬಿ ತಂಡದ ಪರವಾಗಿ ಅತಿ ಹೆಚ್ಚು ಸಿಕ್ಸರ್ ಗಳಿಸಿದ ಬ್ಯಾಟರ್ ಎಂಬ ಹೆಗ್ಗಳಿಕೆಯನ್ನು ವಿರಾಟ್ ತಮ್ಮದಾಗಿಸಿಕೊಂಡರು. ಅವರು ಒಟ್ಟು 241 ಸಿಕ್ಸರ್ ದಾಖಲಿಸಿದರು. ಇದರೊಂದಿಗೆ ಅವರು ಕ್ರಿಸ್ ಗೇಲ್ (239) ಹಾಗೂ ಎಬಿ ಡಿವಿಲಿಯರ್ಸ್ (238) ಅವರನ್ನು ಹಿಂದಿಕ್ಕಿದರು.

ಸುನಿಲ್ 500ನೇ ಪಂದ್ಯ: ಟಿ20 ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್ ಆಲ್‌ರೌಂಡರ್ ಸುನಿಲ್ ನಾರಾಯಣ್ ಅವರು 500 ಪಂದ್ಯಗಳನ್ನಾಡಿದ ಸಾಧನೆ ಮಾಡಿದರು. ಅಂತರರಾಷ್ಟ್ರೀಯ, ದೇಶಿ ಮತ್ತು ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ಅವರು ಆಡಿದ್ದಾರೆ. ಅವರದ್ದೇ ದೇಶದ ಕೀರನ್ ಪೊಲಾರ್ಡ್ (660) ಮೊದಲ ಸ್ಥಾನದಲ್ಲಿದ್ದಾರೆ.

ಗೌತಿ–ವಿರಾಟ್ ಭೇಟಿ: ಇನಿಂಗ್ಸ್‌ನ ಎರಡನೇ ಸ್ಟ್ರ್ಯಾಟಜಿಕ್ ಟೈಮ್‌ಔಟ್ ಸಂದರ್ಭದಲ್ಲಿ ಮೈದಾನದೊಳಕ್ಕೆ ಬಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮೆಂಟರ್ ಗೌತಮ್ ಗಂಭೀರ್ ಅವರೊಂದಿಗೆ ವಿರಾಟ್ ಕೊಹ್ಲಿ ಮಾತನಾಡಿದರು. ಇಬ್ಬರು ಪರಸ್ಪರ ಆಲಂಗಿಸಿಕೊಂಡು ನಗುನಗುತ್ತ ಮಾತುಕತೆ ನಡೆಸಿದರು.

ಹೋದ ಬಾರಿಯ ಐಪಿಎಲ್‌ನಲ್ಲಿ ಅವರಿಬ್ಬರ ನಡುವೆ ಪಂದ್ಯವೊಂದರಲ್ಲಿ ಮಾತಿನ ಚಕಮಕಿಯಾಗಿದ್ದು ಸುದ್ದಿಯಾಗಿತ್ತು.

ಮಿಚೆಲ್ ಸ್ಟಾರ್ಕ್ ದುಬಾರಿ: ಕೆಕೆಆರ್ ತಂಡದ ಮಿಚೆಲ್ ಸ್ಟಾರ್ಕ್ ಮತ್ತೊಮ್ಮೆ ದುಬಾರಿಯಾದರು. ಈ ಬಾರಿಯ ಬಿಡ್‌ನಲ್ಲಿ ₹24.75 ಕೋಟಿ ಮೌಲ್ಯ ಪಡೆದಿದ್ದರು. ಆದರೆ, ಆಡಿದ ಎರಡೂ ಪಂದ್ಯಗಳಲ್ಲಿ 8 ಓವರ್ ಹಾಕಿ 100 ರನ್ ಬಿಟ್ಟುಕೊಟ್ಟಿದ್ದಾರೆ.

ಈ ಪಂದ್ಯದಲ್ಲಿ ತಮ್ಮ ಎರಡನೇ ಓವರ್‌ನಲ್ಲಿ 17 ರನ್ ಕೊಟ್ಟರು. ಒಟ್ಟು 4 ಓವರ್‌ಗಳಲ್ಲಿ 47 ರನ್ ಬಿಟ್ಟುಕೊಟ್ಟರು. ವಿಕೆಟ್ ಗಳಿಸಲಿಲ್ಲ.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಚೆನ್ನೈ ಸೂಪರ್ ಕಿಂಗ್ಸ್	2	2	0	4	1.979
ಕೋಲ್ಕತ್ತ ನೈಟ್ ರೈಡರ್ಸ್	2	2	0	2	1.047
ರಾಜಸ್ಥಾನ ರಾಯಲ್ಸ್	2	2	0	4	0.800
ಸನ್‌ರೈಸರ್ಸ್ ಹೈದರಾಬಾದ್	2	1	1	2	0.675
ಪಂಜಾಬ್ ಕಿಂಗ್ಸ್	2	1	1	2	0.025
ರಾಯಲ್ ಚಾಲೆಂಜರ್ಸ್ ಬೆಂಗಳೂರು	3	1	2	2	-0.711
ಗುಜರಾತ್ ಟೈಟನ್ಸ್	2	1	1	2	-1.425
ಡೆಲ್ಲಿ ಕ್ಯಾಪಿಟಲ್ಸ್	2	0	2	0	-0.528
ಮುಂಬೈ ಇಂಡಿಯನ್ಸ್	2	0	2	0	-0.925
ಲಖನೌ ಸೂಪರ್ ಜೈಂಟ್ಸ್	1	0	1	0	-1.000

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (181ರನ್)
ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಸಿಎಸ್‌ಕೆ (6 ವಿಕೆಟ್)

ಲಖನೌ ಸೂಪರ್ ಜೈಂಟ್ಸ್ –ಪಂಜಾಬ್ ಕಿಂಗ್ಸ್ ಹಣಾಹಣಿ ಇಂದು

ರಾಹುಲ್ ಪಡೆಗೆ ಮೊದಲ ಜಯದ ಛಲ

ಲಖನೌ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್‌ಜೈಂಟ್ಸ್ ತಂಡವು ಐಪಿಎಲ್ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯುವ ಕನಸು ಕಾಣುತ್ತಿದೆ.

ಶನಿವಾರ ಏಕನಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಜಯಿಸುವ ವಿಶ್ವಾಸದಲ್ಲಿದೆ. ರಾಹುಲ್ ಬಳಗವು ತನ್ನ ಮೊದಲ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಸೋತಿತ್ತು. ಆ ಪಂದ್ಯದಲ್ಲಿ ಕೃಣಾಲ್ ಪಾಂಡ್ಯ ಒಬ್ಬರನ್ನು ಬಿಟ್ಟು ಉಳಿದೆಲ್ಲ ಬೌಲರ್‌ಗಳೂ ಹೆಚ್ಚು ರನ್ ಕೊಟ್ಟಿದ್ದರು. ಕೃಣಾಲ್ ವಿಕೆಟ್ ಗಳಿಸಿರಲಿಲ್ಲ. ಆದರೆ ನಾಲ್ಕು ಓವರ್‌ಗಳಲ್ಲಿ 19 ರನ್ ಮಾತ್ರ ನೀಡಿದ್ದರು.

ಮಾರ್ಕ್ ವುಡ್ ಅನುಪಸ್ಥಿತಿಯಲ್ಲಿ ಡೇವಿಡ್ ವಿಲಿ, ಮೊಹಸೀನ್ ಖಾನ್, ನವೀನ್ ಉಲ್ ಹಕ್ ಮತ್ತು ಯಶ್ ಠಾಕೂರ್ ಅವರು ಇರುವ ವೇಗದ ಬೌಲಿಂಗ್ ವಿಭಾಗ ಉತ್ತಮವಾಗಿದೆ. ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅವಕಾಶ ಗಿಟ್ಟಿಸುವ ನಿರೀಕ್ಷೆಯಲ್ಲಿರುವ ರವಿ ಬಿಷ್ಣೋಯಿ ಕೂಡ ಮೊದಲ ಪಂದ್ಯದಲ್ಲಿ ಪರಿಣಾಮಕಾರಿಯಾಗಿರಲಿಲ್ಲ. ವಿಕೆಟ್‌ಕೀಪಿಂಗ್ ಹಾಗೂ ಬ್ಯಾಟಿಂಗ್ ಹೊಣೆ ನಿಭಾಯಿಸುತ್ತಿರುವ ನಾಯಕ ರಾಹುಲ್, ರಾಯಲ್ಸ್ ಎದುರು ಅರ್ಧಶತಕ ಗಳಿಸಿದ್ದರು.

ತಂಡದಲ್ಲಿರುವ ಬೆಂಗಳೂರಿನ ಬ್ಯಾಟರ್ ದೇವದತ್ತ ಪಡಿಕ್ಕಲ್, ದೆಹಲಿಯ ಆಯುಷ್ ಬಡೋನಿ, ದೀಪಕ್ ಹೂಡಾ ಅವರು ಬ್ಯಾಟಿಂಗ್ ವಿಭಾಗದ ಭರವಸೆಯಾಗಿದ್ದಾರೆ. ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಹೋದ ವರ್ಷ ಲಖನೌ ತಂಡದ ಪರ ಹೆಚ್ಚು ರನ್ (408) ಗಳಿಸಿದ್ದ ಆಟಗಾರನಾಗಿದ್ದರು. ಅವರು ಲಯಕ್ಕೆ ಮರಳಿದರೆ ತಂಡದ ಬಲ ಹೆಚ್ಚಲಿದೆ. ಶಿಖರ್ ಧವನ್ ನಾಯಕತ್ವದ ಪಂಜಾಬ್ ತಂಡವು ಟೂರ್ನಿಯಲ್ಲಿ ಎರಡು ಪಂದ್ಯಗಳಲ್ಲಿ ಆಡಿದೆ. ಒಂದು ಗೆದ್ದು, ಇನ್ನೊಂದರಲ್ಲಿ ಸೋತಿದೆ. ತಂಡವು ಪವರ್‌ಪ್ಲೇ ಅವಧಿಯಲ್ಲಿ ಎಡವುತ್ತಿದೆ. ಜಾನಿ ಬೆಸ್ಟೊ ವೈಫಲ್ಯ ಮುಂದುವರಿದಿದೆ. ಐಪಿಎಲ್ ಮಾತ್ರ ಆಡುವ ಧವನ್, ಪ್ರಭಸಿಮ್ರನ್ ಸಿಂಗ್, ಆಲ್‌ರೌಂಡರ್ ಸ್ಯಾಮ್ ಕರನ್, ಉಪನಾಯಕ ಜಿತೇಶ್ ಶರ್ಮಾ ಅವರ ಮೇಲೆ ಬ್ಯಾಟಿಂಗ್ ವಿಭಾಗದ ಜವಾಬ್ದಾರಿ ಇದೆ. ಕಗಿಸೊ ರಬಾಡ, ಅರ್ಷದೀಪ್ ಸಿಂಗ್, ಹರಪ್ರೀತ್ ಬ್ರಾರ್, ರಾಹುಲ್ ಚಾಹರ್ ಹಾಗೂ ಹರ್ಷಲ್ ಪಟೇಲ್ ಇರುವ ಬೌಲಿಂಗ್ ಪಡೆ ಉತ್ತಮವಾಗಿದೆ. ಆದರೆ ಫೀಲ್ಡಿಂಗ್ ಚುರುಕಾಗಬೇಕಿದೆ.

ಪಂಜಾಬ್ ಕಿಂಗ್ಸ್ ತಂಡದ ನಾಯಕ ಶಿಖರ್

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್. ರಾಹುಲ್
–ಪಿಟಿಐ ಚಿತ್ರಗಳು

ಎಸ್‌ಆರ್ ಸಮೂಹ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ಕ್ರಾಂತಿ

• ಸುಕುಮಾರ್ ಮುನಿಯಾಲ್

ಹೆಬ್ರಿಯ ಎಸ್. ಆರ್. ಶಿಕ್ಷಣ ಸಂಸ್ಥೆ ರಾಜ್ಯದ ಪ್ರತಿಷ್ಠಿತ ಸಂಸ್ಥೆಯಾಗಿ ರಜತ ಸಂಭ್ರಮದಲ್ಲಿದೆ. ಕೇವಲ 4 ಜನ ವಿದ್ಯಾರ್ಥಿಗಳಿಂದ ಆರಂಭಗೊಂಡ ಸಂಸ್ಥೆಯಲ್ಲಿ ಈಗ 2500 ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿದೀಪವಾಗಿ ಶೈಕ್ಷಣಿಕ ಕ್ರಾಂತಿ ಮಾಡುತ್ತಿರುವ ರಾಜ್ಯದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಹೆಬ್ರಿಯ ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆ ಕೂಡ ಒಂದಾಗಿದೆ. ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ಕಿನ್ನಿಗುಡ್ಡೆಯಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಸಂಸ್ಥೆ ಇದೆ. ಸಂಸ್ಥೆಯ ಲ್ಲಿ ಎಲ್‌ಕೆಜಿಯಿಂದ ಪಿಯುಸಿ ತನಕ ಶಿಕ್ಷಣ ಪಡೆಯುತ್ತಿದ್ದಾರೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಸಾಧನೆ ಮಾಡಿ ವಿದ್ಯಾರ್ಥಿಗಳು ರಾಜ್ಯ- ರಾಷ್ಟ್ರ ಮಟ್ಟದಲ್ಲಿ ಸಂಸ್ಥೆಗೆ ಹೆಸರು ತಂದಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಇಲ್ಲಿನ ವಿದ್ಯಾರ್ಥಿಗಳು ದೇಶದ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜು ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗವನ್ನು ಮುಂದುವರಿಸುತ್ತಿದ್ದಾರೆ. ಹಲವರು ದೇಶ ವಿದೇಶಗಳಲ್ಲಿ ವೃತ್ತಿ ಜೀವನವನ್ನು ನಡೆಸುತ್ತಿದ್ದು ಉನ್ನತ ಸ್ಥಾನಕ್ಕೇರಿದ್ದಾರೆ.

ಹೆಬ್ರಿಯ ಎಸ್‌ಆರ್‌ಸಮೂಹ ಶಿಕ್ಷಣ ಸಂಸ್ಥೆಯ ನೋಟ

ಸುಸಜ್ಜಿತ ಹಾಸ್ಟೆಲ್ ವ್ಯವಸ್ಥೆ: ಅತ್ಯಾಧುನಿಕ ಸುಸಜ್ಜಿತ ಕಟ್ಟಡಗಳು ಕ್ಯಾಂಪಸ್‌ನಲ್ಲಿಯೇ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಸಹಿತ ಸಕಲ ವ್ಯವಸ್ಥೆ ಹೊಂದಿದೆ. ವಿದ್ಯಾರ್ಥಿನಿಯರ ಸುರಕ್ಷತೆಗೆ ಕಾಳಜಿವಹಿಸುವ ಸಂಸ್ಥೆಯಲ್ಲಿ ಡೈನಿಂಗ್ ಹಾಲ್, ಪೌಷ್ಟಿಕ ಸ್ವಾದಿಷ್ಟ ಆಹಾರ ಮತ್ತು ಶುಚಿತ್ವದ ಆದ್ಯತೆ ಇದೆ. ವಾರಕ್ಕೆ 2 ಬಾರಿ ವೈದ್ಯರ ಭೇಟಿ, ಬೆಳಿಗ್ಗೆ ಹಾಗೂ ರಾತ್ರಿ ಅಧ್ಯಯನಕ್ಕೆ ವಿಶೇಷ ಅವಧಿ, ವಿದ್ಯಾರ್ಥಿನಿಯರ ಹಾಸ್ಟೆಲಿನ ಸಂಪೂರ್ಣ ಹೊಣೆಯನ್ನು ಸಂಸ್ಥೆಯ ಕಾರ್ಯದರ್ಶಿ ವಕೀಲರಾದ ಸಪ್ನಾ ಎನ್. ಶೆಟ್ಟಿ ನಿರ್ವಹಿಸುತ್ತಿರುವುದು ಸಂಸ್ಥೆಯ ವಿಶೇಷತೆ.

ಶಿಕ್ಷಣ ತಜ್ಞರು : ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಶಿಕ್ಷಣ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಿದ ವಿಷಯ ತಜ್ಞ ಉಪನ್ಯಾಸಕರ ತಂಡವನ್ನು ಹೊಂದಿದೆ. KCET / NEET | JEE ಮೈನ್ ಮುಂತಾದ ತರಬೇತಿ ನೀಡಲಾಗುತ್ತಿದೆ.

ಶಿಕ್ಷಣ ಕ್ಷೇತ್ರದಲ್ಲಿ 25 ವರ್ಷಗಳ ಸಾರ್ಥಕ ಸೇವೆ ಮಾಡಿದ್ದಕ್ಕೆ ಸಂತೋಷವಿದೆ. ಸಂಸ್ಥೆಯ ಬೆಳವಣಿಗೆಯಲ್ಲಿ ಸಹಕರಿಸಿದ ಪೋಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಕೃತಜ್ಞರಾಗಿದ್ದೇವೆ.
- ಎಚ್. ನಾಗರಾಜ ಶೆಟ್ಟಿ,
ಅಧ್ಯಕ್ಷರು - ಎಸ್ ಆರ್ ಸಮೂಹ ಶಿಕ್ಷಣ ಸಂಸ್ಥೆ ಹೆಬ್ರಿ

ಕೆಸಿಇಟಿ ಪರೀಕ್ಷೆಯಲ್ಲಿ ರ್‍ಯಾಂಕ್: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ರಾಜ್ಯ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ರಾಯಿಸಾ ರಾಜ್ಯಕ್ಕೆ 3ನೇ ಸ್ಥಾನ, ಉಡುಪಿ ಜಿಲ್ಲೆಗೆ ಪ್ರಥಮ ಸ್ಥಾನ. ವಾಣಿಜ್ಯ ವಿಭಾಗದಲ್ಲಿ ತಸ್ಮಿಯಾ ರಾಜ್ಯಕ್ಕೆ ಐದನೇ ಸ್ಥಾನ ಪಡೆದು, ಉಡುಪಿ ಜಿಲ್ಲೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಕಲಿಕೆಗೆ ಪ್ರೋತ್ಸಾಹ ನೀಡಿದ ಫಲ ಅದಿತಿ ಎನ್. ಪೈ, ಕೆಸಿಇಟಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 22ನೇ ರ್‍ಯಾಂಕ್ ಪಡೆದಿರುವುದು ಹೆಗ್ಗಳಿಕೆ. ರೋಹಿತ್ ಕಾರಂತ್ 2022ನೇ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದಾರೆ.

ಸಂಪರ್ಕ: ಮೊಬೈಲ್: 9448373109, 9448604417, 9448724251,
ಇಮೇಲ್: srpuchebri@gmail.com ವೆಬ್ ಸೈಟ್ : www.sreduhebri.in ಫೇಸ್‌ಬುಕ್: srpuchebri

ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಹೋರಾಡಿ ಸೋತ ಸಿಂಧು

ಮ್ಯಾಡ್ರಿಡ್ (ಪಿಟಿಐ): ಪಿ.ವಿ. ಸಿಂಧು ವಿರೋಚಿತ ಆಟ ಪ್ರದರ್ಶಿಸಿದರೂ, ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಶುಕ್ರವಾರ ಥಾಯ್ಲೆಂಡ್ ಆಟಗಾರ್ತಿ ಸುಪಾನಿದಾ ಕಟೆಥಾಂಗ್ ಎದುರು ಸೋಲನುಭವಿಸಬೇಕಾಯಿತು.

ಕಳೆದ ವರ್ಷ ರನ್ನರ್ ಆಗಿದ್ದ ಸಿಂಧು, ತೀವ್ರ ಹೋರಾಟದ ಪಂದ್ಯದಲ್ಲಿ ಮೊದಲ ಗೇಮ್‌ನಲ್ಲಿ 4-8 ಹಿನ್ನಡೆಯಿಂದ ಚೇತರಿಸಿ ಗೆದ್ದರೂ ನಂತರ ಅದೇ ಮೇಲುಗೈ ಕಾಪಾಡಿಕೊಳ್ಳಲು ಆಗಲಿಲ್ಲ. ಆರನೇ ಶ್ರೇಯಾಂಕದ ಸುಪಾನಿದಾ 24–26, 21–17, 22–20ರಲ್ಲಿ ಜಯಗಳಿಸಿದರು.

ಆದರೆ ಮಿಕ್ಸೆಡ್ ಡಬಲ್ಸ್‌ನಲ್ಲಿ ಭಾರತದ ದಂಪತಿಯಾದ ಎನ್.ಸಿಕ್ಕಿ ರೆಡ್ಡಿ ಮತ್ತು ಬಿ.ಸುಮೀತ್ ರೆಡ್ಡಿ 14–21, 21–11, 21–17ರಲ್ಲಿ ನಾಲ್ಕನೇ ಶ್ರೇಯಾಂಕದ ರೆಹಾನ್ ನೌಫಾಲ್ ಕುಶರ್ಜಂಟೊ– ಲಿಸಾ ಆಯು ಕುಸುಮಾವತಿ (ಇಂಡೊನೇಷ್ಯಾ) ಜೋಡಿಯನ್ನು ಸೋಲಿಸಿ ಅಂತಿಮ ನಾಲ್ಕರ ಘಟ್ಟ ತಲುಪಿದರು.

ಮಯಾಮಿ ಓಪನ್ ಟೆನಿಸ್: ಪುರುಷರ ಡಬಲ್ಸ್‌ನಲ್ಲಿ ಮುನ್ನಡೆ

ಬೋಪಣ್ಣ–ಎಬ್ಡೆನ್ ಜೋಡಿ ಫೈನಲ್‌ಗೆ

ಮಯಾಮಿ ಗಾರ್ಡನ್ಸ್, ಅಮೆರಿಕ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯನ್ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ಮಯಾಮಿ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಫೈನಲ್ ತಲುಪಿದ್ದಾರೆ.

ಅಗ್ರ ಶ್ರೇಯಾಂಕದ ರೋಹನ್–ಎಬ್ಡೆನ್ ಜೋಡಿ ಗುರುವಾರ ರಾತ್ರಿ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ 6–1, 6–4ರಿಂದ ಸ್ಪೇನ್‌ನ ಮಾರ್ಸೆಲ್ ಗ್ರಾನೊಲ್ಲರ್ಸ್ ಮತ್ತು ಅರ್ಜೆಂಟೀನಾದ ಹೊರೇಸಿಯೊ ಜೆಬಾಲ್ಲೋಸ್ ಅವರನ್ನು ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿತು.

ಫೈನಲ್‌ನಲ್ಲಿ ಬೋಪಣ್ಣ ಮತ್ತು ಎಬ್ಡೆನ್ ಜೋಡಿ ಕ್ರೊವೇಷ್ಯಾದ ಇವಾನ್ ಡೊಡಿಗ್ ಮತ್ತು ಅಮೆರಿಕದ ಆಸ್ಟಿನ್ ಕ್ರಾಜಿಕ್ ಅವರನ್ನು ಎದುರಿಸಲಿದೆ. ಅವರು ಜರ್ಮನಿಯ ಕೆವಿನ್ ಕ್ರಾವಿಯೆಟ್ಜ್ ಮತ್ತು ಟಿಮ್ ಪುಟ್ಜ್ ಅವರನ್ನು 6-4, 6-7 (7), 10-7 ಸೆಟ್‌ಗಳಿಂದ ಸೋಲಿಸಿದರು.

ದುಬೈ ಚಾಂಪಿಯನ್‌ಷಿಪ್ ಕ್ವಾರ್ಟರ್ ಫೈನಲ್ ಸೋಲು ಮತ್ತು ಇಂಡಿಯನ್ ವೆಲ್ಸ್ ಮಾಸ್ಟರ್ಸ್‌ನಲ್ಲಿ ನಿರ್ಗಮನದ ನಂತರ ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಕನ್ನಡಿಗ ಬೋಪಣ್ಣ, ಈ ಗೆಲುವಿನ ಮೂಲಕ ಅಗ್ರಸ್ಥಾನವನ್ನು ಮರಳಿ ಪಡೆಯಲಿದ್ದಾರೆ.

ಆಸ್ಟ್ರೇಲಿಯನ್ ಓಪನ್ ಗೆಲುವಿನ ನಂತರ, 44 ವರ್ಷದ ಬೋಪಣ್ಣ ಎಟಿಪಿ ಶ್ರೇಯಾಂಕದಲ್ಲಿ ವಿಶ್ವದ ನಂ.1 ಸ್ಥಾನಕ್ಕೆ ಏರಿದ್ದರು.

ಬೋಪಣ್ಣ ಪಾಲಿಗೆ ಇದು 14ನೇ ಎಟಿಪಿ ಮಾಸ್ಟರ್ಸ್ 1000 ಫೈನಲ್ ಹಾಗೂ ಮಯಾಮಿಯಲ್ಲಿ ಮೊದಲ ಫೈನಲ್ ಪಂದ್ಯವಾಗಿದೆ. ಒಟ್ಟಾರೆಯಾಗಿ ಇದು ಅವರ 63ನೇ ಎಟಿಪಿ ಟೂರ್ ಮಟ್ಟದ ಫೈನಲ್ ಆಗಿದೆ. ಅವರು ಈವರೆಗೆ 25 ಡಬಲ್ಸ್ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

ಬೋಪಣ್ಣ ಮತ್ತು ಎಬ್ಡೆನ್ ಜೋಡಿ ಎಟಿಪಿ ಮಾಸ್ಟರ್ಸ್ 1000 ಫೈನಲ್‌ನಲ್ಲಿ ಐದನೇ ಬಾರಿಗೆ ಆಡುತ್ತಿದೆ.

ಲಿಯಾಂಡರ್ ಪೇಸ್ ನಂತರ ಎಲ್ಲಾ 9 ಎಟಿಪಿ ಮಾಸ್ಟರ್ಸ್ ಟೂರ್ನಿಗಳಲ್ಲಿ ಫೈನಲ್ ತಲುಪಿದ ಎರಡನೇ ಭಾರತೀಯ ಎಂಬ ಹೆಗ್ಗಳಿಕೆಗೆ ಬೋಪಣ್ಣ ಪಾತ್ರರಾಗಿದ್ದಾರೆ.

ಭಾರತದ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯನ್ ಜೊತೆಗಾರ ಮ್ಯಾಥ್ಯೂ ಎಬ್ಡೆನ್ —ಎಎಫ್‌ಪಿ ಚಿತ್ರ

ಅಮಾನತು ಹಿಂಪಡೆಯದಿದ್ದಲ್ಲಿ ಸ್ವಂತ ವೆಚ್ಚದಲ್ಲಿ ಕಾರ್ಯನಿರ್ವಹಣೆ

ನವದೆಹಲಿ (ಪಿಟಿಐ): ತನ್ನ ಮೇಲಿನ ಅಮಾನತನ್ನು ಹಿಂಪಡೆಯುವಂತೆ ಸಲ್ಲಿಸುವ ಕೋರಿಕೆಯನ್ನು ಕ್ರೀಡಾ ಸಚಿವಾಲಯ ಪರಿಗಣಿಸದಿದ್ದಲ್ಲಿ, ‘ಸರ್ಕಾರಕ್ಕೆ ವೆಚ್ಚ ಬರದ ರೀತಿ’ ಕಾರ್ಯನಿರ್ವಹಿಸಲು ಭಾರತ ಕುಸ್ತಿ ಫೆಡರೇಷನ್ ಶುಕ್ರವಾರ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಿದೆ.

ವಿಶ್ವ ಕುಸ್ತಿ ಸಂಸ್ಥೆಯಾದ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ಅಮಾನತು ಹಿಂಪಡೆದ ಮೇಲೆ ಮತ್ತು ಭಾರತ ಒಲಿಂಪಿಕ್ ಸಂಸ್ಥೆಯು ಅಡ್‌ಹಾಕ್ ಸಮಿತಿ ವಿಸರ್ಜಿಸಿದ ನಂತರ ಇದೇ ಮೊದಲ ಬಾರಿ ಫೆಡರೇಷನ್ ನೊಯ್ಡಾದಲ್ಲಿ ಇಂಥ ಸಭೆ ನಡೆಸಿದೆ. ಫೆಡರೇಷನ್ ಮೇಲೆ ವಿಶ್ವ ಕುಸ್ತಿ ಸಂಸ್ಥೆ ಅಮಾನತು ಇದ್ದಾಗ ದೇಶದಲ್ಲಿ ಕುಸ್ತಿ ಚಟುವಟಿಕೆಗಳನ್ನು ಅಡ್‌ಹಾಕ್ ಸಮಿತಿ ನಡೆಸುತಿತ್ತು. ಈ ಎರಡು ಬೆಳವಣಿಗೆಗಳ ನಂತರ ಕುಸ್ತಿ ಫೆಡರೇಷನ್ ಮರಳಿ ಆಡಳಿತದ ವಹಿಸಿಕೊಂಡರೂ, ಸರ್ಕಾರ ಮಾತ್ರ ಅಮಾನತನ್ನು ಹಿಂಪಡೆದಿಲ್ಲ.

ಫೆಡರೇಷನ್ ತನ್ನ ನಿಯಮಗಳನ್ನು ಮುರಿದಿದೆ ಎಂಬ ಕಾರಣ ನೀಡಿ, ಅಧಿಕಾರ ವಹಿಸಿದ ಮೂರೇ ದಿನಗಳಲ್ಲಿ ಸಚಿವಾಲಯವು ಅದರ ಮೇಲೆ ಅಮಾನತು ಹೇರಿತ್ತು. ವಿಶೇಷ ಸಾಮಾನ್ಯ ಸಭೆಯಲ್ಲಿ 25 ರಾಜ್ಯಗಳ ಪ್ರತಿನಿಧಿಗಳು ಇದ್ದರು. ಮಹಾಪ್ರಧಾನ ಕಾರ್ಯದರ್ಶಿ ಆಗಿರುವ ವಿರೋಧಿ ಬಣದ ಪ್ರೇಮ್ ಚಂದ್ ಲೋಚಬ್ ಗೈರುಹಾಜರಾಗಿದ್ದರು.

‘ಸಚಿವಾಲಯವು ಈ ಮನವಿಯನ್ನು ಪರಿಗಣಿಸದಿದ್ದಲ್ಲಿ ಮತ್ತು ಹಣಕಾಸು ನೆರವು ಒದಗಿಸದಿದ್ದಲ್ಲಿ ಸರ್ಕಾರಕ್ಕೆ ವೆಚ್ಚವಾಗದ ರೀತಿ ಕಾರ್ಯನಿರ್ವಹಿಸಲು ನಿರ್ಧರಿಸಲಾಗಿದೆ’ ಎಂದು ಮೂಲ ತಿಳಿಸಿದೆ.



ಐಪಿಎಲ್: ಪಂದ್ಯಕ್ಕೂ ಮುನ್ನ ಅಸ್ವಸ್ಥರಾಗಿದ್ದ ರಿಯಾನ್ ಪರಾಗ್

ಜೈಪುರ(ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡವು ಗುರುವಾರ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಿಸಲು ಅಸ್ಸಾಂ ಹುಡುಗ ರಿಯಾನ್ ಪರಾಗ್ ಬ್ಯಾಟಿಂಗ್ ಕಾರಣವಾಗಿತ್ತು.

ಆದರೆ ಈ ಪಂದ್ಯಕ್ಕೂ ಮುನ್ನ ಮೂರು ದಿವಸ ಅವರು ಹಾಸಿಗೆ ಬಿಟ್ಟು ಏಳದಂತಹ ಪರಿಸ್ಥಿತಿಯಲ್ಲಿದ್ದರಂತೆ. ಚೇತರಿಸಿಕೊಳ್ಳಲು ನೋವುನಿವಾರಕ ಮಾತ್ರೆಗಳನ್ನು ಸೇವಿಸಿದ್ದರಂತೆ.

‘ಈ ಪಂದ್ಯಕ್ಕೆ ಮರಳಲು ಬಹಳಷ್ಟು ಶ್ರಮಪಟ್ಟೆ. ಮೂರು ದಿನಗಳ ಕಾಲ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದೆ. ಮಾತ್ರೆಗಳು ಹಾಗೂ ನಿರಂತರ ಚಿಕಿತ್ಸೆಯ ಮೂಲಕ ಚೇತರಿಸಿಕೊಂಡು ಅಭ್ಯಾಸ ಮಾಡಿದೆ. ಕಣಕ್ಕಿಳಿದು ತಂಡದ ಗೆಲುವಿಗೆ ನೆರವಾಗಿದ್ದು ಸಂತಸ ತಂದಿದೆ’ ಎಂದು ಪಂದ್ಯಶ್ರೇಷ್ಠ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ರಿಯಾನ್ ಪರಾಗ್

‘ಅಮ್ಮ ಇಲ್ಲಿಯೇ ಇದ್ದಾರೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ನನ್ನ ಏಳಿಗೆಗಾಗಿ ಬಹಳಷ್ಟು ಶ್ರಮಪಟ್ಟಿದ್ದಾರೆ’ ಎಂದರು.

22 ವರ್ಷದ ರಿಯಾನ್ ಹೋದ ವರ್ಷ ಬ್ಯಾಟಿಂಗ್‌ನಲ್ಲಿ ಅಷ್ಟೇನೂ ಚೆನ್ನಾಗಿ ಆಡಿರಲಿಲ್ಲ. ಈ ಬಾರಿ ಎರಡೂ ಪಂದ್ಯಗಳಲ್ಲಿ ಉತ್ತಮ ಅಟವಾಡಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ತಮ್ಮ ವೈಯಕ್ತಿಕ ಶ್ರೇಷ್ಠ ಸ್ಕೋರ್ (ಅಜೇಯ 84) ದಾಖಲಿಸಿದ್ದಾರೆ.

ಕೊಡವ ಕೌಟುಂಬಿಕ ಹಾಕಿ ಇಂದಿನಿಂದ

ಮಡಿಕೇರಿ: ಕೊಡವ ಕುಟುಂಬಗಳ ಪ್ರತಿಷ್ಠಿತ 24ನೇ ಕೌಟುಂಬಿಕ ಹಾಕಿ ಪಂದ್ಯಾವಳಿ ಮಾರ್ಚ್ 30ರಿಂದ ತಾಲ್ಲೂಕಿನ ನಾಪೋಕ್ಲುವಿನಲ್ಲಿ ಆರಂಭಗೊಳ್ಳಲಿದ್ದು, ಕುಂಡ್ಯೋಳಂಡ ಕುಟುಂಬದವರು ಆತಿಥ್ಯ ವಹಿಸಿದ್ದಾರೆ. ಒಟ್ಟು 30 ದಿನಗಳ ಕಾಲ ಪಂದ್ಯಾವಳಿ ನಡೆಯಲಿದೆ. ಒಟ್ಟು 360 ತಂಡಗಳು ಪ್ರಶಸ್ತಿಗಾಗಿ ಸೆಣೆಸಲಿವೆ.

ನಾಪೋಕ್ಲುವಿನ ಕೆಪಿಎಸ್ ಶಾಲೆಯ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಸಿದ್ಧತಾ ಕಾರ್ಯಗಳು ಪೂರ್ಣಗೊಂಡಿವೆ. 30 ಸಾವಿರ ಮಂದಿಗೆ ಆಸನ ವ್ಯವಸ್ಥೆ ಮಾಡಲಾಗಿದೆ. 12 ಸ್ಟೆಪ್ ಗ್ಯಾಲರಿಗಳನ್ನು ನಿರ್ಮಿಸಲಾಗಿದೆ. ನಿತ್ಯವೂ ಇಲ್ಲಿ 18 ಪಂದ್ಯಗಳು ನಡೆಯಲಿದ್ದು, ಅದಕ್ಕಾಗಿ ಇಲ್ಲಿನ 3 ಮೈದಾನದಲ್ಲಿ ತಲಾ 6 ಪಂದ್ಯಗಳು ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ.

ಮಂಗಳೂರು ಬಿ.ಸಿ, ರೈಸಿಂಗ್ ಸ್ಟಾರ್ ತಂಡಗಳು ಫೈನಲ್‌ಗೆ

ಬೆಂಗಳೂರು: ಮಂಗಳೂರು ಬಿ.ಸಿ ಮತ್ತು ರೈಸಿಂಗ್ ಸ್ಟಾರ್ ಬಿ.ಸಿ ಮೈಸೂರು ತಂಡಗಳು ಕರ್ನಾಟಕ ರಾಜ್ಯ ಗ್ರಾಮೀಣ ಪುರುಷರ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿದವು.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್ ಲೀಗ್‌ನ ಪಂದ್ಯದಲ್ಲಿ ಮಂಗಳೂರು ತಂಡವು 75–51ರಿಂದ ಆರ್ಯನ್ ಬಿ.ಸಿ ಮೈಸೂರು ತಂಡವನ್ನು ಮಣಿಸಿತು. ಅಶ್ವಿಜ್ ಮಂಗಳೂರು ತಂಡದ ಪರ 30 ಪಾಯಿಂಟ್ಸ್ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ರೈಸಿಂಗ್ ಸ್ಟಾರ್ ತಂಡವು 84–76ರಿಂದ ಹೊಯ್ಸಳ ಬಿ.ಸಿ ಹಾಸನ ತಂಡವನ್ನು ಸೋಲಿಸಿತು.

ಲೀಗ್‌ನ ಮತ್ತೊಂದು ಸುತ್ತಿನ ಪಂದ್ಯದಲ್ಲಿ ಮಂಗಳೂರು ತಂಡವು 77–50ರಿಂದ ಹೊಯ್ಸಳ ತಂಡವನ್ನು, ರೈಸಿಂಗ್ ಸ್ಟಾರ್ ತಂಡವು 77–70ರಿಂದ ಆರ್ಯನ್ ತಂಡವನ್ನು ಸೋಲಿಸಿತು. ಶನಿವಾರ ಫೈನಲ್ ಹಣಾಹಣಿ ನಡೆಯಲಿದೆ.